ಶನಿವಾರ, ಏಪ್ರಿಲ್ 27, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೋಟ

ಮುಂಬೈನಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಟ ಸಮಂತ ಪ್ರಭು ಫೋಟೊಗೆ ಪೋಸ್ ನೀಡಿದ್ದು ಹೀಗೆ...



ಮತದಾರರಿಗೆ ಹಂಚಲು ಸಂಗ್ರಹಿಸಿದ್ದ ಹಣ • ಮಾದಾವರದಲ್ಲಿ ಐ.ಟಿ ದಾಳಿ • ಬಿಜೆಪಿ ಅಭ್ಯರ್ಥಿ ವಿರುದ್ಧ ಎಫ್‌ಐಆರ್

₹4.8 ಕೋಟಿ ಜಪ್ತಿ: ಸುಧಾಕರ್‌ಗೆ ಸಂಕಷ್ಟ?

ಪ್ರಜಾವಾಣಿ ವಾರ್ತೆ


ಡಾ. ಕೆ. ಸುಧಾಕರ್

ಬೆಂಗಳೂರು: 'ಚುನಾವಣೆ ಸಂದರ್ಭದಲ್ಲಿ ಮತದಾರರಿಗೆ ಹಂಚಲೆಂದು ಸಂಗ್ರಹಿಸಲಾಗಿತ್ತು' ಎನ್ನಲಾದ ₹4.8 ಕೋಟಿಯನ್ನು ಆದಾಯ ತೆರಿಗೆ (ಐ.ಟಿ) ಅಧಿಕಾರಿಗಳು ಜಪ್ತಿ ಮಾಡಿದ್ದು, ಈ ಹಣವನ್ನು ವಾಪಸು ಕೊಡಿಸುವಂತೆ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ. ಕೆ. ಸುಧಾಕರ್ ಅವರು ಅಧಿಕಾರಿಗಳ ಮೇಲೆ ಪ್ರಭಾವ ಬೀರಲು ಯತ್ನಿಸಿದ್ದ ಕುರಿತು ಮಾದನಾಯಕನಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಎಸ್‌ಎಸ್‌ಟಿ ಅಧಿಕಾರಿ ದಶರಥ್ ವಿ. ಕುಮಾರ್ ಅವರು ಚುನಾವಣೆ ಅಕ್ರಮದ ಬಗ್ಗೆ ದೂರು ನೀಡಿದ್ದರು. ಆರಂಭದಲ್ಲಿ, ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಿಸಿಕೊಳ್ಳಲಾಗಿತ್ತು. ವಿಚಾರಣೆ ನಡೆಸಿದ್ದ ನ್ಯಾಯಾಲಯ, ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸುವಂತೆ ನಿರ್ದೇಶನ ನೀಡಿದೆ' ಎಂದು ಬೆಂಗಳೂರು ಗ್ರಾಮಾಂತರ ಪೊಲೀಸ್ ಮೂಲಗಳು ಹೇಳಿವೆ.

'ಐಪಿಸಿ 171 ಇ (ಲಂಚ ಸ್ವೀಕಾರ), ಐಪಿಸಿ 171 ಎಫ್ (ಚುನಾವಣೆಯಲ್ಲಿ ಅನಪೇಕ್ಷಿತ ಪ್ರಭಾವ ಬೀರುವಿಕೆ), ಐಪಿಸಿ 171 ಬಿ (ಮತದಾರರಿಗೆ ಹಣದ ಆಮಿಷ), ಐಪಿಸಿ 171 ಸಿ (ಚುನಾವಣೆ ಕರ್ತವ್ಯಕ್ಕೆ ಅಡ್ಡಿ ಹಾಗೂ ಹಸ್ತಕ್ಷೇಪ) ಆರೋಪದಡಿ ಡಾ. ಸುಧಾಕರ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಜಿಲ್ಲಾ ಮಾದರಿ ನೀತಿ ಸಂಹಿತೆ (ಎಂಸಿಸಿ) ನೋಡಲ್ ಅಧಿಕಾರಿ ಮುನೀಶ್ ಮೌದ್ಗಿಲ್ ಹಾಗೂ ಆದಾಯ ತೆರಿಗೆ ಅಧಿಕಾರಿ ಆನಂದ್ ರಟ್ಕಲ್ ಅವರ ವಾಟ್ಸ್‌ಆ್ಯಪ್‌ಗೆ ಸುಧಾಕರ್ ಸಂದೇಶ ಕಳುಹಿಸಿದ್ದರೆಂದು ಹೇಳಲಾಗಿದೆ. ಮೊಬೈಲ್ ನಂಬರ್ ಹಾಗೂ ಸಂದೇಶದ ಸ್ಕ್ರಿನ್ ಶಾಟ್‌ಗಳನ್ನು ದೂರುದಾರರು ನೀಡಿದ್ದಾರೆ. ಕಾನೂನು ತಜ್ಞರ ಸಲಹೆ ಹಾಗೂ ಪುರಾವೆಗಳನ್ನು ಪರಿಶೀಲಿಸಿ ತನಿಖೆ ಮುಂದುವರಿಸಲಾಗುವುದು' ಎಂದು ಮೂಲಗಳು ಹೇಳಿವೆ.

ದೂರಿನ ವಿವರ: 'ಮುನೀಶ್ ಮೌದ್ಗಿಲ್ ಅವರ ಮೊಬೈಲ್‌ಗೆ ಏಪ್ರಿಲ್ 25ರಂದು ಬೆಳಿಗ್ಗೆ 11.44 ಗಂಟೆಗೆ ಕರೆ ಮಾಡಿದ್ದ ವ್ಯಕ್ತಿಯೊಬ್ಬರು, 'ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಮತದಾರರಿಗೆ ಹಂಚಲೆಂದು ಸ್ಥಳವೊಂದರಲ್ಲಿ ₹10 ಕೋಟಿ ಸಂಗ್ರಹಿಸಲಾಗಿದೆ' ಎಂದಿದ್ದರು. ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದ ಮೌದ್ಗಿಲ್ ಅವರು ಸ್ಥಳದ ನಿಖರ ವಿಳಾಸ ಪತ್ತೆ ಮಾಡುವಂತೆ ಸೂಚಿಸಿದ್ದರು' ಎಂದು ದೂರಿನಲ್ಲಿ ದಶರಥ್ ಕುಮಾರ್ ಅವರು ಉಲ್ಲೇಖಿಸಿದ್ದಾರೆ.

'ಜಿಲ್ಲಾ ಚುನಾವಣಾಧಿಕಾರಿ, ಐ.ಟಿ. ಅಧಿಕಾರಿಗಳು ಹಾಗೂ ಇತರೆ ಅಧಿಕಾರಿಗಳಿಗೂ ಮಾಹಿತಿ ನೀಡಲಾಯಿತು. ಮಾದಾವರದಲ್ಲಿರುವ ವ್ಯಕ್ತಿಯೊಬ್ಬರ ಮನೆಯಲ್ಲಿ ಹಣವಿರುವ ಮಾಹಿತಿ ಲಭ್ಯವಾಗಿತ್ತು. ಮನೆ ಮೇಲೆ ದಾಳಿ ಮಾಡಿದ್ದ ಐ.ಟಿ ಇಲಾಖೆ ಅಧಿಕಾರಿಗಳು, ₹4.8 ಕೋಟಿ ಜಪ್ತಿ ಮಾಡಿದ್ದರು. ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಮತದಾರರಿಗೆ ಲಂಚವಾಗಿ ನೀಡಲು ಹಣ ಸಂಗ್ರಹಿಸಿದ್ದ ಮೊತ್ತ ಇದು ಎಂಬುದು ಮೇಲ್ನೋಟಕ್ಕೆ ಮನವರಿಕೆ ಯಾಯಿತು' ಎಂದು ಅವರು ತಿಳಿಸಿದ್ದಾರೆ.

'ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಕೆ. ಸುಧಾಕರ್ ಮತದಾರರಿಗೆ ಲಂಚ ನೀಡಲು ಹಾಗೂ ಭ್ರಷ್ಟಾಚಾರಕ್ಕೆ ಪ್ರಯತ್ನಿಸಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದೂ ದಶರಥ್ ಕುಮಾರ್ ಅವರು ದೂರಿನಲ್ಲಿ ಹೇಳಿದ್ದಾರೆ.

ಮುಖ್ಯಾಂಶಗಳು

- ಐಎಎಸ್ ಅಧಿಕಾರಿ ಮುನೀಶ್ ಮೌದ್ಗಿಲ್
- ಮೇಲೆ ಒತ್ತಡ
- ಸಹಾಯ ಯಾಚಿಸಿ ವಾಟ್ಸ್‌ಆ್ಯಪ್ ಕರೆ, ಸಂದೇಶ
- ಚುನಾವಣೆ ಕರ್ತವ್ಯಕ್ಕೆ ಅಡ್ಡಿ ಮಾಡಿದ ಆರೋಪ

ವಾಟ್ಸ್‌ಆ್ಯಪ್ ಕರೆ, ಸಂದೇಶ

'ಏಪ್ರಿಲ್ 25ರಂದು ಮಧ್ಯಾಹ್ನ 2.04 ಗಂಟೆಗೆ ಮುನೀಶ್ ಮೌದ್ಗಿಲ್ ಅವರ ಮೊಬೈಲ್‌ಗೆ (94******15) 9845****40 ಸಂಖ್ಯೆಯಿಂದ ವಾಟ್ಸ್‌ಆ್ಯಪ್ ಕರೆ ಬಂದಿತ್ತು. ಜೊತೆಗೆ, ಇದೇ ಸಂಖ್ಯೆಯಿಂದ ಮೌದ್ಗಿಲ್ ಅವರಿಗೆ ಎರಡು ಬಾರಿ ಹಾಗೂ ಆದಾಯ ತೆರಿಗೆ ಅಧಿಕಾರಿ ಆನಂದ್ ಅವರಿಗೆ ಒಂದು ಬಾರಿ ಸಂದೇಶವೂ ಬಂದಿತ್ತು. 'ಮಾದಾವರ ಗೋವಿಂದಪ್ಪ ಐಟಿ ಟೀಮ್", 'ದಯವಿಟ್ಟು ಸಹಾಯ ಮಾಡಿ, ನಿಮಗೆ ನಾನು ಚಿರಋಣಿ' ಎಂಬುದಾಗಿ ಸಂದೇಶದಲ್ಲಿ ಬರೆಯಲಾಗಿತ್ತು. ಆನಂದ್ ಅವರಿಗೂ ಪ್ರತ್ಯೇಕ ಸಂದೇಶ ಕಳುಹಿಸಲಾಗಿತ್ತು. ಇದಕ್ಕೆ ಸಂಬಂಧಪಟ್ಟ ಸ್ಕ್ರಿನ್‌ಶಾಟ್‌ಗಳನ್ನು ಲಗತ್ತಿಸಲಾಗಿದೆ. ವಾಟ್ಸ್‌ಆ್ಯಪ್ ಕರೆ ಹಾಗೂ ಸಂದೇಶ ಬಂದಿದ್ದ ಮೊಬೈಲ್ ನಂಬರ್ ಪರಿಶೀಲಿಸಿದಾಗ, ಅದು ಸುಧಾಕರ್ ಹೆಸರಿನಲ್ಲಿರುವುದು ಗೊತ್ತಾಗಿದೆ' ಎಂದು ಅವರು ಉಲ್ಲೇಖಿಸಿದ್ದಾರೆ.

ಸುದ್ದಿ 2 ನಿಮಿಷ

ಧರ್ಮದ ಹೆಸರಿನಲ್ಲಿ ಮತಯಾಚನೆ ಸಂಸದ ತೇಜಸ್ವಿ ವಿರುದ್ಧ ಎನ್‌ಸಿಆರ್

ಬೆಂಗಳೂರು: ಬಹಿರಂಗ ಪ್ರಚಾರ ನಿರ್ಬಂಧಿತ ಸಮಯದಲ್ಲಿ ಧರ್ಮದ ಹೆಸರಿನಲ್ಲಿ ಮತಯಾಚನೆ ಮಾಡಿದ್ದ ಆರೋಪದಡಿ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ ವಿರುದ್ಧ ಜಯನಗರ ಠಾಣೆಯಲ್ಲಿ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಾಗಿದೆ.

'ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿರುವ ತಮ್ಮ ಖಾತೆಯಲ್ಲಿ ತೇಜಸ್ವಿ ಸೂರ್ಯ ಅವರು ಮತಯಾಚಿಸಿ ಪೋಸ್ಟ್ ಮಾಡಿದ್ದರು. ಅದನ್ನು ಗಮನಿಸಿದ್ದ ಚುನಾವಣಾಧಿಕಾರಿ ದೂರು ನೀಡಿದ್ದಾರೆ. ಸದ್ಯ ಎನ್‌ಸಿಆರ್ ದಾಖಲಿಸಿಕೊಳ್ಳಲಾಗಿದೆ.



ನ್ಯಾಯಾಲಯದ ಸೂಚನೆಯಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸರು ಹೇಳಿದರು.

'ಅಯೋಧ್ಯೆಯಲ್ಲಿರುವ ಬಾಲ ರಾಮನ ಹಣೆಗೆ ಸೂರ್ಯ ಕಿರಣ ಸ್ಪರ್ಶಿಸುವ ವಿಡಿಯೊವನ್ನು ಎಕ್ಸ್ ಖಾತೆಯಲ್ಲಿ ಅಪ್‌ಲೋಡ್ ಮಾಡಿದ್ದ ತೇಜಸ್ವಿ ಸೂರ್ಯ, '500 ವರ್ಷಗಳ ಕಾಯುವಿಕೆ ಮತ್ತು ಕೋಟ್ಯಂತರ ಭಾರತೀಯರ ಆಶಯವನ್ನು ಪ್ರಧಾನಿ ಈಡೇರಿಸಿದ್ದಾರೆ. ಭಾರತೀಯತೆ ಉಳಿಯಲು ಬಿಜೆಪಿಗೆ ಮತ ನೀಡಿ' ಎಂಬುದಾಗಿ ಮತಯಾಚನೆ ಮಾಡಿದ್ದರು.

'ಮತದಾನ ದಿನದ 48 ಗಂಟೆಗಳ ಮುನ್ನ ಬಹಿರಂಗ ಪ್ರಚಾರಕ್ಕೆ ನಿರ್ಬಂಧವಿದೆ. ಇದೇ ಅವಧಿಯಲ್ಲಿಯೇ ತೇಜಸ್ವಿ ಸೂರ್ಯ ಅವರು ಧರ್ಮದ ಆಧಾರದಲ್ಲಿ ಪೋಸ್ಟ್ ಪ್ರಕಟಿಸಿ ಮತಯಾಚನೆ ಮಾಡಿರುವುದು ಗೊತ್ತಾಗಿದೆ. ಪ್ರಜಾ ಪ್ರಾತಿನಿಧ್ಯ ಕಾಯ್ದೆ–1951 (ಆರ್‌ಪಿಎ) ಸೆಕ್ಷನ್ 123 (ಬಿ) ಹಾಗೂ ಸೆಕ್ಷನ್ 126 ಅಡಿ ನಿಯಮ ಉಲ್ಲಂಘನೆ ಆಗಿರುವ ಬಗ್ಗೆ ಚುನಾವಣಾಧಿಕಾರಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ' ಎಂದು ತಿಳಿಸಿದರು.

ದೇಶದ ಭವಿಷ್ಯಕ್ಕೆ ಮಹತ್ವದ ಚುನಾವಣೆ: ಹೊಸಬಾಳೆ

ಬೆಂಗಳೂರು: 'ದೇಶದ ಭವಿಷ್ಯದ ದೃಷ್ಟಿಯಿಂದ ಈ ಬಾರಿಯ ಲೋಕಸಭಾ ಚುನಾವಣೆ ಹಿಂದೆಂದಿಗಿಂತಲೂ ಹೆಚ್ಚು ಮಹತ್ವದ್ದು' ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅಭಿಪ್ರಾಯಪಟ್ಟರು.

ಶೇಷಾದ್ರಿಪುರ ಮತಗಟ್ಟೆಯಲ್ಲಿ ಶುಕ್ರವಾರ ಮತದಾನ ಮಾಡಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು. 'ದೇಶದ ಅಭಿವೃದ್ಧಿಗೆ, ವಿಶ್ವದಲ್ಲಿ ಭಾರತದ ಗೌರವಕ್ಕೆ, ಈ ದೇಶದ ಕೋಟ್ಯಂತರ ಜನರ ಜೀವನ ಹಸನಾಗಲು, ಸುಖ– ಸಮೃದ್ಧಿ ಹೊಂದಲು ಈ ಚುನಾವಣೆಯ ಫಲಿತಾಂಶ ಮಹತ್ತರವಾದ ಭೂಮಿಕೆ ವಹಿಸಲಿದೆ' ಎಂದು ಅವರು ಹೇಳಿದರು. 'ಸಮಾಜದ ಎಲ್ಲರೂ ಅಂದರೆ ನೂರಕ್ಕೆ ನೂರರಷ್ಟು ಜನ ಮತದಾನ ಮಾಡಬೇಕೆಂದು ಸಂಘದ ಕಾರ್ಯಕರ್ತರು ಕೆಲಸ ಮಾಡುತ್ತಿದ್ದಾರೆ ಎಂದರು.

ಗಿಫ್ಟ್ ಕಾರ್ಡ್: ಎಚ್‌.ಡಿ. ಕುಮಾರಸ್ವಾಮಿ ಮತ್ತು ಡಿ.ಕೆ. ಸಹೋದರರ ನಡುವೆ ವಾಕ್ಸಮರ

'ಡಿಕೆಶಿ ಒಬ್ಬ ರಣಹೇಡಿ'

ಪ್ರಜಾವಾಣಿ ವಾರ್ತೆ


ರಾಮನಗರ: 'ನೇರವಾಗಿ ಚುನಾವಣೆ ಎದುರಿಸಲಾಗದೆ ರಾತ್ರೋರಾತ್ರಿ ಕಳ್ಳರಂತೆ ಹೋಗಿ ಮತದಾರರಿಗೆ ಕ್ಯೂ ಆರ್ ಕೋಡ್ ಇರುವ ಗಿಫ್ಟ್ ಕಾರ್ಡ್ ಮತ್ತು ಹಣ ಹಂಚಿರುವ ಡಿ.ಕೆ ಸಹೋದರರು ನಿಜವಾದ ರಣಹೇಡಿಗಳು. ರಣಹೇಡಿ ಸಂಸ್ಕೃತಿಯ ಡಿ.ಕೆ. ಶಿವಕುಮಾರ್ ಕುತಂತ್ರ ರಾಜಕಾರಣಿ' ಎಂದು ಜೆಡಿಎಸ್ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಿಡದಿ ಸಮೀಪದ ಕೇತಗಾನ ಹಳ್ಳಿಯ ಸಖಿ ಮತಗಟ್ಟೆಯಲ್ಲಿ ಶುಕ್ರವಾರ ಕುಟುಂಬ ಸದಸ್ಯರೊಂದಿಗೆ ಮತದಾನ ಮಾಡಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ನಾನು ನೇರವಾಗಿಯೇ ಚುನಾವಣೆ ಮಾಡುತ್ತಿದ್ದೇನೆ. ರಾಜಾರೋಷವಾಗಿ ಹಣ ಮತ್ತು ಗಿಫ್ಟ್ ಕಾರ್ಡ್ ಹಂಚುವುದನ್ನು ಪ್ರಜಾಪ್ರಭುತ್ವದ ಹಬ್ಬ ಎಂದು ಕರೆಯುವುದಾದರೆ ಚುನಾವಣಾ ಆಯೋಗ ಏನು ಮಾಡುತ್ತಿದೆ. ಆಯೋಗ ಬಾಗಿಲು ಮುಚ್ಚುವುದು ಒಳ್ಳೆಯದು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್‌ನವರು ರಾಜಾರೋಷವಾಗಿ ಗಿಫ್ಟ್ ಕಾರ್ಡ್ ಹಂಚುತ್ತಿರುವ ಬಗ್ಗೆ ಚುನಾವಣಾ ಆಯೋಗಕ್ಕೆ ಹಿಂದೆಯೇ ಹಲವು ಬಾರಿ ದೂರು ಕೊಟ್ಟರೂ ಪ್ರಯೋಜನವಾಗಿಲ್ಲ. ಈಗ ದೂರು ಕೊಟ್ಟರೆ ಏನು ಉಪಯೋಗ. ದುಡ್ಡು ಇರುವವರಿಗೆ, ಲೂಟಿ ಮಾಡುವವರಿಗೆ ಇದು ಹಬ್ಬವೇ ಹೊರತು ಜನಸಾಮಾನ್ಯರಿಗೆ ಅಲ್ಲ ಎಂದರು.

'ಚುನಾವಣಾ ಆಯೋಗ ಎಂಬ ವ್ಯವಸ್ಥೆಯನ್ನೇ ಬದಲಾಯಿಸುವುದು ಉತ್ತಮ. ಈ ರೀತಿ ಚುನಾವಣೆ ಮಾಡುವ ಬದಲು ನೇರವಾಗಿ ಮತ್ತು ಮುಕ್ತವಾಗಿ ಗಿಫ್ಟ್ ಹಾಗೂ ಹಣ ಹಂಚುವ ವ್ಯವಸ್ಥೆಯನ್ನೇ ಆಯೋಗ ಜಾರಿಗೆ ತರಲಿ. ಅವರವರ ಶಕ್ತಿಗೆ ಅನುಸಾರ ಹಣ ಹಂಚಿ ವೋಟು ಪಡೆಯಲಿ. ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲಿ ಅಂತಹ ವ್ಯವಸ್ಥೆ ಬಂದರೆ ಕಾಂಗ್ರೆಸ್‌ನವರಿಗೆ ಇನ್ನೂ ಒಳ್ಳೆಯದು' ಎಂದು ವ್ಯಂಗ್ಯವಾಡಿದರು.


ರಾಮನಗರ ತಾಲ್ಲೂಕಿನ ಕೇತಗಾನಹಳ್ಳಿ ಗ್ರಾಮದ ಸಖಿ ಮತಗಟ್ಟೆಯಲ್ಲಿ ಮತ ಚಲಾಯಿಸಿದ ಜೆಡಿಎಸ್ ರಾಜ್ಯ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಶಾಯಿ ಹಚ್ಚಿದ ಬೆರಳು ಪ್ರದರ್ಶಿಸಿದರು

'ನ್ಯಾಯಸಮ್ಮತ ಚುನಾವಣೆ ನಡೆದಿಲ್ಲ'

ಜ್ಯೋತಿಷಿಯೊಬ್ಬರು ಹೇಳಿದಂತೆ ₹505 ನಗದು, ಗಿಫ್ಟ್ ಕಾರ್ಡ್, ಮಲೆ ಮಹದೇಶ್ವರ ದೇವಾಲಯದ ಲಾಡು ಹಾಗೂ ಗ್ಯಾರಂಟಿ ಕಾರ್ಡ್‌ಗಳನ್ನು ಡಿ.ಕೆ ಸಹೋದರರು ರಾತ್ರಿ ಇಡೀ ಹಂಚಿದ್ದಾರೆ. ಕಾರ್ಡ್ ಹಂಚುತ್ತಿದ್ದ ಕಾಂಗ್ರೆಸ್ ಕಾರ್ಯಕರ್ತರನ್ನು ಜೆಡಿಎಸ್–ಬಿಜೆಪಿ ಕಾರ್ಯಕರ್ತರು ತಡೆದಿದ್ದಾರೆ. ಜಿಲ್ಲಾಧಿಕಾರಿ ಮತ್ತು ಚುನಾವಣಾ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆದಿಲ್ಲ ಎಂದು ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.

'ಹಾಸನದಲ್ಲಿ ಹೆಣ್ಮಕ್ಕಳ ಮಾನ ಹರಾಜು'

ಕನಕಪುರ (ರಾಮನಗರ): 'ನಾವು ಗಿಫ್ಟ್ ಕಾರ್ಡ್ ಹಂಚಿದ್ದೇವೆ ಎನ್ನುವ ಕುಮಾರಸ್ವಾಮಿ ಅವರು ಹಾಸನದಲ್ಲಿ ಹರಾಜಾಗಿರುವ ಹೆಣ್ಣು ಮಕ್ಕಳ ಮಾನ, ಮರ್ಯಾದೆ ಬಗ್ಗೆ ಮೊದಲು ಮಾತನಾಡಲಿ' ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಸವಾಲು ಹಾಕಿದ್ದಾರೆ.

ಮತದಾನದ ದಿನದಂದು ಡಿ.ಕೆ ಸಹೋದರರು ಜಿಲ್ಲೆಯಲ್ಲಿ ಗಿಫ್ಟ್ ಕಾರ್ಡ್ ಹಂಚುತ್ತಿದ್ದಾರೆಂಬ ಎಚ್‌.ಡಿ. ಕುಮಾರಸ್ವಾಮಿ ಅವರ ಹೇಳಿಕೆಗೆ ಶುಕ್ರವಾರ ದೊಡ್ಡಆಲಹಳ್ಳಿಯಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ಹಾಸನ ಜಿಲ್ಲೆಯಲ್ಲಿ ನಡೆದಿರುವ ಘಟನೆ ರಾಜ್ಯ ಹಾಗೂ ಈ ಸಮಾಜದ ಮರ್ಯಾದೆಯನ್ನು ಹರಾಜು ಹಾಕಿದೆ. ಪಾಪದ ಹೆಣ್ಣು ಮಕ್ಕಳ ಮಾನ, ಮರ್ಯಾದೆ ಕಳೆಯುವ ಕೆಲಸ ಮಾಡಿರುವ ಕುಮಾರಸ್ವಾಮಿ ಅವರ ಕುಟುಂಬಕ್ಕೆ ನಾಚಿಕೆಯಾಗಬೇಕು' ಎಂದು ವಾಗ್ದಾಳಿ ನಡೆಸಿದರು.

'ಕುಮಾರಸ್ವಾಮಿ ಅವರ ಕುಟುಂಬಕ್ಕೆ ಹೆಣ್ಣು ಮಕ್ಕಳ ಮೇಲೆ ನಿಜವಾಗಿಯೂ ಗೌರವ ಇದ್ದರೆ ನಿನ್ನೆಯೇ ಚುನಾವಣಾ ಕಣದಿಂದ ಹಿಂದೆ ಸರಿಯಬೇಕಿತ್ತು. ಹಾಸನ ಜಿಲ್ಲೆಯಲ್ಲಿ ಏನಾಗುತ್ತಿದೆ? ಅದಕ್ಕೆಲ್ಲ ಉತ್ತರ ಕೊಡುವವರು ಯಾರು? ಬೇರೆಯವರ ಮೇಲೆ ಆರೋಪ ಮಾಡುವುದು, ತಮ್ಮ ಮೇಲೆ ಆರೋಪ ಬಂದಾಗ ಮೌನವಾಗಿರುವುದೊಂದೇ ಎಲ್ಲದಕ್ಕೂ ಪರಿಹಾರವಲ್ಲ. ತಮ್ಮ ನಡೆ, ನುಡಿಯನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು' ಎಂದು ಸಲಹೆ ನೀಡಿದರು.


ಕನಕಪುರ ತಾಲ್ಲೂಕಿನ ದೊಡ್ಡ ಆಲಹಳ್ಳಿಯ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಮತ್ತು ಸಂಸದ ಡಿ.ಕೆ ಸುರೇಶ್ ತಮ್ಮ ಮತ ಚಲಾಯಿಸಿದರು –ಪ್ರಜಾವಾಣಿ ಚಿತ್ರ/ ರಂಜು ಪಿ

'ಎಚ್‌ಡಿಕೆ ಸತ್ಯಹರಿಶ್ಚಂದ್ರನ ಮೊಮ್ಮಗ ಅಲ್ಲವೇ?'

ಕನಕಪುರ (ರಾಮನಗರ): 'ಎಚ್‌.ಡಿ. ಕುಮಾರಸ್ವಾಮಿ ಸತ್ಯಹರಿಶ್ಚಂದ್ರನ ಮೊಮ್ಮಗ ಅಲ್ಲವೇ? ಖಾಲಿ ಮಾತಿನ ಮೂಲಕ ಹಿಟ್ ಅಂಡ್ ರನ್ ಮಾಡುವುದನ್ನು ಬಿಟ್ಟು ಗಿಫ್ಟ್ ಕಾರ್ಡ್ ಬಗ್ಗೆ ಸಾಕ್ಷಿ ಇದ್ದರೆ ಚುನಾವಣಾ ಆಯೋಗಕ್ಕೆ ದೂರು ಕೊಡಲಿ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದರು.

ಮತದಾನದ ದಿನದಂದು ಡಿ.ಕೆ ಸಹೋದರರು ಜಿಲ್ಲೆಯಲ್ಲಿ ಗಿಫ್ಟ್ ಕಾರ್ಡ್ ಹಂಚುತ್ತಿದ್ದಾರೆಂಬ ಎಚ್‌.ಡಿ. ಕುಮಾರಸ್ವಾಮಿ ಅವರ ಹೇಳಿಕೆಗೆ ಶುಕ್ರವಾರ ದೊಡ್ಡಆಲಹಳ್ಳಿ ಸುದ್ದಿಗಾರರಿಗೆ ಅವರು ಪ್ರತಿಕ್ರಿಯಿಸಿದರು.

ಮತದಾನ ಸಡಗರ


ಮಂಗಳೂರಿನ ಗಾಂಧಿನಗರದಲ್ಲಿರುವ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿ ಉನ್ನತೀಕರಿಸಿದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಮತದಾನ ಮಾಡಲು ನಿಂತಿದ್ದ ಮತದಾರರು –ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್


ಚಾಮರಾಜನಗರದಲ್ಲಿ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್, ಸಹಾಯಕ ಚುನಾವಣಾ ಅಧಿಕಾರಿ ಸವಿತ, ಜಿಲ್ಲಾ ಸ್ವೀಪ್ ನೋಡೆಲ್ ಅಧಿಕಾರಿ ಲಕ್ಷ್ಮಿ ಅವರು ರೇಷ್ಮೆ ಸೀರೆಯಲ್ಲಿ ಮುದ್ರಿಸಿದ್ದ ಮತ ಜಾಗೃತಿ ಸಂದೇಶ ಪ್ರದರ್ಶಿಸಿದರು

ಮತದಾನ ಮಾಡಿ ಫೋಟೊ, ವಿಡಿಯೊ ಹಂಚಿಕೊಂಡರು!

ಪ್ರಜಾವಾಣಿ ವಾರ್ತೆ

ಮೈಸೂರು: ಚಾಮರಾಜನಗರ ಕ್ಷೇತ್ರಕ್ಕೆ ಸೇರಿದ ನಂಜನಗೂಡು ತಾಲ್ಲೂಕಿನ, ವರುಣ ವಿಧಾನಸಭಾ ಕ್ಷೇತ್ರದ ಮತಗಟ್ಟೆಯೊಂದರಲ್ಲಿ ವ್ಯಕ್ತಿಯೊಬ್ಬರು ಮತದಾನ ಮಾಡಿದ ಫೋಟೊಗಳನ್ನು ವಾಟ್ಸ್ ಆ್ಯಪ್ ಗ್ರೂಪ್‌ನಲ್ಲಿ ಹಂಚಿಕೊಂಡಿದ್ದಾರೆ. ಇದೇ ಗ್ರೂಪ್‌ನಲ್ಲಿ ಮತ್ತೊಬ್ಬರು ವಿಡಿಯೊ ಕೂಡ ಹರಿಬಿಟ್ಟಿದ್ದಾರೆ.

'ಅದು ಅಡಕನಹಳ್ಳಿ ಮತಗಟ್ಟೆಯಲ್ಲಿ ತೆಗೆದಿರುವ ಫೋಟೊ ಎಂದು ಪತ್ತೆ ಹಚ್ಚಲಾಗಿದೆ. ಪಿಆರ್‌ಒಗೆ ನೋಟಿಸ್ ನೀಡಲಾಗಿದೆ' ಎಂದು ಎಆರ್‌ಒ ಸುಧೀಂದ್ರ ಪಾಲನೇತ್ರ ತಿಳಿಸಿದರು.

'ಪ್ರಕರಣ ಗಮನಕ್ಕೆ ಬಂದಿದೆ. ಗೋಪ್ಯತೆ ಬಹಿರಂಗಪಡಿಸಿರುವುದು ಅಕ್ರಮ. ಅದಕ್ಕೆ ಕಾರಣರಾದವರ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳುವಂತೆ ಸೈಬರ್ ಪೊಲೀಸರಿಗೆ ಸೂಚನೆ ನೀಡಿದ್ದೇನೆ' ಎಂದು ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಪ್ರತಿಕ್ರಿಯಿಸಿದರು.


ವ್ಯಕ್ತಿಯೊಬ್ಬರು ವಾಟ್ಸ್ ಆ್ಯಪ್ ಗ್ರೂಪ್‌ನಲ್ಲಿ ಹಂಚಿಕೊಂಡ ಫೋಟೊ

ಮೊಬೈಲ್‌ನಲ್ಲಿ ಮತದಾನ ಚಿತ್ರೀಕರಣ ರಾಮನಗರ ವರದಿ: ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಮತಗಟ್ಟೆಯೊಂದರಲ್ಲಿ ಮತ ಹಾಕುವುದನ್ನು ಮೊಬೈಲ್ ಫೋನ್‌ನಲ್ಲಿ ಚಿತ್ರೀಕರಿಸಿಕೊಂಡಿರುವ ಮತದಾರೊಬ್ಬರು ಅದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಇವಿಎಂ ಚಿತ್ರ ಯುವಕನ ವಿರುದ್ಧ ಪ್ರಕರಣ

ಮಂಗಳೂರು: ಮತಗಟ್ಟೆಯಲ್ಲಿ ಮೊಬೈಲ್ ಫೋನ್ ಬಳಕೆ ನಿರ್ಬಂಧವಿದ್ದರೂ, ಪುತ್ತೂರು ವಿಧಾನಸಭಾ ಕ್ಷೇತ್ರದ ಮತಗಟ್ಟೆ ಸಂಖ್ಯೆ 147ರಲ್ಲಿ ರಂಜಿತ್ ಬಂಗೇರ ಎಂಬ ಯುವಕ ಮತದಾನದ ವೇಳೆ ಕ್ಲಿಕ್ಕಿಸಿರುವ ಇವಿಎಂ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು. ಇದರ ಬೆನ್ನಲ್ಲೇ ಪೊಲೀಸರು ಆತನ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಮತಗಟ್ಟೆಗೆ ಮೊಬೈಲ್ ಫೋನ್ ಒಯ್ಯಬಾರದೆಂಬ ಆದೇಶವನ್ನು ಉಲ್ಲಂಘಿಸಿ, ಮತದಾನದ ಗೋಪ್ಯ ಮಾಹಿತಿಯನ್ನು ಆತ ಹಂಚಿಕೊಂಡಿದ್ದ. ಈ ಸಂಬಂಧ ಫ್ಲೈಯಿಂಗ್ ಸ್ಕ್ವಾಡ್–2 ಉಸ್ತುವಾರಿ ಅಧಿಕಾರಿ ದೂರು ನೀಡಿದ್ದರು. ಆರೋಪಿ ವಿರುದ್ಧ ಪುತ್ತೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ತಿಳಿಸಿದ್ದಾರೆ.

ಯರೇಹಳ್ಳಿ: ಮತದಾನ ಬಹಿಷ್ಕಾರ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಲೋಕಸಭಾ ಚುನಾವಣೆಯ ಮತದಾನ ಬಹಿಷ್ಕರಿಸಿದ್ದ ತಾಲ್ಲೂಕಿನ ಸಿದ್ದಾಪುರ ಗ್ರಾಮಸ್ಥರು ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸೂಚನೆಗೆ ಸ್ಪಂದಿಸಿ ಹಕ್ಕು ಚಲಾಯಿಸಿದರು. ಯರೇಹಳ್ಳಿ ಗ್ರಾಮಸ್ಥರು ಅಧಿಕಾರಿಗಳ ಮನವಿಗೆ ಸ್ಪಂದಿಸದೇ ಮತದಾನ ಪ್ರಕ್ರಿಯೆಯಿಂದ ದೂರ ಉಳಿದರು.

ಚಿತ್ರದುರ್ಗ ತಾಲ್ಲೂಕಿನ ಯರೇಹಳ್ಳಿ ಗ್ರಾಮದಲ್ಲಿನ ಮತಗಟ್ಟೆಯಲ್ಲಿ 577 ಮತಗಳಿವೆ. ಈ ಪೈಕಿ 24 ಜನರು ಮಾತ್ರ ಮತಗಟ್ಟೆಗೆ ಧಾವಿಸಿ ಹಕ್ಕು ಚಲಾಯಿಸಿದ್ದಾರೆ. ಗ್ರಾಮಸ್ಥರ ಮನವೊಲಿಸಿ ಮತಗಟ್ಟೆಗೆ ಕರೆತರುವ ಅಧಿಕಾರಿಗಳ ಪ್ರಯತ್ನ ಕೊನೆಗೂ ಕೈಗೂಡಲಿಲ್ಲ.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್. ಜೆ.ಸೋಮಶೇಖರ್ ಹಾಗೂ ಉಪವಿಭಾಗಾಧಿಕಾರಿ ಎಂ.ಕಾರ್ತಿಕ್ ನೇತೃತ್ವದ ಅಧಿಕಾರಿಗಳ ತಂಡ ಗ್ರಾಮಕ್ಕೆ ಭೇಟಿ ನೀಡಿ ಜನರ ಮನವೊಲಿಸುವ ಪ್ರಯತ್ನ ಮಾಡಿತು. ಇದಕ್ಕೆ ಸ್ಪಂದಿಸಿದ ಕೆಲವರು ಮತದಾನ ಮಾಡಿದರು.

'ಮೂಲಸೌಲಭ್ಯಕ್ಕೆ ಒತ್ತಾಯಿಸಿ ಮತದಾನ ಬಹಿಷ್ಕರಿಸಿದ್ದ ಯರೇಹಳ್ಳಿಗೆ ಅಧಿಕಾರಿಗಳ ತಂಡ ಭೇಟಿ ನೀಡಿತ್ತು. 24 ಜನರು ಮಾತ್ರ ಮತ ಚಲಾವಣೆ ಮಾಡಿದ್ದಾರೆ' ಎಂದು ಜಿಲ್ಲಾ ಚುನಾವಣಾಧಿಕಾರಿ ಟಿ.ವೆಂಕಟೇಶ್ ಮಾಹಿತಿ ನೀಡಿದ್ದಾರೆ.

ಹೃದಯಾಘಾತ: ಮತಗಟ್ಟೆ ಅಧಿಕಾರಿ ಸಾವು


ಯಶೋಧಮ್ಮ

ಚಳ್ಳಕೆರೆ: ಚುನಾವಣಾ ಕರ್ತವ್ಯದಲ್ಲಿದ್ದ ಸಹಾಯಕ ಮತಗಟ್ಟೆ ಅಧಿಕಾರಿ ಹೃದಯಾಘಾತದಿಂದ ಮೃತಪಟ್ಟ ಘಟನೆ ಚಳ್ಳಕೆರೆ ತಾಲ್ಲೂಕಿನ ಹೊಟ್ಟೆಪ್ಪನಹಳ್ಳಿ ಗ್ರಾಮದ ಮೇಗಳ ಗೊಲ್ಲರಹಟ್ಟಿಯಲ್ಲಿ ಶುಕ್ರವಾರ ನಡೆದಿದೆ.

ಚಳ್ಳಕೆರೆ ತಾಲ್ಲೂಕಿನ ಬೊಮ್ಮಸಂದ್ರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಯಶೋದಮ್ಮ (58) ಮೃತಪಟ್ಟವರು.

'ಯಶೋದಮ್ಮ ಅವರಿಗೆ ಶುಕ್ರವಾರ ಬೆಳಿಗ್ಗೆ ತೀವ್ರ ಸುಸ್ತು ಕಾಣಿಸಿಕೊಂಡಿತ್ತು. ಕರ್ತವ್ಯನಿರತ ಚುನಾವಣಾ ಸಿಬ್ಬಂದಿ ಆಂಬುಲೆನ್ಸ್‌ನಲ್ಲಿ ಅವರನ್ನು ತಕ್ಷಣವೇ ಚಳ್ಳಕೆರೆ ಸಾರ್ವಜನಿಕ ಆಸ್ಪತ್ರೆಗೆ ಕರೆತಂದರು. ಆದರೆ, ಅವರು ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದರು' ಎಂದು ಸಹಾಯಕ ಚುನಾವಣಾಧಿಕಾರಿ ಬಿ.ಆನಂದ್ ಮಾಹಿತಿ ನೀಡಿದ್ದಾರೆ.

ಮತದಾನ ಬಹಿಷ್ಕರಿಸಿದ್ದ ಗ್ರಾಮಸ್ಥರು, ಇನ್ನೊಂದು ಗ್ರಾಮದವರು ಮತದಾನಕ್ಕೆ ಬಂದಾಗ ಘರ್ಷಣೆ

ಇಂಡಿಗನತ್ತ ಮತಗಟ್ಟೆ ಧ್ವಂಸ; ಇವಿಎಂಗೆ ಹಾನಿ

ಪ್ರಜಾವಾಣಿ ವಾರ್ತೆ

ಹನೂರು/ಮಹದೇಶ್ವರ ಬೆಟ್ಟ (ಚಾಮರಾಜನಗರ ಜಿಲ್ಲೆ): ಹನೂರು ತಾಲ್ಲೂಕಿನ ಮಹದೇಶ್ವರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಇಂಡಿಗನತ್ತ ಗ್ರಾಮದಲ್ಲಿ ಮತದಾನ ಬಹಿಷ್ಕರಿಸಿದ್ದ ಗ್ರಾಮಸ್ಥರು ಮತ್ತು ಪಕ್ಕದ ಮೆಂದಾರೆ ಗ್ರಾಮಸ್ಥರ ನಡುವೆ ಘರ್ಷಣೆ ನಡೆದಿದ್ದು, ಉದ್ರಿಕ್ತರು ಮತಗಟ್ಟೆಯ ಮೇಲೆ ಕಲ್ಲು ತೂರಾಟ ನಡೆಸಿ, ಮತಯಂತ್ರಗಳಿಗೆ ಹಾನಿ ಮಾಡಿದ್ದಾರೆ.

ಮತದಾನ ಮಾಡುವಂತೆ ಮನವೊಲಿಸಲು ಗ್ರಾಮಕ್ಕೆ ಹೋಗಿದ್ದ ಹನೂರು ತಹಶೀಲ್ದಾರ್ ಗುರುಪ್ರಸಾದ್, ಮಹದೇಶ್ವರ ಬೆಟ್ಟ ಠಾಣೆಯ ಇನ್‌ಸ್ಪೆಕ್ಟರ್ ಜಗದೀಶ್ ಸೇರಿದಂತೆ ಕೆಲವು ಅಧಿಕಾರಿಗಳು ಹಾಗೂ ಸಿಬ್ಬಂದಿ ಸೇರಿ 20ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

'ಮಲೆ ಮಹದೇಶ್ವರ ವನ್ಯಧಾಮದ ವ್ಯಾಪ್ತಿಯಲ್ಲಿರುವ ಗ್ರಾಮಕ್ಕೆ ರಸ್ತೆ, ವಿದ್ಯುತ್ ಸೇರಿದಂತೆ ಮೂಲಸೌಕರ್ಯಗಳಿಲ್ಲ' ಎಂದು ದೂರಿದ್ದ ಗ್ರಾಮಸ್ಥರು ಚುನಾವಣೆ ಬಹಿಷ್ಕಾರ ಮಾಡುವುದಾಗಿ ಘೋಷಿಸಿದ್ದರು. ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಸೇರಿದಂತೆ ಹಿರಿಯ ಅಧಿಕಾರಿಗಳು ಭೇಟಿ ನೀಡಿ ಮನವೊಲಿಸುವ ಪ್ರಯತ್ನ ಮಾಡಿದ್ದರು.

ಇಂಡಿಗನತ್ತ ಗ್ರಾಮದ ಮತಗಟ್ಟೆಯಲ್ಲಿ ಸಮೀಪದ ಮೆಂದಾರೆ ಗ್ರಾಮದವರೂ ಮತದಾನ ಮಾಡುತ್ತಾರೆ. ಎರಡೂ ಗ್ರಾಮಗಳಲ್ಲಿ 528 ಮತದಾರರಿದ್ದಾರೆ. ಶುಕ್ರವಾರ ಬೆಳಿಗ್ಗೆ ಮತದಾನ ಆರಂಭವಾಗಿದ್ದರೂ, ಗ್ರಾಮಸ್ಥರು ಮತಗಟ್ಟೆಗೆ ಬಂದಿರಲಿಲ್ಲ. ತಹಶೀಲ್ದಾರ್ ಗುರುಪ್ರಸಾದ್, ಇನ್‌ಸ್ಪೆಕ್ಟರ್ ಜಗದೀಶ್ ಸೇರಿದಂತೆ ಅಧಿಕಾರಿಗಳು ಗ್ರಾಮಸ್ಥರ ಮನವೊಲಿಸಲು ಯತ್ನಿಸಿದರೂ, ಅವರು ಪಟ್ಟು ಸಡಿಸಲಿಲ್ಲ. ಪಕ್ಕದ ಮೆಂದಾರೆಗೂ ತೆರಳಿ ಮತದಾರರ ಮನವೊಲಿಸಿದರು. ಅವರು ಮತದಾನ ಮಾಡಲು ಒಪ್ಪಿದರು.

ಮಧ್ಯಾಹ್ನ 1 ಗಂಟೆ ಸುಮಾರಿಗೆ ಮೆಂದಾರೆಯ ಮತದಾರರು ಮತಗಟ್ಟೆಗೆ ಬಂದು ಮತದಾನಕ್ಕೆ ಮುಂದಾದಾಗ ಇಂಡಿಗನತ್ತ ಗ್ರಾಮಸ್ಥರು ಆಕ್ಷೇಪಿಸಿದರು. ಆ ವೇಳೆಗಾಗಲೇ ಒಂಬತ್ತು ಮಂದಿ ಹಕ್ಕು ಚಲಾಯಿಸಿದ್ದರು.

'ನೀವು ಜನರನ್ನು ಹೆದರಿಸಿ, ಬೆದರಿಸಿ ಮತ ಹಾಕಿಸುತ್ತಿದ್ದೀರಿ' ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು. ಆ ವೇಳೆ ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಪೊಲೀಸರು ಲಾಠಿ ಪ್ರಹಾರಕ್ಕೆ ಮುಂದಾದಾಗ ಉದ್ರಿಕ್ತರು ಮತಗಟ್ಟೆ ಮೇಲೆ ಕಲ್ಲು ತೂರಾಟ ನಡೆಸಿದರು. ಮತಗಟ್ಟೆಯ ಒಳಕ್ಕೆ ನುಗ್ಗಿ ಇವಿಎಂ ಹಾಗೂ ಇತರ ಪರಿಕರಗಳನ್ನು ಕೆಳಕ್ಕೆ ಎಸೆದು ಹಾನಿ ಮಾಡಿದರು. ಇವಿಎಂಗೆ ಬೆಂಕಿ ಹಚ್ಚಲೂ ಯತ್ನಿಸಿದರು. ವಿಷಯ ತಿಳಿಯುತ್ತಲೇ ಹೆಚ್ಚಿನ ಪೊಲೀಸ್ ಸಿಬ್ಬಂದಿ ರವಾನಿಸಲಾಗಿದ್ದು, ಪರಿಸ್ಥಿತಿ ಶಾಂತವಾಗಿದೆ.

ಎಸ್‌ಪಿ ಭೇಟಿ: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಅವರು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪೊಲೀಸ್ ಅಧಿಕಾರಿಗಳು ಮತ್ತು ಸ್ಥಳೀಯರೊಂದಿಗೂ ಚರ್ಚೆ ನಡೆಸಿದ್ದಾರೆ.

ಘಟನೆ ಸಂಬಂಧ ಗ್ರಾಮದ 10 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.

ಘಟನೆ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಜಿಲ್ಲಾ ಚುನಾವಣಾಧಿಕಾರಿ ಸಿ.ಟಿ.ಶಿಲ್ಪಾ ನಾಗ್, 'ಘಟನೆಯನ್ನು ಚುನಾವಣಾ ಆಯೋಗದ ಗಮನಕ್ಕೆ ತರಲಾಗಿದೆ. ಅಲ್ಲಿ ಮರು ಮತದಾನ ನಡೆಯುವ ನಿರೀಕ್ಷೆ ಇದೆ. ಘಟನೆಯ ಕುರಿತಾಗಿ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದ್ದಾರೆ.


ಹನೂರು ತಾಲ್ಲೂಕಿನ ಮಹದೇಶ್ವರ ಬೆಟ್ಟ ವ್ಯಾಪ್ತಿಯ ಇಂಡಿಗನತ್ತ ಗ್ರಾಮದ ಮತಗಟ್ಟೆಯನ್ನು ಧ್ವಂಸ ಮಾಡಿರುವುದು

20ಕ್ಕೂ ಹೆಚ್ಚು ಜನರಿಗೆ ಗಾಯ

ಘಟನೆಯಲ್ಲಿ ಮೆಂದಾರೆ ಗ್ರಾಮದ 20ಕ್ಕೂ ಹೆಚ್ಚು ನಿವಾಸಿಗಳಿಗೆ ಗಾಯಗಳಾಗಿವೆ.

'ಮೂಲಸೌಕರ್ಯಗಳು ಇಲ್ಲದಿರುವ ಕಾರಣಕ್ಕೆ ಈ ಬಾರಿ ಮತದಾನ ಬಹಿಷ್ಕಾರ ಮಾಡುವ ಬಗ್ಗೆ ಇಂಡಿಗನತ್ತ ಗ್ರಾಮದವರು ನಮ್ಮೊಂದಿಗೆ ಚರ್ಚಿಸಿ ತೀರ್ಮಾನ ಮಾಡಿದ್ದರು. ಅದರಂತೆ ನಾವು ಶುಕ್ರವಾರ ಮತದಾನಕ್ಕೆ ಹೋಗಿರಲಿಲ್ಲ. ಬೆಳಿಗ್ಗೆ 10 ಗಂಟೆಯ ಸುಮಾರಿಗೆ ಪೊಲೀಸ್ ಅಧಿಕಾರಿಗಳು ಬಂದು ಮತ ಚಲಾಯಿಸುವಂತೆ ಮನವಿ ಮಾಡಿದರು. ಮತದಾನದ ಮಹತ್ವ ತಿಳಿಸಿದರು' ಎಂದು ಮೆಂದಾರೆ ಗ್ರಾಮದ ಸೋಲಿಗ ಮುಖಂಡರಾದ ಮಾದಯ್ಯ ಶಿವಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಪೊಲೀಸ್ ಭದ್ರತೆಯಲ್ಲಿ ಮತದಾನಕ್ಕೆ ನಾವು ಮುಂದಾದಾಗ ಇಂಡಿಗನತ್ತ ಗ್ರಾಮಸ್ಥರು ರೊಚ್ಚಿಗೆದ್ದು, ದೊಡ್ಡ ಗಾತ್ರದ ಕಲ್ಲುಗಳನ್ನು ಅಧಿಕಾರಿಗಳು ಮತ್ತು ನಮ್ಮ ತೂರಿದ್ದಾರೆ. ನಮ್ಮ ಗ್ರಾಮದ ಬೇರಪ್ಪ, ಮಾದಯ್ಯ ಎಂಬುವವರ ತಲೆಗೆ ಪೆಟ್ಟಾಗಿದ್ದು, ಶಿವಕುಮಾರ್ ಎಂಬಾತನ ಸೊಂಟಕ್ಕೆ ಏಟಾಗಿದೆ. 20 ಜನರಿಗೆ ಸಣ್ಣಪುಟ್ಟ ಗಾಯಗಳಾಗಿವೆ' ಎಂದು ವಿವರಿಸಿದರು.

'ಇಂಡಿಗನತ್ತದಿಂದ ನಮ್ಮ ಗ್ರಾಮಕ್ಕೆ ಸಂಪರ್ಕ ಕಲ್ಪಿಸಿರುವ ಕುಡಿಯುವ ನೀರಿನ ಪೈಪ್‌ಗಳನ್ನೂ ಕಿತ್ತು ಹಾಕಲಾಗಿದೆ. ಅಧಿಕಾರಿಗಳು ನಮಗೆ ರಕ್ಷಣೆ ನೀಡಬೇಕು' ಎಂದು ಅವರು ಒತ್ತಾಯಿಸಿದರು.

ಕುಣಿಗಲ್: ಹಲ್ಲೆ, ಮತಗಟ್ಟೆ ಬಳಿ ಆತ್ಮಹತ್ಯೆ

ಕುಣಿಗಲ್ (ತುಮಕೂರು): ತಾಲ್ಲೂಕಿನ ಹಳೆವೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಿಚವಾಡಿ ಗ್ರಾಮದಲ್ಲಿ ಶುಕ್ರವಾರ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಲಾಗಿದ್ದ ನೀರಗಂಟಿ ಚಂದ್ರಶೇಖರ್ (45) ಎಂಬುವರು ಮತಗಟ್ಟೆಯ ಎದುರುಗಡೆ ಇರುವ ಓವರ್ ಹೆಡ್ ಟ್ಯಾಂಕ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಚಂದ್ರಶೇಖರ್ ಅವರನ್ನು ಕಿಚವಾಡಿ ಮತಗಟ್ಟೆಗೆ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಬಿಜೆಪಿ ಪರ ಪ್ರಚಾರ ಮಾಡುತ್ತಿದ್ದ ಅವರನ್ನು ಗಮನಿಸಿದ ಕಾಂಗ್ರೆಸ್ ಕಾರ್ಯಕರ್ತರು ವಿಡಿಯೊ ಮಾಡಿಕೊಂಡಿದ್ದಾರೆ. 'ಸರ್ಕಾರಿ ಕೆಲಸದಲ್ಲಿ ಇದ್ದುಕೊಂಡು, ಚುನಾವಣೆ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದರೂ ಬಿಜೆಪಿ ಪರ ಮತಯಾಚನೆ ಮಾಡುತ್ತಿದ್ದಾರೆ' ಎಂದು ಹಲ್ಲೆ ನಡೆಸಿದ್ದರು.

ಈ ಘಟನೆಯ ನಂತರ ಚಂದ್ರಶೇಖರ್ ಕಿಚವಾಡಿ ಮತಗಟ್ಟೆಯ ಎದುರುಗಡೆ ಇರುವ ಓವರ್ ಹೆಡ್ ಟ್ಯಾಂಕ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 'ಕಾಂಗ್ರೆಸ್ ಮುಖಂಡರು ಹಲ್ಲೆ ನಡೆಸಿದ್ದಕ್ಕೆ ಮನನೊಂದು ಆತ್ಮಹತ್ಯೆಗೆ ಶರಣಾಗಿದ್ದಾರೆ' ಎಂದು ಬಿಜೆಪಿ, ಜೆಡಿಎಸ್ ಮುಖಂಡರು ಆರೋಪಿಸಿದ್ದಾರೆ. ಹುಲಿಯೂರುದುರ್ಗ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಂಜಾರು ಮಲೆ: ಶೇ 100 ಮತದಾನ ದಾಖಲೆ

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ: ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ ಬೆಳ್ತಂಗಡಿ ತಾಲ್ಲೂಕು ಬಾಂಜಾರು ಮಲೆ ಮತಗಟ್ಟೆಯಲ್ಲಿ ಶೇ 100ರಷ್ಟು ಮತದಾನವಾಗಿದೆ.

ನಕ್ಸಲ್ ಪೀಡಿತ ಪ್ರದೇಶದ ಈ ಮತಗಟ್ಟೆಯಲ್ಲಿ 111 ಮತದಾರರು ಇದ್ದಾರೆ. ಸಂಜೆ 4ರ ವೇಳೆಗೆ ಎಲ್ಲರೂ ಮತದಾನ ಮಾಡಿದರು. ಈ ಮತಗಟ್ಟೆಯಲ್ಲಿ ಕೊನೆಯ ಮತದಾರರೊಬ್ಬರು ಮತ ಚಲಾಯಿಸಿದ ಬಳಿಕ ಮತಗಟ್ಟೆ ಅಧಿಕಾರಿಗಳು ಅವರಿಗೆ ಹೂವು ನೀಡಿ ಅಭಿನಂದನೆ ಸಲ್ಲಿಸಿದರು.

ಇಲ್ಲಿನ ಮಲೆಕುಡಿಯ ಸಮುದಾಯ ಭವನವನ್ನೇ ಪರಿಸರಸ್ನೇಹಿ ವಸ್ತುಗಳನ್ನು ಬಳಸಿ, 'ಪಾರಂಪರಿಕ ಮತಗಟ್ಟೆ'ಯಾಗಿ ಪರಿವರ್ತಿಸಲಾಗಿತ್ತು. ಮಲೆಕುಡಿಯ ಸಮುದಾಯದ 60 ಮಹಿಳಾ ಮತದಾರರೂ ಸೇರಿದಂತೆ ಎಲ್ಲಾ 111 ಮಂದಿ ಮತದಾನ ನಡೆಸಿದರು.

ಪಶ್ಚಿಮ ಘಟ್ಟದ ಮಧ್ಯದ ಚಾರ್ಮಾಡಿ ಬಳಿಯ ಕುಗ್ರಾಮದಲ್ಲಿ ನೆಲೆಸಿರುವ ಈ ಗ್ರಾಮದವರು ಮತದಾನಕ್ಕಾಗಿ 45 ಕಿ.ಮೀ ದೂರದವರೆಗೆ ನಡೆದುಕೊಂಡೇ ಬರಬೇಕಾಗಿತ್ತು. 2014ರಲ್ಲಿ ಬಂಜಾರು ಮಲೆಗೆ ಭೇಟಿ ನೀಡಿದ್ದ ಅಂದಿನ ಜಿಲ್ಲಾಧಿಕಾರಿ ಎ.ಬಿ. ಇಬ್ರಾಹಿಂ ಅವರು ಜನರ ಕಷ್ಟವನ್ನು ಅರಿತು ಅಲ್ಲಿ ಮತಗಟ್ಟೆ ಸ್ಥಾಪಿಸುವ ಭರವಸೆ ನೀಡಿದ್ದರು. ಅದರಂತೆ ಅದೇ ವರ್ಷ ಮತಗಟ್ಟೆ ಆರಂಭಿಸಿದ್ದರು. ಅದರ ಹೊರತಾಗಿಯೂ ಗ್ರಾಮಕ್ಕೆ ಮೂಲ ಸೌಕರ್ಯಗಳನ್ನು ಒದಗಿಸಬೇಕು ಎಂದು ಒತ್ತಾಯಿಸಿ 2015ರಿಂದೀಚೆಗೆ ಎರಡು ಬಾರಿ ಗ್ರಾಮಸ್ಥರು ಚುನಾವಣಾ ಬಹಿಷ್ಕಾರ ಮಾಡಿದ್ದರು.


ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ ಬಾಂಜಾರು ಮಲೆ ಮತಗಟ್ಟೆಯಲ್ಲಿ ಕೊನೆಯ ಮತದಾರರೊಬ್ಬರು ಮತ ಚಲಾಯಿಸಿದ ಬಳಿಕ ಅವರಿಗೆ ಹೂವು ನೀಡಿ ಅಭಿನಂದನೆ ಸಲ್ಲಿಸಿದ ಮತಗಟ್ಟೆ ಅಧಿಕಾರಿಗಳು

ಶನಿವಾರ, ಏಪ್ರಿಲ್ 27, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಶಸ್ತಿ
ಮುಂಬೈನಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಟಿ ರವೀನಾ ಟಂಡನ್ ಕೆಂಪು ಉಡುಗೆಯಲ್ಲಿ ಮಿಂಚಿದರು



ಮತಯಂತ್ರ, ವಿವಿ-ಪ್ಯಾಟ್ ಮತಗಳ ಶೇ 100ರಷ್ಟು ಹೋಲಿಕೆ ಮನವಿ ತಿರಸ್ಕರಿಸಿದ ದ್ವಿಸದಸ್ಯ ಪೀಠ

ಇವಿಎಂ ಸುರಕ್ಷಿತ, ನಂಬಿಕಾರ್ಹ: ಸುಪ್ರೀಂ ಕೋರ್ಟ್

ಬಿಜೆಪಿಯು ಇವಿಎಂಗಳನ್ನು ತಿರುಚುವ ಮೂಲಕ ಚುನಾವಣೆಗಳನ್ನು ಗೆಲ್ಲುತ್ತದೆ ಎಂಬುದು ವಿರೋಧ ಪಕ್ಷಗಳ ಆರೋಪ. ಇವಿಎಂಗಳಲ್ಲಿ ಚಲಾಯಿಸಲಾಗುವ ಮತಗಳನ್ನು ಖಾತರಿಪಡಿಸಿಕೊಳ್ಳಲು ಹೊಸ ವ್ಯವಸ್ಥೆ ತನ್ನಿ ಎಂದು 2013ರಲ್ಲಿ ಸುಪ್ರೀಂ ಕೋರ್ಟ್ ಚುನಾವಣಾ ಆಯೋಗಕ್ಕೆ ಸೂಚಿಸಿತ್ತು. ಅದರ ಫಲವಾಗಿ ವಿವಿ-ಪ್ಯಾಟ್ ವ್ಯವಸ್ಥೆ ಜಾರಿಗೆ ಬಂದಿತ್ತು. ಆದರೆ ಚುನಾವಣಾ ಆಯೋಗವು ಪ್ರತಿ ಕ್ಷೇತ್ರದಲ್ಲಿ ಶೇ 5ರಷ್ಟು ವಿವಿ-ಪ್ಯಾಟ್‌ಗಳಲ್ಲಿನ ಮತಚೀಟಿಗಳನ್ನು ಮಾತ್ರ ಇವಿಎಂ ಮತಗಳ ಜತೆಗೆ ಹೋಲಿಸಿ ನೋಡುತ್ತಿದೆ. ಈ ಹೋಲಿಕೆ ಪ್ರಮಾಣವನ್ನು ಶೇ 100ಕ್ಕೆ ಹೆಚ್ಚಿಸಬೇಕು ಎಂದು ಹಲವು ಸಂಘಸಂಸ್ಥೆಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಮತ್ತೆ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಆ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತಿರಸ್ಕರಿಸಿದೆ. ಆದರೆ ಇವಿಎಂ ವ್ಯವಸ್ಥೆಯಲ್ಲಿ ಕೆಲವು ಸುಧಾರಣೆಗಳಿಗೆ ಚುನಾವಣಾ ಆಯೋಗಕ್ಕೂ ನಿರ್ದೇಶನ ನೀಡಿದೆ.

• ಜಯಸಿಂಹ ಆರ್.

ಬೆಂಗಳೂರು: ವಿದ್ಯುನ್ಮಾನ ಮತಯಂತ್ರಗಳಲ್ಲಿನ (ಇವಿಎಂ) ಮತಗಳು ಮತ್ತು ಎಲ್ಲ ಶೇ 100ರಷ್ಟು ವಿವಿ-ಪ್ಯಾಟ್ ಯಂತ್ರಗಳಲ್ಲಿನ ಮತಗಳನ್ನು ಪರಸ್ಪರ ಹೋಲಿಸಿ ನೋಡಬೇಕು ಎಂದು ಕೋರಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠವು ತಿರಸ್ಕರಿಸಿದೆ. ಜತೆಗೆ ಇವಿಎಂ ಕಾರ್ಯನಿರ್ವಹಣೆಯಲ್ಲಿ ಬದಲಾವಣೆ ಮಾಡಬೇಕು ಎಂದು ಕೋರಿದ್ದ ಅರ್ಜಿಗಳನ್ನು ಮತ್ತು ಮತ್ತೆ ಮತಪತ್ರ (ಬ್ಯಾಲೆಟ್ ಪೇಪರ್) ವ್ಯವಸ್ಥೆಗೆ ಹಿಂತಿರುಗಬೇಕು ಎಂದು ಕೋರಿದ್ದ ಅರ್ಜಿಗಳನ್ನೂ ಪೀಠವು ತಿರಸ್ಕರಿಸಿದೆ. ಇವಿಎಂ ವ್ಯವಸ್ಥೆ ಸುರಕ್ಷಿತ ಮತ್ತು ವಿಶ್ವಾಸಾರ್ಹ ಎಂದು ಹೇಳಿದೆ.



ಈ ಸಂಬಂಧ ಸಲ್ಲಿಕೆಯಾಗಿದ್ದ ಹಲವು ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಂಕರ್ ದತ್ತಾ ಅವರಿದ್ದ ಪೀಠವು ನಡೆಸಿತ್ತು. ಇವಿಎಂ ಬಗ್ಗೆ ಅರ್ಜಿದಾರರು ಎತ್ತಿದ್ದ ಪ್ರಶ್ನೆಗಳು ಮತ್ತು ಸಂದೇಹಗಳ ಬಗ್ಗೆ ಚುನಾವಣಾ ಆಯೋಗದಿಂದ ವಿವರಣೆ ಪಡೆದುಕೊಂಡಿತ್ತು. ಏಪ್ರಿಲ್ 18ರಂದು ನಡೆದಿದ್ದ ವಿಚಾರಣೆಯ ನಂತರ ತೀರ್ಪನ್ನು ಕಾಯ್ದಿರಿಸಿತ್ತು. ಆದರೆ ಇನ್ನಷ್ಟು ತಾಂತ್ರಿಕ ವಿವರಗಳ ಅಗತ್ಯವಿದ್ದ ಕಾರಣ ಏಪ್ರಿಲ್ 24ರಂದು ಮತ್ತೆ ವಿಚಾರಣೆ ನಡೆಸಿ, ಚುನಾವಣಾ ಆಯೋಗದ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡಿತ್ತು.

ಇಬ್ಬರು ನ್ಯಾಯಮೂರ್ತಿಗಳೂ ಪ್ರತ್ಯೇಕವಾದ ತೀರ್ಪನ್ನು ನೀಡಿದ್ದರೂ, ಮೇಲಿನ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸಿದ್ದಾರೆ. 'ಚುನಾವಣಾ ಆಯೋಗದಲ್ಲಿ, ಚುನಾವಣಾ ವ್ಯವಸ್ಥೆಯಲ್ಲಿ ನಂಬಿಕೆ ಇರಬೇಕು' ಎಂದು ಹೇಳಿದ್ದಾರೆ. 'ಅರ್ಜಿದಾರರ ಕೋರಿಕೆಗಳು ಕೇವಲ ಅನುಮಾನ, ಸಂದೇಹವನ್ನು ಆಧರಿಸಿದ್ದವು. ಮತ್ತು ಅರ್ಜಿದಾರರು ಯಾವುದೇ ಸಾಕ್ಷ್ಯಗಳನ್ನು ಒದಗಿಸಿರಲಿಲ್ಲ. ಕೇವಲ ಸಂದೇಹವನ್ನು ಆಧಾರವಾಗಿ ಇರಿಸಿಕೊಂಡು, ನಿರ್ದೇಶನಗಳನ್ನು ನೀಡಲು ಸಾಧ್ಯವಿಲ್ಲ. ಈ ತೀರ್ಪನ್ನು ತಾಂತ್ರಿಕ ವರದಿ ಮತ್ತು ಸಾಕ್ಷ್ಯಗಳ ಆಧಾರದಲ್ಲಿ ನೀಡಲಾಗಿದೆ' ಎಂದು ಪೀಠವು ತನ್ನ ತೀರ್ಪಿನಲ್ಲಿ ವಿವರಿಸಿದೆ. 'ಇವಿಎಂ ವ್ಯವಸ್ಥೆಯ ಸಂಬಂಧ ಮುಂದೆ ಅರ್ಜಿಗಳು ಸಲ್ಲಿಕೆಯಾದರೆ, ಅವುಗಳು ಸಾಕ್ಷ್ಯಗಳನ್ನು ಆಧರಿಸಿವೆಯೇ ಎಂಬುದನ್ನು ಮೊದಲು ಪರಿಶೀಲಿಸಿಕೊಳ್ಳಬೇಕಾಗುತ್ತದೆ' ಎಂದು ಪೀಠವು ಅಭಿಪ್ರಾಯಪಟ್ಟಿದೆ.

'40 ಬಾರಿ ಅರ್ಜಿ ತಿರಸ್ಕೃತ': ಇವಿಎಂ ಸಂಬಂಧ ದೇಶದಾದ್ಯಂತ ವಿವಿಧ ನ್ಯಾಯಾಲಯಗಳಲ್ಲಿ ಸಲ್ಲಿಕೆಯಾಗಿದ್ದ ಹಲವು ಅರ್ಜಿಗಳು ತಿರಸ್ಕೃತವಾದ 40 ನಿದರ್ಶನಗಳು ನಮ್ಮೆದುರು ಇವೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ಹೇಳಿದ್ದರು. ಮಾರ್ಚ್ 16ರಂದು ಅವರು ಈ ಮಾಹಿತಿ ಹಂಚಿಕೊಂಡಿದ್ದರು.

ಪ್ರಮುಖ ಮನವಿಗಳು ಮತ್ತು ತೀರ್ಪು

ಇವಿಎಂ ವ್ಯವಸ್ಥೆಗೆ ಸಂಬಂಧಿಸಿದಂತೆ ಹಲವು ಅರ್ಜಿಗಳು ಸಲ್ಲಿಕೆಯಾಗಿದ್ದವು. ಎಲ್ಲಾ ಅರ್ಜಿಗಳ ಮನವಿಯೂ ಬೇರೆ-ಬೇರೆಯೇ ಆಗಿತ್ತು. ಜತೆಗೆ ವಿಚಾರಣೆ ಮಧ್ಯೆಯೇ ಇನ್ನಷ್ಟು ಅರ್ಜಿಗಳು ಸಲ್ಲಿಕೆಯಾಗಿದ್ದವು. ಅವುಗಳಲ್ಲಿ ಪ್ರಮುಖ ಮನವಿಗಳು ಮತ್ತು ಅವುಗಳಿಗೆ ಸಂಬಂಧಿಸಿದ ತೀರ್ಪು ಇಲ್ಲಿವೆ...

ವಿವಿ-ಪ್ಯಾಟ್ ಎಣಿಕೆ

ಮನವಿ: **ಇವಿಎಂಗಳನ್ನು ತಿರುಚಬಹುದಾಗಿದೆ. ಹೀಗಾಗಿ, ಇವಿಎಂಗಳು ಮತ್ತು ಶೇ 100ರಷ್ಟು ವಿವಿ-ಪ್ಯಾಟ್‌ಗಳಲ್ಲಿನ ಮತಗಳನ್ನು ಹೋಲಿಸಿ ನೋಡಬೇಕು**

ತೀರ್ಪು: ಇವಿಎಂ ವ್ಯವಸ್ಥೆಯಲ್ಲಿ ಇರುವ ಕಂಟ್ರೋಲ್ ಯುನಿಟ್, ಬ್ಯಾಲೆಟ್ ಯುನಿಟ್ ಮತ್ತು ವಿವಿ-ಪ್ಯಾಟ್‌ಗಳಲ್ಲಿ ಮೈಕ್ರೊ ಕಂಟ್ರೋಲರ್‌ಗಳು ಮಾತ್ರ ಇದ್ದು, ಅವುಗಳನ್ನು ಒಮ್ಮೆ ಮಾತ್ರ ಪ್ರೋಗ್ರಾಮಿಂಗ್ ಮಾಡಬಹುದು. ಅವುಗಳನ್ನು ತಿರುಚಲು ಯತ್ನಿಸಿದರೆ ಅವು ಸಂಪೂರ್ಣವಾಗಿ ಸ್ಥಗಿತವಾಗುತ್ತವೆ. ಹೀಗಾಗಿ ಅವುಗಳನ್ನು ತಿರುಚಲು ಸಾಧ್ಯವಾಗುವುದಿಲ್ಲ ಎಂಬುದನ್ನು ಚುನಾವಣಾ ಆಯೋಗವು ಸಾಬೀತು ಮಾಡಿದೆ. ಹೀಗಾಗಿ ಇವಿಎಂ ವ್ಯವಸ್ಥೆ ಸುರಕ್ಷಿತ ಮತ್ತು ವಿಶ್ವಾಸಾರ್ಹವಾಗಿದೆ.



ವಿವಿ-ಪ್ಯಾಟ್‌ಗಳು ಮುದ್ರಿಸುವ ಮತಚೀಟಿಗಳು ಐದು ವರ್ಷಗಳವರೆಗೆ ಉಳಿಯುವಂತೆ ಮಾಡಲು ವಿಶೇಷ ರಾಸಾಯನಿಕವನ್ನು ಯಂತ್ರವೇ ಲೇಪಿಸುತ್ತದೆ. ಹೀಗಾಗಿ ಮತಚೀಟಿಗಳು ಅಂಟುವ ಸ್ವರೂಪದಲ್ಲಿ ಇರುತ್ತದೆ. ಒಂದು ವಿವಿ-ಪ್ಯಾಟ್ ಯಂತ್ರದಲ್ಲಿನ ಎಲ್ಲಾ ಮತಚೀಟಿಗಳನ್ನು ಎಣಿಸಲು, ಅವುಗಳನ್ನು ಅಭ್ಯರ್ಥಿಗಳಿಗನುಗುಣವಾಗಿ ಪ್ರತ್ಯೇಕಿಸಲು ಮತ್ತು ಮತಯಂತ್ರಗಳಲ್ಲಿನ ಮತಗಳೊಂದಿಗೆ ಹೋಲಿಸಿ ನೋಡಲು ಐದು ಗಂಟೆ ಬೇಕಾಗುತ್ತದೆ. ಶೇ 100ರಷ್ಟು ವಿವಿ-ಪ್ಯಾಟ್ ಯಂತ್ರಗಳಲ್ಲಿನ ಮತಗಳನ್ನು ಹೋಲಿಸಿ ನೋಡಲು ಹೆಚ್ಚಿನ ಸಮಯ ಬೇಕಾಗುತ್ತದೆ ಮತ್ತು ಸಿಬ್ಬಂದಿಯ ಸಂಖ್ಯೆಯನ್ನು ದುಪ್ಪಟ್ಟುಗೊಳಿಸಬೇಕಾಗುತ್ತದೆ. ಹೀಗಾಗಿ ಶೇ 100ರಷ್ಟೂ ವಿವಿ-ಪ್ಯಾಟ್ ಯಂತ್ರಗಳಲ್ಲಿನ ಮತಚೀಟಿಗಳನ್ನು, ಇವಿಎಂಗಳಲ್ಲಿನ ಮತಗಳೊಂದಿಗೆ ಹೋಲಿಸಿ ನೋಡಿ ಎಂದು ನಿರ್ದೇಶನ ನೀಡಲು ಸಾಧ್ಯವಿಲ್ಲ.

ಮತಪತ್ರ

ಮನವಿ: **ಇವಿಎಂ ವ್ಯವಸ್ಥೆಯನ್ನು ಸಂಪೂರ್ಣವಾಗಿ ರದ್ದುಪಡಿಸಿಬೇಕು ಮತ್ತು ಮತಪತ್ರ ವ್ಯವಸ್ಥೆಯನ್ನು ಮತ್ತೆ ಜಾರಿಗೆ ತರಬೇಕು**



ತೀರ್ಪು: ಇವಿಎಂ ವ್ಯವಸ್ಥೆ ಸುರಕ್ಷಿತವಾಗಿದೆ ಮತ್ತು ಸಂಪೂರ್ಣ ವಿಶ್ವಾಸಾರ್ಹವಾಗಿದೆ ಎಂಬುದನ್ನು ಚುನಾವಣಾ ಆಯೋಗವು ಸಾಬೀತು ಮಾಡಿದೆ. ಆದರೆ ಮತಚೀಟಿ ವ್ಯವಸ್ಥೆಯಿದ್ದಾಗ ಮತದಾನವನ್ನು ಹೇಗೆ ಹಾದಿತಪ್ಪಿಸಲಾಗುತ್ತಿತ್ತು ಮತ್ತು ಮತಗಟ್ಟೆಗಳನ್ನೇ ವಶಕ್ಕೆ ಪಡೆದು, ತಮಗೆ ಬೇಕಾದಂತೆ ಮತ ಹಾಕಿಕೊಳ್ಳಲಾಗುತ್ತಿತ್ತು ಎಂಬುದನ್ನು ನಾವು ನೋಡಿದ್ದೇವೆ. ಆ ಅವ್ಯವಸ್ಥೆಯನ್ನು ಇವಿಎಂ ವ್ಯವಸ್ಥೆಯು ನಿವಾರಿಸಿದೆ.

ಇವಿಎಂ ಎಷ್ಟು ಕರಾರುವಕ್ಕಾಗಿ ಕೆಲಸ ಮಾಡುತ್ತದೆ ಎಂಬುದು ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಮತ್ತು ಮತದಾರರಿಗೂ ಗೊತ್ತಿದೆ. ಚುನಾವಣಾ ಪ್ರಕ್ರಿಯೆಯನ್ನು ಇವಿಎಂ ಸರಳಗೊಳಿಸಿದೆ. ಅದರಲ್ಲಿ ಕೆಲವು ಕೊರತೆಗಳು ಇದೆ ಎಂಬುದು ಸಾಬೀತಾದರೆ, ಅದನ್ನು ನಿವಾರಿಸಲು ಅವಕಾಶವಿದೆ ಮತ್ತು ಸುಧಾರಣೆಗೂ ಅವಕಾಶವಿದೆ. ಸುಧಾರಣೆಯತ್ತ ಗಮನಹರಿಸಬೇಕೇ ಹೊರತು, ಈ ಹಿಂದೆ ಜಾರಿಯಲ್ಲಿದ್ದ ವ್ಯವಸ್ಥೆಗೆ ವಾಪಸಾಗಬೇಕು ಎಂಬುದು ಸರಿಯಲ್ಲ. ಹೀಗಾಗಿ ಈ ಅರ್ಜಿಯನ್ನು ತಿರಸ್ಕರಿಸಲೇಬೇಕು.

ಇವಿಎಂಯಲ್ಲಿ ದಾಖಲಾದ ಮತಗಳ ಬಗ್ಗೆ ಅನುಮಾನವಿದ್ದರೆ ಅದನ್ನು ಪರಿಹರಿಸಿಕೊಳ್ಳಲು ಈಗಾಗಲೇ ಪರಿಹಾರ ಮಾರ್ಗವಿದೆ. ಶೇ5ರಷ್ಟು ವಿವಿ-ಪ್ಯಾಟ್ ಯಂತ್ರಗಳಲ್ಲಿನ ಮತಚೀಟಿಗಳನ್ನು ಇವಿಎಂ ಮತಗಳ ಜತೆಗೆ ಹೋಲಿಸಿ ನೋಡಲು ಅವಕಾಶವಿದೆ. ಅಭ್ಯರ್ಥಿಗಳು ಮನವಿ ಸಲ್ಲಿಸುವ ಮೂಲಕ ಹೆಚ್ಚುವರಿ ವಿವಿ-ಪ್ಯಾಟ್ ಯಂತ್ರಗಳಲ್ಲಿನ ಮತಚೀಟಿಗಳನ್ನು ಹೋಲಿಸಿ ನೋಡಬಹುದು. ಇದಕ್ಕಾಗಿ ಈಗಾಗಲೇ ಕಾನೂನಿನಲ್ಲಿ ಅವಕಾಶವಿದೆ.

ಮತಚೀಟಿಯಲ್ಲಿ ಬಾರ್‌ಕೋಡ್

ಮನವಿ: **ವಿವಿ-ಪ್ಯಾಟ್ ಯಂತ್ರಗಳಲ್ಲಿನ ಮತಚೀಟಿಗಳನ್ನು ಭೌತಿಕವಾಗಿ ಎಣಿಕೆ ಮಾಡಲು ಹೆಚ್ಚಿನ ಸಮಯಬೇಕಾಗುತ್ತದೆ. ಬದಲಿಗೆ ಅವುಗಳ ಮೇಲೆ ಬಾರ್‌ಕೋಡ್ ಮುದ್ರಿಸಿದರೆ, ಯಂತ್ರಗಳ ಮೂಲಕ ಸುಲಭವಾಗಿ ಮತ್ತು ತ್ವರಿತವಾಗಿ ಎಣಿಕೆ ಮಾಡಬಹುದು. ಈ ಬಗ್ಗೆ ನಿರ್ದೇಶನ ನೀಡಬೇಕು**

ತೀರ್ಪು: ಶೇ 100ರಷ್ಟೂ ವಿವಿ-ಪ್ಯಾಟ್ ಯಂತ್ರಗಳಲ್ಲಿನ ಮತಚೀಟಿಗಳ ಎಣಿಕೆಯನ್ನು ಬಾರ್‌ಕೋಡ್ ವ್ಯವಸ್ಥೆಯು ಸಾಧ್ಯವಾಗಿಸಬಹುದು. ಈ ಮನವಿ ಮತ್ತು ಸಲಹೆ ಸಮಂಜಸವಿದ್ದಂತೆ ಕಾಣುತ್ತದೆ. ಆದರೆ ಇದು ಸಂಪೂರ್ಣವಾಗಿ ತಾಂತ್ರಿಕ ವಿಷಯವಾದ ಕಾರಣ ಚುನಾವಣಾ ಆಯೋಗವೇ ಈ ಬಗ್ಗೆ ಗಮನಹರಿಸಬೇಕು. ಇದರ ಕಾರ್ಯಸಾಧ್ಯತೆಯನ್ನು ಆಯೋಗವು ಪರಿಶೀಲಿಸಬಹುದು. ಆದರೆ ಈ ಬಗ್ಗೆ ನ್ಯಾಯಾಲಯವು ಈಗ ಹೆಚ್ಚಿನದ್ದೇನೂ ಹೇಳಲು ಸಾಧ್ಯವಿಲ್ಲ

ಮೋದಿ ಟೀಕೆಗೆ ಪ್ರತಿಟೀಕೆ

ನವದೆಹಲಿ (ಪಿಟಿಐ): ಇವಿಎಂಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠವು ನೀಡಿರುವ ತೀರ್ಪು ರಾಜಕೀಯ ವಾಗ್ಯುದ್ಧಕ್ಕೆ ಕಾರಣವಾಗಿದೆ. ಈ ತೀರ್ಪನ್ನು ಬಳಸಿಕೊಂಡು ಪ್ರಧಾನಿ ನರೇಂದ್ರ ಮೋದಿ ಅವರು ವಿರೋಧ ಪಕ್ಷಗಳ ಮೇಲೆ ಹರಿಹಾಯ್ದಿದ್ದಾರೆ. ವಿರೋಧ ಪಕ್ಷಗಳೂ ಪ್ರಧಾನಿ ಮಾತಿಗೆ ತಿರುಗೇಟು ನೀಡಿವೆ.



ಕಾಂಗ್ರೆಸ್, ಆರ್‌ಜೆಡಿ ಮತ್ತು 'ಇಂಡಿ' ಒಕ್ಕೂಟದ ಪಕ್ಷಗಳು ಅಧಿಕಾರದಲ್ಲಿ ಇದ್ದಾಗ ಅವರು ಮತಗಟ್ಟೆಗಳನ್ನೇ ಅಪಹರಿಸುವ ಮೂಲಕ ಬಡವರು, ಹಿಂದುಳಿದವರು ಮತ್ತು ದಲಿತರ ಮತದಾನದ ಹಕ್ಕನ್ನು ಕಸಿದುಕೊಳ್ಳುತ್ತಿದ್ದರು. ಇವಿಎಂಗಳ ಬಂದ ನಂತರ ಈ ಪಕ್ಷಗಳು ಇಂತಹ ಆಟಗಳನ್ನು ಆಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿಯೇ ಅವರು ಇವಿಎಂ ಮೇಲೆ ಅಪನಂಬಿಕೆ ಸೃಷ್ಟಿಸಲು ಯತ್ನಿಸಿದರು. ಆದರೆ ದೇಶದ ಸರ್ವೋಚ್ಚ ನ್ಯಾಯಾಲಯವು ಇವಿಎಂ ಪರವಾಗಿ ತೀರ್ಪು ನೀಡುವ ಮೂಲಕ ಈ ಪಕ್ಷಗಳ ಕಪಾಳಕ್ಕೆ ಸರಿಯಾಗಿ ಬಾರಿಸಿದೆ

ನರೇಂದ್ರ ಮೋದಿ, ಪ್ರಧಾನಿ



ಸುಪ್ರೀಂ ಕೋರ್ಟ್‌ನಲ್ಲಿ ಹಲವು ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಆದರೆ ಅವುಗಳಲ್ಲಿ ಯಾವ ಅರ್ಜಿಗಳಿಗೂ ನಮಗೂ ಪ್ರತ್ಯಕ್ಷವಾಗಲೀ, ಪರೋಕ್ಷವಾಗಲೀ ಸಂಬಂಧವಿಲ್ಲ. ದ್ವಿಸದಸ್ಯ ಪೀಠವು ನೀಡಿರುವ ತೀರ್ಪನ್ನು ಪರಿಶೀಲಿಸಿದ್ದೇವೆ. ಚುನವಣಾ ಪ್ರಕ್ರಿಯೆಯಲ್ಲಿ ಜನರ ವಿಶ್ವಾಸವನ್ನು ಹೆಚ್ಚಿಸುವ ಸಂಬಂಧ ವಿವಿ-ಪ್ಯಾಟ್‌ಗಳನ್ನು ಹೆಚ್ಚು ಬಳಸಬೇಕು ಎಂಬ ಅಭಿಯಾನ ಮುಂದುವರಿಸುತ್ತೇವೆ

ಜೈರಾಮ್ ರಮೇಶ್
ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ



ಬಿಜೆಪಿಯ ತಾರಾ ನಾಯಕ ಎಲ್.ಕೆ.ಅಡ್ವಾಣಿ ಅವರು 2009ರಲ್ಲಿ ಇವಿಎಂ ವಿರುದ್ಧ ದೊಡ್ಡ ಪ್ರತಿಭಟನೆ ನಡೆಸಿದ್ದರು. ಇವಿಎಂ ವಿರುದ್ಧ ಜಿ.ವಿ.ಎಲ್.ನರಸಿಂಹ ಅವರು ಬರೆದಿದ್ದ ಪುಸ್ತಕವನ್ನು ಅಡ್ವಾಣಿ ಬಿಡುಗಡೆ ಮಾಡಿದ್ದರು. ಹಾಗಿದ್ದರೆ, ಆಗ ಅಡ್ವಾಣಿ ಅವರು ದೇಶದ ಹಾದಿ ತಪ್ಪಿಸಿದ್ದರೇ? ಪ್ರಧಾನಿ ನರೇಂದ್ರ ಮೋದಿ ಅವರು ಆರೋಪ ಮಾಡುವ ಮುನ್ನ ಸ್ವಲ್ಪ ಸಂಶೋಧನೆ ಮಾಡಬೇಕು. ನೆಹರೂ ಅವರ ಮೇಲಷ್ಟೇ ಗಮನ ಹರಿಸುವ ಬದಲು, ಅಡ್ವಾಣಿ ಅವರ ಮೇಲೂ ಮೋದಿ ಅವರು ಗಮನ ಹರಿಸಬೇಕು

ಪವನ್ ಖೇರಾ, ಕಾಂಗ್ರೆಸ್ ವಕ್ತಾರ

ಆಯೋಗಕ್ಕೆ ನಿರ್ದೇಶನ

ಸುಪ್ರೀಂ ಕೋರ್ಟ್ ಪೀಠವು ಅರ್ಜಿಗಳನ್ನು ತಿರಸ್ಕರಿಸಿದರೂ, ಇವಿಎಂ ವ್ಯವಸ್ಥೆಯಲ್ಲಿ ಕೆಲವು ಬದಲಾವಣೆಗಳನ್ನು ತರಲು ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿದೆ

ನಿರ್ದೇಶನ 1:

- ವಿವಿ-ಪ್ಯಾಟ್ ಯಂತ್ರಗಳಿಗೆ ಅಭ್ಯರ್ಥಿಗಳ ಕ್ರಮಸಂಖ್ಯೆ, ಚಿತ್ರ, ಚಿಹ್ನೆಯನ್ನು ಒಳಗೊಂಡ 'ಇಮೇಜ್' ಅನ್ನು ಲೋಡ್ ಮಾಡುವ 'ಸಿಂಬಲ್ ಲೋಡಿಂಗ್ ಯುನಿಟ್-ಎಸ್‌ಎಲ್‌ಯು' ಅನ್ನು ಈಗ ಸೀಲ್ ಮಾಡಿ ಸುರಕ್ಷಿತವಾಗಿ ಇರಿಸುವ ವ್ಯವಸ್ಥೆ ಇಲ್ಲ
- ಆದರೆ ಇನ್ನು ಮುಂದೆ ವಿವಿ-ಪ್ಯಾಟ್ ಯಂತ್ರಗಳಿಗೆ ಇಮೇಜ್‌ಗಳನ್ನು ಅಪ್‌ಲೋಡ್ ಮಾಡಿದ ನಂತರ, ಸಿಂಬಲ್ ಲೋಡಿಂಗ್ ಯುನಿಟ್‌ಗಳನ್ನು ಸೀಲ್ ಮಾಡಬೇಕು ಮತ್ತು ಸೀಲ್ ಮೇಲೆ ಅಭ್ಯರ್ಥಿಗಳು ಅಥವಾ ಅವರ ಪ್ರತಿನಿಧಿಗಳು ಸಹಿ ಮಾಡಬೇಕು. ಹೀಗೆ ಸೀಲ್ ಮಾಡಿದ ಸಿಂಬಲ್ ಲೋಡಿಂಗ್ ಯುನಿಟ್‌ಗಳನ್ನು ಸಂಬಂಧಿತ ಕ್ಷೇತ್ರದ ಇವಿಎಂಗಳ ಜತೆಗೆ ಸ್ಟ್ರಾಂಗ್‌ರೂಂನಲ್ಲಿ ಇರಿಸಬೇಕು
- ಫಲಿತಾಂಶ ಪ್ರಕಟವಾದ ನಂತರ 45 ದಿನಗಳವರೆಗೂ ಎಸ್‌ಎಲ್‌ಯುಗಳನ್ನು ಹಾಗೇ ಇರಿಸಬೇಕು. ತಕರಾರುಗಳು ಬಂದಲ್ಲಿ, ಅದನ್ನು ಪರಿಹರಿಸಲು ಇವಿಎಂಗಳ ಜತೆಗೆ ಎಸ್‌ಎಲ್‌ಯುಗಳನ್ನೂ ಬಳಸಿಕೊಳ್ಳಬೇಕು
- ಮೇ 1ರ ನಂತರ ಮತದಾನ ನಡೆಯುವ ಎಲ್ಲಾ ಕ್ಷೇತ್ರಗಳಿಗೂ ಇದು ಅನ್ವಯವಾಗುತ್ತದೆ. ಈಗಾಗಲೇ ಮತದಾನ ನಡೆದಿರುವ ಕ್ಷೇತ್ರಗಳಿಗೆ ಇದು ಅನ್ವಯವಾಗುವುದಿಲ್ಲ

ನಿರ್ದೇಶನ 2:

- ಇವಿಎಂ ಅಂದರೆ ಕಂಟ್ರೋಲ್ ಯುನಿಟ್, ಬ್ಯಾಲೆಟ್ ಯುನಿಟ್ ಮತ್ತು ವಿವಿ-ಪ್ಯಾಟ್‌ಗಳಲ್ಲಿ ಮೈಕ್ರೊಕಂಟ್ರೋಲರ್‌ಗಳು ಇರುತ್ತವೆ ಮತ್ತು ಅವುಗಳಲ್ಲಿ ಮೆಮೊರಿಯನ್ನು ಬರ್ನ್ (ಪ್ರೋಗ್ರಾಮಿಂಗ್) ಮಾಡಲಾಗಿರುತ್ತದೆ. ಫಲಿತಾಂಶದ ಬಗ್ಗೆ ಅಭ್ಯರ್ಥಿಗಳಿಗೆ ತಕರಾರು ಇದ್ದರೆ, ಅವರು ಫಲಿತಾಂಶ ಬಂದ ಏಳು ದಿನಗಳ ಒಳಗೆ ಈ ಸಂಬಂಧ ಲಿಖಿತ ಮನವಿ ಸಲ್ಲಿಸಬೇಕು
- ಮನವಿ ಬಂದ ನಂತರ ಶೇ 5ರಷ್ಟು ಇವಿಎಂಗಳಲ್ಲಿನ ಬರ್ನ್ಟ್ ಮೆಮೊರಿಯನ್ನು ಇವಿಎಂ ತಯಾರಕ ಕಂಪನಿಯ ಎಂಜಿನಿಯರ್‌ಗಳು ಅಭ್ಯರ್ಥಿಗಳ ಎದುರು ಪರಿಶೀಲಿಸಬೇಕು. ಇದರ ಸಂಪೂರ್ಣ ವೆಚ್ಚವನ್ನು ಅಭ್ಯರ್ಥಿಗಳೇ ಭರಿಸಬೇಕು. ಇವಿಎಂಗಳಲ್ಲಿ ಮತಗಳನ್ನು ತಿರುಚಿರುವುದು ಪತ್ತೆಯಾದರೆ, ಆ ವೆಚ್ಚವನ್ನು ಆಯೋಗವು ಅಭ್ಯರ್ಥಿಗಳಿಗೆ ಹಿಂತಿರುಗಿಸಬೇಕು
- ಫಲಿತಾಂಶ ಪಟ್ಟಿಯಲ್ಲಿ ಅತಿಹೆಚ್ಚು ಮತ ಪಡೆದ ಎರಡನೇ ಮತ್ತು ಅತಿಹೆಚ್ಚು ಮತ ಪಡೆದ ಮೂರನೇ ಅಭ್ಯರ್ಥಿಗಳು ಮಾತ್ರ ಇಂತಹ ಮನವಿ ಸಲ್ಲಿಸಬಹುದು

'ದುರ್ಬಲಗೊಳಿಸುವ ಯತ್ನ'

ದೇಶವು ಹಲವು ವರ್ಷಗಳ ಶ್ರಮ ಮತ್ತು ಬದ್ಧತೆಯ ಮೂಲಕ ಸಾಧಿಸಿರುವ ಗುರಿಗಳನ್ನು ತಲೆಕೆಳಗು ಮಾಡಲು ಕೆಲವು ದುಷ್ಟಗುಂಪುಗಳು ಯತ್ನಿಸುತ್ತಿವೆ. ಈಚಿನ ವರ್ಷಗಳಲ್ಲಿ ಇಂತಹ ಯತ್ನಗಳು ಹೆಚ್ಚಾಗುತ್ತಿರುವುದನ್ನು ಗಮನಿಸಿದ್ದೇವೆ. ಇವು ದೇಶವನ್ನು ಎಲ್ಲಾ ಹಂತದಲ್ಲೂ ದುರ್ಬಲಗೊಳಿಸುವ, ದೇಶಕ್ಕೆ ಮಸಿಬಳಿಯುವ ಯತ್ನಗಳಾಗಿವೆ. ಅಂತಹ ಎಲ್ಲಾ ಯತ್ನಗಳನ್ನು ಆರಂಭದಲ್ಲೇ ತಡೆಯಬೇಕು. ಸಾಂವಿಧಾನಿಕ ನ್ಯಾಯಾಲಯಗಳು ಇರುವವರೆಗೂ ಇಂತಹ ಯತ್ನಗಳು ಸಫಲವಾಗಲು ಸಾಧ್ಯವಿಲ್ಲ. ಮತ್ತೆ ಹಳೆಯ ಪದ್ಧತಿಗೆ ವಾಪಸಾಗಬೇಕು ಎಂಬ ಮನವಿಗಳು ಬಂದಾಗಲೆಲ್ಲಾ ಅವುಗಳ ಉದ್ದೇಶದ ಬಗ್ಗೆ ನನಗೆ ಸಂದೇಹ ಮೂಡುತ್ತದೆ. ಇವಿಎಂ ವ್ಯವಸ್ಥೆ ಚುನಾವಣಾ ಪ್ರಕ್ರಿಯೆಯಲ್ಲಿ ಸುಧಾರಣೆ ತಂದಿದೆ. ಹೀಗಿರುವಾಗ 'ಮತಪತ್ರ' ವ್ಯವಸ್ಥೆಗೆ ವಾಪಸಾಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ನ್ಯಾಯಮೂರ್ತಿ ದೀಪಂಕರ್ ದತ್ತಾ

ಚುನಾವಣೆ ಬಹುತೇಕ ಶಾಂತಿಯುತ • ಶೇ 63 ಮತದಾನ • ಶತಾಯುಷಿಗಳಿಂದ ಮತದಾನ

2ನೇ ಹಂತ: ಮತ ಉತ್ಸಾಹ ತಗ್ಗಿಸಿದ ಬಿರುಬಿಸಿಲು

ನವದೆಹಲಿ (ಪಿಟಿಐ): ಲೋಕಸಭೆಗೆ ಎರಡನೇ ಹಂತದಲ್ಲಿ ಶುಕ್ರವಾರ ಕರ್ನಾಟಕದ 14 ಕ್ಷೇತ್ರಗಳು ಒಳಗೊಂಡು 13 ರಾಜ್ಯಗಳಲ್ಲಿನ 88 ಕ್ಷೇತ್ರಗಳಲ್ಲಿ ಚುನಾವಣೆ ನಡೆದಿದ್ದು, ಶೇ 63.50 ರಷ್ಟು ಮತದಾನವಾಗಿದೆ. ಮತದಾನವು ಬಹುತೇಕ ಶಾಂತಿಯುತವಾಗಿತ್ತು.

ಕೇರಳ, ಪಶ್ಚಿಮ ಬಂಗಾಳ ಸೇರಿದಂತೆ ಕೆಲವು ರಾಜ್ಯಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳಲ್ಲಿ ದೋಷ ಕಂಡುಬಂದು ಮತದಾನ ತುಸು ವಿಳಂಬವಾಗಿ ಆರಂಭವಾಯಿತು. ನಕಲಿ ಮತದಾನದ ಆರೋಪಗಳು ಅಲ್ಲಲ್ಲಿ ಕೇಳಿಬಂದಿವೆ.

2ನೇ ಹಂತದಲ್ಲಿ ಮತದಾನ ನಡೆದ ಬಹುತೇಕ ರಾಜ್ಯಗಳಲ್ಲಿ ತೀವ್ರ ಬಿಸಿಲು, ಮತದಾನದ ಉತ್ಸಾಹವನ್ನು ತುಸು ಕುಗ್ಗಿಸಿತು. ಬೆಳಿಗ್ಗೆ ಮತ್ತು ಸಂಜೆ ಮತದಾನ ಬಿರುಸಾಗಿದ್ದರೆ, ಬಿಸಿಲಿನಿಂದಾಗಿ ಮಧ್ಯಾಹ್ನದ ಹೊತ್ತು ಮಂದಗತಿಯಲ್ಲಿ ಸಾಗಿತು.

ಕೇಂದ್ರ ಚುನಾವಣಾ ಆಯೋಗದ ಪ್ರಕಾರ, ತ್ರಿಪುರಾದಲ್ಲಿ ಗರಿಷ್ಠ ಅಂದರೆ ಶೇ 79.46ರಷ್ಟು ಮತದಾನವಾಗಿದ್ದರೆ, ಉತ್ತರಪ್ರದೇಶದಲ್ಲಿ ಕನಿಷ್ಠ ಶೇ 54.85ರಷ್ಟು ಮತದಾನವಾಗಿದೆ. ಒಟ್ಟಾರೆ ಸರಾಸರಿ ಶೇ 63.50ರಷ್ಟು ಮತದಾನವಾಗಿದೆ.

2ನೇ ಹಂತದಲ್ಲಿ ಮತದಾನ ನಡೆದ ಕ್ಷೇತ್ರಗಳಲ್ಲಿ ಕಣದಲ್ಲಿದ್ದ ಪ್ರಮುಖರಲ್ಲಿ ಬಿಜೆಪಿಯ ಹೇಮಾಮಾಲಿನಿ, ಓಂ ಬಿರ್ಲಾ, ಗಜೇಂದ್ರ ಸಿಂಗ್ ಶೆಖಾವತ್ ಸೇರಿದ್ದಾರೆ. ಉಳಿದಂತೆ ಕಾಂಗ್ರೆಸ್‌ನ ಶಶಿ ತರೂರ್, ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ನಟ ಅರುಣ್ ಗೋವಿಲ್ ಕಣದಲ್ಲಿದ್ದ ಇತರ ಪ್ರಮುಖರು.

ಬಹುತೇಕ ಎಲ್ಲೆಡೆ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಉತ್ತರ ಪ್ರದೇಶದ ಮಥುರಾ, ರಾಜಸ್ಥಾನದ ಬನ್ಸ್ವಾರಾ, ಮಹಾರಾಷ್ಟ್ರದ ಪರ್ಭಾನಿಯಲ್ಲಿ ಆರಂಭದಲ್ಲಿ ಮತದಾನ ಬಹಿಷ್ಕರಿಸಲಾಗಿತ್ತು. ಅಧಿಕಾರಿಗಳ ಮನವೊಲಿಕೆಯ ಬಳಿಕ ಹಕ್ಕು ಚಲಾಯಿಸಿದ್ದಾರೆ.

ಯೋಧ ಆತ್ಮಹತ್ಯೆ: ಮಧ್ಯಪ್ರದೇಶದಲ್ಲಿ ಚುನಾವಣಾ ಸೇವೆಗೆ ನಿಯೋಜಿಸಿದ್ದ ವಿಶೇಷ ಶಸ್ತ್ರಾಸ್ತ್ರ ಪಡೆ ಯೋಧರೊಬ್ಬರು ಸರ್ವೀಸ್ ರೈಫಲ್‌ನಿಂದ ಗುಂಡು ಹಾರಿಸಿಕೊಂಡು ಮೃತಪಟ್ಟರು. ಇವರನ್ನು ಗಾಜಿಯಾಬಾದ್ ಜಿಲ್ಲೆಯ ಮತಗಟ್ಟೆಯೊಂದರಲ್ಲಿ ನಿಯೋಜಿಸಲಾಗಿತ್ತು.

ರಾಜಸ್ಥಾನದ ಬರ್ಮೆರ್-ಜೈಸಲ್ಮೇರ್ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಹಾಗೂ ಪಕ್ಷೇತರ ಅಭ್ಯರ್ಥಿಯ ಬೆಂಬಲಿಗರ ನಡುವೆ ಘರ್ಷಣೆ ಉಂಟಾಗಿದ್ದು, ಗೊಂದಲ ಮೂಡಿತ್ತು. ಅವರ ಬೆಂಬಲಿಗರು ಪರಸ್ಪರರ ವಿರುದ್ಧ ದೂರು ನೀಡಿದ್ದಾರೆ.

ಎರಡನೇ ಹಂತದ ಬಳಿಕ ಕೇರಳ, ರಾಜಸ್ಥಾನ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಮತದಾನದ ಪ್ರಕ್ರಿಯೆ ಪೂರ್ಣ ಮುಗಿದಂತಾಗಿದೆ. ಏಪ್ರಿಲ್ 19ರಂದು ಮೊದಲ ಹಂತದಲ್ಲಿ ತಮಿಳುನಾಡಿನ ಎಲ್ಲ 39 ಕ್ಷೇತ್ರಗಳು, ಉತ್ತರಾಖಂಡ (5), ಅರುಣಾಚಲ ಪ್ರದೇಶ, ಮೇಘಾಲಯ (ತಲಾ 2), ಅಂಡಮಾನ್-ನಿಕೋಬಾರ್ ದ್ವೀಪ, ಮಿಜೋರಾಂ, ನಾಗಾಲ್ಯಾಂಡ್, ಪುದುಚೇರಿ, ಸಿಕ್ಕಿಂ, ಲಕ್ಷದ್ವೀಪದಲ್ಲಿ (ತಲಾ 1) ಮತದಾನ ನಡೆದಿತ್ತು.

ಮುಂದೆ ಮೇ 7ರಂದು ಮೂರನೇ ಹಂತದ ಚುನಾವಣೆ ನಡೆಯಲಿದ್ದು, ಅಂದು ಕರ್ನಾಟಕದ 14 ಕ್ಷೇತ್ರಗಳು ಒಳಗೊಂಡಂತೆ 12 ರಾಜ್ಯಗಳಲ್ಲಿ ಒಟ್ಟು 94 ಕ್ಷೇತ್ರಗಳಿಗೆ ಮತದಾನ ನಡೆಯಲಿದೆ. ಮತ ಎಣಿಕೆಯು ಜೂನ್ 4ರಂದು ನಡೆಯಲಿದೆ.





1. ಕೇರಳದ ಕೋಯಿಕ್ಕೋಡ್‌ನ ಮತಗಟ್ಟೆಯಲ್ಲಿ ಹಕ್ಕು ಚಲಾಯಿಸಲು ಸಾಲುಗಟ್ಟಿ ನಿಂತಿದ್ದ ಮಾನಿನಿಯರು 2. ಅಸ್ಸಾಂನ ದರ್ರಾಂಗ್ ಜಿಲ್ಲೆಯ ಗಶ್‌ಬರಿ ಗ್ರಾಮದ ನಿವಾಸಿಗಳು ಮತ ಚಲಾಯಿಸಲು ಸಮೀಪದ ಮತಗಟ್ಟೆಗೆ ದೋಣಿಯಲ್ಲಿ ತೆರಳಿದರು —ಪಿಟಿಐ, ಎಎಫ್‌ಪಿ ಚಿತ್ರಗಳು

ವೋಟು ನೀಡುವ ಸಡಗರಕ್ಕೆ ಹಲವು ಮುಖ

ನವದೆಹಲಿ (ಪಿಟಿಐ): ಲೋಕಸಭೆಗೆ ಶುಕ್ರವಾರ ನಡೆದ ಎರಡನೇ ಹಂತದ ಚುನಾವಣೆಯಲ್ಲಿ ಕರ್ನಾಟಕದ 14 ಸೇರಿ ವಿವಿಧ ರಾಜ್ಯಗಳ 88 ಕ್ಷೇತ್ರಗಳಲ್ಲಿ ನಡೆದ ಮತದಾನದ ವೇಳೆ ಪ್ರಜಾಪ್ರಭುತ್ವವನ್ನು ಸಂಭ್ರಮಿಸುವ ವಿವಿಧ ಚಿತ್ರಣಗಳು ಅನಾವರಣಗೊಂಡವು.

ಕುಟುಂಬ ಮೂರು ತಲೆಮಾರುಗಳ ಮತದಾರರು ಒಂದೇ ಸಾಲಿನಲ್ಲಿ ನಿಂತು ಮತ ಹಕ್ಕು ಚಲಾಯಿಸಿದರು. ಎತ್ತಿನಗಾಡಿ, ವ್ಹೀಲ್ ಚೇರ್‌ಗಳಲ್ಲೂ ಮತಗಟ್ಟೆಗೆ ಬಂದರು. ಮತ ಚಲಾಯಿಸಿದ ಕುರುಹಾಗಿ ಕಪ್ಪು ಶಾಯಿ ಹಾಕಿದ್ದ ಬೆರಳನ್ನು ಹೆಮ್ಮೆಯಿಂದ ಪ್ರದರ್ಶಿಸಿದರು.

ಮತ ಹಕ್ಕು ಚಲಾಯಿಸಿದ ವಿವಿಧ ಸಂಭ್ರಮದ ಚಿತ್ರಣಗಳು ಇಲ್ಲಿವೆ.

- ಛತ್ತೀಸಗಢದ ಕಾಂಕೇರ್ ಕ್ಷೇತ್ರ ವ್ಯಾಪ್ತಿ ಸಿವ್ನಿ ಗ್ರಾಮದಲ್ಲಿ ಮತಗಟ್ಟೆಯನ್ನು ವಿವಾಹ ಮಂಟಪದಂತೆ ಸಾಂಪ್ರದಾಯಿಕ ಶೈಲಿಯಲ್ಲಿ ಅಲಂಕರಿಸಲಾಗಿತ್ತು. ಹಲವು ವಧು-ವರರು ಸಾಂಪ್ರದಾಯಿಕ ಉಡುಗೆಯಲ್ಲಿಯೇ ಮತಗಟ್ಟೆಗೆ ಬಂದು ಹಕ್ಕು ಚಲಾಯಿಸಿದರು.
- ಉತ್ತರ ಪ್ರದೇಶದ ಬುಳಂದಶಹರ್‌ನಲ್ಲಿ ಮಹಿಳಾ ಮತದಾರರದು ಮತ್ತೊಂದು ರೀತಿ ಸಂಭ್ರಮ. ಡೋಲು (ಢೋಲಕ್) ಬಾರಿಸುತ್ತಾ, ಹಾಡು ಹೇಳುತ್ತಾ ಅವರು ಎತ್ತಿನಗಾಡಿಗಳಲ್ಲಿ ಮತಗಟ್ಟೆಗೆ ಬಂದರು.
- ರಾಜಸ್ಥಾನದ ಕೋಟಾ-ಬುಂದಿ ಕ್ಷೇತ್ರದ ಗುಂಜಾರಾ ಮತಗಟ್ಟೆಯಲ್ಲಿ 108 ವರ್ಷ ವಯಸ್ಸಿನ ಭುರಿ ಭಾಯಿ ಹಕ್ಕು ಚಲಾಯಿಸಿದರು. ಅವರನ್ನು ಕುಟುಂಬ ಸದಸ್ಯರು ವ್ಹೀಲ್ ಚೇರ್‌ನಲ್ಲಿ ಮತಗಟ್ಟೆಗೆ ಕರೆತಂದರು. ಅಂತೆಯೇ ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಮತ ಗಟ್ಟೆಯಲ್ಲಿ 102 ವರ್ಷ ವಯಸ್ಸಿನ ಕರಂದಿನ್ ಮತ ಚಲಾಯಿಸಿದರು.



ಅಸ್ಸಾಂನ ಮಾರಿಗಾಂವ್ ಜಿಲ್ಲೆಯಲ್ಲಿ ಮತ ಚಲಾಯಿಸಿದ 80 ವರ್ಷ ವಯಸ್ಸಿನ ವೃದ್ಧೆಯ ಸಂಭ್ರಮ —ಪಿಟಿಐ ಚಿತ್ರ

ಮತ ಪ್ರಮಾಣ: ಎಲ್ಲಿ, ಎಷ್ಟು?

ರಾಜ್ಯ	ಚುನಾವಣೆ ನಡೆದ ಕ್ಷೇತ್ರಗಳು	ಮತ ಪ್ರಮಾಣ*
ಕೇರಳ	20	65.23
ರಾಜಸ್ಥಾನ	13	64.07
ಮಹಾರಾಷ್ಟ್ರ	08	57.83
ಉತ್ತರಪ್ರದೇಶ	08	54.85
ಮಧ್ಯಪ್ರದೇಶ	06	55.77
ಅಸ್ಸಾಂ	05	71.11
ಬಿಹಾರ	05	55.08
ಛತ್ತೀಸಗಢ	03	73.62
ಪಶ್ಚಿಮ ಬಂಗಾಳ	03	71.91
ಮಣಿಪುರ	01	77.32
ತ್ರಿಪುರಾ	01	79.46
ಜಮ್ಮು ಮತ್ತು ಕಾಶ್ಮೀರ	01	71.21

ಕೇರಳ: ಮತದಾನದ ವೇಳೆ ಕನಿಷ್ಠ ಐವರು ಸಾವು

ತಿರುವನಂತಪುರ: ಕೇರಳದಲ್ಲಿ ಪ್ರತ್ಯೇಕ ಪ್ರಕರಣಗಳಲ್ಲಿ ಮತದಾನ ಪ್ರಕ್ರಿಯೆ ಬಳಿಕ ಕನಿಷ್ಠ ಐವರು ಮೃತಪಟ್ಟಿದ್ದಾರೆ. ಬಿರು ಬಿಸಿಲು ಕೂಡಾ ಒಂದು ಕಾರಣ ಎನ್ನಲಾಗಿದೆ.

ಪಾಲಕ್ಕಾಡ್‌ನ ತೆಂಕುರಿಶ್ಶಿಯಲ್ಲಿ 35 ವರ್ಷದ ಸಬರಿ ಮತದಾನದ ಬಳಿಕ ಕುಸಿದುಬಿದ್ದು ಮೃತಪಟ್ಟರು. ಪಾಲಕ್ಕಾಡ್‌ನಲ್ಲಿ ಉಷ್ಣಾಂಶ ಗರಿಷ್ಠ ಪ್ರಮಾಣದಲ್ಲಿದೆ. ಇಲ್ಲಿ ಮತ್ತೊಬ್ಬರು ಸತ್ತಿದ್ದು, ಗುರುತು ಪತ್ತೆಯಾಗಿಲ್ಲ.

65 ವರ್ಷದ ಸಿದ್ದಿಖಿ ಎಂಬವರು ಮತದಾನದ ಬಳಿಕ ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಆಲಪ್ಪುಳದಲ್ಲಿ ಮತದಾನದ ಬಳಿಕ ಮನೆಗೆ ತೆರಳುತ್ತಿದ್ದ 80 ವರ್ಷದ ವ್ಯಕ್ತಿ ಹಾಗೂ ಮತಗಟ್ಟೆ ಏಜೆಂಟ್‌ವೊಬ್ಬರು ಕೋಯಿಕ್ಕೋಡ್‌ನ ಕುಟ್ಟಿಚಿರದಲ್ಲಿ ಮೃತಪಟ್ಟಿದ್ದಾರೆ.

ನೋಟಾ: ಚುನಾವಣಾ ಆಯೋಗಕ್ಕೆ ನೋಟಿಸ್

ನವದೆಹಲಿ (ಪಿಟಿಐ): ಸಾರ್ವತ್ರಿಕ ಚುನಾವಣೆಯಲ್ಲಿ ಕಣದಲ್ಲಿರುವ ಅಭ್ಯರ್ಥಿಗಳಿಗಿಂತ 'ನೋಟಾ'ಗೆ (ಮೇಲಿನ ಯಾರೂ ಅಲ್ಲ) ಹೆಚ್ಚು ಮತಗಳು ದೊರೆತರೆ ಆ ಚುನಾವಣೆಯನ್ನು ಅನೂರ್ಜಿತಗೊಳಿಸಿ, ಹೊಸ ಚುನಾವಣೆಗೆ ಆದೇಶಿಸಲು ನಿಯಮ ರೂಪಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಕೆಯಾಗಿದೆ. ಈ ಸಂಬಂಧ ಪ್ರತಿಕ್ರಿಯಿಸುವಂತೆ ಸೂಚಿಸಿ ಕೋರ್ಟ್ ಚುನಾವಣಾ ಆಯೋಗಕ್ಕೆ ಶುಕ್ರವಾರ ನೋಟಿಸ್ ಜಾರಿಗೊಳಿಸಿದೆ.

ಲೇಖಕ ಶಿವ್ ಖೇರಾ ಅವರು ಈ ಸಂಬಂಧ ಸುಪ್ರೀಂ ಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಿದ್ದಾರೆ. ಅವರ ಪರ ಹಿರಿಯ ವಕೀಲ ಗೋಪಾಲ್ ಶಂಕರ ನಾರಾಯಣನ್ ವಾದ ಮಂಡಿಸಿದರು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದಿವಾಲಾ, ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠವು, ಈ ಅರ್ಜಿ ಕುರಿತು ಚುನಾವಣಾ ಅಯೋಗಕ್ಕೆ ನೋಟಿಸ್ ಜಾರಿ ಮಾಡಿತು.

ಆರಂಭದಲ್ಲಿ ಈ ಪಿಐಎಲ್ ಅನ್ನು ಪರಿಗಣಿಸಲು ಆಸಕ್ತಿ ಹೊಂದಿರದ ಪೀಠವು, ಬಳಿಕ 'ಇದು ಚುನಾವಣಾ ಪ್ರಕ್ರಿಯೆ ಕುರಿತ ವಿಷಯವಾಗಿದ್ದು, ಆಯೋಗ ಏನು ಹೇಳುತ್ತದೆ ನೋಡೋಣ' ಎಂದು ಹೇಳಿತು.



ಗುಜರಾತ್‌ನ ಸೂರತ್‌ನಲ್ಲಿ ನಡೆದ ಬೆಳವಣಿಗೆಯನ್ನು ಗಮನದಲ್ಲಿ ಇಟ್ಟುಕೊಂಡರೆ, ಈ ಅರ್ಜಿಯ ಮಹತ್ವ ತಿಳಿಯುತ್ತದೆ. ಸೂರತ್‌ನಲ್ಲಿ ಕೆಲ ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತ ಆದವು. ಕೆಲವರು ಸ್ಪರ್ಧೆಯಿಂದ ಹಿಂದೆ ಸರಿದರು. ಇದರ ಪರಿಣಾಮ ಬಿಜೆಪಿ ಅಭ್ಯರ್ಥಿಯನ್ನು ವಿಜಯಶಾಲಿ ಎಂದು ಘೋಷಿಸಲಾಯಿತು ಎಂದು ಅವರು ತಿಳಿಸಿದರು.

ನೋಟಾಕ್ಕಿಂತ ಕಡಿಮೆ ಮತಗಳನ್ನು ಪಡೆದ ಅಭ್ಯರ್ಥಿಗಳನ್ನು ಐದು ವರ್ಷಗಳ ಅವಧಿಗೆ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸದಂತೆ ಡಿಬಾರ್ ಮಾಡುವುದಕ್ಕೆ ಪೂರಕವಾಗಿ ನಿಯಮಗಳನ್ನು ರೂಪಿಸಲು ಚುನಾವಣಾ ಆಯೋಗಕ್ಕೆ ನಿರ್ದೇಶಿಸುವಂತೆಯೂ ಪಿಐಎಲ್ ಕೋರಿದೆ. 2013ರಲ್ಲಿ ಸುಪ್ರೀಂ ಕೋರ್ಟ್ ತೀರ್ಪಿನ ಅನ್ವಯ ಚುನಾವಣೆಯಲ್ಲಿ ಮತದಾರರಿಗೆ 'ನೋಟಾ' ಆಯ್ಕೆಯನ್ನು ಒದಗಿಸಲಾಗಿದೆ.

ಎಎಪಿ ತಾರಾ ಪ್ರಚಾರಕರ ಪಟ್ಟಿಗೆ ಸುನೀತಾ ಕೇಜ್ರಿವಾಲ್

ನವದೆಹಲಿ: ಆಮ್ ಆದ್ಮಿ ಪಕ್ಷದ (ಎಎಪಿ) ತಾರಾ ಪ್ರಚಾರಕರ ಪಟ್ಟಿಯಲ್ಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಪತ್ನಿ ಸುನೀತಾ ಸ್ಥಾನ ಪಡೆದಿದ್ದಾರೆ. ರಾಜಧಾನಿ ದೆಹಲಿ ಹೊರತುಪಡಿಸಿ ಇತರ ಮೂರು ರಾಜ್ಯಗಳಲ್ಲೂ ಪ್ರಚಾರ ನಡೆಸಲಿದ್ದಾರೆ.

ಪೂರ್ವ ದೆಹಲಿ ಕ್ಷೇತ್ರದ ಎಎಪಿ ಅಭ್ಯರ್ಥಿ ಕುಲದೀಪ್ ಕುಮಾರ್ ಪರ ಮತ ಕೇಳುವ ಮೂಲಕ ಅವರು ಶನಿವಾರ ಚುನಾವಣಾ ಪ್ರಚಾರ ಕಾರ್ಯ ಆರಂಭಿಸುವರು. ಭಾನುವಾರ ಪಶ್ಚಿಮ ದೆಹಲಿ ಕ್ಷೇತ್ರದ ಮಹಾಬಲ ಮಿಶ್ರಾ ಪರವಾಗಿ ಪ್ರಚಾರ ನಡೆಸುವರು.

ಸುನೀತಾ ಅವರ ಪ್ರಚಾರ ಕಾರ್ಯಕ್ರಮದ ವಿವರ ನೀಡಿದ ದೆಹಲಿ ಸಚಿವೆ ಆತಿಶಿ ಅವರು, 'ಚುನಾವಣಾ ಪ್ರಚಾರದಲ್ಲಿ ಸುನೀತಾ ಅವರು ಕೇಜ್ರಿವಾಲ್ ಅವರಿಗೆ ಆಶೀರ್ವಾದ ಹಾಗೂ ಎಎಪಿ ಅಭ್ಯರ್ಥಿಗಳಿಗೆ ಮತವನ್ನು ಕೋರಲಿದ್ದಾರೆ' ಎಂದರು.

ಜತೆಗೆ, 'ಇಂಡಿಯಾ' ಕೂಟದ ಭಾಗವಾಗಿ ಎಎಪಿ ಪಕ್ಷವು ಕಾಂಗ್ರೆಸ್ ಜೊತೆಗೆ ಮೈತ್ರಿ ಮಾಡಿಕೊಂಡಿರುವ ರಾಜ್ಯಗಳಲ್ಲಿ ಮಾತ್ರವೇ ಸುನೀತಾ ಪ್ರಚಾರ ನಡೆಸುವರು ಎಂದು ತಿಳಿಸಿದರು.

ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಬಂಧನದ ನಂತರ ಸುನೀತಾ ಅವರ ಉಪಸ್ಥಿತಿಯು ಪಕ್ಷದಲ್ಲಿ ಹೆಚ್ಚು ಮಹತ್ವವನ್ನು ಪಡೆಯುತ್ತಿದೆ. ಅವರು ಪಕ್ಷದ ಪ್ರಮುಖ ವ್ಯಕ್ತಿಯಾಗಿ ಅವರು ಹೊರಹೊಮ್ಮುತ್ತಿದ್ದಾರೆ.

ಮಾಜಿ ಐಆರ್‌ಎಸ್ ಅಧಿಕಾರಿಯಾಗಿರುವ ಸುನೀತಾ ನಿಯಮಿತವಾಗಿ ವಿಡಿಯೊ ಭಾಷಣ ಬಿಡುಗಡೆ ಮಾಡುತ್ತಿದ್ದು, ಕೇಜ್ರಿವಾಲ್ ಅವರ ಸಂದೇಶಗಳನ್ನು ಪಕ್ಷದ ಕಾರ್ಯಕರ್ತರು, ಸಾರ್ವಜನಿಕರ ಜೊತೆಗೆ ಹಂಚಿಕೊಳ್ಳುತ್ತಿದ್ದಾರೆ.

ಅವರ ಭಾಷಣದ ಹಿನ್ನೆಲೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಭಗತ್ ಸಿಂಗ್ ಅವರ ಚಿತ್ರಗಳು, ರಾಷ್ಟ್ರಧ್ವಜ ಕಂಡುಬರುತ್ತಿದೆ.

ಪಕ್ಷದಲ್ಲಿ ಪ್ರಾಮುಖ್ಯತೆ ಪಡೆಯುತ್ತಿರುವಂತೆಯೇ ಅವರನ್ನು ಭೇಟಿ ಮಾಡುವ ಪಕ್ಷದ ನಾಯಕರ ಸಂಖ್ಯೆಯೂ ಹೆಚ್ಚುತ್ತಿದೆ. ಪಕ್ಷದ ಶಾಸಕರು, ದೆಹಲಿ ನಗರಪಾಲಿಕೆಯ ಸದಸ್ಯರ ನಿಯೋಗ ಈಚೆಗೆ ಅವರನ್ನು ಭೇಟಿಯಾಗಿ ಮಾಡಿ ಚರ್ಚೆ ನಡೆಸಿದೆ.

ಅಗತ್ಯ ಮತ್ತು ಅನಿವಾರ್ಯವಾದ ಪರಿಸ್ಥಿತಿಯು ನಿರ್ಮಾಣವಾದರೆ ಸುನೀತಾ ಅವರು ಕೇಜ್ರಿವಾಲ್ ಅವರ ಸ್ಥಾನವನ್ನೂ ತುಂಬಬಹುದು ಎಂಬ ವದಂತಿ ದಟ್ಟವಾಗಿದೆ. ರಾಮಲೀಲಾ ಮೈದಾನದಲ್ಲಿ ನಡೆದಿದ್ದ ಸಮಾವೇಶದಲ್ಲಿ 'ಇಂಡಿಯಾ' ನಾಯಕರ ಜೊತೆಗೆ ಅವರು ವೇದಿಕೆ ಹಂಚಿಕೊಂಡಿದ್ದರು. ಏಪ್ರಿಲ್ 21ರಂದು ರಾಂಚಿಯಲ್ಲಿ ನಡೆದಿದ್ದ 'ಇಂಡಿಯಾ' ಸಮಾವೇಶದಲ್ಲಿಯೂ ಪಾಲ್ಗೊಂಡಿದ್ದರು.

ಉತ್ತಮ ಸ್ಪಂದನೆ: ಪ್ರಧಾನಿ ಮೋದಿ

ನವದೆಹಲಿ (ಪಿಟಿಐ): '2ನೇ ಹಂತದ ಚುನಾವಣೆಯಲ್ಲಿ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಇದು ಆಡಳಿತಾರೂಢ ಬಿಜೆಪಿ ನೇತೃತ್ವದ ಎನ್‌ಡಿಎಗೆ ಜನರ ಬೆಂಬಲ ಸ್ಥಿರವಾಗಿದೆ ಎಂಬುದನ್ನು ಬಿಂಬಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ. ಎಕ್ಸ್ ಜಾಲತಾಣದಲ್ಲಿ ಈಬಗ್ಗೆ ಅನಿಸಿಕೆ ಹಂಚಿಕೊಂಡ ಅವರು, ಜನರ ಸ್ಪಂದನೆ ನೋಡಿದರೆ ಎನ್‌ಡಿಎಯು ವಿರೋಧಪಕ್ಷಗಳಿಗೆ ಹೆಚ್ಚಿನ ನಿರಾಸೆ ಉಂಟು ಮಾಡುವಂತಿದೆ. ಯುವಜನರು ಮತ್ತು ಮಹಿಳೆಯರು ಹೆಚ್ಚಿನದಾಗಿ ಎನ್‌ಡಿಎಗೆ ಬೆಂಬಲ ವ್ಯಕ್ತಪಡಿಸಿದ್ದಾರೆ' ಎಂದು ತಿಳಿಸಿದರು.

ಸಿಸೋಡಿಯಾ ನ್ಯಾಯಾಂಗ ಬಂಧನ: ಮೇ 8ರವರೆಗೆ ವಿಸ್ತರಣೆ



ಮನೀಷ್ ಸಿಸೋಡಿಯಾ


ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದ ಜತೆ ಸಂಬಂಧ ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಎಎಪಿ ನಾಯಕ ಮನೀಷ್ ಸಿಸೋಡಿಯಾ, ಸಹ ಆರೋಪಿ ವಿಜಯ್ ನಾಯರ್ ಮತ್ತು ಇತರರ ನ್ಯಾಯಾಂಗ ಬಂಧನದ ಅವಧಿಯನ್ನು ಇಲ್ಲಿನ ನ್ಯಾಯಾಲಯ ಮೇ 8ರವರೆಗೆ ವಿಸ್ತರಿಸಿ ಶುಕ್ರವಾರ ಆದೇಶಿಸಿದೆ.

ಈ ಹಿಂದೆ ನೀಡಲಾಗಿದ್ದ ನ್ಯಾಯಾಂಗ ಬಂಧನದ ಅವಧಿ ಮುಕ್ತಾಯವಾದ ಕಾರಣ ಆರೋಪಿಗಳನ್ನು ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರ ಮುಂದೆ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಲಾಯಿತು.

ಚಾರ್ಜ್‌ಶೀಟ್‌ಗೆ ಸಂಬಂಧಿಸಿದ ದಾಖಲೆಗಳನ್ನು ಡಿಜಿಟಲೀಕರಿಸಲು ಎಷ್ಟು ಸಮಯ ಬೇಕಾಗುತ್ತದೆ ಎಂಬುದರ ಕುರಿತು ವರದಿ ಸಲ್ಲಿಸುವಂತೆ ನ್ಯಾಯಾಧೀಶರು ಇದೇ ವೇಳೆ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಸೂಚನೆ ನೀಡಿದರು.

ನ್ಯಾಯಾಲಯವು ಈ ಪ್ರಕರಣದಲ್ಲಿ ದೆಹಲಿ ಸಿ.ಎಂ ಅರವಿಂದ ಕೇಜ್ರಿವಾಲ್, ಬಿಆರ್‌ಎಸ್ ನಾಯಕಿ ಕೆ. ಕವಿತಾ ಅವರ ನ್ಯಾಯಾಂಗ ಬಂಧನವನ್ನು ಮೇ 7ರವರೆಗೆ ವಿಸ್ತರಿಸಿದೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ–ಅಗಲ
ಇತಿಹಾಸ ನಿರ್ಮಿಸುವ ತವಕದ ಬಿಜೆಪಿಯ ಕಟ್ಟಿಹಾಕುವುದೇ 'ಇಂಡಿಯಾ'?

ಚಿನ್ನದ ದರ ₹350, ಬೆಳ್ಳಿ ₹600 ಏರಿಕೆ 10

ಯುಸಿಸಿ ಜಾರಿ 'ಮೋದಿ ಗ್ಯಾರಂಟಿ': ಶಾ 9

ಸೆನ್ಸೆಕ್ಸ್	ನಿಫ್ಟಿ	₹/$
73,730	22,419	83.38

ಮಂಡ್ಯದಲ್ಲಿ ಅಧಿಕ ಮತದಾನ, ಮತ್ತೆ ಹಿಂದೆ ಬಿದ್ದ ಬೆಂಗಳೂರು ಕ್ಷೇತ್ರಗಳು

ಚಿತ್ತ ಇನ್ನು ಉತ್ತರದತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 14 ಲೋಕಸಭಾ ಕ್ಷೇತ್ರಗಳಲ್ಲಿ ಶುಕ್ರವಾರ ಮತದಾನ ಮುಗಿದಿದ್ದು, ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಶುಕ್ರವಾರದಿಂದಲೇ ಚುನಾವಣಾ ಪ್ರಚಾರದ ಕಾವು ಏರಿದೆ. ಎಲ್ಲ ಘಟಾನುಘಟಿ ನಾಯಕರು ಮಲೆನಾಡು, ಕರಾವಳಿ ಮತ್ತು ಉತ್ತರದತ್ತ ಮುಖ ಮಾಡಲಿದ್ದಾರೆ.


ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಹಲವು ಮಂದಿ ಸಚಿವರು, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ, ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಮೂರೂ ಪಕ್ಷಗಳ ಪ್ರಮುಖ ನಾಯಕರು ಇದುವರೆಗೆ ದಕ್ಷಿಣ ಪಥದಲ್ಲೇ ಮೊಕ್ಕಾಂ ಮಾಡಿ, ಪ್ರಚಾರಕ್ಕೆ ಬಿರುಸು ತಂದಿದ್ದರು.

ಮೈಸೂರು ಮತ್ತು ಚಾಮರಾಜನಗರ ಕ್ಷೇತ್ರಗಳಲ್ಲಿ ಯಶ ಸಾಧಿಸುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪ್ರತಿಷ್ಠೆಯಾಗಿದ್ದರೆ, ತಮ್ಮ ಡಿ.ಕೆ. ಸುರೇಶ್ ಅವರನ್ನು ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಗೆಲ್ಲಿಸಿಕೊಳ್ಳಬೇಕಾದ ಒತ್ತಡದಲ್ಲಿ ಶಿವಕುಮಾರ್ ಇದ್ದರು. ಅದರ ಜತೆಗೆ, ಒಕ್ಕಲಿಗ ನಾಯಕರೆಂಬ ಉಮೇದಿನಲ್ಲಿರುವ ಅವರಿಗೆ ಹಳೆ ಮೈಸೂರು ಭಾಗದಲ್ಲಿ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲಲೇಬೇಕಾದ ಸವಾಲು ಕೂಡ ಹೆಗಲೇರಿತ್ತು.

ಮಂಡ್ಯದಲ್ಲಿ ಸ್ವತಃ ಯಶ ಸಾಧಿಸುವ ಜತೆಗೆ ಪಕ್ಷದ ಇತರ ಇಬ್ಬರನ್ನು ಗೆಲುವಿನ ದಡ ಮುಟ್ಟಿಸುವ ಜವಾಬ್ದಾರಿ ಕುಮಾರಸ್ವಾಮಿ ಅವರ ಮೇಲಿತ್ತು. ಬೆಂಗಳೂರು ಗ್ರಾಮಾಂತರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿರುವ ಬಾಮೈದ ಡಾ.ಸಿ.ಎನ್. ಮಂಜುನಾಥ್ ಅವರನ್ನೂ ಗೆಲ್ಲಿಸಬೇಕಾದ ಹೊಣೆಯೂ ಇತ್ತು. ಹಾಸನದಲ್ಲಿ ಮೊಮ್ಮಗನ ಭವಿಷ್ಯ ಖಾತ್ರಿ ಪಡಿಸುವ ಜತೆಗೆ, ಪಕ್ಷದ ಅಭ್ಯರ್ಥಿಗಳು ಮತ್ತು ಅಳಿಯನ ಗೆಲುವು ಖಾತರಿಪಡಿಸುವ ಜತೆಗೆ ಬಿಜೆಪಿ ಅಭ್ಯರ್ಥಿಗಳ ಗೆಲುವಿಗೂ ಮತ ಸೆಳೆಯಬೇಕಾದ ಹೊಣೆ ದೇವೇಗೌಡರ ಮೇಲಿತ್ತು.

5ನೇ ಪುಟ ನೋಡಿ

ಶೇಕಡಾವಾರು ಮತದಾನದ ವಿವರ



ಕ್ಷೇತ್ರ	ಈಗಿನ ಮತದಾನ	2019ರಲ್ಲಿ ಮತದಾನ
ಚಿತ್ರದುರ್ಗ	73.11	70.80
ತುಮಕೂರು	77.70	77.43
ಚಿಕ್ಕಬಳ್ಳಾಪುರ	76.82	76.74
ಉಡುಪಿ–ಚಿಕ್ಕಮಗಳೂರು	76.06	76.07
ಕೋಲಾರ	78.07	77.25
ಹಾಸನ	77.51	77.35
ಬೆಂಗಳೂರು ಉತ್ತರ	54.42	54.76
ಬೆಂಗಳೂರು ಕೇಂದ್ರ	52.81	54.32
ದಕ್ಷಿಣ ಕನ್ನಡ	77.43	77.99
ಮಂಡ್ಯ	81.48	80.59
ಬೆಂಗಳೂರು ದಕ್ಷಿಣ	53.15	53.70
ಮೈಸೂರು	70.45	69.51
ಚಾಮರಾಜನಗರ	76.59	75.35
ಬೆಂಗಳೂರು ಗ್ರಾಮಾಂತರ	67.29	64.98

ಮೊದಲ ಹಂತ: ಶೇ 69.23ರಷ್ಟು ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 14 ಲೋಕಸಭಾ ಕ್ಷೇತ್ರಗಳಲ್ಲಿ ಶುಕ್ರವಾರ ಮತದಾನ ಪೂರ್ಣಗೊಂಡಿದ್ದು, ಅರ್ಹ ಮತದಾರರಲ್ಲಿ ಸರಾಸರಿ ಶೇ 69.23ರಷ್ಟು ಮಂದಿ ಹಕ್ಕು ಚಲಾಯಿಸಿದ್ದಾರೆ.


ಮತದಾನ ಮುಕ್ತಾಯವಾದ ಬಳಿಕ ಸಂಗ್ರಹಿಸಿದ ಅಂಕಿಅಂಶಗಳ ಆಧಾರದಲ್ಲಿ ಕೇಂದ್ರ ಚುನಾವಣಾ ಆಯೋಗವು ಸರಾಸರಿ ಮತದಾನದ ಪ್ರಮಾಣದ ತಾತ್ಕಾಲಿಕ ಅಂದಾಜು ಕುರಿತ ಮಾಹಿತಿ ನೀಡಿದೆ. 2019ರ ಲೋಕಸಭಾ ಚುನಾವಣೆಗೆ ಹೋಲಿಸಿದರೆ ಹಲವು ಕ್ಷೇತ್ರಗಳಲ್ಲಿ ಮತದಾನದಲ್ಲಿ ಏರಿಕೆಯಾಗಿದೆ.

ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಶೇ 80.59ರಷ್ಟು ಮತದಾನದೊಂದಿಗೆ ರಾಜ್ಯದಲ್ಲೇ ಮೊದಲ ಸ್ಥಾನದಲ್ಲಿದ್ದ ಮಂಡ್ಯ ಲೋಕಸಭಾ ಕ್ಷೇತ್ರವು, ಈ ಬಾರಿಯೂ ಅದೇ ಸ್ಥಾನದಲ್ಲಿದೆ. ಸರಾಸರಿ ಮತದಾನದಲ್ಲಿ ಆಗ ಕೊನೆಯ ಸ್ಥಾನದಲ್ಲಿದ್ದ ಬೆಂಗಳೂರು ದಕ್ಷಿಣ ಈ ಬಾರಿ ಯಥಾಸ್ಥಿತಿಯಲ್ಲಿದೆ.

ಬೆಂಗಳೂರು ದಕ್ಷಿಣ, ಬೆಂಗಳೂರು ಕೇಂದ್ರ ಮತ್ತು ಬೆಂಗಳೂರು ಉತ್ತರ ಕ್ಷೇತ್ರಗಳಲ್ಲಿ ಮತದಾನದಲ್ಲಿ ಅಲ್ಪ ಪ್ರಮಾಣದ ಕುಸಿತವಾಗಿದೆ. ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಮತದಾನದಲ್ಲಿ ಏರಿಕೆಯಾಗಿದೆ.

ಇವಿಎಂ ಧ್ವಂಸ: ಚಾಮರಾಜನಗರ ಜಿಲ್ಲೆ ಹನೂರು ತಾಲ್ಲೂಕಿನ ಇಂಡಿಗನತ್ತ ಮತಗಟ್ಟೆಯಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಆಗ್ರಹಿಸಿ ಮತದಾನ ಬಹಿಷ್ಕರಿಸಿದ್ದ ಮತದಾರರು ದಾಂಧಲೆ ನಡೆಸಿದ್ದು, ವಿದ್ಯುನ್ಮಾನ ಮತಯಂತ್ರಕ್ಕೆ ಹಾನಿ ಮಾಡಿದ್ದಾರೆ. ಅಲ್ಲಿ ಮರು ಮತದಾನ ನಡೆಯುವ ಸಾಧ್ಯತೆ ಇದೆ.

ಹಾಸನ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಅವರ ತಾಯಿ ಹೊಳೆನರಸೀಪುರ ತಾಲ್ಲೂಕಿನ ಕೆ.ಬಿ. ಪಾಳ್ಯ ಮತಗಟ್ಟೆಗೆ ಭೇಟಿನೀಡಿದ್ದ ಸಂದರ್ಭದಲ್ಲಿ ಕಾಂಗ್ರೆಸ್–ಜೆಡಿಎಸ್ ಕಾರ್ಯಕರ್ತರ ಮಧ್ಯೆ ಘರ್ಷಣೆ ನಡೆದಿದೆ. ಕಾಂಗ್ರೆಸ್ ಕಾರ್ಯಕರ್ತ ಮೋಹನ್ ಕುಮಾರ್ ಗಾಯಗೊಂಡಿದ್ದಾರೆ. ಉಳಿದಂತೆ ಬಹುತೇಕ ಶಾಂತಿಯುತ ಮತದಾನ ನಡೆದಿದೆ.




ನವದೆಹಲಿ (ಪಿಟಿಐ): ಲೋಕಸಭೆಗೆ ಎರಡನೇ ಹಂತದಲ್ಲಿ ಶುಕ್ರವಾರ 88 ಕ್ಷೇತ್ರಗಳಲ್ಲಿ ಚುನಾವಣೆ ನಡೆದಿದ್ದು, ಶೇ 63.50ರಷ್ಟು ಮತದಾನವಾಗಿದೆ. ಮತದಾನವು ಬಹುತೇಕ ಶಾಂತಿಯುತವಾಗಿತ್ತು.

ಎರಡನೇ ಹಂತದ ಬಳಿಕ ಕೇರಳ, ರಾಜಸ್ಥಾನ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಮತದಾನದ ಪ್ರಕ್ರಿಯೆ ಪೂರ್ಣ ಮುಗಿದಂತಾಗಿದೆ.

ಮೇ 7ರಂದು ಮೂರನೇ ಹಂತದ ಚುನಾವಣೆ ನಡೆಯಲಿದ್ದು, ಅಂದು ಕರ್ನಾಟಕದ 14 ಕ್ಷೇತ್ರ ಗಳು ಒಳಗೊಂಡಂತೆ 12 ರಾಜ್ಯಗಳಲ್ಲಿ ಒಟ್ಟು 94 ಕ್ಷೇತ್ರಗಳಿಗೆ ಮತದಾನ ನಡೆಯಲಿದೆ. ಮತ ಎಣಿಕೆಯು ಜೂನ್ 4ರಂದು ನಡೆಯಲಿದೆ.


ಚಿನಕುರುಳಿ

ಪ್ರಕಾಶ್ ಶೆಟ್ಟಿ



ಜೆಇಇ: ನಾರಾಯಣ ಸಂಸ್ಥೆ ವಿದ್ಯಾರ್ಥಿಗಳ ಸಾಧನೆ


ಜಿ.ನೀಲಕೃಷ್ಣ


ಎಚ್.ವಿದಿತ್


ಎಂ.ಅನೂಪ್


ಎಂ.ಸಾಯಿತೇಜ


ಚಿಂಟು ಸತೀಶ್ ಕುಮಾರ್


ಆರ್ಯನ್ ಪ್ರಕಾಶ್

ಬೆಂಗಳೂರು: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಡೆಸುವ ಜಂಟಿ ಪ್ರವೇಶ ಪರೀಕ್ಷೆಯಲ್ಲಿ (ಜೆಇಇ-ಮೇನ್ಸ್) ನಾರಾಯಣ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಅಗ್ರ ಹತ್ತು ರ್‍ಯಾಂಕ್‌ಗಳಲ್ಲಿ ಸಂಸ್ಥೆಯ ಆರು ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ. ಅಗ್ರ ನೂರು ರ್‍ಯಾಂಕ್‌ಗಳಲ್ಲಿ 28 ಹಾಗೂ ಸಾವಿರ ರ್‍ಯಾಂಕ್‌ಗಳಲ್ಲಿ 171 ವಿದ್ಯಾರ್ಥಿಗಳು ರ್‍ಯಾಂಕ್ ಪಡೆಯುವಲ್ಲಿ ಯಶಸ್ವಿ ಆಗಿದ್ದಾರೆ.

ಜಿ.ನೀಲಕೃಷ್ಣ ಅಖಿಲ ಭಾರತ ಮಟ್ಟದಲ್ಲಿ (ಎಐಆರ್) ಮೊದಲ ರ್‍ಯಾಂಕ್ ಪಡೆದಿದ್ದಾರೆ. ಎಚ್. ವಿದಿತ್ (5), ಎಂ.ಅನೂಪ್ (6), ಎಂ. ಸಾಯಿತೇಜ (7), ಚಿಂಟು ಸತೀಶ್ ಕುಮಾರ್ (8) ಹಾಗೂ ಆರ್ಯನ್ ಪ್ರಕಾಶ್ (10) ಅಗ್ರ ಹತ್ತು ರ್‍ಯಾಂಕ್‌ನಲ್ಲಿ ಸ್ಥಾನ ಪಡೆದ ವಿದ್ಯಾರ್ಥಿಗಳಾಗಿದ್ದಾರೆ.

ನಾರಾಯಣ ಶಿಕ್ಷಣ ಸಂಸ್ಥೆಗಳ ನಿರ್ದೇಶಕರಾದ ಪಿ. ಸಿಂಧೂರ ಹಾಗೂ ಪಿ. ಶರಣಿ ಅವರು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

'ಸಂಸ್ಥೆಯಲ್ಲಿನ ಗುಣಮಟ್ಟದ ಶಿಕ್ಷಣದಿಂದ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿಗಳನ್ನು ಅರ್ಥ ಮಾಡಿಕೊಂಡು ನಮ್ಮಲ್ಲಿ ಬೋಧಿಸಲಾಗುತ್ತದೆ. ಕಲಿಕೆಯಲ್ಲಿ ಎದುರಾಗುವ ಸವಾಲುಗಳನ್ನು ಪರಿಹರಿಸಿ, ನಿರಂತರ ಮೌಲ್ಯಮಾಪನ ಮಾಡಲಾಗುತ್ತದೆ. ಇದರಿಂದಾಗಿ ಪರೀಕ್ಷೆಯಲ್ಲಿ ಅಸಾಧಾರಣ ಫಲಿತಾಂಶ ಪಡೆಯಲು ಸಾಧ್ಯವಾಗಿದೆ' ಎಂದು ಪಿ. ಸಿಂಧೂರ ತಿಳಿಸಿದ್ದಾರೆ.

ಭೂಮಿಕಾ ಓದಿರಿ

ತಪ್ಪು ತಿದ್ದುಪಡಿಗೆ ಇಲ್ಲ ಅವಕಾಶ • ಮಂಡಳಿ, ನಿರ್ದೇಶನಾಲಯಕ್ಕೆ ವಿದ್ಯಾರ್ಥಿಗಳ ಅಲೆದಾಟ

ಪಿಯು ಆಂತರಿಕ ಅಂಕ: ಲೋಪ ತಂದ ಆತಂಕ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆಯಲ್ಲಿ 2023–24ನೇ ಸಾಲಿನಲ್ಲಿ ದಾಖಲೆಯ ಫಲಿತಾಂಶ ಬಂದಿದ್ದರೂ, ಇದೇ ಮೊದಲ ಬಾರಿ ಪರಿಚಯಿಸಿದ ಆಂತರಿಕ ಅಂಕಗಳನ್ನು ಹಲವು ಕಾಲೇಜುಗಳು ತಪ್ಪಾಗಿ ನಮೂದಿಸಿದ್ದರಿಂದ ವಿದ್ಯಾರ್ಥಿಗಳು ಗಳಿಸಿದ ಶೇಕಡವಾರು ಅಂಕಗಳಲ್ಲಿ ಗಣನೀಯ ವ್ಯತ್ಯಾಸವಾಗಿದೆ.

ರಾಜ್ಯ ಪಠ್ಯಕ್ರಮ ಅನುಸರಿಸುತ್ತಿದ್ದ ದ್ವಿತೀಯ ಪಿಯು ವಿದ್ಯಾರ್ಥಿಗಳ ಅಂಕಗಳು ಸಿಬಿಎಸ್‌ಇ, ಐಸಿಎಸ್‌ಇ ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಹೋಲಿಸಿದರೆ ಅತ್ಯಂತ ಕಡಿಮೆ ಇರುತ್ತಿದ್ದವು. ಇದರಿಂದ ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪಡೆಯುವಲ್ಲಿ ತೊಡಕಾಗುತ್ತಿತ್ತು. ಇಂತಹ ಲೋಪಗಳನ್ನು ಸರಿಪಡಿಸಲು ಕ್ರಮ ಕೈಗೊಂಡಿದ್ದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಪರೀಕ್ಷಾ ಫಲಿತಾಂಶ ವೃದ್ಧಿಸಲು 2022–2023ರಲ್ಲಿ ಬಹು ಆಯ್ಕೆ ಪ್ರಶ್ನೆಗಳನ್ನು ಪರಿಚಯಿಸಿತ್ತು. ಪ್ರಸಕ್ತ ವರ್ಷ ಎಲ್ಲ ವಿಷಯಗಳಿಗೂ ಆಂತರಿಕ ಮೌಲ್ಯಮಾಪನ ನಿಗದಿ ಮಾಡಿತ್ತು.

ಕೆಲ ವಿಷಯಗಳಿಗೆ ಗರಿಷ್ಠ 20, ಕೆಲವಕ್ಕೆ 30 ಆಂತರಿಕ ಅಂಕಗಳನ್ನು ನಿಗದಿ ಮಾಡಲಾಗಿದೆ. ಕಾಲೇಜು ಹಂತದಲ್ಲೇ ಆಂತರಿಕ ಹಾಗೂ ಪ್ರಯೋಗ ಪರೀಕ್ಷೆಯ ಮೂಲಕ ವಿದ್ಯಾರ್ಥಿಯ ಕಲಿಕಾ ಸಾಮರ್ಥ್ಯಕ್ಕೆ ಅನುಗುಣವಾಗಿ ನೀಡಲಾಗುತ್ತದೆ. ಉಳಿದ 70 ಅಥವಾ 80 ಅಂಕಗಳಿಗೆ ಬಹು ಆಯ್ಕೆ ಪ್ರಶ್ನೆಗಳನ್ನು ಒಳಗೊಂಡ ಲಿಖಿತ ಪರೀಕ್ಷೆಯನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಡೆಸುತ್ತದೆ.

ವಿದ್ಯಾರ್ಥಿಗಳಿಗೆ ನೀಡಿದ ಆಂತರಿಕ ಅಂಕಗಳನ್ನು ಆಯಾ ಕಾಲೇಜುಗಳು ಎಸ್‌ಎಟಿಎಸ್ ತಂತ್ರಾಂಶದ (ವಿದ್ಯಾರ್ಥಿ ಸಾಮರ್ಥ್ಯ ಪತ್ತೆ ವ್ಯವಸ್ಥೆ) ಮೂಲಕ ಅಪ್‌ಲೋಡ್ ಮಾಡಿ ದ್ವಿತೀಯ ಪಿಯು ಫಲಿತಾಂಶಕ್ಕೂ ಮೊದಲೇ ಪಿಯು ನಿರ್ದೇಶನಾಲಯಕ್ಕೆ ಕಳುಹಿಸುತ್ತವೆ. ಪಿಯು ನಿರ್ದೇಶನಾಲಯ ನೀಡಿದ ಪಟ್ಟಿಯನ್ನು ಮುಖ್ಯ ಪರೀಕ್ಷೆಯ ಅಂಕಗಳ ಜತೆ ಸಂಯೋಜಿಸಿ ಅಂತಿಮ ಅಂಕಪಟ್ಟಿ ಸಿದ್ಧಪಡಿಸಲಾಗುತ್ತದೆ.

ಕಲಾ, ವಾಣಿಜ್ಯ, ವಿಜ್ಞಾನ ಸೇರಿದಂತೆ ಎಲ್ಲ ವಿಷಯಗಳಿಗೂ ಆಂತರಿಕ ಅಂಕಗಳನ್ನು ಪರಿಚಯಿಸಲಾಗಿದ್ದು, ಅನುಭವದ ಕೊರತೆಯ ಕಾರಣ ಅವುಗಳನ್ನು ಎಸ್‌ಎಟಿಎಸ್ ತಂತ್ರಾಂಶಕ್ಕೆ ಅಳವಡಿಸುವಲ್ಲಿ ಬಹುತೇಕ ಕಾಲೇಜುಗಳ ಸಿಬ್ಬಂದಿ ಲೋಪಗಳನ್ನು ಎಸಗಿದ್ದಾರೆ. ಲಿಖಿತ ಪರೀಕ್ಷೆಯಲ್ಲಿ 80ಕ್ಕೆ 78, 79 ಅಂಕ ಪಡೆದ ಬಹಳಷ್ಟು ವಿದ್ಯಾರ್ಥಿಗಳಿಗೆ ಆಂತರಿಕ ಅಂಕಗಳು ಒಂದು, ಎರಡು ಎಂದು ನಮೂದಿಸಲಾಗಿದೆ. ಇದರಿಂದ ಶೇಕಡವಾರು ಫಲಿತಾಂಶ ಗಣನೀಯವಾಗಿ ಕುಸಿದಿದೆ.

ತಿದ್ದುಪಡಿಗೆ ಇಲ್ಲ ಅವಕಾಶ: ಸರ್ಕಾರದ ನಿಯಮದಂತೆ ಆಯಾ ಕಾಲೇಜುಗಳು ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಎಸ್‌ಎಟಿಎಸ್ ತಂತ್ರಾಂಶಕ್ಕೆ ಅಳವಡಿಸಿ, ಪಿಯು ನಿರ್ದೇಶನಾಲಯಕ್ಕೆ ಕಳುಹಿಸಿದ ನಂತರ ತಿದ್ದುಪಡಿ ಮಾಡಲು ಅವಕಾಶವಿಲ್ಲ. ಲಿಖಿತ ಪರೀಕ್ಷೆಯ ಅಂಕಗಳು ಕಡಿಮೆ ಬಂದರೆ, ಫಲಿತಾಂಶ ತೃಪ್ತಿಕರವಾಗಿರದಿದ್ದರೆ ಮತ್ತೆ ಎರಡು ಪರೀಕ್ಷೆ ತೆಗೆದುಕೊಳ್ಳಬಹುದು. ಹೆಚ್ಚು ಅಂಕಗಳು ಬಂದ ಫಲಿತಾಂಶದ ಅಂಕಪಟ್ಟಿಯನ್ನೇ ಪಡೆಯಬಹುದು. ಆದರೆ, ಒಮ್ಮೆ ದಾಖಲಾದ ಆಂತರಿಕ ಅಂಕಗಳು ಮಾತ್ರ ಸ್ಥಿರವಾಗಿರುತ್ತವೆ.

'ಸಿಬಿಎಸ್‌ಇ 10ನೇ ತರಗತಿಯಲ್ಲಿ ಕಡಿಮೆ ಅಂಕ ನಮೂದಿಸಿರುವ ಕುರಿತು ಕೆಲ ವಿದ್ಯಾರ್ಥಿಗಳು ದೆಹಲಿ ಹೈಕೋರ್ಟ್ ಮೊರೆ ಹೋಗಿದ್ದರು. ಒಮ್ಮೆ ಪೋರ್ಟಲ್‌ನಲ್ಲಿ ನಮೂದಿಸಿದ ಆಂತರಿಕ ಅಂಕಗಳ ತಿದ್ದುಪಡಿಗೆ ಅವಕಾಶ ನೀಡಿದರೆ ಅವ್ಯವಸ್ಥೆಗೆ ದಾರಿ ಮಾಡಿಕೊಟ್ಟಂತೆ ಆಗುತ್ತದೆ. ಇಂತಹ ವಿಷಯಗಳಲ್ಲಿ ಶಾಲೆಗಳು ಹೊಣೆಗಾರಿಕೆಯಿಂದ ಕ್ರಮ ಕೈಗೊಳ್ಳಬೇಕು ಎಂದು ಕೋರ್ಟ್ ತೀರ್ಪು ನೀಡಿದೆ. ಹಾಗಾಗಿ, ತಿದ್ದುಪಡಿಗೆ ಸಮ್ಮತಿಸಲು ಸಾಧ್ಯವಿಲ್ಲ' ಎನ್ನುತ್ತಾರೆ ಪಿಯು ನಿರ್ದೇಶನಾಲಯದ ಅಧಿಕಾರಿಗಳು.

> ಆಂತರಿಕ ಅಂಕಗಳ ಲೋಪಕ್ಕೆ ಕಾಲೇಜುಗಳೇ ಹೊಣೆ. ಇದರಲ್ಲಿ ಪಿಯು ನಿರ್ದೇಶನಾಲಯದ ಪಾತ್ರವಿಲ್ಲ. ಆಂತರಿಕ ಅಂಕಗಳನ್ನು ನಮೂದಿಸುವ ಕುರಿತು 3 ಬಾರಿ ತರಬೇತಿ ನೀಡಲಾಗಿತ್ತು
>
> **ಸಿಂಧು ರೂಪೇಶ್,** ನಿರ್ದೇಶಕಿ, ಪಿಯು ನಿರ್ದೇಶನಾಲಯ

> ನನ್ನ ಮಗ ದಾವಣಗೆರೆಯ ಖಾಸಗಿ ಕಾಲೇಜಿನ ವಿದ್ಯಾರ್ಥಿ. ಗಣಿತ ಮುಖ್ಯ ಪರೀಕ್ಷೆಯಲ್ಲಿ ಉತ್ತಮ ಅಂಕ ಬಂದಿವೆ. ಆಂತರಿಕ ಅಂಕ 1 ಎಂದು ಅಂಕ ಪಟ್ಟಿಯಲ್ಲಿದೆ. ಇದು ನಮೂದಿಸುವಾಗ ಆದ ಲೋಪ. ತಿದ್ದುಪಡಿಗೆ ಅವಕಾಶ ಇಲ್ಲದ ಕಾರಣ ಅವನಿಗೆ ಅನ್ಯಾಯವಾಗಿದೆ
>
> **ಬಸವರಾಜ್,** ಪೋಷಕ

1,55,313	ಪರೀಕ್ಷೆ ಬರೆದಿದ್ದ ಸರ್ಕಾರಿ ಪಿಯು ವಿದ್ಯಾರ್ಥಿಗಳು
1,00,226	ಅನುದಾನಿತ ಕಾಲೇಜು ವಿದ್ಯಾರ್ಥಿಗಳು
3,10,788	ಖಾಸಗಿ ಕಾಲೇಜು ವಿದ್ಯಾರ್ಥಿಗಳು

ಕೇಂದ್ರ ಕ್ಷೇತ್ರ: ಮತದಾನ ನಿಧಾನ, ಅಲ್ಲಲ್ಲಿ ಜೋರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಲೋಕಸಭಾ ಕ್ಷೇತ್ರದ ಹಲವು ಮತಗಟ್ಟೆಗಳಲ್ಲಿ ನಿಧಾನಗತಿಯಲ್ಲಿ ಮತದಾನ ಜರುಗಿತು. ಕೆಲ ಮತಗಟ್ಟೆಗಳಲ್ಲಿ ಮತದಾರರ ಸರತಿ ಸಾಲು ದೊಡ್ಡದಿದ್ದರೆ, ಹಲವು ಮತಗಟ್ಟೆಗಳಲ್ಲಿ ಮತದಾರರ ಕೊರತೆ ಎದ್ದು ಕಾಣುತ್ತಿತ್ತು.

ಸರ್ವಜ್ಞ ನಗರ, ಸಿ.ವಿ.ರಾಮನ್ ನಗರ, ಶಿವಾಜಿನಗರ, ಶಾಂತಿನಗರ, ಗಾಂಧಿನಗರ, ರಾಜಾಜಿನಗರ, ಚಾಮರಾಜಪೇಟೆ ಹಾಗೂ ಮಹದೇವಪುರ ವಿಧಾನಸಭಾ ಕ್ಷೇತ್ರದ ಮತಗಟ್ಟೆಗಳಲ್ಲಿ ಶುಕ್ರವಾರ ಮತದಾನ ನಡೆಯಿತು.

ಗಂಗಾಧರ ಚೆಟ್ಟಿ ರಸ್ತೆಯ ಆರ್‌ಬಿಎ ಎನ್‌ಎಂಎಸ್ ಶಾಲೆ ಮತಗಟ್ಟೆಯಲ್ಲಿ ಮತದಾರರ ಸಂಖ್ಯೆ ಕಡಿಮೆ ಇತ್ತು. ಕಾಕ್ಸ್‌ಟೌನ್‌ನ ಸಂತ ಅಲಾಷಿಯಸ್ ಪದವಿ ಪೂರ್ವ ಕಾಲೇಜು ಹಾಗೂ ನಾಗವಾರ ಪಾಳ್ಯದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆ ಎದುರು ಮತದಾರರ ಸರದಿ ಹೆಚ್ಚಿತ್ತು.

20ನೇ ಬಾರಿ ಮತದಾನ: ಸಿ.ವಿ. ರಾಮನ್ ನಗರದ 86 ವರ್ಷ ವಯಸ್ಸಿನ ಶಿವರಾಮಕೃಷ್ಣ ಶಾಸ್ತ್ರಿ ಎಂಬುವವರು ಡಿಆರ್‌ಡಿಒ ಕೇಂದ್ರೀಯ ವಿದ್ಯಾಲಯದ ಮತಗಟ್ಟೆಯಲ್ಲಿ 20ನೇ ಬಾರಿ ಮತ ಚಲಾಯಿಸಿದರು.

'ಮನೆಯಲ್ಲಿ ಮತದಾನ'ದ ಅವಕಾಶ ಇದ್ದರೂ ಇವರು ನೋಂದಣಿ ಮಾಡಿಸಿರಲಿಲ್ಲ. ಹೀಗಾಗಿ, ಸಂಬಂಧಿಕರ ಜೊತೆ ಮತಗಟ್ಟೆಗೆ ಬಂದು ಮತ ಹಾಕಿದರು. ಭದ್ರತಾ ಸಿಬ್ಬಂದಿ, ಶಿವರಾಮಕೃಷ್ಣ ಅವರನ್ನು ವ್ಹೀಲ್ ಚೇರ್‌ನಲ್ಲಿ ಮತಗಟ್ಟೆಗೆ ಕರೆದೊಯ್ದು ಮತದಾನಕ್ಕೆ ನೆರವಾದರು.

'ಮನೆಯಲ್ಲಿ ಮತದಾನ ಮಾಡಿದರೆ ಅದರ ಮಹತ್ವ ತಿಳಿಯುವುದಿಲ್ಲ. ಜನರೂ ಭೇಟಿಯಾಗುವುದಿಲ್ಲ. ಅದಕ್ಕೆ ಮತಗಟ್ಟೆಗೆ ಬಂದಿದ್ದೇನೆ' ಎಂದು ಶಿವರಾಮಕೃಷ್ಣ ಶಾಸ್ತ್ರಿ ತಿಳಿಸಿದರು.


ಸಿ.ವಿ.ರಾಮನ್ ನಗರದ ಮತಗಟ್ಟೆಯಲ್ಲಿ 20ನೇ ಬಾರಿ ಮತದಾನ ಮಾಡಿದ ಶಿವರಾಮಕೃಷ್ಣ ಶಾಸ್ತ್ರಿ – ಪ್ರಜಾವಾಣಿ ಚಿತ್ರ

ಯುವಕನ ಮೇಲೆ ಹಲ್ಲೆ

ಸಿ.ವಿ. ರಾಮನ್ ನಗರದ ಸುದ್ದಗುಂಟೆ ಪಾಳ್ಯದಲ್ಲಿ ಕೇಸರಿ ಅಂಗಿ ಧರಿಸಿ ಮತಗಟ್ಟೆಯೊಳಗೆ ಹೊರಟಿದ್ದ ಯುವಕನನ್ನು ಅಡ್ಡಗಟ್ಟಿ ಹಲ್ಲೆ ಮಾಡಲಾಗಿದ್ದು, ಈ ಸಂಬಂಧ ಪೊಲೀಸರು ಮಾಹಿತಿ ಪಡೆದುಕೊಂಡಿದ್ದಾರೆ.

'ಸ್ಥಳೀಯ ಯುವಕ ಮೋಹನ್ ಎಂಬುವವರು ಮತ ಚಲಾಯಿಸಲು ಕುಟುಂಬ ಸಮೇತರಾಗಿ ಮತಗಟ್ಟೆಗೆ ಬಂದಿದ್ದರು. ಕೇಸರಿ ಬಣ್ಣದ ಅಂಗಿ ಧರಿಸಿದ್ದ ಅವರು ಮತಗಟ್ಟೆಯೊಳಗೆ ಹೊರಟಿದ್ದರು. ಅದನ್ನು ಪ್ರಶ್ನಿಸಿದ್ದ ಕೆಲವರು, ಮತಗಟ್ಟೆ ಒಳಗೆ ಹೋಗದಂತೆ ತಡೆದಿದ್ದರು. ಮಾತಿಗೆ ಮಾತು ಬೆಳೆದು ಗಲಾಟೆ ಶುರುವಾಗಿತ್ತು. ಯುವಕನ ಮೇಲೆ ಅಪರಿಚಿತರು ಹಲ್ಲೆ ಮಾಡಿದ್ದರು. ನಂತರ, ಬಿಜೆಪಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಮಧ್ಯಪ್ರವೇಶಿಸಿದ್ದರು. ಎರಡೂ ಪಕ್ಷದವರ ನಡುವೆಯೇ ಜಗಳ ಶುರುವಾಗಿತ್ತು. ಬೈಯಪ್ಪನಹಳ್ಳಿ ಠಾಣೆ ಪೊಲೀಸರು ಪರಿಸ್ಥಿತಿ ನಿಯಂತ್ರಿಸಿದರು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

ಉಚಿತ ತಿಂಡಿ ಸವಿದ ಮತದಾರರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾನ ಮಾಡಿದವರಿಗೆ ಉಚಿತ ಉಪಾಹಾರ ಘೋಷಣೆ ಮಾಡಿದ್ದ 'ನಿಸರ್ಗ ಗ್ರ್ಯಾಂಡ್' ಹೋಟೆಲ್‌ಗೆ ಶುಕ್ರವಾರ ಭಾರಿ ಸಂಖ್ಯೆಯಲ್ಲಿ ಜನರು ಭೇಟಿ ನೀಡಿದರು. ಸಾಲುಗಟ್ಟಿ ನಿಂತು ಉಪಾಹಾರ ಸವಿದರು.

ನಗರದ ನೃಪತುಂಗ ರಸ್ತೆಯಲ್ಲಿರುವ ಭಾರತೀಯ ರಿಸರ್ವ್ ಬ್ಯಾಂಕ್ ಬಳಿ ಇರುವ ಈ ಹೋಟೆಲ್‌ನಲ್ಲಿ ಮತದಾರರಿಗೆ ಬೆಣ್ಣೆ ಖಾಲಿ ದೋಸೆ, ತುಪ್ಪದ ಲಾಡು ಮತ್ತು ತಂಪು ಪಾನಕ ಉಚಿತವಾಗಿ ವಿತರಿಸಲಾಯಿತು.

'ಇದೊಂದು ಅಪ್ಪಟ ಸಾಮಾಜಿಕ ಕಳಕಳಿಯುಳ್ಳ ರಾಜಕೀಯೇತರ ಕಾರ್ಯಕ್ರಮವಾಗಿದೆ. ಮತ ಚಲಾಯಿಸಿದ ಗುರುತು ತೋರಿಸಿದವರಿಗೆಲ್ಲ ಈ ಕೊಡುಗೆ ನೀಡಲಾಗಿದೆ. ಮತದಾನವನ್ನು ಉತ್ತೇಜಿಸಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ' ಎಂದು ಹೋಟೆಲ್ ಮಾಲೀಕ ಎಸ್.ಪಿ. ಕೃಷ್ಣರಾಜು 'ಪ್ರಜಾವಾಣಿ'ಗೆ ತಿಳಿಸಿದರು.

'ಬೆಳಿಗ್ಗಿನಿಂದ ಸಂಜೆಯವರೆಗೆ 6,800 ಜನ ಭೇಟಿ ನೀಡಿ ಉಚಿತ ತಿಂಡಿ ಸವಿದಿದ್ದಾರೆ. ತಂಪು ಪಾನಕಕ್ಕೆ 850 ಕೆ.ಜಿ ಕಲ್ಲಂಗಡಿ ಹಣ್ಣಿನ ಬಳಕೆಯಾಗಿದೆ' ಎಂದು ಅವರು ಮಾಹಿತಿ ನೀಡಿದರು.

ಲುಲು ಮತ್ತು ಓರಾಯಾನ್ ಮಾಲ್‌ನಲ್ಲಿರುವ ಕಾಮತ್ ಹೊಸರುಚಿ ಹೋಟೆಲ್, ಅಯ್ಯಂಗಾರ್ ಓವನ್ ಫ್ರೆಶ್‌ನಂತಹ ಬೇಕರಿಗಳು ಮತದಾನ ಮಾಡಿದ ಗುರುತು ತೋರಿಸಿದವರಿಗೆ ಶೇ 10ರಷ್ಟು ರಿಯಾಯಿತಿಯನ್ನು ನೀಡಿವೆ.

ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ. ರಾವ್, 'ನಗರದಲ್ಲಿ ಮತದಾನ ಪ್ರಮಾಣ ಹೆಚ್ಚಿಸುವ ಉದ್ದೇಶದಿಂದ ನಗರದ ಕೆಲವು ಹೋಟೆಲ್‌ಗಳ ಮಾಲೀಕರು ಉಚಿತ ಮತ್ತು ರಿಯಾಯಿತಿ ದರಗಳನ್ನು ಘೋಷಿಸಿದ್ದರು. ಅದರಂತೆ ಉಪಾಹಾರ ವಿತರಿಸಲಾಗಿದೆ. ಕೆಲ ಬೇಕರಿಗಳಲ್ಲಿ ರಿಯಾಯಿತಿ ದರದಲ್ಲಿ ಉತ್ಪನ್ನಗಳನ್ನು ಮಾರಾಟ ಮಾಡಲಾಯಿತು' ಎಂದು ಹೇಳಿದರು.


ನೃಪತುಂಗ ರಸ್ತೆಯಲ್ಲಿರುವ ಹೋಟೆಲ್ ನಿಸರ್ಗ ಗ್ರ್ಯಾಂಡ್‌ನಲ್ಲಿ ಶುಕ್ರವಾರ ಉಚಿತ ತಿಂಡಿ ಸವಿದ ಜನ –ಪ್ರಜಾವಾಣಿ ಚಿತ್ರ


ಮತ ಚಲಾಯಿಸಿದ ಯಶ್, ರಾಧಿಕಾ

ನಗರದಲ್ಲಿ ಇಂದು

ಪ್ರೊಜೆಕ್ಟ್ ಎಕ್ಸ್‌ಪೊ–2024: ಅತಿಥಿಗಳು: ಎಸ್. ಸೋಮನಾಥ್, ಅಧ್ಯಕ್ಷತೆ: ಬಿ.ಎನ್. ಸುರೇಶ್, ಆಯೋಜನೆ ಮತ್ತು ಸ್ಥಳ: ಎಂವಿಜೆ ಕಾಲೇಜ್ ಆಫ್ ಎಂಜಿನಿಯರಿಂಗ್, ವೈಟ್‌ಫಿಲ್ಡ್, ಬೆಳಿಗ್ಗೆ 10

ಶ್ರದ್ಧಾ ಪಾಂಡುರಂಗ ಕಾಳೆ ಅವರ 'ಅಲ್ಮಿತ್ರಾ ಪಟೇಲ್ ವೇಸ್ಟ್ ವಾರಿಯರ್' ಪುಸ್ತಕ ಬಿಡುಗಡೆ: ಆಯೋಜನೆ: ಗೀತಾಂಜಲಿ ಪಬ್ಲಿಕೇಷನ್, ಸ್ಥಳ: ಕೆ.ಸಿ. ಪ್ಯಾಲೆಸ್ ಕ್ಲಬ್, ಜಯಮಹಲ್ ಮುಖ್ಯರಸ್ತೆ, ಜೆ.ಸಿ. ನಗರ, ಬೆಳಿಗ್ಗೆ11.30

ಕೋಟಿಗಾನಹಳ್ಳಿ ರಾಮಯ್ಯ ಅವರ 'ಸುಮ್ ಸುಮ್ಕೆ' ನಾಟಕ ಪ್ರದರ್ಶನ: ವಿನ್ಯಾಸ, ನಿರ್ದೇಶನ: ದಾಕ್ಷಾಯಿಣಿ ಭಟ್ ಎ., ಆಯೋಜನೆ: ದೃಶ್ಯ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 12

'ಡ್ಯಾಪರ್ ಶೋ' ಉದ್ಘಾಟನೆ: ಜಿ.ಎಸ್. ಶಂಕರಿ, ಅತಿಥಿಗಳು: ವಿದ್ಯಾಭೂಷಣ, ಪ್ರಹ್ಲಾದ್ ಆಚಾರ್ಯ, ಉದಯ್ ಕೃಷ್ಣ ಜಿ., ನಿತ್ಯಾ ಯು ಭಟ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಮಧ್ಯಾಹ್ನ 3

ರಾಮನವಮಿ ಸಂಗೀತೋತ್ಸವ–2024: ವಿಶೇಷ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ದಿಲ್ಲಿ ಶ್ರೀಧರ್ ಮತ್ತು ತಂಡ, ವಿಶೇಷ ಕರ್ನಾಟಕ ಸಂಗೀತ ಕಛೇರಿ: ಮ್ಯಾಂಡೋಲಿನ್ ಯು. ರಾಜೇಶ್, ಎಚ್.ಎನ್. ಭಾಸ್ಕರ್, ಫಜಲ್ ಖುರೇಷಿ, ಬೆಂಗಳೂರು ವಿ. ಪ್ರವೀಣ್, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 4ರಿಂದ

ರಾಮನವಮಿ ಸಂಗೀತೋತ್ಸವ: ಗಾಯನ: ಅನಘಾ ಯೋಗಾನಂದ್, ಪಿಟೀಲು: ಕಾರ್ತಿಕೇಯ ರಾಮಚಂದ್ರ, ಮೃದಂಗ: ರಕ್ಷಿತ್ ಶರ್ಮ, ಖಂಜಿರ: ಹರೀಶ್ ಚಂದ್ರ ಜಿ.ಆರ್., ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 5

ಅಕ್ಕಮಹಾದೇವಿ ಜಯಂತಿ, ವಚನ ಸಂಭ್ರಮ, ಮಮತಾ ಸಾಗರ್ ಅವರಿಗೆ ಅಭಿನಂದನೆ ಕಾರ್ಯಕ್ರಮ: ಉದ್ಘಾಟನೆ: ಸಿ. ಸೋಮಶೇಖರ್, ಅಭಿನಂದನೆ: ಸುಶೀಲಮ್ಮ, ಅತಿಥಿ: ಎಚ್.ಎಲ್. ಪುಷ್ಪ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಉಪಸ್ಥಿತಿ: ಪ್ರಮೀಳಾ ಗರಡಿ, ಪ್ರೇಮಾ ಸೋಮಸುಂದರ್, ಗೀತಾ ಜಯಂತ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ವಿಶ್ವ ನೃತ್ಯ ದಿನಾಚರಣೆ: ಕುಚಿಪುಡಿ: ಗುರುರಾಜು, ಮೋಹಿನಿಅಟ್ಟಂ: ಕಾವ್ಯ ದೀಪಕ್, ಕಥಕ್: ವೈದೇಗಿ ಎಸ್., ಒಡಿಸ್ಸಿ: ಯಶೋಮತಿ ಮಿಶ್ರಾ, ಆಯೋಜನೆ: ನೃತ್ಯಾಂಗನ, ಸ್ಥಳ: 372, ನಿಶಾಂತ್, 4ನೇ ಮುಖ್ಯರಸ್ತೆ, 2ನೇ ಫೇಸ್, ರಾಜೀವ್ ಗಾಂಧಿನಗರ, ಸಂಜೆ 5.30

'ಶ್ಯಾಮ್ ಶಾಸ್ತ್ರಿ' ಅವರಿಗೆ ನಮನ: ರಕ್ಷಾ ಕಾರ್ತಿಕ್, ಅತಿಥಿಗಳು: ಎಸ್. ಸಡಗೋಪನ್, ಆನೂರು ಅನಂತಕೃಷ್ಣ ಶರ್ಮ, ಎಂ. ಸೂರ್ಯ ಪ್ರಸಾದ್, ಸತ್ಯನಾರಾಯಣ ರಾಜು, ಮುರಳೀಧರ್, ದೇವರಾಜು ಬಿ.ವಿ., ಗಾಯನ: ಬಾಲಸುಬ್ರಹ್ಮಣ್ಯ ಶರ್ಮಾ, ಮೃದಂಗ: ಶ್ರೀಹರಿ ರಂಗಸ್ವಾಮಿ, ವೀಣೆ: ಪ್ರಶಾಂತ್, ಕೊಳಲು: ಜಯರಾಮ್ ಕಿಕ್ಕೇರಿ, ರಿದಮ್ ಪ್ಯಾಡ್ಸ್: ಪ್ರಸನ್ನ ಕುಮಾರ್, ಎಂಸಿ: ರೋಹಿಣಿ ರಘುನಂದನ್, ಆಯೋಜನೆ: ನಟನಂ, ಸ್ಥಳ: ಯುವಕ ಸಂಘ, ಜಯನಗರ, ಸಂಜೆ 5.45

ರಜತ ಮಹೋತ್ಸವ, ಹನುಮ ಜಯಂತಿ ಉತ್ಸವ: 'ಹನುಮ ಪ್ರಭಾವ' ಉಪನ್ಯಾಸ: ಡಂಬಳ ಜಯಸಿಂಹಚಾರ್ಯ, ಗಾಯನ: ಪವನ್ ರಂಗಾಚಾರ್ಯ, ಪಿಟೀಲು: ಬಿ. ರಘುರಾಮ್, ಮೃದಂಗ: ಪಣೀಂದ್ರ ಭಾಸ್ಕರ್, ಖಂಜಿರ: ಭಾರ್ಗವ ಹಾಲಂಬಿ, ಆಯೋಜನೆ: ಸಮೀರ ಸಮಯ ಸಂಜೀವಿನಿ ಸಂಸತ್ ಪ್ರತಿಷ್ಠಾನ, ಸ್ಥಳ: ಶ್ರೀರಾಮ ಮಂದಿರ, ಈಸ್ಟ್‌ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6ರಿಂದ

ಶ್ರೀರಾಮೋತ್ಸವ: ಸಾಮೂಹಿಕ ಸಂಕಷ್ಟಹರ ಗಣಪತಿ ಪೂಜೆ, ಸ್ಥಳ: ಜಯರಾಮ ಸೇವಾ ಮಂಡಳಿ, 1ನೇ ಮುಖ್ಯರಸ್ತೆ, 8ನೇ ಬಡಾವಣೆ, ಜಯನಗರ, ಸಂಜೆ 6.30

ಲೈಂಗಿಕ ದೌರ್ಜನ್ಯ: ಆರೋಪಿ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಟು ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿ ಪರಾರಿಯಾಗಿದ್ದು, ಈ ಸಂಬಂಧ ಅಶೋಕನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಹೊರ ರಾಜ್ಯದ ಬಾಲಕಿ, ತಾಯಿ ಜೊತೆ ನಗರಕ್ಕೆ ಬಂದಿದ್ದಳು. ತಾಯಿ, ನಗರದ ವೃತ್ತ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಬಲೂನ್ ಮಾರಿ ಜೀವನ ಸಾಗಿಸುತ್ತಿದ್ದರು. ತಾಯಿಗೆ ಮಾತು ಬರುತ್ತಿರಲಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಠಾಣೆ ವ್ಯಾಪ್ತಿಯಲ್ಲಿ ರಸ್ತೆ ಕಾಮಗಾರಿ ನಡೆಯುತ್ತಿದ್ದು, ಜನರ ಓಡಾಟ ನಿರ್ಬಂಧಿಸಲಾಗಿದೆ. ಇದೇ ಸ್ಥಳದಲ್ಲಿ ಬಾಲಕಿ ಕುಳಿತುಕೊಂಡಿದ್ದರು. ತಾಯಿ ಬಲೂನ್ ಮಾರಲು ರಸ್ತೆಗೆ ಹೋಗಿದ್ದರು. ಬಾಲಕಿ ಬಳಿ ಹೋಗಿದ್ದ ಆರೋಪಿ, ತಿಂಡಿ ಕೊಡಿಸುವುದಾಗಿ ಹೇಳಿ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದ. ಬಾಲಕಿ ಚೀರಾಟ ಕೇಳಿ ತಾಯಿ ಸ್ಥಳಕ್ಕೆ ಹೋಗುವಷ್ಟರಲ್ಲೇಆರೋಪಿಪರಾರಿಯಾಗಿದ್ದಾನೆ' ಎಂದು ತಿಳಿಸಿವೆ.

ಸುಧಾ, ಮಯೂರ ಓದಿರಿ


ಹುಟ್ಟುಹಬ್ಬದ ಶುಭಾಶಯಗಳು
ಸಮಾಜ ಸೇವಕರು
ಹಾಗೂ
ಕೆ.ಪಿ.ಸಿ.ಸಿ. ಪ್ರಧಾನ ಕಾರ್ಯದರ್ಶಿಗಳಾದ
ಡಾ|| ಆರ್. ಪ್ರಭಾಕರ್ ರೆಡ್ಡಿ
ರವರಿಗೆ
53ನೇ
ಜನ್ಮದಿನದ ಶುಭಾಶಯಗಳು
ಶುಭ ಕೋರುವವರು
ಡಾ|| ಆರ್. ಪ್ರಭಾಕರ್ ರೆಡ್ಡಿಯವರ
ಅಭಿಮಾನಿ ಬಳಗ

ಶೇಕಡ 53.46ರಷ್ಟು ಮತದಾನ • ಮನವಿ, ಜಾಗೃತಿ ಕಾರ್ಯಕ್ರಮಗಳಿಗೆ ಸ್ಪಂದಿಸದ ರಾಜಧಾನಿಯ ಮತದಾರರು

ಮತದಾನ: ಹಿಂದಿನ ಪ್ರಮಾಣಕ್ಕಿಂತ ಕಡಿಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿ ಬೆಂಗಳೂರಿನ ಮತದಾರರು ಮತ್ತೆ ತಮ್ಮ ಹಕ್ಕು ಚಲಾಯಿಸುವಲ್ಲಿ ವಿಫಲರಾಗಿದ್ದಾರೆ. ಕಳೆದ ಲೋಕಸಭಾ ಹಾಗೂ ವಿಧಾನಸಭೆ ಚುನಾವಣೆಗಿಂತ ಕಡಿಮೆ ಪ್ರಮಾಣದ ಮತದಾನ ದಾಖಲಾಗಿದೆ.

ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಉತ್ತರ, ಕೇಂದ್ರ, ದಕ್ಷಿಣ ಲೋಕಸಭಾ ಕ್ಷೇತ್ರಗಳಲ್ಲಿ ಅತಿಕಡಿಮೆ ಮತದಾನವಾಗಿದ್ದು, ರಾಜ್ಯದಲ್ಲಿ ನಡೆದ 14 ಕ್ಷೇತ್ರಗಳಲ್ಲಿ ಕೇಂದ್ರ ಲೋಕಸಭಾ ಕ್ಷೇತ್ರ ಕೊನೆಯ ಸ್ಥಾನದಲ್ಲಿದೆ. ಮೂರೂ ಲೋಕಸಭೆ ಕ್ಷೇತ್ರಗಳಲ್ಲಿ ಕಳೆದ ಲೋಕಸಭಾ ಚುನಾವಣೆಗೆ ಹೋಲಿಸಿದರೆ ಸುಮಾರು ಶೇ 1ರಷ್ಟು ಕಡಿಮೆ ಮತದಾನವಾಗಿದೆ.

ಶುಕ್ರವಾರ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಬಿರುಸಿನ ಮತದಾನ ನಡೆದಿತ್ತು. ಇದೇ ವೇಗದಲ್ಲಿ ಮತದಾನವಾದರೆ ಈ ಬಾರಿ ದಾಖಲೆಯ ಮತದಾನವಾಗಲಿದ್ದು, ಅರಿವು ಮೂಡಿಸಿದ್ದರ ಫಲ ಎಂಬಂತಹ ಮಾತು ವ್ಯಕ್ತವಾಗಿತ್ತು. ಆದರೆ, ಮಧ್ಯಾಹ್ನದ ನಂತರ ಮತದಾನ ಪ್ರಮಾಣ ಇಳಿಮುಖವಾಗಿ ಅಂತಿಮವಾಗಿ ಕಳೆದ ಬಾರಿಯಷ್ಟೂ ಮತದಾನವಾಗದೆ ಚುನಾವಣಾ ಅಧಿಕಾರಿಗಳೂ ನಿರಾಸೆಗೊಂಡರು.

ಬೆಂಗಳೂರು ನಗರ ಜಿಲ್ಲೆಯಲ್ಲಿ ಮೊದಲಬಾರಿಗೆ ಮತದಾರರ ಸಂಖ್ಯೆ ಒಂದು ಕೋಟಿ ದಾಟಿದೆ. ಆದರೆ, ಮತದಾನ ಪ್ರಮಾಣ ಸುಮಾರು ಅರ್ಧದಷ್ಟು ಮಾತ್ರ ಆಗಿದೆ. ಮೂರು ಲೋಕಸಭಾ ಕ್ಷೇತ್ರಗಳಲ್ಲಿ 62,43,029 ಮತದಾರರಿದ್ದಾರೆ. ಇದರಲ್ಲಿ ಶೇ 53.46ರಷ್ಟು ಮತದಾನವಾಗಿದೆ. ಬೆಂಗಳೂರು ದಕ್ಷಿಣ, ರಾಜರಾಜೇಶ್ವರಿನಗರ, ಯಲಹಂಕ ಹಾಗೂ ಆನೇಕಲ್ ವಿಧಾನಸಭೆ ಕ್ಷೇತ್ರಗಳಲ್ಲಿ 38,84,840 ಮತದಾರರಿದ್ದಾರೆ. ಇದರಲ್ಲಿ ಶೇ 56.32 ಮತದಾನವಾಗಿದೆ.

ಕಾರಣಗಳೇನು?: ಬೆಂಗಳೂರಿನಲ್ಲಿ ಅತಿಹೆಚ್ಚು ಜಾಗೃತಿ ಮೂಡಿಸಲಾಗುತ್ತಿದ್ದರೂ ಮತದಾನದ ಪ್ರಮಾಣ ಮಾತ್ರ ಕಡಿಮೆಯಾಗುತ್ತಲೇ ಇದೆ. ಇದಕ್ಕೆ ಕಾರಣ ಇಂಥದ್ದೇ ಎಂಬುದನ್ನು ಗುರುತಿಸಲು ಚುನಾವಣಾಧಿಕಾರಿಗಳೂ ವಿಫಲರಾಗಿದ್ದಾರೆ. 'ಸಾಲು ರಜೆ, ರಜೆಯಲ್ಲಿ ಪ್ರವಾಸದತ್ತ ನಾಗರಿಕರು, ನಿರಾಸಕ್ತಿ ಹಾಗೂ ಹೆಚ್ಚಿನ ಬಿಸಿಲ ಝಳ' ಇತ್ಯಾದಿಗಳನ್ನು ಕಾರಣಗಳನ್ನಾಗಿ ಉಲ್ಲೇಖಿಸಲಾಗುತ್ತಿದೆ. ಇದರ ಜೊತೆಗೆ, ಕಾಯಿಲೆಯಿಂದ ಮನೆಯಿಂದ ಹೊರಬರಲು ಸಾಧ್ಯವಿರದವರು, ಬೇರೆ ಊರಿಗೆ ಹೋಗಿರುವವರು, ರಾಜ್ಯದ ಹೊರಭಾಗ, ವಿದೇಶಗಳಲ್ಲಿ ವಾಸ, ವ್ಯಾಸಂಗ ಮಾಡುತ್ತಿರುವವರೂ ಮತದಾನ ಮಾಡಿಲ್ಲ ಎಂದು ವ್ಯಾಖ್ಯಾನಿಸಲಾಗಿದೆ.


ತಮ್ಮ ಊರುಗಳಲ್ಲಿ ಮತದಾರರ ಪಟ್ಟಿಯಲ್ಲಿ ಹೆಸರು ಹೊಂದಿದವರೂ ಬೆಂಗಳೂರಿನಲ್ಲಿ ಕಾರ್ಯನಿಮಿತ್ತ ವಾಸವಿರುವವರು ಇಲ್ಲಿಯೂ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿದ್ದಾರೆ. ಹೀಗಾಗಿ, ಎರಡು–ಮೂರು ಕಡೆ ಅವರು ಹೆಸರು ಇರುವವರ ಸಂಖ್ಯೆಯೂ ಅಧಿಕವಾಗಿದೆ. ಈ ಎಲ್ಲ ಕಾರಣ, ಪಟ್ಟಿಯಲ್ಲಿರುವ ಒಟ್ಟು ಮತದಾರರಲ್ಲಿ ಶೇ 20ರಿಂದ ಶೇ 25ರಷ್ಟು ಮತದಾನ ಸಾಧ್ಯವಾಗುವುದಿಲ್ಲ. ಆದರೂ ಸುಮಾರು ಶೇ 70ರಷ್ಟು ಮತದಾನವಾಗಬೇಕಿತ್ತು ಎಂದು ಚುನಾವಣಾ ಅಧಿಕಾರಿಗಳು ಅಭಿಪ್ರಾಯಪಡುತ್ತಾರೆ.

ಉತ್ತರ, ಕೇಂದ್ರ, ದಕ್ಷಿಣ ಲೋಕಸಭಾ ಕ್ಷೇತ್ರಗಳಲ್ಲಿನ ಮತದಾನದ ಸರಾಸರಿ

2024	53.46%
2019	54.26%

55% ವಿಧಾನಸಭೆ ಚುನಾವಣೆಯಲ್ಲಿ ಬೆಂಗಳೂರಿನ 28 ಕ್ಷೇತ್ರಗಳಲ್ಲಿನ ಮತದಾನದ ಸರಾಸರಿ

ಮತದಾನ ಪ್ರಮಾಣ



ವಿಧಾನಸಭಾವಾರು ಮತದಾನದ ವಿವರ (ಮತದಾನದ ಪ್ರಮಾಣ ಶೇಕಡಾವಾರು)

22,78,339 ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಒಟ್ಟು ಮತದಾರರು

ಯಶವಂತಪುರ	56.30
ಪುಲಕೇಶಿನಗರ	56.10
ಬ್ಯಾಟರಾಯನಪುರ	52.94
ಕೆ.ಆರ್. ಪುರ	51.36
ಹೆಬ್ಬಾಳ	51.00
ಮಲ್ಲೇಶ್ವರ	50.40
ಮಹಾಲಕ್ಷ್ಮಿ ಲೇಔಟ್	48.33
ದಾಸರಹಳ್ಳಿ	46.35

21,09,990 ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಒಟ್ಟು ಮತದಾರರು

ಜಯನಗರ	59.15
ಚಿಕ್ಕಪೇಟೆ	57.00
ಪದ್ಮನಾಭನಗರ	57.16
ಬಸವನಗುಡಿ	55.11
ಗೋವಿಂದರಾಜನಗರ	52.68
ವಿಜಯನಗರ	51.45
ಬಿಟಿಎಂ ಲೇಔಟ್	49.72
ಬೊಮ್ಮನಹಳ್ಳಿ	47.54

18,54,700 ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಒಟ್ಟು ಮತದಾರರು

ಶಿವಾಜಿನಗರ	57.01
ರಾಜಾಜಿನಗರ	55.55
ಚಾಮರಾಜಪೇಟೆ	54.19
ಮಹದೇವಪುರ	53.78
ಗಾಂಧಿನಗರ	53.48
ಶಾಂತಿನಗರ	53.02
ಸರ್ವಜ್ಞನಗರ	52.50
ಸಿ.ವಿ. ರಾಮನ್ ನಗರ	48.30

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿ

ಆನೇಕಲ್	58.17
ಬೆಂಗಳೂರು ದಕ್ಷಿಣ	52.60
ರಾಜರಾಜೇಶ್ವರಿನಗರ	53.83

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ ವ್ಯಾಪ್ತಿ

ಯಲಹಂಕ 60.69

ಕಾಲೇಜುಗಳಲ್ಲಿ ಮತಯಂತ್ರ

ನಗರದ ಮೂರು ಲೋಕಸಭಾ ಕ್ಷೇತ್ರಗಳ ಮತದಾನದ ಮತಯಂತ್ರಗಳನ್ನು (ಇವಿಎಂ) ಮೂರು ಕಾಲೇಜುಗಳಲ್ಲಿ (ಸ್ಟ್ರಾಂಗ್ ರೂಂ) ಇರಿಸಲಾಗಿದೆ.

ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಮತಯಂತ್ರಗಳು ವಸಂತನಗರದ ಮೌಂಟ್ ಕಾರ್ಮೆಲ್ ಪಿಯು ಕಾಲೇಜು, ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಮತಯಂತ್ರಗಳು ವಿಠ್ಠಲಮಲ್ಯ ರಸ್ತೆಯಲ್ಲಿರುವ ಸೇಂಟ್ ಜೋಸೆಫ್ ಕಾಲೇಜು ಹಾಗೂ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಮತಯಂತ್ರಗಳನ್ನು ಜಯನಗರದ ಎಸ್.ಎಸ್.ಎಂ.ಆರ್.ವಿ ಪಿಯು ಕಾಲೇಜಿನಲ್ಲಿರಿಸಲಾಗಿದೆ.


ಅದೇ ಕಾಲೇಜುಗಳಲ್ಲಿ ಜೂನ್ 4ರಂದು ಮತ ಎಣಿಕೆ ನಡೆಯಲಿದೆ.

ಗಣ್ಯರಿಂದ ಮತದಾನ


ನಟ ಪ್ರಕಾಶ್ ರಾಜ್


ರಾಜ್ಯಸಭೆ ಸದಸ್ಯೆ ಸುಧಾ ಮೂರ್ತಿ


ಸಾಹಿತಿ ಬರಗೂರು ರಾಮಚಂದ್ರಪ್ಪ


ನಟ ರಮೇಶ್ ಅರವಿಂದ್ ಮತ್ತು ಅರ್ಚನಾ ದಂಪತಿ


ನಟ ರಾಘವೇಂದ್ರ ರಾಜಕುಮಾರ್ ಹಾಗೂ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜಕುಮಾರ್

ಪ್ರಮುಖ ಅಂಶಗಳು

- ಮನೆಯಲ್ಲಿ ಮತದಾನದ ಅವಕಾಶ ಇದ್ದರೂ ಅನೇಕ ಹಿರಿಜೀವಗಳು ಮತದಾನ ಕೇಂದ್ರಗಳಿಗೆ ಬಂದು ಹಕ್ಕು ಚಲಾಯಿಸಿದರು
- ಬೆಂಗಳೂರು ಉತ್ತರ ಕ್ಷೇತ್ರದಲ್ಲಿ ಬಿಜೆಪಿ, ಕಾಂಗ್ರೆಸ್‌ನ ಅಭ್ಯರ್ಥಿಗಳು ಸೇರಿ 21 ಸ್ಪರ್ಧಿಗಳು ಕಣದಲ್ಲಿದ್ದಾರೆ
- ಬ್ಯಾಟರಾಯನಪುರದ ಮೈಕೋಲೇಔಟ್ ಮತಗಟ್ಟೆಯಲ್ಲಿ ಮತದಾರರೊಬ್ಬರು ಆಮ್ಲಜನಕದ ಪೈಪನ್ನು ಜೋಡಿಸಿಕೊಂಡು ಕಾರಿನಲ್ಲಿ ಮತಗಟ್ಟೆಗೆ ಬಂದು ಮತಚಲಾಯಿಸಿದರು
- ಪೀಣ್ಯ ದಾಸರಹಳ್ಳಿ ಸಮೀಪದ ನೆಲಗದರನಹಳ್ಳಿಯ ಎನ್. ವಿಶ್ವ ಭಾರತಿ ವಿದ್ಯಾ ಕೇಂದ್ರದಲ್ಲಿ ನಿಸರ್ಗ ಶಾಲೆಯ ಮುಖ್ಯಸ್ಥೆ 90 ವರ್ಷದ ರುದ್ರಮ್ಮ ಅವರು ಅನಾರೋಗ್ಯದ ನಡುವೆ ಮಗನ ನೆರವಿನಿಂದ ಮತ ಚಲಾಯಿಸಿದರು
- ಶಾಂತಿನಗರದ ಮತಗಟ್ಟೆಯೊಂದರಲ್ಲಿ ಒಂದೇ ಕುಟುಂಬದ 23 ಮತದಾರರು ಮತ ಚಲಾವಣೆ ಮಾಡಿದರು

ಸೆಲ್ಫಿಗಳ ಸಂಭ್ರಮ

ನಗರ ಮತಗಟ್ಟೆಗಳಲ್ಲಿ ಸೆಲ್ಫಿಗಳ ಸಂಭ್ರಮ ಹೆಚ್ಚಾಗಿಯೇ ಇತ್ತು. ಮತದಾನ ಮಾಡಿ ಹೊರಬಂದ ಕೂಡಲೇ ಮತದಾರರು ಸೆಲ್ಫಿ ಕ್ಲಿಕ್ಕಿಸಿಕೊಳ್ಳುತ್ತಿದ್ದರು. ಹಲವರು ತಮ್ಮ ಚಿತ್ರಕ್ಕೆ ಸೀಮಿತವಾಗಿದ್ದರು, ಕೆಲವರು ತಮ್ಮ ಸಂಗಾತಿ, ಕುಟುಂಬದ ಸದಸ್ಯರೊಂದಿಗೆ ಸೆಲ್ಫಿ ತೆಗೆದುಕೊಂಡರು. ಮೊದಲಬಾರಿ ಮತದಾನ ಮಾಡಿದ ಯುವಕರ ಸಡಗರ ಹೆಚ್ಚಾಗಿತ್ತು. ಕುಟುಂಬದವರ ಜೊತೆಗೆ ಚಿತ್ರ ತೆಗೆದುಕೊಡಿ ಎಂದು ಮತಗಟ್ಟೆಯ ಸಿಬ್ಬಂದಿಗೆ ಮನವಿಗಳೂ ಬಂದವು. ಹಲವರು ಇದಕ್ಕೆ ಸಮ್ಮತಿಸಿ, ಚಿತ್ರ ತೆಗೆದುಕೊಟ್ಟರು.

ಪ್ರಾಣ ಉಳಿಸಿದ ವೈದ್ಯ

ಜೆ.ಪಿ ನಗರ 8ನೇ ಹಂತದ ಜಂಬೂಸವಾರಿ ದಿಣ್ಣೆಯಲ್ಲಿ ಮತದಾನ ಮಾಡಲು ಬಂದಿದ್ದ ಮಹಿಳೆಯೊಬ್ಬರು ಇದ್ದಕ್ಕಿದ್ದಂತೆ ಕುಸಿದರು. ತಕ್ಷಣ ಅಲ್ಲೇ ಇದ್ದ ಬೊಮ್ಮಸಂದ್ರದ ನಾರಾಯಣ ಆರೋಗ್ಯ ಕೇಂದ್ರದ ಮೂತ್ರಪಿಂಡ ತಜ್ಞ ಡಾ. ಗಣೇಶ್ ಶ್ರೀನಿವಾಸ್ ಪ್ರಸಾದ್, ಕುಸಿದ ಮಹಿಳೆಗೆ ಸಿಪಿಆರ್ ಮಾಡಿ, ಅವರ ಜೀವ ಉಳಿಸಿದರು. ಆ ಮಹಿಳೆಯನ್ನು ಆಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಕಳುಹಿಸಲಾಯಿತು.

ಶಿವಪುರ ಕಾಲೊನಿಯಲ್ಲಿ ಬಹಿಷ್ಕಾರದ ಬೆದರಿಕೆ • ನೆಲಗದರಹಳ್ಳಿಯಲ್ಲಿ ಕೈಕೊಟ್ಟ ವಿವಿಪ್ಯಾಟ್

ಮತದಾನದ ನಡುವೆ ಕಾಣಿಸಿದ 'ಚೊಂಬು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಿ.ದಾಸರಹಳ್ಳಿ ಸಮೀಪದ ಶಿವಪುರದಲ್ಲಿ ಮತದಾನ ಬಹಿಷ್ಕಾರದ ಬೆದರಿಕೆ, ನೆಲಗದರಹಳ್ಳಿಯಲ್ಲಿ ಕೈಕೊಟ್ಟ ವಿವಿಪ್ಯಾಟ್... ಇಂಥ ಬೆರಳೆಣಿಕೆಯ ತೊಂದರೆಗಳನ್ನು ಹೊರತುಪಡಿಸಿ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಲ್ಲಿ ಯಾವುದೇ ಗೊಂದಲ, ಗಲಾಟೆಗಳಿಲ್ಲದೇ ಮತದಾನ ನಡೆಯಿತು. ಇದರ ನಡುವೆ ಮಂಜುನಾಥ ನಗರದಲ್ಲಿ ಯುವಕಾಂಗ್ರೆಸ್‌ನ ನಾಯಕರು 'ಚೊಂಬು', 'ಸಿಲಿಂಡರ್'ಗಳೊಂದಿಗೆ ಬಂದು ಗಮನ ಸೆಳೆದರು.

ಟಿ.ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಶಿವಪುರ ಕಾಲೊನಿಯಲ್ಲಿ ರಸ್ತೆ ಇಲ್ಲ, ಬೀದಿ ದೀಪ ಇದ್ದರೂ ಉರಿಯುತ್ತಿಲ್ಲ. ಯಾವುದೇ ಮೂಲಸೌಕರ್ಯ ಇಲ್ಲ. ಸಮಸ್ಯೆ ಸರಿಯಾಗುವವರೆಗೆ ಮತದಾನ ಮಾಡುವುದಿಲ್ಲ ಎಂದು ಕಾಲೊನಿಯ ನಿವಾಸಿಗಳು ಪಟ್ಟು ಹಿಡಿದರು. 300 ಮತದಾರರು ಈ ಕಾಲೊನಿಯಲ್ಲಿದ್ದು, ಅಧಿಕಾರಿಗಳು ಬಂದು ಮನವೊಲಿಸಲು ಪ್ರಯತ್ನಿಸಿದರು. ಸಂಜೆವರೆಗೆ ಮನಸ್ಸು ಬದಲಾಯಿಸದಿದ್ದರೂ ಕೊನೇ ಕ್ಷಣದಲ್ಲಿ ಬಂದು ಹಲವರು ಮತ ಚಲಾಯಿಸಿದರು.

ನೆಲಗದರಹಳ್ಳಿಯಲ್ಲಿ ವಿವಿಪ್ಯಾಟ್ ಕೈಕೊಟ್ಟಿದ್ದರಿಂದ ಸುಮಾರು 2 ಗಂಟೆ ಮತದಾನ ಸ್ಥಗಿತಗೊಂಡಿತ್ತು. ಕಾದು ಕಾದು ಸುಸ್ತಾದ ಹಲವು ಮತದಾರರು ವಾಪಸ್ಸಾದರು. ತಂತ್ರಜ್ಞರು ಬಂದು ವಿವಿಪ್ಯಾಟ್ ಸರಿಪಡಿಸಿದರು. ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಕೂಡಾ ಎರಡು ಗಂಟೆ ಕಾದು ಮತ ಚಲಾಯಿಸಿದರು.

ಚೊಂಬು ಪ್ರದರ್ಶನ: ಮಂಜುನಾಥ್ ನಗರದ ಗೌತಮ್ ಕಾಲೇಜಿನಲ್ಲಿ ಮತ ಹಾಕಲು ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ತಲೆಯ ಮೇಲೆ ಖಾಲಿ ಗ್ಯಾಸ್ ಸಿಲಿಂಡರ್ ಹೊತ್ತು ಬಂದಿದ್ದರು. ಕಾಂಗ್ರೆಸ್ ಕಾರ್ಯಕರ್ತರು ಚೊಂಬು ಹಿಡಿದು ಅವರಿಗೆ ಸಾಥ್ ನೀಡಿದರು.

ಎಲ್ಲ ಚುನಾವಣೆಯಲ್ಲಿ ಮತ: ಮಲ್ಲೇಶ್ವರದ 12ನೇ ಅಡ್ಡರಸ್ತೆಯಲ್ಲಿರುವ ನಿರ್ಮಲರಾಣಿ ಪ್ರೌಢಶಾಲೆಯಲ್ಲಿ ಮತ ಚಲಾಯಿಸಿದ 93 ವರ್ಷದ ಕಲಾವತಿ ಅವರು, 'ಸ್ವಾತಂತ್ರ್ಯ ಬಂದಲ್ಲಿಂದ ಇಲ್ಲಿವರೆಗಿನ ಎಲ್ಲ ಚುನಾವಣೆಯಲ್ಲಿ ಮತದಾನ ಮಾಡಿದ್ದೇನೆ' ಎಂದು ಖುಷಿಪಟ್ಟರು. 'ಯುವಮತದಾರರು ಚುನಾವಣೆ ಬಗ್ಗೆ ಅಸಡ್ಡೆ ತಾಳಬಾರದು. ಮನೆಯಲ್ಲಿ ಹಿರಿಯರು ಅವರಿಗೆ ತಿಳಿ ಹೇಳಬೇಕು' ಎಂದು ಸಲಹೆ ನೀಡಿದರು.

ಮೊಮ್ಮಗಳಿಗಿಲ್ಲ ಮತ: '55 ವರ್ಷಗಳಿಂದ ಯಾವ ಚುನಾವಣೆಯನ್ನೂ ತಪ್ಪಿಸದೇ ಮತ ಚಲಾಯಿಸುತ್ತಿದ್ದೇನೆ. ಆದರೆ, ನನ್ನ ಎರಡನೇ ಮೊಮ್ಮಗಳು ಐಶ್ವರ್ಯಾಗೆ 21 ವರ್ಷವಾದರೂ ಮತದಾರರ ಪಟ್ಟಿಗೆ ಅವಳ ಹೆಸರು ಸೇರಿಸಿಲ್ಲ. ಎರಡು ವರ್ಷಗಳಿಂದ ಹೆಸರು ಸೇರಿಸಲು ಪ್ರಯತ್ನಿಸುತ್ತಿದ್ದರೂ ಅಧಿಕಾರಿಗಳು ಸೇರಿಸುತ್ತಿಲ್ಲ' ಎಂದು ಸುಬ್ರಹ್ಮಣ್ಯನಗರದ ಹೊನ್ನಮ್ಮ ಬೇಸರ ವ್ಯಕ್ತಪಡಿಸಿದರು.

ಸಿಬ್ಬಂದಿಗೆ ಆಹಾರ ತಯಾರಿ: ಮಲ್ಲೇಶ್ವರದ 18ನೇ ಅಡ್ಡರಸ್ತೆಯಲ್ಲಿರುವ ಸರ್ಕಾರಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಹಲವರು ಉಪಾಹಾರದ ತಯಾರಿಯಲ್ಲಿ ತೊಡಗಿದ್ದರು. 'ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ 211 ಮತಗಟ್ಟೆಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ಇಲ್ಲಿಂದಲೇ ಬೆಳಗಿನ ಉಪಾಹಾರ, ಊಟ ಕಳುಹಿಸಲಾಗುತ್ತದೆ. ಗುರುವಾರ 1,700 ಮಂದಿಗೆ ಹೆಸರುಬೇಳೆ ಪಾಯಸ, ಮಾವಿನಕಾಯಿ ಚಿತ್ರಾನ್ನ, ಅನ್ನ, ಸಾಂಬಾರು, ಹಪ್ಪಳ, ರಸಂ, ಮಜ್ಜಿಗೆ ನೀಡಲಾಗಿತ್ತು. ಇವತ್ತು ಬೆಳಿಗ್ಗೆ ಚೌಚೌಬಾತ್ ಕಳಿಸಿದೆ. ಮಧ್ಯಾಹ್ನಕ್ಕೆ ಪಲಾವ್ ಮತ್ತು ಮೈಸೂರುಪಾಕ್‌ನ ಪ್ಯಾಕೆಟ್ ಕಳುಹಿಸಿದೆ' ಎಂದು ಮಲ್ಲೇಶ್ವರ ಕಂದಾಯ ನಿರೀಕ್ಷಕ ನಂಜಪ್ಪ ಮಾಹಿತಿ ನೀಡಿದರು.

'ಮತದಾನ ಶಾಂತಿಯುತವಾಗಿ ನಡೆಯುತ್ತಿದೆ. ಆದರೆ, ಮತದಾರರಿಗೆ ಮೊಬೈಲ್ ಹೊರಗಿಟ್ಟು ಹೋಗಿ ಎಂದು ಹೇಳಿ ಹೇಳಿ ಸಾಕಾಯಿತು. ಈ ಬಗ್ಗೆ ಮೊದಲೇ ಜನರಲ್ಲಿ ಇನ್ನಷ್ಟು ಜಾಗೃತಿ ಮೂಡಿಸಬೇಕಿತ್ತು' ಎಂದು ಈಸ್ಟ್‌ವೆಸ್ಟ್ ಪಬ್ಲಿಕ್ ಸ್ಕೂಲ್‌ನಲ್ಲಿ ಕರ್ತವ್ಯ ನಿರ್ವಹಿಸಿದ ಭದ್ರತಾ ಸಿಬ್ಬಂದಿ ತಿಳಿಸಿದರು.


ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ತಲೆ ಮೇಲೆ ಸಿಲಿಂಡರ್ ಹೊತ್ತುಕೊಂಡು, ಕಾಂಗ್ರೆಸ್ ಮುಖಂಡರು ಕೈಯಲ್ಲಿ ಚೊಂಬು ಹಿಡಿದುಕೊಂಡು ನಗರದ ಮಂಜುನಾಥ ನಗರದ ಗೌತಮ್ ಕಾಲೇಜಿನಲ್ಲಿ ಮತ ಹಾಕಲು ಮತಗಟ್ಟೆಗೆ ಬಂದರು ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್


ಶ್ರೀರಾಂಪುರದಲ್ಲಿ ಮತ ಚಲಾಯಿಸಲು ದ್ವಿಚಕ್ರವಾಹನದಲ್ಲಿ ಬಾನು (60) ಅವರನ್ನು ಕರೆದುಕೊಂಡು ಬಂದಿದ್ದ ಅವರ ಮೊಮ್ಮಗ ವಹೀದ್ ಎಂ.ವಿ., ವ್ಹೀಲ್‌ಚೇರ್‌ನಲ್ಲಿ ಕೂರಿಸಲು ಎತ್ತಿಕೊಂಡಿದ್ದ ದೃಶ್ಯ


ನಟಿ ತಾರಾ ಅನುರಾಧಾ ಮತ್ತು ವೇಣು ದಂಪತಿ


ವಿಜಯನಗರದ ಸರ್ವೋದಯ ವಿದ್ಯಾಲಯದಲ್ಲಿ ಪ್ಯಾರಾ ಈಜುಪಟು ವಿಶ್ವಾಸ್ ಕೆ.ಎಸ್. ಮತದಾನ ಮಾಡಿದರು

ಕುಟುಂಬದೊಂದಿಗೆ ಚಿತ್ರ, ತಂದೆ–ತಾಯಿ ಆಶೀರ್ವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ ಪ್ರತಿಷ್ಠೆಯ ಕಣವಾಗಿದ್ದು, ಬಿಜೆಪಿ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳು ಮತದಾನ ಮಾಡುವ ಸಂದರ್ಭದಲ್ಲೂ ವಿಭಿನ್ನತೆ ತೋರಿದರು.

ಬಿಜೆಪಿ ಸಂಸದ ತೇಜಸ್ವಿ ಸೂರ್ಯ ತಮ್ಮ ತಂದೆ–ತಾಯಿ, ಚಿಕ್ಕಪ್ಪ ಶಾಸಕ ರವಿಸುಬ್ರಮಣ್ಯ ಹಾಗೂ ಕುಟುಂಬದವರೊಂದಿಗೆ ಒಟ್ಟಾಗಿ ಬಂದು ಗಿರಿನಗರದಲ್ಲಿ ಮತದಾನ ಮಾಡಿದರು. ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾರೆಡ್ಡಿ ಅವರು ತಂದೆ ಸಚಿವ ರಾಮಲಿಂಗಾರೆಡ್ಡಿ ಹಾಗೂ ತಾಯಿ ಅವರಿಗೆ ಮತಗಟ್ಟೆ ಸಮೀಪವೇ ಕಾಲಿಗೆ ನಮಸ್ಕರಿಸಿ, ಆಶೀರ್ವಾದ ಪಡೆದು ಮತ ಚಲಾಯಿಸಿದರು.

ಗಾಂಧಿಬಜಾರ್‌ನ ಬಾಲಕಿಯರ ಸರ್ಕಾರಿ ಪ್ರಾಥಮಿಕ ಶಾಲೆಯ ಮತಗಟ್ಟೆಯಲ್ಲಿ ಚೇತನಾ, ಭುವಿ, ಕೃಷಿ, ಜಿಗ್ನೇಶ್, ಜಿಗ್ನಾ, ರಿದ್ಧಿ, ವರ್ಷಾ ಹಾಗೂ ಲಕ್ಷ್ಮಿ ಅವರು ಒಟ್ಟಾಗಿ ಬಂದು ಮೊದಲ ಬಾರಿಗೆ ಮತದಾನದ ಹಕ್ಕು ಚಲಾಯಿಸಿದರು. ಬಸವನಗುಡಿಯ ಉತ್ತರಾದಿಮಠದ ಸಂಸ್ಕೃತ ವಿದ್ಯಾರ್ಥಿಗಳು ಕೂಡ ಮತ ಚಲಾಯಿಸಿ ಶಾಯಿ ಹಚ್ಚಿದ ಬೆರಳು ತೋರಿಸಿ ಚಿತ್ರ ತೆಗೆದುಕೊಂಡು ಸಂಭ್ರಮಿಸಿದರು.

ನೆರಳು ಹುಡುಕಿ ಹೊರಟ ಕಾರ್ಯಕರ್ತರು: ಮತಗಟ್ಟೆಗಳ 100 ಮೀಟರ್ ದೂರದಲ್ಲಿ ಮತದಾರರಿಗೆ ಮತಪಟ್ಟಿಯಲ್ಲಿ ಅವರ ಹೆಸರು ಹುಡುಕಿ, ಅವರ ಕ್ರಮ ಸಂಖ್ಯೆ, ಕೊಠಡಿ ಸಂಖ್ಯೆ ಬರೆದುಕೊಡುವ ಪಕ್ಷಗಳ ಕಾರ್ಯಕರ್ತರು ಬಿಸಿಲ ಝಳಕ್ಕೆ ಪರಿತಪಿಸಿದರು. ಬೆಳಿಗ್ಗೆ 6ರಿಂದಲೇ ಪಕ್ಷಗಳ ಕಾರ್ಯಕರ್ತರು ಟೇಬಲ್, ಕುರ್ಚಿ ಹಾಕಿಕೊಂಡು ಕುಳಿತು, ಪಟ್ಟಿ ಹಿಡಿದು ಚೀಟಿ ಬರೆಯುತ್ತಿದ್ದರು. ಸಮಯ ಕಳೆದಂತೆಯೇ ಬಿಸಿಲು ಹೆಚ್ಚಾಗಿ ನೆರಳನ್ನು ಹುಡುಕುತ್ತಾ ಹೊರಟರು.

ಮಧ್ಯಾಹ್ನದ ವೇಳೆಗೆ ಬಿಸಿಲಿನ ತಾಪ ಹೆಚ್ಚಾಗಿದ್ದರಿಂದ ಕಾರ್ಯಕರ್ತರು ಕಟ್ಟಡಗಳ ನೆರಳು, ಯಾವುದಾದರೂ ಅಂಗಡಿಯ ಆವರಣ ಸೇರಿದಂತೆ ಇತರೆ ಪ್ರದೇಶಗಳನ್ನು ಹುಡುಕಿ ಕುರ್ಚಿ–ಟೇಬಲ್‌ಗಳನ್ನು ಎತ್ತಿಕೊಂಡು ಸಾಗಿದರು. ಹಲವು ಕಡೆ, ಕಟ್ಟಡಗಳ ಒಳಭಾಗ ಹಾಗೂ ರಸ್ತೆಯಿಂದ ಸಾಕಷ್ಟು ದೂರ ಕುಳಿತಿದ್ದರಿಂದ, ಇವರು ಮತದಾರರಿಗೆ ಕಾಣದಂತಾಗಿತ್ತು.


ಸೌಮ್ಯಾರೆಡ್ಡಿ ಅವರು ಮತದಾನಕ್ಕೆ ಮುನ್ನ ಲಕ್ಕಸಂದ್ರದ ಮೇರಿ ಕಮ್ಯುಕುಲೇಟ್ ಕಾನ್ವೆಂಟ್‌ನಲ್ಲಿನ ಮತಗಟ್ಟೆ ಬಳಿ ತಂದೆ–ತಾಯಿಯ ಆಶೀರ್ವಾದ ಪಡೆದರು


ಮತದಾನದ ನಂತರ ತೇಜಸ್ವಿ ಸೂರ್ಯ ತಮ್ಮ ಕುಟುಂಬದೊಂದಿಗೆ ಚಿತ್ರಕ್ಕೆ ಪೋಸು ನೀಡಿದ್ದು ಹೀಗೆ

ಆಂಬುಲೆನ್ಸ್ ಮೂಲಕ ಮತಗಟ್ಟೆಗೆ ಕರೆದೊಯ್ಯಲು ಹಸಿರು ಕಾರಿಡಾರ್ ವ್ಯವಸ್ಥೆ

ಒಳ ರೋಗಿಗಳಿಂದಲೂ ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಯಾನ್ಸರ್ ಕಾಯಿಲೆಗೆ ಚಿಕಿತ್ಸೆ ಪಡೆಯುತ್ತಿರುವವರು, ಮೂತ್ರಪಿಂಡ ವೈಫಲ್ಯ ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳಿಂದ ಆಸ್ಪತ್ರೆಗೆ ದಾಖಲಾದ ರೋಗಿಗಳೂ ನಗರದಲ್ಲಿ ಶುಕ್ರವಾರ ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡಿ, ಸಂತಸ ವ್ಯಕ್ತಪಡಿಸಿದರು.

ಇಲ್ಲಿನ ಮಣಿಪಾಲ್ ಆಸ್ಪತ್ರೆಯು ಬಿಬಿಎಂಪಿ ಸಹಯೋಗದಲ್ಲಿ ಒಳರೋಗಿಗಳಿಗೆ ಮತದಾನಕ್ಕೆ ಅವಕಾಶ ಕಲ್ಪಿಸಿತ್ತು. ಆಸ್ಪತ್ರೆಯ ನೆರವಿನಿಂದ 50 ಒಳರೋಗಿಗಳು ಮತ ಚಲಾಯಿಸಿದರು. ಅವರನ್ನು ವಿವಿಧ ಮತಗಟ್ಟೆಗಳಿಗೆ ಆಂಬುಲೆನ್ಸ್‌ಗಳ ಮೂಲಕ ಕರೆದೊಯ್ಯಲು ಹಸಿರು ಕಾರಿಡಾರ್ (ಗ್ರೀನ್ ಕಾರಿಡಾರ್) ವ್ಯವಸ್ಥೆ ಮಾಡಲಾಗಿತ್ತು. ರೋಗಿಗಳೊಂದಿಗೆ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಯೂ ಇದ್ದರು.

ಕರುಳು ಕ್ಯಾನ್ಸರ್‌ನಿಂದ ಬದುಕುಳಿದವರು, ಬದಲಿ ಮಂಡಿ ಕೀಲು ಜೋಡಣೆ ಶಸ್ತ್ರಚಿಕಿತ್ಸೆಗೆ ಒಳಗಾದವರು, ಡಯಾಲಿಸಿಸ್ ಪಡೆಯುತ್ತಿರುವವರು, ತೀವ್ರ ರಕ್ತದೊತ್ತಡ ಸಮಸ್ಯೆ ಎದುರಿಸುತ್ತಿರುವವರು, ಮೂತ್ರನಾಳ ಸೋಂಕಿನ ಚಿಕಿತ್ಸೆಗೆ ದಾಖಲಾದವರು, ಮೂತ್ರಪಿಂಡ ವೈಫಲ್ಯಕ್ಕೆ ಒಳಗಾದವರು, ರಸ್ತೆ ಅಪಘಾತದಿಂದ ಗಾಯಕ್ಕೆ ಒಳಗಾದವರೂ ವೈದ್ಯಕೀಯ ಸಿಬ್ಬಂದಿ ಬೆಂಬಲದಿಂದ ಮತ ಚಲಾಯಿಸಿದರು. ಜಯನಗರದ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ 78 ವರ್ಷದ ಮಹಿಳೆಯೊಬ್ಬರನ್ನು ವೈದ್ಯಕೀಯ ಆಮ್ಲಜನಕದ ನೆರವಿನೊಂದಿಗೆ ಮತಗಟ್ಟೆಗೆ ಕರೆತರಲಾಗಿತ್ತು.

ಕೇಂಬ್ರಿಡ್ಜ್ ಲೇಔಟ್, ಎಇಸಿಎಸ್ ಲೇಔಟ್, ಆರ್‌ಟಿ ನಗರ, ಎಚ್‌ಎಸ್‌ಆರ್ 6ನೇ ವಲಯ, ಹಳೆ ಬೈಯಪ್ಪನಹಳ್ಳಿ, ಸಿದ್ಧಗಂಗಾ ಪಬ್ಲಿಕ್ ಸ್ಕೂಲ್, ಬಿಪಿ ಇಂಡಿಯನ್ ಹೈಸ್ಕೂಲ್, ಹಂಪಿನಗರ, ಮಹಾಲಕ್ಷ್ಮೀಪುರ, ಸಂಜಯನಗರ, ದಾಸರಹಳ್ಳಿ, ಬಿನ್ನಿಮಿಲ್ ರಸ್ತೆ, ಬಾಣಸವಾಡಿ, ಹೂಡಿ, ಅಂಬೇಡ್ಕರ್ ನಗರ, ಮಹದೇವಪುರ, ಜೆ.ಪಿ.ನಗರ, ಜಯನಗರ, ಚನ್ನಸಂದ್ರ, ಮತ್ತು ಹೊಸಕೋಟೆ ಸೇರಿ ವಿವಿಧ ಪ್ರದೇಶದಲ್ಲಿರುವ ಮತಗಟ್ಟೆಗಳಿಗೆ ರೋಗಿಗಳನ್ನು ಕರೆದೊಯ್ಯಲಾಯಿತು.

ಮಣಿಪಾಲ್ ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕಾರ್ತಿಕ್ ರಾಜಗೋಪಾಲ್, 'ಅನೇಕ ರೋಗಿಗಳು ಮತ ಚಲಾಯಿಸಲು ಆಸಕ್ತಿ ಹೊಂದಿದ್ದರು. ವೈದ್ಯಕೀಯ ತಪಾಸಣೆ ನಡೆಸಿ, ಚುನಾವಣೆ ಆಯೋಗ ಹಾಗೂ ಬಿಬಿಎಂಪಿ ನೆರವಿನಿಂದ ಮತದಾನಕ್ಕೆ ಅವಕಾಶ ಮಾಡಿಕೊಡಲಾಯಿತು' ಎಂದರು. ಸ್ಪರ್ಶ್ ಆಸ್ಪತ್ರೆಯೂ ಒಳರೋಗಿಗಳಿಗೆ ಮತದಾನಕ್ಕೆ ಅವಕಾಶ ಕಲ್ಪಿಸಿಕೊಟ್ಟಿತ್ತು. ಗಾಲಿ ಕುರ್ಚಿ ಹಾಗೂ ಆಂಬುಲೆನ್ಸ್ ಸೇರಿ ಅಗತ್ಯ ವೈದ್ಯಕೀಯ ನೆರವನ್ನು ಕಲ್ಪಿಸಿತ್ತು.


ಸ್ಪರ್ಶ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವ್ಯಕ್ತಿಯೊಬ್ಬರು ಆಂಬುಲೆನ್ಸ್‌ನಲ್ಲಿ ಬಂದು ಮತ ಚಲಾಯಿಸಿದರು


ಹಿರಿಯ ನಾಗರಿಕರ ಸಹಾಯಕ್ಕೆ ಕೊಡಲಾಗಿದ್ದ ವ್ಹೀಲ್ ಚೇರ್ ಬಳಕೆಗೆ ಯೋಗ್ಯವಿಲ್ಲದೆ ಇರುವ ದೃಶ್ಯ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಭುವನೇಶ್ವರಿನಗರ, ಬ್ಯಾಟರಾಯನಪುರದ ಕೆನೆತ್ ಜಾರ್ಜ್ ಶಾಲೆಯಲ್ಲಿ ಕಂಡು ಬಂತು
–ಪ್ರಜಾವಾಣಿ ಚಿತ್ರ

ಗುಜರಿ ವ್ಹೀಲ್‌ಚೇರ್

ವಯಸ್ಸಾದವರು, ನಡೆಯಲಾರದವರನ್ನು ಗೇಟ್ ಬಳಿಯಿಂದ ಮತಗಟ್ಟೆಗೆ ಕರೆದುಕೊಂಡು ಹೋಗಲು ಎಲ್ಲ ಮತಗಟ್ಟೆಗಳಲ್ಲೂ ವ್ಹೀಲ್‌ಚೇರ್ ಇಡಲಾಗಿತ್ತು. ಬ್ಯಾಟರಾಯನಪುರದ ಭುವನೇಶ್ವರಿ ನಗರ ಕೆನೆತ್ ಜಾರ್ಜ್ ಶಾಲೆ ಸೇರಿದಂತೆ ಕೆಲವು ಮತಗಟ್ಟೆಗಳಲ್ಲಿ ಕುಳಿತುಕೊಳ್ಳಲು ಸಾಧ್ಯವಿಲ್ಲದಂಥ ಗುಜರಿ ವ್ಹೀಲ್‌ಚೇರ್‌ಗಳನ್ನು ಇಟ್ಟಿರುವುದು ಜನರ ಆಕ್ರೋಶಕ್ಕೆ ಕಾರಣವಾಯಿತು.

ನಿನ್ನ ನೀನು ಅರಿತರೆ...



ಪ್ರೀತಿ. ಎಮ್. ಸಂಗಮ್

“ಮಹಿಳೆ” ಎನ್ನುವ ಶಬ್ದದಲ್ಲಿ “ಮಹಿ” ಎಂದರೆ ಭೂಮಿ. ಭೂಮಿಗಿರುವಷ್ಟೇ ಅಪಾರ ತಾಳ್ಮೆ, ಭೂಮಿಗಿರುವಷ್ಟೇ ಕ್ಷಮಾ ಗುಣ, ಭೂಮಿಗಿರುವಷ್ಟೇ ಸ್ವೀಕೃತ ಗುಣ ಹೆಣ್ಣಿನಲ್ಲಿದೆ. ಅದಕ್ಕೆ ಅವಳನ್ನು ಮಹಿಳೆ ಎಂದು ಕರೆದದ್ದು.

ಇಂಗ್ಲಿಷ್‌ನಲ್ಲಿ ಮಹಿಳೆಗೆ Woman ಎನ್ನುತ್ತಾರೆ. Wo man ಎಂದರೆ Without Man. One who is capable of surviving without man is called Woman. ಪುರುಷನ ಸಹಾಯವಿಲ್ಲದೆಯೂ ಬದುಕಬಲ್ಲವಳಿಗೆ ಮಹಿಳೆ ಎನ್ನುತ್ತೇವೆ.

> ನಮ್ಮನ್ನು ನಾವು ಅರಿಯದೆಯೇ, ಉಳಿದವರ ಹೀಗಳಿಕೆಯಲ್ಲಿ ಕುಗ್ಗಿ, ಹೊಗಳಿಕೆಯಲ್ಲಿ ಹಿಗ್ಗಿ ನಮ್ಮತನವನ್ನು ಕಳೆದುಕೊಳ್ಳುತ್ತೇವೆ. ಇನ್ನೊಬ್ಬರ ಅಗತ್ಯ, ಅನುಕೂಲಕ್ಕಾಗಿ ನಮ್ಮನ್ನು ನಾವು ಪರಿವರ್ತಿಸಿಕೊಳ್ಳುವ ಮಹಿಳೆಯರು ತಮ್ಮನ್ನು ಅರಿತರೆ, ಬದುಕು ಸಂಭ್ರಮಿಸಬಹುದು

ಮನೆಯ ಹೊಸ್ತಿಲನ್ನೂ ಕೂಡ ದಾಟದ ಕಾಲದಲ್ಲಿ ಮಹಿಳೆಯನ್ನು ಈ ಸಮಾಜ ಅಬಲೆ ಎಂದು ಕರೆದಿದ್ದರೂ ಆಗಲೂ ಅವಳು ದುರ್ಬಲ, ಹಾಗೂ ಅಸಹಾಯಕ ಮಹಿಳೆ ಎಂದು ಅರ್ಥೈಸುವುದು ಖಂಡಿತಾ ತಪ್ಪಾಗಿತ್ತು. ಅವಳಿಗೆ ಅಬಲೆ ಎನ್ನುವದಕ್ಕಿಂತ ಬಲೆ ಎನ್ನುವುದು ಹೆಚ್ಚು ಸೂಕ್ತ. ಏನು ಈ ಬಲೆ? ಆಗಲೂ, ಈಗಲೂ , ಯಾವಾಗಲೂ ಅವಳು ತನ್ನವರಿಗಾಗಿ ತನ್ನ ಸುತ್ತಲೂ ಪ್ರೀತಿಯ ಬಲೆಯನ್ನು , ಅಂತಃಕರಣದ ಬಲೆಯನ್ನು, ತಾಳ್ಮೆಯ ಬಲೆಯನ್ನು, ಜವಾಬ್ದಾರಿಯ ಬಲೆಯನ್ನು ನೇಯ್ದು ಕೊಂಡು ಸ್ವತಃ ತಾನೇ ಆ ಬಲೆಯಲ್ಲಿ ಖುಷಿಯಿಂದ ಇರುವಳು.

ದುರ್ಬಲ, ಹಾಗೂ ಅಸಹಾಯಕ ಎನ್ನುವ ಅರ್ಥದಲ್ಲಿ ಸಮಾಜದಿಂದ 'ಅಬಲೆ' ಎಂದೆನಿಸಿಕೊಂಡಿದ್ದ ಕಾಲದಲ್ಲೂ ಪತಿಯನ್ನು ಕಳೆದುಕೊಂಡ ಮಹಿಳೆ ತನ್ನ ಜೀವನದಲ್ಲಿ ಮತ್ತೊಬ್ಬ ಪುರುಷನಿಗೆ ಅವಕಾಶ ಕೊಡದೇ ಒಬ್ಬಳೇ ತನ್ನ ಮಕ್ಕಳನ್ನು ಸಾಕಿ ಸಲುಹಿದ್ದಾಳೆ, ಅವರ ಜೀವನವನ್ನು ಸಮರ್ಥವಾಗಿ ರೂಪಿಸುವಲ್ಲಿ ಯಶಸ್ವಿಯಾಗಿದ್ದಾಳೆ. ಹಾಗಾಗಿ ಅವಳು ಆಗಲೂ ದುರ್ಬಲ, ಹಾಗೂ ಅಸಹಾಯಕ ಮಹಿಳೆ ಎನ್ನುವ ಅರ್ಥವನ್ನು ಸುಳ್ಳಾಗಿಸಿದ್ದಳು.

ಈಗಂತೂ ದೂರ ದೂರಕ್ಕೆ ನೋಡಿದರೂ, ಆಳ ಆಳಕ್ಕೆ ನೋಡಿದರೂ, ವಿವಿಧ ಕೋನದಿಂದ ನೋಡಿದರೂ ಮಹಿಳೆ ಎಲ್ಲ ರೀತಿಯಿಂದಲೂ, ಎಲ್ಲ ಅರ್ಥದಲ್ಲೂ ,ಎಲ್ಲರ ಅರ್ಥದಲ್ಲೂ ಅವಳು ಸಬಲೆ. ಮಹಿಳೆ ಅದೆಷ್ಟು ಸಬಲೆ ಎಂದು ನಿರೂಪಿಸಲು ಅನೇಕ ಉದಾಹರಣೆಗಳಿವೆ.

ಮಹಿಳೆಯು ತನ್ನ ಕುಟುಂಬ ಸದಸ್ಯರ ಮೇಲೆ ಅಗಾಧವಾದ ಅಕ್ಕರೆ, ಸಧೃಡವಾದ ಸ್ಥೈರಣೆ, ತಡೆಯಿಲ್ಲದೆ ತ್ಯಾಗವನ್ನು ಮೊಗೆ ಮೊಗೆದು ಧಾರೆಯೆರೆದು ತನ್ನವರ ಮನದ ಪುಟದಲ್ಲಿ ಕೇವಲ ತನ್ನ ನೆನಪುಗಳನ್ನು ಬರೆದು ಹೋಗುವುದಷ್ಟೇ ಅಲ್ಲ ಅವಳು ಮನಸ್ಸು ಮಾಡಿದರೆ ಅಮಿತವಾದದ್ದನ್ನು ಸಾಧಿಸಿ ಇತಿಹಾಸವನ್ನು ಬರೆಯಲು ಕೂಡ ಅಷ್ಟೇ ಸಮರ್ಥವಾಗಿದ್ದಾಳೆ.

ಅದಕ್ಕೆ ಅಲ್ಲವೇ .., ಅವಳು ಸೌಟು ಹಿಡಿಯುವ ಕೈಯಿಂದ ಅಷ್ಟೇ ಸಮರ್ಥವಾಗಿ ದೇಶದ ಚುಕ್ಕಾಣಿ ಹಿಡಿದು ಸೈ ಎನಿಸಿಕೊಂಡು ಇತಿಹಾಸ ಬರೆದಳು. ಅವಳು ಸದಾ ಪುರುಷ ಪ್ರಧಾನ ಸಮಾಜದ ಬ್ಯಾಟಿಂಗ್ ಗೆ ಗುರಿಯಾಗುತ್ತಿದ್ದರೂ ಬ್ಯಾಟನ್ನು ಎತ್ತಿ ಕ್ರಿಕೆಟ್ ಆಟದಲ್ಲೇ ಇತಿಹಾಸ ಬರೆದಳು.

ಅವಳು ಹಕ್ಕಿಯಂತೆ ಹಾರಬೇಕೆಂದುಕೊಂಡಾಗಲೆಲ್ಲ ರೆಕ್ಕೆ ಕತ್ತರಿಸಿದರೂ ಲೋಹದ ಹಕ್ಕಿಯನ್ನೇ ಹಾರಿಸಿ ಇತಿಹಾಸ ಬರೆದಳು.

ಪಿಎಸ್ ಹುದ್ದೆಯನ್ನಲಂಕರಿಸಿ ಎಲ್ಲ ಕುಖ್ಯಾತಿಗಳಿಗೆ ಕಾರಣವಾಗಿದ್ದ ಒಂದು ಜೈಲಿನಲ್ಲಿಯೇ ಸುಧಾರಣೆ ತಂದು ಕೈದಿಗಳಿಗೆಲ್ಲ ಸಿಂಹಸ್ವಪ್ನವಾಗಿ ಇತಿಹಾಸ ಬರೆದಳು.

ಅವಳು ತನ್ನ ಪತಿ ದುಡಿದು ತರುತ್ತಿದ್ದ ಒಂದೊಂದು ಪೈಸೆಯನ್ನೂ ಅಡುಗೆ ಮನೆಯ ಡಬ್ಬಿಯಲ್ಲಿ ಕೂಡಿಸಿಟ್ಟು ಸಂಸಾರ ಬಂಡಿಯನ್ನು ಸುಸೂತ್ರವಾಗಿ ನಡೆಸಲು ಸಹಾಯ ಮಾಡಿದರೂ ತನ್ನ ಆಸೆ ಆಕಾಂಕ್ಷೆಗಳನ್ನು ಅದೇ ಡಬ್ಬಿಯಲ್ಲಿ ಭದ್ರವಾಗಿ ಮುಚ್ಚಿಡುತ್ತಿದ್ದವಳು ಆರ್ಥಿಕವಾಗಿ ಸಬಲವಾಗಿ ಮುಂದೆ ಮಹಿಳಾ ಉದ್ಯಮಿಯಾಗಿ ಕೂಡ ಇತಿಹಾಸ ಬರೆದಳು.


ಅವಳು ಬೇಯಿಸಿ ಹಾಕಲು ಮಾತ್ರ ಸೀಮಿತ ಅವಳಿಗೇಕೆ ಬೇಕು ಅಕ್ಷರ ಜ್ಞಾನ ಎಂದು ಅಕ್ಷರ ಕಲಿಕೆಯಿಂದ ವಂಚಿತಳಾದವಳು ಅದೇ ಸೌಟು ಹಿಡಿಯುವ ಕೈಯಿಂದಲೇ ಲೇಖನಿ ಹಿಡಿದು ಅಕ್ಷರ ಸಾಮ್ರಾಜ್ಯದ ಅನಭಿಷಕ್ತ ರಾಣಿಯಾಗಿ ಮೆರೆದು ಇತಿಹಾಸ ಬರೆದಳು.

ಅವಳು ಪರ್ವತದಷ್ಟು ಬಂಧಗಳಿಂದ ಸುತ್ತುವರಿದಿದ್ದರೂ ಆ ಎಲ್ಲ ಬಂಧಗಳಿಂದ ಬಿಡಿಸಿಕೊಂಡು ಪರ್ವತಾರೋಹಿಯಾಗಿ ಇತಿಹಾಸ ಬರೆದಳು.

ಅವಳು ಅಂದು ವ್ಯವಹಾರ ಜ್ಞಾನವನ್ನು ಅರಿಯದ ಅಜ್ಞಾನಿ ಆಗಿದ್ದವಳು ಮುಂದೆ ವಿಜ್ಞಾನಿಯಾಗಿ ಇತಿಹಾಸ ಬರೆದಳು. She Rocks wherever she walks...

ಅವಕಾಶ ಸಿಕ್ಕರೆ ಆಕಾಶಕ್ಕೇ ನೆಗೆಯಬಲ್ಲಳು. ತನ್ನ ತಾನು ಅರಿಯಬೇಕು. ತನ್ನ ಸಾಮರ್ಥ್ಯದ ಸಂಪೂರ್ಣ ಉಪಯೋಗ ಪಡೆಯಬೇಕು.

ನಿಮ್ಮನ್ನು ಅರಿಯುವುದೆಂದರೆ
- ನಿಮ್ಮನ್ನು ಪ್ರೀತಿಸಿ
- ಹವ್ಯಾಸಗಳನ್ನು ಬೆಳೆಸಿಕೊಳ್ಳಿ
- ಆರೋಗ್ಯದೆಡೆ ಗಮನಕೊಡಿ
- ಆತ್ಮಗೌರವಕ್ಕೆ ಧಕ್ಕೆಯಾದರೆ ಎದುರಿಸಿ



ಅಬ್ಬಬ್ಬಾ ಧಗೆ

ಚರ್ಮಕಾಳಜಿಯ ಬಗೆ

ದೀಪಾ ಜಿ. ಹೊಳಿಮಠ

ಬಿರುಬೇಸಿಗೆಯ ಬಿಸಿಲು ನಿಮ್ಮ ಚರ್ಮ ಚುರುಗುಟ್ಟುವಂತೆ ಮಾಡುತ್ತಿದ್ದರೆ ಚರ್ಮದತ್ತ ನಿಷ್ಕಾಳಜಿ ತೋರುತ್ತಿದ್ದೀರಿ ಎಂದರ್ಥ. ಬೇಸಿಗೆಯಲ್ಲಿ ಚರ್ಮಕ್ಕೆ ಅತಿ ಹೆಚ್ಚಿನ ಕಾಳಜಿ ಮಾಡಬೇಕಾಗುತ್ತದೆ. ಚರ್ಮದ ಮೂಲ ಬಣ್ಣವನ್ನು ಕಂದಿಸುವುದರಲ್ಲಿ ಸೂರ್ಯನ ಕಿರಣಗಳು ಇದೀಗ ಅತಿ ಹೆಚ್ಚು ಚಟುವಟಿಕೆಯಿಂದಿರುತ್ತವೆ.


ಬೇಸಿಗೆಯ ಬಿಸಿಲಿನಲ್ಲಿಯೂ ಚರ್ಮದ ಹೊಳಪು ಮಾಸದಂತಿರಲು ಈ ಕೆಳಗಿನ ದಶಸೂತ್ರಗಳನ್ನು ಅನುಸರಿಸಿ.

- **ಆಗಾಗ ಮುಖ ತೊಳೆಯುತ್ತಿರಿ:** ಬೆವರಿನಿಂದಾಗಿ ಚರ್ಮದ ರಂಧ್ರಗಳು ಕೆಲವು ಸಲ ಮುಚ್ಚಿಕೊಂಡಿರುತ್ತವೆ. ಆಗಾಗ ಮುಖ ತೊಳೆಯುವುದರಿಂದ ಚರ್ಮದ ಉಸಿರಾಟಕ್ಕೆ ತೊಂದರೆ ಆಗುವುದಿಲ್ಲ.
- **ತಣ್ಣೀರಿನ ಸ್ನಾನ:** ಈ ಬಿರುಬೇಸಿಗೆಯಲ್ಲಿ ತಣ್ಣೀರಿನ ಸ್ನಾನ ಆಹ್ಲಾದಕರ ಅನುಭವ ಕೊಡುವುದಷ್ಟೇ ಅಲ್ಲ, ಚರ್ಮದ ಕಾಳಜಿಯನ್ನೂ ಮಾಡುತ್ತದೆ. ಸ್ನಾನ ಮಾಡುವಾಗ ಒಂದೆರಡು ಹನಿ ಕೊಬ್ಬರಿ ಎಣ್ಣೆಯನ್ನು ಸ್ನಾನದ ಬಕೆಟ್ಟಿಗೆ ಹಾಕುವುದು ಒಳಿತು. ಚರ್ಮ ಶುಷ್ಕವಾಗುವುದು ತಡೆಯುತ್ತದೆ.
- **ಮಾಯಿಶ್ಚರೈಸರ್ ಬಳಸಿ:** ಚಳಿಗಾಲದಲ್ಲಿ ಬಳಸುವಂತೆಯೇ ಬೇಸಿಗೆಯಲ್ಲಿಯೂ ತ್ವಚೆಯಲ್ಲಿ ತೇವಾಂಶ ಕಾಪಾಡುವಂತೆ ಮಾಯಿಶ್ಚರೈಸರ್ ಬಳಸಿ. ಬಿಸಿಲಿನಲ್ಲಿ ಓಡಾಟ ತಪ್ಪಿಸಲಾಗದಿದ್ದರೆ ಸನ್‌ಸ್ಕ್ರೀನ್ ಲೋಷನ್ ಬಳಸಿ. ಉತ್ತಮ ಗುಣಮಟ್ಟದ ಸನ್‌ಸ್ಕ್ರೀನ್ ಲೋಷನ್ ಬಳಸುವುದು ಒಳಿತು.
- **ತುರಿಕೆ, ಕೆರೆತಕ್ಕೆ:** ಸ್ನಾನಕ್ಕೆ ಮುನ್ನ ಕೊಬ್ಬರಿ ಎಣ್ಣೆ ಲೇಪಿಸಿಕೊಂಡು, ಉಗುರು ಬಿಸಿ ನೀರಿನಲ್ಲಿ ಸ್ನಾನ ಮಾಡುವುದರಿಂದ ಚರ್ಮ ಒಣಗಿ ಕೆರೆದಂತಾಗುವುದನ್ನು ತಡೆಯಬಹುದಾಗಿದೆ.
- **ಸರಳವಿರಲಿ ಮೇಕಪ್:** ಬೆವರಿನ ಕಾರಣದಿಂದ ಮೇಕಪ್ ಆದಷ್ಟೂ ಸರಳವಾಗಿರಲಿ. ಅತಿಯಾದ ಮೇಕಪ್ ಅಗತ್ಯವಿದ್ದರೆ, ಮನೆಗೆ ಮರಳಿದ ಕೂಡಲೇ ಮೇಕಪ್ ತೆಗೆದು, ಸ್ವಚ್ಛವಾಗಿ ಮುಖ ತೊಳೆದುಕೊಂಡು, ಮಾಯಿಶ್ಚರೈಸರ್ ಲೇಪಿಸಿಕೊಳ್ಳಿ.
- **ಚರ್ಮಕ್ಕಿರಲಿ ಛತ್ರಿ:** ಬಿರುಬೇಸಿಗೆಯಲ್ಲಿ ತಲೆ ಬಿಸಿಯಾಗದಿರಲಿ ಎಂದು ಟೋಪಿ ಧರಿಸುವಂತೆ, ಸ್ಕಾರ್ಫ್ ಕಟ್ಟಿಕೊಳ್ಳುವಂತೆಯೇ ಛತ್ರಿ ಹಿಡಿದರೆ ಒಳಿತು. ಮುಖ, ಕಣ್ಣು, ಕತ್ತು ಮತ್ತು ಕೈಗಳಿಗೆ ಬಿರುಬಿಸಿಲು ತಾಕದಂತೆ ಸಂರಕ್ಷಣೆ ನೀಡಬಹುದಾಗಿದೆ.
- **ಸೋಪಿನ ಬದಲು ಅಕ್ಕಿ, ಕಡಲೆ ಹಿಟ್ಟು:** ಸೋಪಿನ ಬದಲು ಎಣ್ಣೆ ಚರ್ಮದವರು ಕಡಲೆ ಹಿಟ್ಟು ಮತ್ತು ಮೊಸರಿನ ಮಿಶ್ರಣವನ್ನು ಹಚ್ಚಿಕೊಳ್ಳುವುದು ಚರ್ಮಕ್ಕೆ ಆರೋಗ್ಯಕರ ಆಯ್ಕೆಯಾಗಿದೆ. ಒಣ ಚರ್ಮದವರು ಕಡಲೆ ಹಿಟ್ಟಿನ ಬದಲಿಗೆ ಅಕ್ಕಿ ಹಿಟ್ಟನ್ನು ಬಳಸುವುದು ಒಳಿತು. ಮನೆಯಲ್ಲಿ ಲೋಳೆಸರವಿದ್ದಲ್ಲಿ ಈ ಮಿಶ್ರಣದೊಂದಿಗೆ ಬೆರೆಸಿ ಬಳಸಿಕೊಳ್ಳಬೇಕು.
- **ನೀರು ಕುಡಿಯುತ್ತಲಿರಿ:** ಬೇಸಿಗೆಯಲ್ಲಿ ಚರ್ಮ ರಕ್ಷಣೆಗೆ ನೀರು ಪರಮ ಔಷಧಿಯಾಗಿದೆ. ತಂಪುಪಾನೀಯಗಳ ಸೇವನೆಯನ್ನು ಕಡಿಮೆ ಮಾಡಿ. ವಾತಾನುಕೂಲಿತ ಪ್ರದೇಶದಲ್ಲಿರುತ್ತಿದ್ದರೆ ನೀರಡಿಕೆಯಾಗದಿದ್ದರೂ ಆಗಾಗ ನೀರು ಸೇವಿಸುತ್ತಿರಿ. ಪ್ರತಿದಿನ ಕನಿಷ್ಠ ಮೂರು ಲೀಟರ್ ನೀರಾದರೂ ಕುಡಿಯಬೇಕು. ತಂಪು ಪಾನೀಯಗಳ ಬದಲಿಗೆ ನೀರು ಮಜ್ಜಿಗೆ, ಬೆಲ್ಲದ ಪಾನಕ, ನಿಂಬೆ ಪಾನಕಗಳನ್ನು, ತಾಜಾ ಹಣ್ಣಿನ ಜ್ಯೂಸುಗಳನ್ನು ಸೇವಿಸುವುದು ಹಿತಕರವಾಗಿದೆ.
- **ಹಿತಕರ ವಸ್ತ್ರ:** ಬೇಸಿಗೆಯಲ್ಲಿ ಮೈಗೆ ಅಂಟುವಂಥ, ದಪ್ಪ ವಸ್ತ್ರಗಳನ್ನು ತೊಡಬೇಡಿರಿ. ಹತ್ತಿ ಉಡುಗೆಗಳು, ಲೆನಿನ್ ಉಡುಗೆಗಳು ನಿಮ್ಮ ಆಯ್ಕೆ ಆಗಿರಲಿ. ಆದಷ್ಟು ಸಡಿಲ ಉಡುಪುಗಳಿದ್ದರೆ ಬೆವರಿನಿಂದಾಗಿ ಕಿರಿಕಿರಿಯಾಗುವುದಿಲ್ಲ.
- **ಮಿತ ಆಹಾರ, ಹಿತವಾದ ನಿದ್ದೆ:** ಮದುವೆಯಂಥ ಸಮಾರಂಭಗಳು ಹೆಚ್ಚಾಗಿರುವ ಈ ಋತುಮಾನದಲ್ಲಿ ಕರಿದ ಪದಾರ್ಥಗಳ ಸೇವನೆಯ ಮೇಲೆ ಹಿಡಿತವಿರಲಿ. ಸಿಹಿ ಔತಣಗಳಲ್ಲಿಯೂ ನಿಮ್ಮ ಆಸೆಯನ್ನು ಮಿತವಾಗಿರಿಸಿಕೊಂಡು, ಹಿತವಾಗಿ ಆಹಾರ ಸೇವಿಸಿ. ಬೇಸಿಗೆಯಲ್ಲಿ ದಣಿದು ಬಂದವರು ಆಗಾಗ ವಿರಮಿಸುವುದು, ಚರ್ಮದ ಆರೋಗ್ಯಕ್ಕೂ, ದೇಹದ ಆರೋಗ್ಯಕ್ಕೂ ಅತ್ಯವಶ್ಯವಾಗಿದೆ.

ನಿಮ್ಮ ಚೇತನ ಮತ್ತು ಉತ್ಸಾಹವನ್ನು ಸೂರ್ಯನ ಪ್ರಖರ ಕಿರಣಗಳು ಕಸಿಯದಂತಿರಲು ಈ ದಶಸೂತ್ರಗಳನ್ನು ತಪ್ಪದೆ ಪಾಲಿಸಿ.

ಲೇಖಕಿ ಮೇಕಪ್ ಕಲಾವಿದೆ

> ಬೇಸಿಗೆಯಲ್ಲಿ ಬೆವೆತು, ಚರ್ಮ ಶುಷ್ಕವಾಗಿ ಹೊಳಪನ್ನು ಕಳೆದುಕೊಳ್ಳುತ್ತದೆ. ಚರ್ಮದ ಆರೋಗ್ಯಕ್ಕಾಗಿ, ಚಂದಗಾಣಿಸಲು ಹತ್ತು ಸರಳ ಸೂತ್ರಗಳನ್ನು ಇಲ್ಲಿ ತಿಳಿಸಲಾಗಿದೆ. ಬಿರುಬಿಸಿಲಿನಲ್ಲಿಯೂ ಚಂದಗಾಣಲು ಇವನ್ನು ಅನುಸರಿಸಿ



ಋತುಬಂಧವಾಗುತ್ತಿದೆಯೇ?

ಸ್ಪಂದನ



ಡಾ. ವೀಣಾ ಎಸ್. ಭಟ್

ನಾನು ಎರಡು ಮಕ್ಕಳ ತಾಯಿ, ಗೃಹಿಣಿ, ವಯಸ್ಸು 51 ನನಗೆ ಈಗ ಋತುಚಕ್ರ ನಿಲ್ಲುವ ಸಮಯವೆಂದು ಅನಿಸುತ್ತಿದೆ. ಋತುಚಕ್ರ ಸರಿಯಾದ ಸಮಯಕ್ಕೆ ಆಗುತ್ತಿಲ್ಲ. ಋತುಮತಿಯಾದ ಸಂದರ್ಭದಲ್ಲಿ ತುಂಬಾ ಯಾತನೆ ಅನುಭವಿಸುತ್ತಿದ್ದೇನೆ. ಅತಿ ತೀವ್ರರಕ್ತಸ್ರಾವ, ತೀವ್ರತಲೆನೋವು, ಕೈಕಾಲುಗಳಲ್ಲಿ ಸೆಳೆತ ಇವು ಮುಖ್ಯ ಲಕ್ಷಣಗಳು. ದೈನಂದಿನ ಕೆಲಸಗಳನ್ನು ಮಾಡಲು ಕೂಡ ಸಾಧ್ಯವಾಗುತ್ತಿಲ್ಲ. ನನ್ನ ಅಕ್ಕ ತಂಗಿಯರಲ್ಲಿ ವಿಚಾರಿಸಿದಾಗ ಅವರು ಕೂಡ ಹೀಗೆ ಆಗಿತ್ತು ಎಂದು ಹೇಳಿದರು. ಸಲಹೆ ನೀಡಿ.

ವೈದೇಹಿ, ಬೆಂಗಳೂರು.

ವೈದೇಹಿಯವರೇ ಋತುಬಂಧದ ಅಥವಾ ಮುಟ್ಟುನಿಲ್ಲುವ ಸಮಯದಲ್ಲಿ ಮುಟ್ಟಿನ ಸಮಯದಲ್ಲಿ ವ್ಯತ್ಯಾಸವಾಗ ಬಹುದು ಅಂದರೆ ಪದೇ ಪದೇ ಮುಟ್ಟಾಗುವುದು (ಎರಡು ಮೂರುವಾರಗಳೊಳಗಾಗಿ) ಅಥವಾ ತಡವಾಗಿ ಮುಟ್ಟಾಗುವುದು ಸಹಜ. ಆದರೆ ಅತಿಯಾಗಿ ಮುಟ್ಟಿನಲ್ಲಿ ರಕ್ತಸ್ರಾವವಾಗುವುದು ಋತುಬಂಧದ ಸಮಯದಲ್ಲಿ ಅಸಹಜವಾದದ್ದು. ಅದಕ್ಕಾಗಿ ನೀವು ತಜ್ಞರಿಂದ ಸೂಕ್ತತಪಾಸಣೆಗೆ ಒಳಗಾಗಲೇ ಬೇಕು. ಅಕ್ಕಂದಿರಿಗೆ ಆದ ಹಾಗೇ ನಿಮಗೆ ಆಗಬೇಕೆಂದೇನು ಇಲ್ಲ.

ಮುಟ್ಟಿನ ಸಮಯದಲ್ಲಾಗುವ ಅತಿರಕ್ತಸ್ರಾವದಿಂದ ನಿಮಗೆ ರಕ್ತಹೀನತೆಯಾಗಿರಬಹುದು ಮತ್ತು ರಕ್ತಹೀನತೆಯಿಂದ ಸುಸ್ತು, ತಲೆನೋವು, ಕೈಕಾಲು ಸೆಳೆತ ಇವೆಲ್ಲವೂ ಆಗುತ್ತಿದೆ ಎಂದು ನನ್ನ ಅನಿಸಿಕೆ. ನೀವು ನಿಮ್ಮ ಹತ್ತಿರದ ತಜ್ಞವೈದ್ಯರ ಸಲಹೆ ಪಡೆದು ಒಂದು ಅಲ್ಟ್ರಾಸ್ಕ್ಯಾನಿಂಗ್ ಪರೀಕ್ಷೆ ಮಾಡಿಸಿಕೊಳ್ಳಿ ಅದರಲ್ಲಿ ನಿಮ್ಮ ಅತಿರಕ್ತಸ್ರಾವಕ್ಕೆ ಕಾರಣವೇನೆಂಬುದು ತಿಳಿಯಬಹುದೇನೋ. ಯಾಕೆಂದರೆ ಈ ವಯಸ್ಸಿನಲ್ಲಿ ಅತಿರಕ್ತಸ್ರಾವ ಗರ್ಭಕೋಶದ ಫೈಬ್ರಾಯ್ಡ್ (ನಾರುಗಡ್ಡೆ) ಅಥವಾ ಹೆಣ್ತನದ ಹಾರ್ಮೋನುಗಳಾದ ಈಸ್ಟ್ರೋಜನ್ ಮತ್ತು ಪ್ರೊಜೆಸ್ಟ್ರಾನ್ ಹಾರ್ಮೋನು ಅಸಮತೋಲನಗಳಿಂದ ಗರ್ಭಕೋಶದ ಪದರ ಅತಿಯಾಗಿ ಬೆಳೆಯುವುದು (ಎಂಡೋಮೆಟ್ರಿಯಲ್ ಹೈಪರ್ ಪ್ಲೇಸಿಯಾ) ಇವುಗಳಿಂದ ಹೆಚ್ಚಾಗಿ ಅತಿರಕ್ತಸ್ರಾವ ಉಂಟಾಗುತ್ತದೆ. ನಿಮ್ಮ ರಕ್ತದ ಹಿಮೋಗ್ಲೋಬಿನ್ ಮಟ್ಟ ಎಷ್ಟಿದೆ ಎಂಬುದನ್ನು ಕೂಡಾ ಪರೀಕ್ಷಿಸಿಕೊಳ್ಳಿ. ಹಾಗೇಯೇ ಥೈರಾಯ್ಡ್ ಹಾರ್ಮೋನ್ ಮಟ್ಟವನ್ನು ಪರೀಕ್ಷಿಸಿಕೊಳ್ಳಿ. ರಕ್ತಹೀನತೆ ಇದ್ದಲ್ಲಿ ಕಬ್ಬಿಣಾಂಶದ ಮಾತ್ರೆಗಳನ್ನ ವೈದ್ಯರು ಕೊಡಬಹುದು. ಸೂಕ್ತತಪಾಸಣೆ ಹಾಗೂ ಚಿಕಿತ್ಸೆಯಿಂದ ನಿಮ್ಮ ಸಮಸ್ಯೆ ಸರಿಹೋಗುತ್ತದೆ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳುಹಿಸಬಹುದು

ತಂಗಳನ್ನ ಮಜ್ಜಿಗೆ, ರಾಗಿ ಪೇಯ

ಬಿರುಬಿಸಿಲಿಗೆ ಅಗತ್ಯವಿರುವ ಹಲವು ಪೇಯಗಳ ರೆಸಿಪಿ ನೀಡಿದ್ದಾರೆ ಕೆ.ವಿ.ರಾಜಲಕ್ಷ್ಮಿ.

ರಸಸ್ವಾದ



ತಂಗಳನ್ನ ಸಿಹಿಮಜ್ಜಿಗೆ

ಬೇಕಾಗುವ ಸಾಮಗ್ರಿ: ತಂಗಳನ್ನ 1 ಕಪ್, ತಾಜಾ ಮಜ್ಜಿಗೆ 2 ಕಪ್, ಸಿಹಿಗೆ ತಕ್ಕಷ್ಟು ಸಕ್ಕರೆ, ಚಿಟಿಕಿ ಏಲಕ್ಕಿ ಪುಡಿ, ಸಣ್ಣದಾಗಿ ತುಂಡರಿಸಿದ ಗೋಡಂಬಿ,ಬಾದಾಮಿ ಸ್ವಲ್ಪ.

ಮಾಡುವ ವಿಧಾನ: ತಂಗಳನ್ನವನ್ನು ಎರಡು ಕಪ್ ನೀರಿನಲ್ಲಿ ಚೆನ್ನಾಗಿ ಮೆತ್ತಗೆ ಮಾಡಿ ಎರಡು ಗಂಟೆಗಳ ಕಾಲ ಪಕ್ಕಕ್ಕಿಡಿ. ನಂತರ ಸಕ್ಕರೆ, ಚಿಟಿಕಿ ಏಲಕ್ಕಿ ಪುಡಿ ಸೇರಿಸಿ ಮಿಶ್ರಣ ಮಾಡಿ. ಬಾದಾಮಿ,ಗೋಡಂಬಿ ತುಂಡುಗಳನ್ನು ಉದುರಿಸಿ.



ರಾಗಿ ಮಸಾಲಾ ಮಜ್ಜಿಗೆ

ಬೇಕಾಗುವ ಸಾಮಗ್ರಿ: ರಾಗಿ ಹುರಿಹಿಟ್ಟು 1 ಚಮಚ, ತಾಜಾ ಮಜ್ಜಿಗೆ 1 ಲೋಟ,ಚಿಟಿಕೆ ಶುಂಠಿಪುಡಿ, ಚಿಟಿಕಿ ಜೀರಿಗೆ ಪುಡಿ,ಸಣ್ಣದಾಗಿ ಕತ್ತರಿಸಿದ ಕೊತ್ತಂಬರಿ ಸೊಪ್ಪು ಸ್ವಲ್ಪ. ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ : ಮೊದಲಿಗೆ ಹುರಿಹಿಟ್ಟನ್ನು ಸ್ವಲ್ಪ ಮಜ್ಜಿಗೆ ಸೇರಿಸಿ ಗಂಟಿಲ್ಲದAತೆ ಕಲೆಸಿ ನಂತರ ಉಳಿದ ಮಜ್ಜಿಗೆ ಮತ್ತು ಇತರ ಪದಾರ್ಥಗಳನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ.

ರಾಗಿ ಸಿಹಿ ಮಜ್ಜಿಗೆ

ಬೇಕಾಗುವ ಸಾಮಗ್ರಿ: ರಾಗಿ ಹುರಿಹಿಟ್ಟು 1 ಚಮಚ, ತಾಜಾ ಮಜ್ಜಿಗೆ 1 ಲೋಟ, ಸಿಹಿಗೆ ತಕ್ಕಷ್ಟು ಬೆಲ್ಲ, ಚಿಟಿಕಿ ಏಲಕ್ಕಿ ಪುಡಿ, ಸಣ್ಣದಾಗಿ ತುಂಡರಿಸಿದ ಗೋಡಂಬಿ,ಬಾದಾಮಿ ಸ್ವಲ್ಪ.

ಮಾಡುವ ವಿಧಾನ: ಮೊದಲಿಗೆ ಹುರಿಹಿಟ್ಟನ್ನು ಸ್ವಲ್ಪ ಮಜ್ಜಿಗೆ ಸೇರಿಸಿ ಗಂಟಿಲ್ಲದAತೆ ಕಲೆಸಿ ನಂತರ ಉಳಿದ ಮಜ್ಜಿಗೆ ಮತ್ತು ಇತರ ಪದಾರ್ಥಗಳನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ.



ತಂಗಳನ್ನ ಮಸಾಲಾ ಮಜ್ಜಿಗೆ

ಬೇಕಾಗುವ ಸಾಮಗ್ರಿ: ತಂಗಳನ್ನ 1 ಕಪ್, ತಾಜಾ ಮಜ್ಜಿಗೆ 2 ಕಪ್, ಸಣ್ಣದಾಗಿ ಕತ್ತರಿಸಿದ ಪುದೀನಾ ಎಲೆ ಸ್ವಲ್ಪ. ರುಚಿಗೆ ತಕ್ಕಷ್ಟು ಉಪ್ಪು,

ಮಾಡುವ ವಿಧಾನ : ತಂಗಳನ್ನವನ್ನು ಎರಡು ಕಪ್ ನೀರಿನಲ್ಲಿ ಚೆನ್ನಾಗಿ ಮೆತ್ತಗೆ ಮಾಡಿ ರುಚಿಗೆ ತಕ್ಕಷ್ಟು ಉಪ್ಪು ಬೆರೆಸಿ ಎರಡು ಗಂಟೆಗಳ ಕಾಲ ಪಕ್ಕಕ್ಕಿಡಿ. ನಂತರ ಕಡೆದ ಮಜ್ಜಿಗೆಯನ್ನು ಸೇರಿಸಿ ಮತ್ತೊಮ್ಮೆ ಚೆನ್ನಾಗಿ ಕದಡಿ, ಪುದಿನಾಸೊಪ್ಪನ್ನು ಉದುರಿಸಿ.





ದುಂಡು ಮಲ್ಲಿಗೆ... ಸೂಜಿ, ಜಾಜಿ ಮಲ್ಲಿಗೆ

ಶಂಕರಪುರ ಮಲ್ಲಿಗೆ

ಜಯಶ್ರೀ ರಾಜಗುರು

ಬಿರುಬೇಸಿಗೆಯ ಇಳಿಸಂಜೆಯಲಿ ಬೀಸುವ ಗಾಳಿಗೆ ಮಲ್ಲಿಗೆಯ ಕಂಪೂ ಸೇರಿದರೆ... ಆಹಹಾ... ಬದುಕು ಅದೆಷ್ಟು ಆಹ್ಲಾದಕರವೆನಿಸುತ್ತದೆ.

ಯುಗಾದಿಯ ನಂತರ ಅಲ್ಲಲ್ಲಿ ಹಸಿರು ಗಿಡದೊಳಗೆ ಮೊಸರು ಚೆಲ್ಲಿದಂತೆ ಅರಳುವ ಅಚ್ಚಬಿಳುಪಿನ ಹೂ ಮಲ್ಲಿಗೆ. ಕವಿಗಳ, ರಸಿಕರ ಕಣ್ಮನ ಸೆಳೆದು, ಹೃನ್ಮನ ಬೆಳಗಿದ ಹೆಮ್ಮೆ ಈ ಹೂವಿಗಿದೆ.

ತೀರ ತಂಪಾಗಿ, ತೆಳುವಾಗಿ ಘಮ ಪಸರಿಸುವ ಈ ಗುಣ ಮಲ್ಲಿಗೆಗೆ ಅದೆಲ್ಲಿಂದ ಬಂದಿತೊ. ಆದರೆ ಇಳಿ ಸಂಜೆ ಅಥವಾ ಬೆಳಗಿನ ಜಾವ ಮೊಗ್ಗುಗಳನ್ನು ಬಳ್ಳಿಗಳಿಂದ, ಗಿಡಗಳಿಂದ ಬಿಡಿಸಿಕೊಂಡು ಬಂದರೆ ಅವನ್ನು ಕಟ್ಟುವುದೇ ಒಂದು ಕಲೆಯಾಗಿದೆ.

ಭಟ್ಕಳ, ಸಂಕರಪುರದ ಸೂಜಿ ಮಲ್ಲಿಗೆ, ಎಳೆಗೂಸಿನ ಮುಂದಲೆಯ ಮೇಲೆ ಬೀಳುವಷ್ಟೇ ತೆಳುವಾದ ನಾಜೂಕಿನ ಜಾಜಿ ಮಲ್ಲಿಗೆ, ಮೈದುಂಬಿಕೊಂಡು, ದುರದುಂಡಿಯಂಥ ದುಂಡುಮಲ್ಲಿಗೆ, ಸುವಾಸನೆಯಿಂದಲೇ ಹಾವನ್ನೂ ಸೆಳೆಯುತ್ತದೆ ಎಂಬ ಕುಖ್ಯಾತಿ ಇರುವ ಏಳು ಸುತ್ತಿನ ಮಲ್ಲಿಗೆ, ಭದ್ರಕೋಟೆಯಲ್ಲಿ ಮಕರಂದವನ್ನೂ, ಮಾಧುರ್ಯವನ್ನೂ ಭದ್ರಗೊಳಿಸುವ ಹದಿಮೂರು, ಹದಿನಾರು ಸುತ್ತಿನ ಮಲ್ಲಿಗೆಗಳೂ ಸಿಗುತ್ತವೆ.

ಇವನ್ನೆಲ್ಲ ಬಿಡಿಸಿ, ಬಾಳೆನಾರಿನಲ್ಲಿ, ಒದ್ದೆ ದಾರದಲ್ಲಿ ಕಟ್ಟುವುಲು, ಪೋಣಿಸುವುದು ಒಂದು ಕಲೆ. ಸೂಜಿ ಮತ್ತು ಜಾಜಿ ಮಲ್ಲಿಗೆಯನ್ನು ಒಂದೇ ಬದಿಗೆ ಕಟ್ಟಿ, ತುರುಬಿಗೆ ಸುತ್ತಿಕೊಳ್ಳುವ ಚಂದ್ರಮಾಲೆ ಸದಾಕಾಲದ ಮಹಿಳೆಯರ ಕನಸಾಗಿದೆ.

ಬೇಸಿಗೆ ರಜೆಯಲ್ಲಿ ಉಂಡು, ಪಡಸಾಲೆಯಲ್ಲಿ ಮೊಗ್ಗಿರಿಸಿಕೊಂಡು, ಹಳೆಯ ಪೋಸ್ಟ್‌ಕಾರ್ಡುಗಳನ್ನು ಕತ್ತರಿಸಿ, ಉದ್ದ ಜಡೆ ಹೆಣೆಯುವಂತೆ ಹೂಗಳನ್ನು ಪೋಣಿಸಿ, ಮೊಗ್ಗಿನ ಜಡೆ ಹೆಣೆದು, ಹೆಣ್ಣುಮಕ್ಕಳಿಗೆ ಮುಡಿಸುವ ಸಂಭ್ರಮ ಎಂದಿಗೂ ತೀರದು. ಹಾಗೆ ಹೂ ಮುಡಿಸಿದ ನಂತರ ಕನ್ನಡಿಹ ಮುಂದೆ ನಿಲ್ಲಿಸಿ ಫೋಟೊ ತೆಗೆಯುವುದು ತೆಗೆಸುವುದೇ ಒಂದು ಹಬ್ಬವಾಗಿತ್ತು. ಈಗಲೂ ಮೋಟು ಕೂದಲಿದ್ದರೂ ಸರಿ, ಒಂದು ಫೋಟೊಕ್ಕಾದರೂ ಮೊಗ್ಗಿನ ಜಡೆ ಹೆಣೆಸುವುದು ಕಣ್ಮರೆಯಾಗಿಲ್ಲ.

ಹೆಣ್ಮಕ್ಕಳೆಂದರೆ ಹೂವಿಗೆ ಮನಸೋಲದವರೆ? ಈ ಹೂವಿನ ಘಮಕ್ಕೂ ಪ್ರೀತಿಗೂ ಅತಿ ಮಧುರ ಸಂಬಂಧ. ಮನದನ್ನೆಗೆ ಪೊಟ್ಟಣವೊಂದರಲ್ಲಿ ಮಲ್ಲಿಗೆ ದಂಡೆ ಕಟ್ಟಿಸಿಕೊಂಡು ಹೊರಟರೆ ಎಲ್ಲ ಜಗಳಗಳೂ ಅಲ್ಲಲ್ಲೆ ಮಾಧುರ್ಯದಲ್ಲಿ ಬದಲಾಗುತ್ತವೆ.



ಮೈಸೂರಿನ ದುಂಡುಮಲ್ಲಿಗೆ, ಭಟ್ಕಳದ ಸೂಜಿಮಲ್ಲಿಗೆ, ಮಂಗಳೂರಿನ ಜಾಜಿ ಮಲ್ಲಿಗೆ, ಹೂವಿನಹಡಗಲಿಯ ಮಲ್ಲಿಗೆ ಹೀಗೆ ಊರುಗಳ ಹೆಸರಿನೊಂದಿಗೆ ತಳಕು ಹಾಕಿಕೊಂಡಿರುವ ಒಂದೊಂದು ಬಗೆಯ ಮಲ್ಲಿಗೆಯೊಂದಿಗೂ ಹೆಣ್ಣುಮಕ್ಕಳ ಸಾಕಷ್ಟು ನೆನಪುಗಳು ತಳಕು ಹಾಕಿಕೊಂಡಿರುತ್ತವೆ. ಸೂಜಿ ಮಲ್ಲಿಗೆ ಮತ್ತು ದುಂಡುಮಲ್ಲಿಗೆಯಿಂದಲೂ ಮೊಗ್ಗಿನ ಜಡೆ ಹೆಣೆಯುವುದು. ಜೊತೆಗೆ ಕನಕಾಂಬರ, ಔದುಂಬರವನ್ನೂ ಸೇರಿಸಿದರಂತೂ ಇದರ ಸೊಬಗು ಸ್ವರ್ಗಕ್ಕೆ ಸಮ.

ಬೇಸಿಗೆಯನ್ನು ಸಹನೀಯಗೊಳಿಸುವ ಈ ಹೂಗಳು ಮದುವೆಯ ಸಮಾರಂಭದಲ್ಲಿ ಹೊಸಕಳೆಯನ್ನ ತಂದು ಕೊಡುತ್ತವೆ. ಬಾಂಧವ್ಯದ ಬೆಸುಗೆ ಭದ್ರಗೊಳಿಸುತ್ತಲೇ ಮಾಧುರ್ಯವನ್ನೂ ತಂದು ಕೊಡುತ್ತದೆ.

ಸಾಧ್ಯತೆಗಳ ಕುರಿತು ಪರಿಶೀಲಿಸುವಂತೆ ಸಿಬಿಎಸ್‌ಇಗೆ ಸೂಚಿಸಿದ ಶಿಕ್ಷಣ ಸಚಿವಾಲಯ

ವರ್ಷಕ್ಕೆ ಎರಡು ಬೋರ್ಡ್ ಪರೀಕ್ಷೆ

ನವದೆಹಲಿ(ಪಿಟಿಐ): 2025–26ನೇ ಶೈಕ್ಷಣಿಕ ಸಾಲಿನಿಂದ ವರ್ಷಕ್ಕೆ ಎರಡು ಬಾರಿ ಬೋರ್ಡ್ ಪರೀಕ್ಷೆಗಳನ್ನು ನಡೆಸುವ ಸಾಧ್ಯತೆಗಳ ಕುರಿತು ಪರಿಶೀಲಿಸುವಂತೆ ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿಗೆ (ಸಿಬಿಎಸ್‌ಇ) ಶಿಕ್ಷಣ ಸಚಿವಾಲಯ ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.

ಈ ಸಂಬಂಧ ಸಚಿವಾಲಯ ಮತ್ತು ಸಿಬಿಎಸ್‌ಇ ಮುಂದಿನ ತಿಂಗಳು ಶಾಲಾ ಮುಖ್ಯಸ್ಥರೊಂದಿಗೆ ಸಮಾಲೋಚನೆ ನಡೆಸಲಿವೆ. ಈಗಾಗಲೇ ಸಿಬಿಎಸ್‌ಇ ಸೆಮಿಸ್ಟರ್ ಪದ್ಧತಿಯನ್ನು ಪರಿಚಯಿಸುವ ಯೋಜನೆಯನ್ನು ತಳ್ಳಿಹಾಕಿದೆ.

ಪದವಿ ಪೂರ್ವ ತರಗತಿಗಳ ಪ್ರವೇಶದ ವೇಳಾಪಟ್ಟಿಯ ಮೇಲೆ ಪರಿಣಾಮ ಬೀರದಂತೆ ಮತ್ತೊಂದು ಬೋರ್ಡ್ ಪರೀಕ್ಷೆ ನಡೆಸುವುದಕ್ಕೆ ಪೂರಕವಾಗಿ ಶೈಕ್ಷಣಿಕ ಕ್ಯಾಲೆಂಡರ್ ರಚಿಸುವತ್ತ ಸಿಬಿಎಸ್‌ಇ ಕಾರ್ಯೋನ್ಮುಖವಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘2025–26ನೇ ಸಾಲಿನಿಂದ ವರ್ಷದ ಕೊನೆಯಲ್ಲಿ ಎರಡು ಆವೃತ್ತಿಗಳಲ್ಲಿ ಬೋರ್ಡ್ ಪರೀಕ್ಷೆ ನಡೆಸಲು ಯೋಜಿಸಲಾಗುತ್ತಿದೆ. ಇದರ ಕಾರ್ಯವಿಧಾನಗಳು ಹೇಗಿರಬೇಕು ಎಂಬುದು ಇನ್ನೂ ಅಂತಿಮವಾಗಿಲ್ಲ’ ಎಂದು ಅವರು ಹೇಳಿದ್ದಾರೆ.

ವರ್ಷಕ್ಕೆ ಎರಡು ಬೋರ್ಡ್ ಪರೀಕ್ಷೆಯನ್ನು 2024–25ನೇ ಸಾಲಿನಿಂದಲೇ ಪರಿಚಯಿಸುವ ಆರಂಭಿಕ ಯೋಜನೆಯನ್ನು ಶಿಕ್ಷಣ ಸಚಿವಾಲಯ ಹೊಂದಿತ್ತು. ಆದರೆ ಅದನ್ನು ಒಂದು ವರ್ಷ ಮುಂದೂಡಲಾಗಿದೆ ಎಂದು ಅವರು ಹೇಳಿದ್ದಾರೆ.

ಕಳೆದ ವರ್ಷದ ಆಗಸ್ಟ್‌ನಲ್ಲಿ ಬಿಡುಗಡೆಯಾದ ಹೊಸ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, ವಿದ್ಯಾರ್ಥಿಗಳಿಗೆ ವರ್ಷಕ್ಕೆ ಎರಡು ಬಾರಿ ಬೋರ್ಡ್ ಪರೀಕ್ಷೆ ಬರೆಯುವ ಆಯ್ಕೆ ಒದಗಿಸಬೇಕು ಎಂದು ಪ್ರಸ್ತಾಪಿಸಿದೆ.

ಈ ನಿಟ್ಟಿನಲ್ಲಿ ಸಿಬಿಎಸ್‌ಇ ಕಾರ್ಯ ನಿರ್ವಹಿಸುತ್ತಿದೆ. ವಿದ್ಯಾರ್ಥಿಗಳನ್ನು ಪರೀಕ್ಷಾ ಒತ್ತಡದಿಂದ ಮುಕ್ತಗೊಳಿಸಲು ಮತ್ತು ವಿದ್ಯಾರ್ಥಿಗಳಿಗೆ ಗರಿಷ್ಠ ಪ್ರಯೋಜನ ದೊರೆಯುವಂತೆ ಮಾಡಲು ಅದು ಚಿಂತಿಸುತ್ತಿದೆ. ಎರಡು ಪರೀಕ್ಷೆ ನಡೆಸಲು ಪ್ರಮುಖವಾಗಿ ಎದುರಾಗುವ ಸವಾಲುಗಳು ಮತ್ತು ಸಮಸ್ಯೆ ಹೇಗೆ ಎದುರಿಸುವುದು ಹಾಗೂ ದೋಷರಹಿತವಾಗಿ ಪರೀಕ್ಷೆಗಳನ್ನು ನಡೆಸುವುದರ ಕುರಿತು ಮಂಡಳಿ ಪರಿಶೀಲನೆಯಲ್ಲಿ ತೊಡಗಿದೆ ಎಂದು ಅವರು ಹೇಳಿದ್ದಾರೆ.

ಕಳೆದ ಅಕ್ಟೋಬರ್‌ನಲ್ಲಿ ಈ ಕುರಿತು ಮಾಹಿತಿ ನೀಡಿದ್ದ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ‘ವರ್ಷಕ್ಕೆ ಎರಡು ಬಾರಿ ಬೋರ್ಡ್ ಪರೀಕ್ಷೆಗಳನ್ನು ನಡೆಸಲಾಗುವುದು. ಆದರೆ, ಇದು ವಿದ್ಯಾರ್ಥಿಗಳಿಗೆ ಕಡ್ಡಾಯವಲ್ಲ. ಸಂಪೂರ್ಣ ಐಚ್ಛಿಕವಾದದ್ದು. ಎಂಜಿನಿಯರಿಂಗ್ ಪ್ರವೇಶಕ್ಕೆ ನಡೆಯುವ ಜೆಇಇ ಪರೀಕ್ಷೆಯಂತೆ 10 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳು ವರ್ಷಕ್ಕೆ ಎರಡು ಬೋರ್ಡ್ ಪರೀಕ್ಷೆಗಳಿಗೆ ಹಾಜರಾಗುವ ಆಯ್ಕೆಯನ್ನು ಪಡೆಯುತ್ತಾರೆ. ಅವುಗಳಲ್ಲಿನ ಉತ್ತಮ ಅಂಕಗಳನ್ನು ಆಯ್ಕೆ ಮಾಡಲಾಗುತ್ತದೆ’ ಎಂದು ತಿಳಿಸಿದ್ದರು.



ತಾರಾ ಮೆರುಗು

ಸುರತ್ಕಲ್ ತಾಲ್ಲೂಕಿನ ದೇಲಂತಬೆಟ್ಟು ಶಿಬರೂರು ಕೊಡಮಣಿತ್ತಾಯ ಕ್ಷೇತ್ರದಲ್ಲಿ ನಡೆಯುತ್ತಿರುವ ಬ್ರಹ್ಮಕುಂಭಾಭಿಷೇಕ, ಅಷ್ಟಪವಿತ್ರ ನಾಗಮಂಡಲ ಸೇವೆ, ಜಾತ್ರಾ ಮಹೋತ್ಸವದಲ್ಲಿ ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಕುಟುಂಬ ಸಮೇತ ಪಾಲ್ಗೊಂಡರು ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

ಬಿಜೆಪಿಯಿಂದ ಸಹಕಾರ; ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಬಿಜೆಪಿ ಕಾರ್ಯಕರ್ತರು, ಮುಖಂಡರು ನನಗೆ ಸಂಪೂರ್ಣ ಸಹಕಾರ ಕೊಟ್ಟಿದ್ದಾರೆ. ಕೆಲ ಕಾಂಗ್ರೆಸ್ ಕಾರ್ಯಕರ್ತರಿಂದಲೂ ಬೆಂಬಲ ಸಿಕ್ಕಿದೆ. ಮಾಹಿತಿ ಕೊರತೆಯಿಂದ ಎಚ್.ಡಿ.ದೇವೇಗೌಡರು ಬಿಜೆಪಿಯಿಂದ ಸಹಕಾರ ಸಿಕ್ಕಿಲ್ಲ ಎಂದು ಹೇಳಿರಬಹುದು’ ಎಂದು ಮೈತ್ರಿ ಅಭ್ಯರ್ಥಿ ಎಚ್.ಡಿ. ಕುಮಾರಸ್ವಾಮಿ ಶುಕ್ರವಾರ ಹೇಳಿದರು.

ಮದ್ದೂರು ತಾಲ್ಲೂಕು ಕೆ.ಹೊನ್ನಲಗೆರೆ ಮತಗಟ್ಟೆಗೆ ಭೇಟಿ ನೀಡಿದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, ‘ಸುಮಲತಾ ಅವರಿಂದ ಸಹಕಾರ ಸಿಕ್ಕಿಲ್ಲ ಎಂದು ದೇವೇಗೌಡರು ಏಕೆ ಹೇಳಿದ್ದಾರೋ ಗೊತ್ತಿಲ್ಲ, ಇಲ್ಲಿ ಸುಮಲತಾ ಅವರ ಪ್ರಶ್ನೆಯೇ ಬರುವುದಿಲ್ಲ. ಸುಮಲತಾ ಬೆಂಬಲಿಗರು ನಮ್ಮ ಪರವಾಗಿ ನಿಂತಿದ್ದಾರೆ, ಅಂಬರೀಷ್ ಅಭಿಮಾನಿಗಳ ಪಡೆ ನಮಗೆ ಸಹಾಯ ಮಾಡಿದೆ’ ಎಂದರು.

‘ನಾನು ಸುಮಲತಾ ಅವರ ಮನೆಗೆ ತೆರಳಿ ಸಹಕಾರ ಕೋರಿದ್ದೆ, ಮೈಸೂರಿನಲ್ಲಿ ನಡೆದ ಪ್ರಧಾನಿ ಮೋದಿ ಕಾರ್ಯಕ್ರಮದಲ್ಲೂ ಆಹ್ವಾನಿಸಿದ್ದೆ, 2 ದಿನ ಬಿಡುವು ಮಾಡಿಕೊಂಡು ಪ್ರಚಾರಕ್ಕೆ ಬನ್ನಿ ಎಂದು ಕರೆದಿದ್ದೆ. ಆರ್.ಅಶೋಕ ಅವರ ಎದುರಲ್ಲೇ ಅವರನ್ನು ಕರೆದಿದ್ದೆ. ಇದಕ್ಕಿಂತ ಇನ್ನೇನು ಮಾಡಬೇಕು ನಾನು? ಈ ವಿಚಾರದಲ್ಲಿ ಗೊಂದಲ ಸೃಷ್ಟಿಸುವುದು ಬೇಡ. ಸುಮಲತಾ ಅವರು ಬೆಂಗಳೂರಿನಿಂದ ಬಂದು ನನಗೆ ಮತ ಹಾಕಿದ್ದಾರೆ’ ಎಂದರು.

‘ಪಕ್ಷಭೇದ ಮರೆತು ಸಾರ್ವಜನಿಕರು ನನಗೆ ಮತದಾನ ಮಾಡಿದ್ದಾರೆ. ರಾಜ್ಯದಲ್ಲಿಯೇ ಅತೀ ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸುತ್ತೇನೆ. ಗೆಲುವಿನ ವಾತಾವರಣ ಈಗಾಗಲೇ ಸೃಷ್ಟಿಯಾಗಿದ್ದು ಈ ಗೆಲುವನ್ನು ನಾನು ಕ್ಷೇತ್ರದ ಜನರಿಗೆ ಅರ್ಪಿಸುತ್ತೇನೆ’ ಎಂದರು.

ಜೆಡಿಎಸ್‌ನವರು ಕರೆದೇ ಇಲ್ಲ: ಸಂಸದೆ ಸುಮಲತಾ

ಮದ್ದೂರು ತಾಲ್ಲೂಕು ದೊಡ್ಡರಸಿನಕೆರೆ ಮತಗಟ್ಟೆಯಲ್ಲಿ ಮತದಾನ ಮಾಡಿದ ಸಂಸದೆ ಸುಮಲತಾ ‘ಜೆಡಿಎಸ್ ನಾಯಕರು ನನಗೆ ಯಾವುದೇ ಸಭೆ, ಸಮಾರಂಭಗಳಿಗೆ ಆಹ್ವಾನ ನೀಡಿಲ್ಲ. ಅವರು ಕರೆದೂ ನಾನು ಬಂದಿಲ್ಲ ಎಂದರೆ ತಪ್ಪಾಗುತ್ತದೆ, ಆದರೆ ಅವರು ನನ್ನನ್ನು ಕರೆದೇ ಇಲ್ಲ’ ಎಂದರು.

‘ಮೈತ್ರಿ ಪರವಾಗಿ ನಮ್ಮ ಬೆಂಬಲಿಗರು ಕೆಲಸ ಮಾಡಿದ್ದಾರೆ, ಅಂಬರೀಷ್ ಅವರ ಶಕ್ತಿಯನ್ನು ಎನ್‌ಡಿಎಗೆ ಧಾರೆ ಎರೆದು ಕೊಟ್ಟಿದ್ದೇನೆ. ನರೇಂದ್ರ ಮೋದಿ ಅವರು ಮತ್ತೆ ಪ್ರಧಾನಿಯಾಗಬೇಕು ಎಂಬ ಉದ್ದೇಶದಿಂದ ನಾನು ನನ್ನ ಸ್ಥಾನ ತ್ಯಾಗ ಮಾಡಿದ್ದೇನೆ’ ಎಂದರು.

ಸುಮಲತಾ ಅವರು ಸಹಕಾರ ನೀಡಿಲ್ಲ ಎಂದು ಎಚ್.ಡಿ.ದೇವೇಗೌಡರು ನೀಡಿರುವ ಹೇಳಿಕೆ ಕುರಿತು ‘ಅವರು ದೊಡ್ಡವರು, ಅವರಿಂದ ಇಂತಹ ಹೇಳಿಕೆ ನಿರೀಕ್ಷೆ ಮಾಡಿರಲಿಲ್ಲ. ಮಾಹಿತಿ ಕೊರತೆಯಿಂದ ಈ ರೀತಿ ಮಾತನಾಡಿರಬಹುದು. ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡುವುದಿಲ್ಲ’ ಎಂದರು.

20ಕ್ಕೂ ಹೆಚ್ಚು ಸ್ಥಾನಗಳಲ್ಲಿ ಗೆಲುವು: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಮೈಸೂರು: ‘ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಉತ್ತಮ ವಾತಾವರಣವಿದ್ದು, 20ಕ್ಕೂ ಹೆಚ್ಚು ಸ್ಥಾನ ಗೆಲ್ಲಲಿದ್ದೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಸ್ವಗ್ರಾಮವಾದ ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಸಿದ್ದರಾಮನಹುಂಡಿ ಮತಗಟ್ಟೆಯಲ್ಲಿ ಶುಕ್ರವಾರ ಮತ ಚಲಾಯಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಸೇರಿದಂತೆ ಮೊದಲ ಹಂತದಲ್ಲಿ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲುತ್ತೇವೆ. ಜನ ಗ್ಯಾರಂಟಿ ಯೋಜನೆಗಳ ಕೈ ಹಿಡಿಯಲಿದ್ದಾರೆ’ ಎಂದರು.

‘ಕರ್ನಾಟಕದಲ್ಲಿ ಮೋದಿ ಅಲೆ ಇಲ್ಲ, ಕಾಂಗ್ರೆಸ್ ಅಲೆ ಇದೆ. ಮೂರು ದಿನಗಳ ಮೋದಿ ಭಾಷಣವು ಹತಾಶೆ ಹಾಗೂ ಪ್ರಚೋದನಾಕಾರಿಯಾಗಿತ್ತೇ ಹೊರತು ಪರಿಣಾಮಕಾರಿಯಾಗಿಲ್ಲ. ಅದು ದೇಶದ ಪ್ರಧಾನಮಂತ್ರಿಯ ಭಾಷಣವಲ್ಲ. ಸಂವಿಧಾನ ವಿರೋಧಿ ಭಾಷಣ’ ಎಂದು ದೂರಿದರು.



ಸಿದ್ದರಾಮನಹುಂಡಿ ಮತಗಟ್ಟೆಯಲ್ಲಿ ಶುಕ್ರವಾರ ಮತ ಚಲಾವಣೆ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಪುತ್ರ ಡಾ. ಯತೀಂದ್ರ ಅವರು ಶಾಯಿ ಹಚ್ಚಿದ ಬೆರಳು ತೋರಿಸಿದರು

‘ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಹಿಂದುಳಿದವರ ಮೀಸಲಾತಿ ಕಿತ್ತು ಮುಸಲ್ಮಾನರಿಗೆ ಕೊಟ್ಟಿದೆ ಎನ್ನುವುದು ಸುಳ್ಳು. ವೀರಪ್ಪ ಮೊಯ್ಲಿ ಮುಖ್ಯಮಂತ್ರಿಯಾಗಿದ್ದಾಗ ಚಿನ್ನಪ್ಪ ರೆಡ್ಡಿ ವರದಿ ಆಧಾರದಲ್ಲಿ ಮುಸ್ಲಿಮರಿಗೆ ಶೇ 4 ಮೀಸಲಾತಿ ನೀಡಲು ತೀರ್ಮಾನಿಸಿದ್ದರು. 1994ರಲ್ಲಿ ಈ ಕುರಿತು ಆದೇಶ ಹೊರಡಿಸಲಾಯಿತು. ಅಂದಿನಿಂದ ಈವರೆಗೆ ರಾಜ್ಯದಲ್ಲಿ ಮುಸಲ್ಮಾನರಿಗೆ ಮೀಸಲಾತಿ ಇದೆ’ ಎಂದು ವಿವರಿಸಿದರು.

‘ಹಿಂದೂಗಳ ಮಾಂಗಲ್ಯ ಕೀಳುತ್ತಾರೆ, ಹಿಂದುಳಿದವರ ಮೀಸಲಾತಿ ಕಿತ್ತು ಮುಸಲ್ಮಾನರಿಗೆ ಕೊಡುತ್ತಾರೆ ಎನ್ನುವ ಎರಡೂ ಭಾಷಣಗಳು ಆರ್‌ಎಸ್‌ಎಸ್ ಹಿನ್ನೆಲೆಯಿಂದ ಕೂಡಿದ ಭಾಷಣ. ಆರ್‌ಎಸ್‌ಎಸ್ ಅಜೆಂಡಾವನ್ನು ಮೋದಿ ಹೇಳಿದ್ದಾರಷ್ಟೇ’ ಎಂದರು.

ಕೃತಕ ಕಣ್ಣೀರು: ‘ದೇವೇಗೌಡರು ಯಾವಾಗಲೂ ಅನುಕೂಲ ರಾಜಕಾರಣ ಮಾಡುತ್ತಾರೆ. ಅವರದ್ದು ಕೃತಕ ಕಣ್ಣೀರು. ರಾಜಕಾರಣದಲ್ಲಿ ಕಣ್ಣೀರು ಹಾಕುವ ಪರಿಸ್ಥಿತಿ ಏನಿದೆ? ಜನ ಆಶೀರ್ವದಿಸಿದರೆ ಉಳಿಯುತ್ತೇವೆ, ಇಲ್ಲದಿದ್ದರೆ ಉಳಿಯುವುದಿಲ್ಲ. ಕುಟುಂಬದ ರಾಜಕಾರಣದಲ್ಲಿ ನಂಬಿಕೆ ಇಟ್ಟವರು ಮಾತ್ರ ಹೀಗೆ ಕೃತಕವಾಗಿ ಕಣ್ಣೀರು ಹಾಕುವ ತಂತ್ರ ಅನುಸರಿಸುತ್ತಾರೆ’ ಎಂದು ದೂರಿದರು.

ಎನ್‌ಡಿಎ ಗೆಲ್ಲಲಿದೆ ಎಂದ ಸಿದ್ದರಾಮಯ್ಯ!: ‘ಮೊದಲ ಹಂತದಲ್ಲಿ ಇಂಡಿಯಾ ಮೈತ್ರಿಕೂಟ ಗೆಲ್ಲಲಿದೆ’ ಎನ್ನುವ ಬದಲಿಗೆ ‘ಎನ್‌ಡಿಎ ಮೈತ್ರಿಕೂಟ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ’ ಎಂದು ಬಾಯಿ ತಪ್ಪಿ ಹೇಳುವ ಮೂಲಕ ಸಿದ್ದರಾಮಯ್ಯ ಗೊಂದಲ ಮೂಡಿಸಿದರು. ‘ಮೋದಿ ಅವರಿಗೆ ತಾವು ಗೆಲ್ಲುವುದಿಲ್ಲ ಎಂದು ಗೊತ್ತಾಗಿದೆ. ಮೊದಲ ಹಂತದಲ್ಲಿ ಚುನಾವಣೆ ನಡೆದಿರುವ 102 ಕ್ಷೇತ್ರಗಳ ಪೈಕಿ ಎನ್‌ಡಿಎ ಮತ್ತು ಮೈತ್ರಿಕೂಟ ಅತಿ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ’ ಎಂದು ಸಿದ್ದರಾಮಯ್ಯ ಹೇಳಿದರು.

ಹುಟ್ಟೂರಿಗೆ ಸಿದ್ದು: ಗ್ರಾಮಸ್ಥರ ಸಂಭ್ರಮ

ಬೆಳಿಗ್ಗೆ 10.20ರ ಸುಮಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪುತ್ರ ಡಾ. ಯತೀಂದ್ರ ಜೊತೆಗೂಡಿ ಸಿದ್ದರಾಮನಹುಂಡಿಗೆ ಆಗಮಿಸಿದರು. ಅಲ್ಲಿಂದ ಸುಮಾರು 200–300 ಮೀಟರ್‌ನಷ್ಟು ದೂರ ವಾಹನದಲ್ಲೇ ಮತದಾರರತ್ತ ಕೈ ಬೀಸುತ್ತ ಸಾಗಿದರು. ನಿಷೇಧಾಜ್ಞೆ ನಡುವೆಯೂ ಗ್ರಾಮಸ್ಥರು ಪಟಾಕಿ ಸಿಡಿಸಿ ಮುಖ್ಯಮಂತ್ರಿಯನ್ನು ಸ್ವಾಗತಿಸಿದರು. ಮತಗಟ್ಟೆ ಸಂಖ್ಯೆ 86ರಲ್ಲಿ ಯತೀಂದ್ರ ಜೊತೆಗೂಡಿ ಮತದಾನ ಮಾಡಿದ ಸಿದ್ದರಾಮಯ್ಯ, ಹೊರಗೆ ಮಾಧ್ಯಮದವರಿಗೆ ಶಾಯಿ ಹಚ್ಚಿದ ಬೆರಳು ತೋರಿಸಿದರು. ಬಳಿಕ ಸ್ನೇಹಿತ ಕೆಂಪಿರೇಗೌಡರ ಮನೆಗೆ ಭೇಟಿ ಕೊಟ್ಟರು. ಸಿದ್ದರಾಮೇಶ್ವರ ದೇಗುಲದಲ್ಲಿ ಪೂಜೆ ಸಲ್ಲಿಸಿ ನಿರ್ಗಮಿಸಿದರು.



ಸಕಲೇಶಪುರ ತಾಲ್ಲೂಕಿನ ಗುಲಗಳಲೆ ಗ್ರಾಮದಲ್ಲಿ ಶುಕ್ರವಾರ ಮುಖಾಮುಖಿಯಾದ ಫಾತಿಮಾ ಹಾಗೂ ಜಾನಮ್ಮ ಪರಸ್ಪರ ಆಲಂಗಿಸಿದರು.

ಗುಲಗಳಲೆ: ಗೆಳತಿಯರನ್ನು ಒಂದಾಗಿಸಿದ ಮತದಾನ

ಪ್ರಜಾವಾಣಿ ವಾರ್ತೆ

ಸಕಲೇಶಪುರ (ಹಾಸನ): ದಶಕಗಳ ಕಾಲ ಸಂಪರ್ಕವೇ ಇಲ್ಲದೆ ಜೀವನ ನಡೆಸಿದ, 90 ವರ್ಷ ದಾಟಿದ ಗೆಳತಿಯರಿಬ್ಬರು ಶುಕ್ರವಾರ ಪರಸ್ಪರ ಭೇಟಿಯಾದರು. ಇದಕ್ಕೆ ಕಾರಣವಾಗಿದ್ದು ಲೋಕಸಭಾ ಚುನಾವಣೆ ಎಂಬುದೇ ವಿಶೇಷ.

ತಾಲ್ಲೂಕಿನ ಗುಲಗಳಲೆ ಗ್ರಾಮದಲ್ಲಿ ಮತದಾನ ಮಾಡಲು ಬಂದ ಜಾನಮ್ಮ (94) ಹಾಗೂ ಫಾತಿಮಾ (93) ಮುಖಾಮುಖಿಯಾದರು. ಕ್ಷಣದಲ್ಲಿಯೇ ಗೆಳತಿಯರು ಪರಸ್ಪರ ಗುರುತು ಹಿಡಿದು, ಅಪ್ಪಿಕೊಂಡರು. ತಮ್ಮ ಬಾಲ್ಯದ ದಿನಗಳನ್ನು ಮೆಲುಕು ಹಾಕಿದರು.

ಮದುವೆಯಾದ ನಂತರ ಸಂಪರ್ಕ ತಪ್ಪಿತ್ತು. ಇಬ್ಬರೂ ಹತ್ತಾರು ವರ್ಷಗಳಿಂದ ಒಬ್ಬರನ್ನೊಬ್ಬರು ನೋಡಿಲ್ಲ. ಅದೆಷ್ಟೋ ವರ್ಷದ ನಂತರ ಮತಗಟ್ಟೆಯಲ್ಲಿ ಎದುರಾದರು. ವಯಸ್ಸು ಮರೆತು, ಬಾಲ್ಯದ ನೆನಪುಗಳ ಬುತ್ತಿ ಬಿಚ್ಚಿ ಭಾವನಾತ್ಮಕವಾಗಿ ಪರಸ್ಪರ ಅಪ್ಪಿಕೊಂಡರು. ಅವರ ಮೊಮ್ಮಕ್ಕಳು, ಗ್ರಾಮಸ್ಥರು ಆ ಕ್ಷಣವನ್ನು ಸಂಭ್ರಮಿಸಿದರು.

ಶಿವಮೊಗ್ಗ: ಮೇ 2ಕ್ಕೆ ರಾಹುಲ್ ಪ್ರಚಾರ

ಶಿವಮೊಗ್ಗ: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಪಕ್ಷದ ಅಭ್ಯರ್ಥಿ ಗೀತಾ ಶಿವರಾಜ್‌ಕುಮಾರ್ ಪರ ಪ್ರಚಾರ ಕೈಗೊಳ್ಳಲು ಮೇ 2ರಂದು ಶಿವಮೊಗ್ಗಕ್ಕೆ ಆಗಮಿಸುತ್ತಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ನಗರದ ಅಲ್ಲಮಪ್ರಭು ಮೈದಾನ ದಲ್ಲಿ ಅಂದು ಮಧ್ಯಾಹ್ನ 12ರಿಂದ 1.30ರವರಗೆ ನಡೆಯುವ ಸಮಾವೇಶದಲ್ಲಿ ರಾಹುಲ್ ಗಾಂಧಿ ಭಾಗವಹಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡ ಬರಲಿದ್ದು, ಬೃಹತ್ ಸಮಾವೇಶ ನಡೆಯಲಿದೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಏ.29ರಿಂದ ನಟ–ನಟಿಯರು ಪ್ರಚಾರದಲ್ಲಿ ಪಾಲ್ಗೊಳ್ಳಲು ಬರುತ್ತಿದ್ದಾರೆ. ನಟ ದುನಿಯಾ ವಿಜಯ್, ಡಾಲಿ ಧನಂಜಯ್, ಧ್ರುವ ಸರ್ಜಾ, ವಿಜಯ ರಾಘವೇಂದ್ರ, ‘ನೆನಪಿರಲಿ’ ಪ್ರೇಮ್, ಚಿಕ್ಕಣ್ಣ, ಚಂದನ್ ಶೆಟ್ಟಿ, ಅತುಲ್, ನಿಶ್ಚಿಕಾ ನಾಯ್ಡು ಪ್ರಚಾರ ಮಾಡಲಿದ್ದಾರೆ. ಭದ್ರಾವತಿ, ಬೈಂದೂರು ಸೇರಿದಂತೆ ಹಲವೆಡೆ ರೋಡ್ ಶೋ ನಡೆಸಲಿದ್ದಾರೆ ಎಂದು ಹೇಳಿದರು.

ಮೋದಿ, ಸಿದ್ದರಾಮಯ್ಯ ಪ್ರಚಾರ ನಾಳೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಜಿಲ್ಲೆಯಲ್ಲಿ ಚುನಾವಣಾ ಪ್ರಚಾರ ನಡೆಸುವರು. ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ಅಂದೇ ಪ್ರಚಾರ ನಡೆಸಲಿದ್ದಾರೆ.

ಬೆಳಗಾವಿ ನಗರದಲ್ಲಿ ಮೋದಿ ಭಾಷಣ ಮಾಡುವರು, ಸಿದ್ದರಾಮಯ್ಯ ಅವರು ಜಿಲ್ಲೆಯ ಯರಗಟ್ಟಿ ಪಟ್ಟಣ, ಕಾಗವಾಡ ತಾಲ್ಲೂಕಿನ ಉಗಾರ ಖುರ್ದ ಗ್ರಾಮದಲ್ಲಿ ಪ್ರಚಾರ ನಡೆಸುವರು. ಇಬ್ಬರೂ ಒಂದೇ ದಿನ ಪ್ರಚಾರ ನಡೆಸುವ ಕಾರಣ ಹೆಚ್ಚಿನ ಬಂದೋಬಸ್ತ್ ಕೈಗೊಳ್ಳಲಾಗಿದೆ’ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ್ ತಿಳಿಸಿದರು.

ಚಿತ್ತ ಇನ್ನು ಉತ್ತರದತ್ತ

ಒಂದನೇ ಪುಟದಿಂದ...

ಮಿತ್ರಪಕ್ಷ ಜೆಡಿಎಸ್‌ನ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸುವುದರ ಜತೆಗೆ 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿದ್ದ ಕ್ಷೇತ್ರಗಳು ಕೈತಪ್ಪದಂತೆ ತಡೆಯುವ ಸವಾಲು ಬಿ.ಎಸ್. ಯಡಿಯೂರಪ್ಪ ಮತ್ತು ಬಿ.ವೈ. ವಿಜಯೇಂದ್ರ ಅವರ ಮೇಲಿತ್ತು. ಮಕ್ಕಳನ್ನು ಚುನಾವಣಾ ಕಣಕ್ಕಿಳಿಸಿದ್ದ ರಾಜ್ಯದ ಸಚಿವರಾದ ರಾಮಲಿಂಗಾ ರೆಡ್ಡಿ ಮತ್ತು ಡಾ.ಎಚ್.ಸಿ. ಮಹದೇವಪ್ಪ ಇಬ್ಬರಿಗೂ ಈ ಚುನಾವಣೆ ದೊಡ್ಡ ಸವಾಲಾಗಿತ್ತು.

ಚುನಾವಣಾ ಪ್ರಚಾರ ಆರಂಭವಾದ ದಿನಗಳಿಂದಲೂ ಮೂರೂ ಪಕ್ಷಗಳ ಬಹುತೇಕ ನಾಯಕರು ಮೊದಲ ಹಂತದಲ್ಲಿ ಮತದಾನ ನಡೆದಿರುವ 14 ಕ್ಷೇತ್ರಗಳ ಸುತ್ತವೇ ಗಿರಕಿ ಹೊಡೆಯುತ್ತಿದ್ದರು.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಎಐಸಿಸಿ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ, ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಎರಡೂ ಪಕ್ಷಗಳ ರಾಷ್ಟ್ರೀಯ ನಾಯಕರು ಕೂಡ ಮೊದಲ ಹಂತದ ಕ್ಷೇತ್ರಗಳತ್ತ ಗಮನ ಕೇಂದ್ರೀಕರಿಸಿದ್ದರು.

ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶುಕ್ರವಾರದಿಂದಲೇ ಎರಡನೇ ಹಂತದ ಕ್ಷೇತ್ರಗಳಲ್ಲಿ ಪ್ರಚಾರ ಆರಂಭಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಕೂಡ ಈ ಕ್ಷೇತ್ರಗಳಲ್ಲಿ ಮತಬೇಟೆಗೆ ಸಜ್ಜಾಗಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇನ್ನು ಒಂಬತ್ತು ದಿನ ಮಲೆನಾಡು, ಉತ್ತರ ಮತ್ತು ಕಲ್ಯಾಣ ಕರ್ನಾಟಕದತ್ತ ತಮ್ಮ ಗಮನ ಕೇಂದ್ರೀಕರಿಸಲಿದ್ದಾರೆ.

ಹಾಸನದಲ್ಲೂ ಜೆಡಿಎಸ್ ಗೆಲುವು ದೇವೇಗೌಡ ವಿಶ್ವಾಸ

ಪ್ರಜಾವಾಣಿ ವಾರ್ತೆ

ಹೊಳೆನರಸೀಪುರ (ಹಾಸನ): ‘ರಾಜ್ಯದಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಉತ್ತಮ ವಾತಾವರಣವಿದ್ದು, ಹಾಸನದಲ್ಲೂ ಜೆಡಿಎಸ್ ಗೆಲ್ಲುತ್ತದೆ’ ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ವಿಶ್ವಾಸ ವ್ಯಕ್ತಪಡಿಸಿದರು.

ತಾಲ್ಲೂಕಿನ ಪಡವಲಹಿಪ್ಪೆ ಮತಗಟ್ಟೆಯಲ್ಲಿ ಪತ್ನಿ ಚನ್ನಮ್ಮ ಅವರೊಂದಿಗೆ ಮತ ಚಲಾಯಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಲೋಕಸಭೆ ಚುನಾವಣೆಯಲ್ಲಿ ಗೆದ್ದರೆ ಮಹಿಳೆಯರಿಗೆ, ಯುವಕರಿಗೆ ವಾರ್ಷಿಕ ₹1 ಲಕ್ಷ ಸೇರಿದಂತೆ ಹಲವು ಭರವಸೆಗಳನ್ನು ಕಾಂಗ್ರೆಸ್ ಮುಖಂಡರು ನೀಡುತ್ತಿದ್ದಾರೆ. ಆದರೆ, ಪಕ್ಕದ ಕೇರಳ, ತಮಿಳುನಾಡಿನಲ್ಲಿ ಇಲ್ಲದ ಈ ಭರವಸೆಗಳು ಕರ್ನಾಟಕದಲ್ಲಿ ಮಾತ್ರ ಕಾಣುತ್ತಿವೆ’ ಎಂದರು.

ತಮಿಳುನಾಡಿನಲ್ಲಿ ಬಿಸಿಗಾಳಿ ತೀವ್ರ ಸರ್ಕಾರದಿಂದ ಮುಂಜಾಗ್ರತಾ ಕ್ರಮ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಹಲವೆಡೆ ಬಿಸಿಗಾಳಿ ತೀವ್ರವಾಗಿದ್ದು, ಶುಕ್ರವಾರ 38ರಿಂದ 41 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿತ್ತು.

ಈ ಮಧ್ಯೆ ಇದೇ ರೀತಿಯ ವಾತಾವರಣ ಏಪ್ರಿಲ್ 30ರವರೆಗೂ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ಉತ್ತರ ತಮಿಳುನಾಡಿನ ಹಲವೆಡೆ ಮೇ 1ರಿಂದ 4ರವರೆಗೆ ಬಿಸಿಗಾಳಿಯ ತೀವ್ರತೆ ಹೆಚ್ಚಿರಲಿದೆ ಎಂದು ಕೆಲ ಸ್ವತಂತ್ರ ಹವಾಮಾನ ಮುನ್ಸೂಚನಾ ಸಂಸ್ಥೆಗಳು ಅಂದಾಜಿಸಿವೆ.

ರಾಜ್ಯದ ವೆಲ್ಲೂರು ಮತ್ತು ಕರೂರಿನಲ್ಲಿ ಶುಕ್ರವಾರ ಗರಿಷ್ಠ 41 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿತ್ತು. ಮಧುರೈನಲ್ಲಿ 39 ಡಿಗ್ರಿ ಸೆಲ್ಸಿಯಸ್, ಧರ್ಮಪುರಿಯಲ್ಲಿ 38 ಡಿಗ್ರಿ ಸೆಲ್ಸಿಯಸ್, ಚೆನ್ನೈನಲ್ಲಿ 36 ಡಿಗ್ರಿ ಸೆಲ್ಸಿಯಸ್ ಮತ್ತು ತೂತುಕುಡಿಯಲ್ಲಿ 33 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿತ್ತು.

ತಾಪಮಾನ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಮುಖ್ಯ ಕಾರ್ಯದರ್ಶಿ ಶಿವ ದಾಸ್ ಮೀನಾ ಅವರು ವಿದ್ಯುತ್ ಉತ್ಪಾದನೆ ಮತ್ತು ವಿತರಣೆ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ವರದಿ ಪಡೆದರು.

ಮುಂಬರುವ ದಿನಗಳಲ್ಲಿ ವಿದ್ಯುತ್‌ಗೆ ಬೇಡಿಕೆ ಹೆಚ್ಚಾಗುವ ನಿರೀಕ್ಷೆ ಇರುವುದರಿಂದ ಇಲಾಖೆಯ ಅಗತ್ಯ ಸಿದ್ಧತೆಯ ಕುರಿತಂತೆ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಇದಕ್ಕೂ ಮುನ್ನ ಗುರುವಾರ ಮುಖ್ಯಮಂತ್ರಿ ಸ್ಟಾಲಿನ್ ಅವರು ಬಿಸಿಗಾಳಿಯನ್ನು ಎದುರಿಸಲು ಮುಂಜಾಗೃತಾ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದರು. ರಾಜ್ಯದ 1,000 ಕಡೆಗಳಲ್ಲಿ ನೀರು ಸರಬರಾಜು ಕೇಂದ್ರ ಸ್ಥಾಪನೆ ಮತ್ತು ಒಆರ್‌ಎಸ್ ಪ್ಯಾಕೆಟ್ ವಿತರಿಸುವುದಾಗಿ ತಿಳಿಸಿದ್ದರು.

ಸುಶಮೀಂದ್ರ ತೀರ್ಥರ ಆರಾಧನಾ ಮಹೋತ್ಸವ

ಪ್ರಜಾವಾಣಿ ವಾರ್ತೆ

ರಾಯಚೂರು: ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಸುಶಮೀಂದ್ರ ತೀರ್ಥರ ಆರಾಧನಾ ಮಹೋತ್ಸವದ ಪ್ರಯುಕ್ತ ಶುಕ್ರವಾರ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು.

ತಿರುಪತಿ ತಿರುಮಲ ದೇವಸ್ಥಾನದ ಅಧಿಕಾರಿಗಳು ತಂದಿದ್ದ ಶ್ರೀವಾರಿ ವಸ್ತ್ರವನ್ನು ಮೆರವಣಿಗೆಯಲ್ಲಿ ಬರಮಾಡಿಕೊಳ್ಳಲಾಯಿತು.

ಮಂತ್ರಾಲಯದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಶ್ರೀವಾರಿ ವಸ್ತ್ರವನ್ನು ತಂದಿದ್ದ ಅಧಿಕಾರಿಗಳನ್ನು ಬರಮಾಡಿಕೊಂಡರು. ನಂತರ ಸುಶಮೀಂದ್ರ ತೀರ್ಥರ ಮೂಲ ಬೃಂದಾವನಕ್ಕೆ ಅರ್ಪಿಸಿದರು.

ಬೆಳಿಗ್ಗೆ ವಿಜೃಂಭಣೆಯಿಂದ ರಥೋತ್ಸವ, ಮಹಾ ಪಂಚಾಮೃತಾಭಿಷೇಕ ನಡೆಯಿತು. ಉಂಜಾಳ ಮಂಟಪದಲ್ಲಿ ಶ್ರೀ ಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠದ ಪಂಡಿತರಿಂದ ಜ್ಞಾನೋದಯ ಪ್ರವಚನಗಳು ನಡೆದವು.



ಮಂತ್ರಾಲಯಕ್ಕೆ ತಿರುಪತಿ ತಿರುಮಲ ದೇವಸ್ಥಾನದ ಅಧಿಕಾರಿಗಳು ತಂದಿದ್ದ ಶ್ರೀವಾರಿ ವಸ್ತ್ರವನ್ನು ಮೆರವಣಿಗೆಯಲ್ಲಿ ಬರಮಾಡಿಕೊಳ್ಳಲಾಯಿತು

ನೇಹಾ ಕುಟುಂಬಕ್ಕೆ ಭದ್ರತೆ

ಹುಬ್ಬಳ್ಳಿ: ನೇಹಾ ಕೊಲೆ ಪ್ರಕರಣದ ಬಳಿಕ ತಮ್ಮ ಕುಟುಂಬಕ್ಕೆ ಜೀವ ಬೆದರಿಕೆಯಿದೆ ಎಂದು ನೇಹಾ ತಂದೆ ನಿರಂಜನಯ್ಯ ಹಿರೇಮಠ ಆತಂಕ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಶುಕ್ರವಾರ ಭದ್ರತಾ ವ್ಯವಸ್ಥೆ ಮಾಡಲಾಗಿದೆ. ನಿರಂಜನಯ್ಯ ಹಿರೇಮಠ ಅವರಿಗೆ ಅಂಗರಕ್ಷಕ ಮತ್ತು ಅವರ ಮನೆಗೆ ಇಬ್ಬರು ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿದೆ ಎಂದು ಪೊಲೀಸ್ ಕಮಿಷನರ್ ರೇಣುಕಾ ಸುಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಜಲಾಶಯಗಳಲ್ಲಿ ನೀರು ಸಂಗ್ರಹ ಕುಸಿತ ● 10 ವರ್ಷಗಳ ಸರಾಸರಿಗಿಂತ ಕಡಿಮೆ ಸಂಗ್ರಹ

ದಕ್ಷಿಣ ರಾಜ್ಯಗಳ ಜಲಾಶಯ: ನೀರಿನ ಸಂಗ್ರಹ ಶೇ 17

ನವದೆಹಲಿ (ಪಿಟಿಐ): ದಕ್ಷಿಣ ರಾಜ್ಯಗಳಾದ ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ, ಕೇರಳದ ಜಲಾಶಯಗಳಲ್ಲಿ ನೀರಿನ ಸಂಗ್ರಹ ಮಟ್ಟ ಐತಿಹಾಸಿಕ ಸರಾಸರಿಗಿಂತ ಗಣನೀಯವಾಗಿ ಕುಸಿದಿದೆ.

ಒಟ್ಟು ಸಾಮರ್ಥ್ಯದಲ್ಲಿನ ಶೇ 17ರಷ್ಟು ಮಾತ್ರ ನೀರಿನ ಸಂಗ್ರಹವನ್ನು ಹೊಂದಿವೆ ಎಂದು ಕೇಂದ್ರ ಜಲ ಆಯೋಗದ (ಸಿಡಬ್ಲ್ಯುಸಿ) ಇತ್ತೀಚಿನ ವರದಿ ತಿಳಿಸಿದೆ.

ದೇಶದ ವಿವಿಧ ಪ್ರದೇಶಗಳಲ್ಲಿನ ಜಲಾಶಯಗಳ ಸಂಗ್ರಹ ಮಟ್ಟದ ಕುರಿತು ಆಯೋಗವು ಬುಲೆಟಿನ್ ಬಿಡುಗಡೆ ಮಾಡಿದೆ. ದಕ್ಷಿಣ ರಾಜ್ಯಗಳಲ್ಲಿ ಸಿಡಬ್ಲ್ಯುಸಿ ಮೇಲ್ವಿಚಾರಣೆಯಲ್ಲಿ ಇರುವ 42 ಜಲಾಶಯಗಳಲ್ಲಿ ಒಟ್ಟು 53.334 ಬಿಸಿಎಂ (ಶತಕೋಟಿ ಘನ ಮೀಟರ್‌ಗಳು) ಸಂಗ್ರಹಣಾ ಸಾಮರ್ಥ್ಯ ಇದೆ. ಆದರೆ, ಪ್ರಸ್ತುತ ಅವುಗಳಲ್ಲಿ ಕೇವಲ 8.865 ಬಿಸಿಎಂನಷ್ಟು (ಶೇ 17) ನೀರು ಸಂಗ್ರಹವಿದೆ ಎಂದು ಅದು ಮಾಹಿತಿ ನೀಡಿದೆ.

ಕಳೆದ ವರ್ಷ ಇದೇ ಅವಧಿಯಲ್ಲಿ ಶೇ 29ರಷ್ಟು ನೀರು ಸಂಗ್ರಹವಿತ್ತು. ಅಲ್ಲದೆ ಹಿಂದಿನ 10 ವರ್ಷಗಳ ಸರಾಸರಿ ಸಂಗ್ರಹ ಮಟ್ಟ ಶೇ 23ರಷ್ಟು ಆಗಿದ್ದು, ಅದಕ್ಕಿಂತ ಕಡಿಮೆ ಸಂಗ್ರಹ ಈ ವರ್ಷ ದಾಖಲಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಜಲಾಶಯಗಳಲ್ಲಿ ನೀರಿನ ಮಟ್ಟ ಗಣನೀಯವಾಗಿ ಕುಸಿದಿರುವುದರಿಂದ ದಕ್ಷಿಣದ ರಾಜ್ಯಗಳಲ್ಲಿ ನೀರಿನ ಕೊರತೆ ಎದುರಾಗಿದ್ದು, ನೀರಾವರಿ, ಕುಡಿಯುವ ನೀರು ಪೂರೈಕೆ ಮತ್ತು ಜಲ ವಿದ್ಯುತ್‌ಗೆ ಸಮಸ್ಯೆ ಎದುರಾಗಿದೆ ಎಂದೂ ಅದು ಹೇಳಿದೆ.

ಆದರೆ, ಇದಕ್ಕೆ ವ್ಯತಿರಿಕ್ತ ಎಂಬಂತೆ ಅಸ್ಸಾಂ, ಒಡಿಶಾ, ಪಶ್ಚಿಮ ಬಂಗಾಳದಂತಹ ರಾಜ್ಯಗಳನ್ನು ಒಳಗೊಂಡಿರುವ ಪೂರ್ವ ಪ್ರದೇಶದಲ್ಲಿ ಕಳೆದ ವರ್ಷ ಮತ್ತು ಹಿಂದಿನ 10 ವರ್ಷಗಳ ಸರಾಸರಿಗಿಂತ ಈ ವರ್ಷ ನೀರಿನ ಸಂಗ್ರಹ ಹೆಚ್ಚಿದೆ. ಈ ಪ್ರದೇಶಗಳಲ್ಲಿನ 23 ಜಲಾಶಯಗಳ ಒಟ್ಟು ಸಂಗ್ರಹಣಾ ಸಾಮರ್ಥ್ಯ 20.430 ಬಿಸಿಎಂ ಆಗಿದ್ದು, ಪ್ರಸ್ತುತ 7.889 (ಶೇ 39) ಬಿಸಿಎಂನಷ್ಟು ಸಂಗ್ರಹ ಇದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಶೇ 34 ಹಾಗೂ ಹತ್ತು ವರ್ಷಗಳ ಸರಾಸರಿ ಸಂಗ್ರಹ ಮಟ್ಟ ಶೇ 34 ಆಗಿತ್ತು ಎಂದು ಅಂಕಿ ಅಂಶಗಳು ತಿಳಿಸುತ್ತವೆ.

ದೇಶದ ಇತರ ಭಾಗಗಳಲ್ಲಿ ಪರಿಸ್ಥಿತಿ ಅಷ್ಟೇನು ಆಶಾದಾಯಕ ಆಗಿಲ್ಲ. ಗುಜರಾತ್, ಮಹಾರಾಷ್ಟ್ರ ಒಳಗೊಂಡಿರುವ ಪಶ್ಚಿಮ ಭಾಗದಲ್ಲಿನ 49 ಜಲಾಶಯಗಳಲ್ಲಿ ಪ್ರಸ್ತುತ 11.771 ಬಿಸಿಎಂನಷ್ಟು ನೀರಿನ ಸಂಗ್ರಹ ಇದ್ದು, ಅದು ಒಟ್ಟು ಸಾಮರ್ಥ್ಯದ ಶೇ 31.7ರಷ್ಟಾಗುತ್ತದೆ. ಕಳೆದ ವರ್ಷ ಈ ಜಲಾಶಯಗಳಲ್ಲಿ ಶೇ 38ರಷ್ಟು ಹಾಗೂ 10 ವರ್ಷಗಳ ಸರಾಸರಿ ಸಂಗ್ರಹ ಶೇ 32.1ರಷ್ಟಿದ್ದು, ಈ ವರ್ಷ ಸಂಗ್ರಹ ಕಡಿಮೆಯಾಗಿದೆ.

ಅದೇ ರೀತಿ ಉತ್ತರ ಮತ್ತು ಮಧ್ಯ ಪ್ರದೇಶಗಳ ಜಲಾಶಯಗಳಲ್ಲೂ ಐತಿಹಾಸಿಕ ಸರಾಸರಿಗಿಂತ ನೀರಿನ ಸಂಗ್ರಹಣಾ ಮಟ್ಟ ಕುಸಿದಿದೆ. ಬ್ರಹ್ಮಪುತ್ರ, ನರ್ಮದಾ ಮತ್ತು ತಾಪಿಯಂತಹ ನದಿ ಜಲಾನಯನ ಪ್ರದೇಶಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ನೀರಿನ ಶೇಖರಣೆ ಇದ್ದರೆ, ಕಾವೇರಿ, ಮಹಾನದಿ, ಪೆನ್ನಾರ್ ಸೇರಿದಂತೆ ಹಲವು ನದಿಗಳ ಜಲಾನಯನ ಪ್ರದೇಶದಲ್ಲಿ ನೀರಿನ ಕೊರತೆ ತೀವ್ರವಾಗಿದೆ ಎಂದು ವರದಿ ತಿಳಿಸಿದೆ.


ಅಂಕಿ ಅಂಶಗಳು

42
ದಕ್ಷಿಣ ರಾಜ್ಯಗಳಲ್ಲಿ ಸಿಡಬ್ಲ್ಯುಸಿ ಮೇಲ್ವಿಚಾರಣೆಯಲ್ಲಿರುವ ಜಲಾಶಯಗಳು

53.334 ಬಿಸಿಎಂ
(ಶತಕೋಟಿ ಘನ ಮೀಟರ್‌ಗಳು) ಜಲಾಶಯಗಳ ಒಟ್ಟು ಸಂಗ್ರಹಣಾ ಸಾಮರ್ಥ್ಯ

8.865 ಬಿಸಿಎಂ
ಪ್ರಸ್ತುತ ಲಭ್ಯವಿರುವ ನೀರು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ತಪ್ಪಿಗೆ ಕ್ಷಮೆ ಇದೆ, ಮೋಸಕ್ಕೆ ಕ್ಷಮೆ ಇಲ್ಲ.
–ಎ.ಪಿ.ಜೆ. ಅಬ್ದುಲ್ ಕಲಾಂ

ಅವಿರೋಧ ಆಯ್ಕೆ: ಸಂಶಯಕ್ಕೆ ಎಡೆಮಾಡಿದ ಸೂರತ್ ಪ್ರಕರಣ

ಅಭ್ಯರ್ಥಿಗಳನ್ನು ವಾಮಮಾರ್ಗ ಬಳಸಿ ಅವಿರೋಧವಾಗಿ ಆಯ್ಕೆಯಾಗುವಂತೆ ಮಾಡುವುದು ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ಹಾಗೂ ದೇಶದ ಪ್ರಜಾಪ್ರಭುತ್ವಕ್ಕೆ ಬಹುದೊಡ್ಡ ಬೆದರಿಕೆ. ಗುಜರಾತ್‌ನ ಸೂರತ್ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ, ಕಾಂಗ್ರೆಸ್, ಬಿಎಸ್‌ಪಿ ಮತ್ತು ಕೆಲವು ಪಕ್ಷೇತರ ಅಭ್ಯರ್ಥಿಗಳ ನಡುವೆ ಸ್ಪರ್ಧೆ ನಡೆಯಬೇಕಿತ್ತು. ಬಿಜೆಪಿ ಅಭ್ಯರ್ಥಿ ಮುಕೇಶ್ ದಲಾಲ್ ಅವರನ್ನು ಬಿಟ್ಟು ಉಳಿದವರೆಲ್ಲರೂ ಸ್ಪರ್ಧೆಯಿಂದ ಹಿಂದಕ್ಕೆ ಸರಿದ ಕಾರಣ ದಲಾಲ್ ಒಬ್ಬರೇ ಕಣದಲ್ಲಿ ಉಳಿದರು. ಹೀಗಾಗಿ, ಅವರು ಅವಿರೋಧವಾಗಿ ಆಯ್ಕೆ ಆಗಿದ್ದಾರೆ ಎಂದು ಘೋಷಿಸಬೇಕಾಯಿತು. ಅಭ್ಯರ್ಥಿಗಳೆಲ್ಲರೂ ಸ್ವಇಚ್ಛೆಯಿಂದ ಹಿಂದಕ್ಕೆ ಸರಿದಿದ್ದಾರೆ ಎಂಬುದನ್ನು ನಂಬುವುದು ಕಷ್ಟ. ಇದರ ಹಿಂದೆ ಯೋಜಿತ ಕುತಂತ್ರವಿದೆ ಎಂಬ ಅನುಮಾನ ಮೂಡುತ್ತದೆ. ಕಾಂಗ್ರೆಸ್ ಅಭ್ಯರ್ಥಿಯ ನಾಮಪತ್ರಕ್ಕೆ ಸೂಚಕರಾಗಿ ಸಹಿ ಮಾಡಿದವರು ಸಹಿ ತಮ್ಮದಲ್ಲ ಎಂದು ಹೇಳಿದ್ದರಿಂದಾಗಿ ಅವರ ನಾಮಪತ್ರ ತಿರಸ್ಕೃತಗೊಂಡಿತು. ಇಲ್ಲಿನ ಕುತೂಹಲಕರ ಅಂಶವೆಂದರೆ, ಸೂಚಕರಾಗಿ ಸಹಿ ಮಾಡಿದವರು ಅಭ್ಯರ್ಥಿಯ ಸ್ವಂತ ಭಾವ, ಅಳಿಯ ಮತ್ತು ಪಾಲುದಾರರು; ಅಭ್ಯರ್ಥಿಯು ಈಗ ತಲೆಮರೆಸಿಕೊಂಡಿದ್ದಾರೆ. ಕಾಂಗ್ರೆಸ್‌ನಿಂದ ನಾಮಪತ್ರ ಸಲ್ಲಿಸಿದ್ದ ಮತ್ತೊಬ್ಬ ಅಭ್ಯರ್ಥಿಯ ಸೂಚಕರಲ್ಲಿ ಒಬ್ಬರು ತಮ್ಮ ಸಹಿಯನ್ನು ಫೋರ್ಜರಿ ಮಾಡಲಾಗಿದೆ ಎಂದು ಹೇಳಿದ್ದರಿಂದ ಆ ನಾಮಪತ್ರವೂ ತಿರಸ್ಕೃತಗೊಂಡಿತು. ಈ ಎಲ್ಲ ಬೆಳವಣಿಗೆಗಳ ಬಳಿಕ, ಕಣದಲ್ಲಿದ್ದ ಇತರ ಐವರು ಅಭ್ಯರ್ಥಿಗಳು ನಾಮಪತ್ರ ಹಿಂದಕ್ಕೆ ಪಡೆದು ದಲಾಲ್ ಅವರ ಆಯ್ಕೆಯ ಹಾದಿ ಸುಗಮಗೊಳಿಸಿದರು.



ಬಲವಂತ ಅಥವಾ ಬೇರೆ ಮಾರ್ಗಗಳನ್ನು ಬಳಸಿ ಕೆಲವು ಅಭ್ಯರ್ಥಿಗಳು ಸ್ಪರ್ಧೆಯಿಂದ ಹಿಂದಕ್ಕೆ ಸರಿಯುವಂತೆ ಮಾಡುವುದು ಚುನಾವಣೆಯಲ್ಲಿ ಅಕ್ರಮ ನಡೆಸುವುದಕ್ಕೆ ಸಮಾನ

ಸೂರತ್‌ನಲ್ಲಿ ಏನೋ ಕೈಚಳಕ ನಡೆದಿರಬಹುದು; ಚುನಾವಣಾ ಜನತಂತ್ರದ ಜೀವಾಳವೇ ಆಗಿರುವ ಸ್ಪರ್ಧೆಯು ನಡೆಯದಂತೆ ಮಾಡುವುದಕ್ಕೆ ಚುನಾವಣಾ ಪ್ರಕ್ರಿಯೆಯನ್ನೇ ಬಳಸಿಕೊಳ್ಳಲಾಗಿದೆ. ಗುಜರಾತ್‌ನಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಇನ್ನೊಬ್ಬ ಅಭ್ಯರ್ಥಿಯು ಪಕ್ಷ ತೊರೆದು ಬಿಜೆಪಿ ಸೇರಿದರು. ಅರುಣಾಚಲ ಪ್ರದೇಶದಲ್ಲಿ ಲೋಕಸಭೆಯ ಜೊತೆಗೆ ವಿಧಾನಸಭೆಗೂ ಚುನಾವಣೆ ನಡೆಯುತ್ತಿದೆ. ಇಲ್ಲಿ ವಿಧಾನಸಭೆಯ 10 ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಒಂದು ಲೋಕಸಭಾ ಕ್ಷೇತ್ರದಲ್ಲಿ ಕೂಡ ಅವಿರೋಧ ಆಯ್ಕೆ ನಡೆಯಬಹುದು ಎಂಬ ವರದಿಗಳು ಇವೆ. ಇವೆಲ್ಲವೂ ಕಳವಳಕಾರಿ ಬೆಳವಣಿಗೆಗಳು. ಏಕೆಂದರೆ, ವಿರೋಧ ಪಕ್ಷ, ಅದರಲ್ಲೂ ವಿಶೇಷವಾಗಿ ಕಾಂಗ್ರೆಸ್‌ಮುಕ್ತವಾದ ರಾಜಕೀಯ ವ್ಯವಸ್ಥೆ ಇರಬೇಕು ಎಂಬುದು ಬಿಜೆಪಿಯ ಘೋಷಿತ ನಿಲುವು. ಈಗಿನ ಎಲ್ಲ ಬೆಳವಣಿಗೆಗಳು ಈ ನಿಲುವಿಗೆ ಪೂರಕವಾಗಿಯೇ ನಡೆಯುತ್ತಿವೆ. ಇದು, ಚುನಾವಣೆಯಲ್ಲಿ ಸ್ಪರ್ಧೆಯನ್ನೇ ನಿರ್ಮೂಲನೆಗೊಳಿಸುವ ನಡೆ. ಆದರೆ ಸ್ಪರ್ಧೆ ಇಲ್ಲದೆ ಪ್ರಜಾಪ್ರಭುತ್ವವೇ ಉಳಿಯುವುದಿಲ್ಲ. ನಿರಂಕುಶ ದೇಶಗಳಲ್ಲಿ ಮಾತ್ರ ಹೀಗೆ ನಡೆಯುತ್ತದೆ. ಸೂರತ್‌ನ ಜನರಿಗೆ ಅವರ ಮತದ ಹಕ್ಕನ್ನೇ ನಿರಾಕರಿಸಲಾಗಿದೆ.

ಹಲವು ಅಸಹಜ ವಿದ್ಯಮಾನಗಳು ನಡೆದ ಈ ಪ್ರಕರಣಗಳ ಕುರಿತು ತನಿಖೆ ನಡೆಸಬೇಕಾದ ಅಗತ್ಯ ಇದೆ ಎಂದು ಚುನಾವಣಾ ಆಯೋಗಕ್ಕೆ ಅನಿಸಲಿಲ್ಲ ಏಕೆ? ಇಂಥ ಅಭ್ಯರ್ಥಿಗೇ ಮತ ಹಾಕಬೇಕು ಎಂದು ಮತದಾರರ ಮೇಲೆ ಒತ್ತಡ ಹೇರಿಕೆ, ಪ್ರಭಾವ ಬೀರುವಿಕೆ ಅಥವಾ ಬಲವಂತ ಆಗಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಚುನಾವಣಾ ಆಯೋಗದ ಹೊಣೆಗಾರಿಕೆ. ಅಭ್ಯರ್ಥಿಯು ನಾಮಪತ್ರವನ್ನು ಸಂದೇಹಾಸ್ಪದ ರೀತಿಯಲ್ಲಿ ಹಿಂದಕ್ಕೆ ಪಡೆದರೆ ಅದನ್ನು ಪರಿಶೀಲನೆಗೆ ಒಳಪಡಿಸದೇ ಅಂತಿಮ ನಿರ್ಧಾರಕ್ಕೆ ಬರಬಾರದು. ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಯುವುದನ್ನು ಆಯೋಗವು ಖಾತರಿಪಡಿಸಿಕೊಳ್ಳಬೇಕು. ಸೂರತ್‌ನಲ್ಲಿ ಚುನಾವಣಾ ಪ್ರಕ್ರಿಯೆಯು ಮುಕ್ತವಾಗಿ ಮತ್ತು ನ್ಯಾಯಸಮ್ಮತವಾಗಿ ನಡೆದಿದೆ ಎಂದು ಹೇಳಲಾಗದು. ಬಲವಂತ ಅಥವಾ ಬೇರೆ ಮಾರ್ಗಗಳನ್ನು ಬಳಸಿ ಕೆಲವು ಅಭ್ಯರ್ಥಿಗಳು ಸ್ಪರ್ಧೆಯಿಂದ ಹಿಂದಕ್ಕೆ ಸರಿಯುವಂತೆ ಮಾಡುವುದು ಚುನಾವಣೆಯಲ್ಲಿ ಅಕ್ರಮ ನಡೆಸುವುದಕ್ಕೆ ಸಮಾನ. ಸೂರತ್‌ನಲ್ಲಿ ಇಬ್ಬರು ಅಭ್ಯರ್ಥಿಗಳ ನಾಮಪತ್ರ ಅಸಿಂಧುವಾಗುವಂತೆ ಮಾಡಿರುವುದರ ಹಿಂದೆಯೂ ಕುತಂತ್ರ ಇದ್ದಂತೆ ಕಾಣಿಸುತ್ತದೆ. ಚಂಡೀಗಢದ ಮೇಯರ್ ಆಗಿ ಬಿಜೆಪಿ ಅಭ್ಯರ್ಥಿ ಆಯ್ಕೆಯಾಗುವುದಕ್ಕೆ ಅನುಕೂಲ ಮಾಡಿಕೊಡಲು ಅಭ್ಯರ್ಥಿಯೊಬ್ಬರಿಗೆ ದೊರೆತ ಮತಗಳನ್ನು ಚುನಾವಣಾಧಿಕಾರಿಯು ಅಸಿಂಧು ಎಂದು ಘೋಷಿಸಿದ ವಿದ್ಯಮಾನವೂ ಇತ್ತೀಚೆಗೆ ನಡೆದಿತ್ತು. ಚುನಾವಣಾ ಪ್ರಕ್ರಿಯೆಯನ್ನು ಬುಡಮೇಲುಗೊಳಿಸಿದ ಈ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿ ಆಗಿರುವ ಪ್ರಮಾದವನ್ನು ಸರಿಪಡಿಸಿತು. ಚುನಾವಣಾ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ನಡೆಸುವ ಮೂಲಕ ಸೂರತ್‌ನಲ್ಲಿಯೂ ಪ್ರಜಾಪ್ರಭುತ್ವವನ್ನು ದಮನಗೊಳಿಸುವ ಪ್ರಯತ್ನವನ್ನು ಕಾಣಬಹುದು. ಚುನಾವಣಾ ಆಯೋಗವು ಕ್ರಮ ಕೈಗೊಳ್ಳಲೇಬೇಕಿದೆ.

ನಮ್ಮ ನೇತಾರರ ಮನಸ್ಸು ಸೂಕ್ಷ್ಮವಾಗಬೇಕು, ಹೃದಯ ಪರಿವರ್ತನೆ ಕಾಣಬೇಕು

ಚುನಾವಣಾ ಅಖಾಡ ಮತ್ತು ಮಹಿಳಾ ದನಿ



ವಿಶ್ಲೇಷಣೆ

ಸಿ.ಜಿ.ಮಂಜುಳಾ

ಲೋಕಸಭಾ ಚುನಾವಣೆಗಾಗಿ ಮತದಾನದ ಮೊದಲ ಹಂತ ಮುಗಿದ ನಂತರ ಕೋಮುವಾದಿ ನೆಲೆಯಲ್ಲಿ ಮತದಾರರನ್ನು ವಿಭಜಿಸಲು ನಡೆದ ಯತ್ನಗಳು ನಮ್ಮ ರಾಜಕಾರಣದ ವಾಗ್ವಾದದ ಮಟ್ಟ ತಲುಪಿರುವ ಅಧೋಗತಿಗೆ ದ್ಯೋತಕ. ನೇಹಾ ಹತ್ಯೆ ಪ್ರಕರಣವು ರಾಜ್ಯದಲ್ಲಿ ಕೋಮುವಾದದ ರಾಜಕಾರಣಕ್ಕೆ ಎಲ್ಲಿಲ್ಲದ ಹುಮ್ಮಸ್ಸು ತಂದುಕೊಟ್ಟಿತು. ಈಗ ನಾವು ನೋಡುತ್ತಿರುವ ಆಕ್ರಮಣಕಾರಿ ರಾಜಕಾರಣದ ಚುನಾವಣಾ ಅಖಾಡದಲ್ಲಿ ಮಹಿಳೆಯ ದನಿ ಇಲ್ಲವೇ ಇಲ್ಲ ಎನ್ನುವಂತಿದೆ.

ಶುಕ್ರವಾರ (ಏ. 26) ಎರಡನೇ ಹಂತದಲ್ಲಿ 13 ರಾಜ್ಯಗಳಲ್ಲಿ ಮತದಾನ ನಡೆದ 88 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ 1,192 ಅಭ್ಯರ್ಥಿಗಳಲ್ಲಿ ಬರೀ 100 ಮಂದಿ ಮಹಿಳೆಯರಿದ್ದರು. ಹಿಂದಿನ ಶುಕ್ರವಾರ (ಏ. 19) ಮೊದಲ ಹಂತದ ಮತದಾನ ನಡೆದ 102 ಲೋಕಸಭಾ ಕ್ಷೇತ್ರಗಳ 1,625 ಅಭ್ಯರ್ಥಿಗಳ ಪೈಕಿ 134 ಮಂದಿ ಮಾತ್ರ ಮಹಿಳೆಯರಿದ್ದರು. ಎಂದರೆ, ಮಹಿಳಾ ಅಭ್ಯರ್ಥಿಗಳ ಪ್ರಮಾಣ ಶೇಕಡ 8ರ ಮಟ್ಟದಲ್ಲೇ ಉಳಿದಿದೆ.

ಹೀಗಿದ್ದೂ ಅಧಿಕಾರದ ಗದ್ದುಗೆ ಹಿಡಿಯುವ ಸ್ಪರ್ಧೆಯಲ್ಲಿ ಬಿಗಿಯುತ್ತಿರುವ ಭಾಷಣಗಳಲ್ಲಿ 'ಮಹಿಳೆ'ಯನ್ನು ಬೇಕಾಬಿಟ್ಟಿ ಎಳೆದುತರುತ್ತಿದ್ದಾರೆ ನಮ್ಮ ರಾಜಕೀಯ ನೇತಾರರು. 'ಪ್ರಜಾಪ್ರಭುತ್ವದ ತಾಯಿ' ಎಂದು ಭಾರತವನ್ನು ಬಣ್ಣಿಸುವ ನಮ್ಮ ಪ್ರಧಾನಿ ನರೇಂದ್ರ ಮೋದಿಯವರೂ ಇದಕ್ಕೆ ಹೊರತಾಗಲಿಲ್ಲ ಎಂಬುದು ಮಾತ್ರ ಖೇದಕರ. 'ಬೇಟಿ ಬಚಾವೋ ಬೇಟಿ ಪಢಾವೋ' 'ನಾರಿ ಶಕ್ತಿ', 'ಮಹಿಳಾ ನೇತೃತ್ವದ ಅಭಿವೃದ್ಧಿ' ಎಂದೆಲ್ಲಾ ಆಕರ್ಷಕ ಪದಪುಂಜಗಳಲ್ಲಿ ಸಕಾರಾತ್ಮಕವಾಗಿ ಮಹಿಳೆಯ ಸಬಲತೆ, ಶಕ್ತಿಯನ್ನು ಬಿಂಬಿಸುತ್ತಿದ್ದ ಪ್ರಧಾನಿಯವರು 'ಮಂಗಳಸೂತ್ರವೂ ನಿಮ್ಮ ಬಳಿ ಉಳಿಯುವುದಿಲ್ಲ' ಎಂದು ಹೇಳುತ್ತಾ 'ಅಬಲೆ'ಯರಿಗೆ ತಾವೇ ರಕ್ಷಕನೆಂಬಂತೆ ಬಿಂಬಿಸಿಕೊಳ್ಳುವ ಯತ್ನ ನಡೆಸಿದ್ದಾರೆ. ಇನ್ನೂ ಎಷ್ಟು ಕಾಲ ಇಂತಹ 'ಅನುಗ್ರಹಪೂರ್ವಕ'ವಾದ 'ದೀನರಕ್ಷಾ ಶೌರ್ಯ'ದ ಮಾತುಗಳನ್ನು ಕೇಳಿಸಿಕೊಳ್ಳಬೇಕು ಭಾರತದ ಮಹಿಳೆ? ಸ್ವತಂತ್ರ ಅಸ್ಮಿತೆಯ ಮಹಿಳೆಯನ್ನು ನಮ್ಮ ರಾಜಕಾರಣಿಗಳ ರಾಜಕೀಯ ನಿರೂಪಣೆಗಳಲ್ಲಿ, ಪರಿಭಾಷೆಗಳಲ್ಲಿ ತರಲು ಇನ್ನೂ ಎಷ್ಟು ಕಾಲ ಬೇಕು?

ಶಿವಮೊಗ್ಗ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಗೀತಾ ಶಿವರಾಜ್ ಕುಮಾರ್ ಹಾಗೂ ಅವರ ಪತಿ ಚಿತ್ರನಟ ಶಿವರಾಜ್ ಕುಮಾರ್ ಅವರು ಚುನಾವಣಾ ಪ್ರಚಾರದಲ್ಲಿ ತೊಡಗಿಕೊಂಡಿದ್ದ ಸಂದರ್ಭದಲ್ಲಿ, ಬೆವರಿಳಿಸುವ ಬಿಸಿಲಿನಲ್ಲಿ ಹಣೆಯಲ್ಲಿನ ಕರಗಿದ ಕುಂಕುಮ ಒರೆಸಿಕೊಂಡ ವಿಡಿಯೊವನ್ನು ಮುಸ್ಲಿಮರ ಓಲೈಕೆಗೆ ಕುಂಕುಮ ಅಳಿಸಿ ಹಾಕಿಕೊಂಡವರು ಎಂಬರ್ಥದಲ್ಲಿ ತಿರುಚಿದಂತಹ ವಿಡಿಯೊ ವೈರಲ್ ಮಾಡಲಾಗಿತ್ತು. ಹಿಂದಿನ ವರ್ಷ ಮಾರ್ಚ್ 8ರ ಅಂತರರಾಷ್ಟ್ರೀಯ ಮಹಿಳಾ ದಿನದಂದೇ ಮಹಿಳೆಯೊಬ್ಬರನ್ನು 'ಬೊಟ್ಟು ಯಾಕಿಟ್ಟಿಲ್ಲ? ಗಂಡ ಬದುಕಿದ್ದಾನೆ ತಾನೇ?' ಎಂದೆಲ್ಲಾ ನಿಂದಿಸಿದ್ದ ಕೋಲಾರದ ಬಿಜೆಪಿಯ ಸಂಸದ ಎಸ್.ಮುನಿಸ್ವಾಮಿ ಅವರನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳದಿರುವುದು ಹೇಗೆ?


ಮಂಗಳಸೂತ್ರ, ಕುಂಕುಮ ಎಂದೆಲ್ಲಾ ಬಡಬಡಿಸಿದ ಹಾಗೆಯೇ 'ನಾನೇನೂ ಬಳೆ ತೊಟ್ಟಿಲ್ಲ' ಎಂದು ಪದೇಪದೇ ಪುರುಷ ರಾಜಕಾರಣಿಗಳು ಪಕ್ಷಾತೀತವಾಗಿ 'ಪರಾಕ್ರಮ' ಮೆರೆಯುವುದನ್ನೂ ನೋಡುತ್ತಿದ್ದೇವೆ. ಇದು ಗಂಡಸಿನ ರಕ್ಷಣೆಯಲ್ಲಿ ಇರಬೇಕಾದ ಅಬಲೆಯಾಗಿ ಹೆಣ್ಣನ್ನು ನೋಡುವ ಪಿತೃಸಂಸ್ಕೃತಿಯ ಅಭಿವ್ಯಕ್ತಿಯಲ್ಲದೆ ಮತ್ತೇನಲ್ಲ. ಹೀಗಾಗಿಯೇ ಬಸ್‌ಗಳಲ್ಲಿ ಉಚಿತ ಪ್ರಯಾಣ ಮಾಡಲು ಮಹಿಳೆಗೆ ರಾಜ್ಯದಲ್ಲಿ ಸಿಕ್ಕಿರುವ ಅವಕಾಶವನ್ನೂ ಟೀಕಿಸುತ್ತಾ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು 'ತಾಯಂದಿರು ದಾರಿ ತಪ್ಪುತ್ತಿದ್ದಾರೆ' ಎಂಬಂಥ ಮಾತುಗಳನ್ನಾಡುತ್ತಾರೆ. ಇದರ ಹಿಂದಿರುವುದೂ ಇದೇ ಸಂಸ್ಕೃತಿ, ಗಂಡಾಳಿಕೆಯ ಮನಃಸ್ಥಿತಿ.

ಸಾರ್ವಜನಿಕ ಸ್ಥಳಗಳಲ್ಲಿ ಓಡಾಟ, ಅಲೆದಾಟಗಳು ಮಹಿಳೆಗೆ ಪುರುಷನಷ್ಟು ಸುಲಭವಲ್ಲ. ಮನೆಯಿಂದ ಆಕೆ ಹೊರಬರಲು ಅನೇಕ ಅಡ್ಡಿ ಆತಂಕ, ತಾರತಮ್ಯಗಳು ಇವೆ. ಉಚಿತ ಬಸ್ ಪ್ರಯಾಣವು ದುಡಿಯುವ ಬಡ ಮಹಿಳೆಯರ ಆರ್ಥಿಕ ಸಂಕಷ್ಟವನ್ನು ಒಂದಿಷ್ಟು ಕಡಿಮೆ ಮಾಡಿದರೆ, ಮನೆಯೊಳಗೇ ಬಂದಿಯಾಗಿರುವ ಮಹಿಳೆಯರಿಗೂ ಹೊರ ಊರುಗಳಿಗೆ ಓಡಾಡಲು ಸ್ವಲ್ಪ ಸಹಕಾರಿಯಾಗಿದೆ. ಹೀಗಿರುವಾಗ, ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರ ಹಾಜರಿ ಹೆಚ್ಚಾಗುವುದನ್ನು ಸಹಿಸದಂತಹ ಮನಃಸ್ಥಿತಿ ಇಂದು ನಮ್ಮ ರಾಜಕೀಯ ರಂಗದಲ್ಲೂ ಪ್ರತಿಫಲಿಸುತ್ತಿದೆ. ಹೀಗಾಗಿಯೇ ರಾಜ್ಯ ವಿಧಾನ ಸಭೆಯಲ್ಲಿ ಶಾಸಕಿಯರ ಪ್ರಮಾಣ ನಾಚಿಕೆಗೇಡಿನ ಶೇ 4.5ರಷ್ಟು ಮಾತ್ರ ಇದೆ. ದಾವಣಗೆರೆಯ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿರುವ ಗಾಯತ್ರಿ ಸಿದ್ಧೇಶ್ವರ ಅವರು 'ಅಡುಗೆ ಮಾಡೋಕೇ ಲಾಯಕ್' ಎಂದು ಕಾಂಗ್ರೆಸ್‌ನ ಅತ್ಯಂತ ಹಿರಿಯ ಮುಖಂಡ ಶಾಮನೂರು ಶಿವಶಂಕರಪ್ಪ ಅವರು ಹೇಳಿದ ಮಾತಂತೂ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಗೆ ವಿರುದ್ಧವಾಗಿರುವ ಪೂರ್ವಗ್ರಹಗಳಿಗೆ ದ್ಯೋತಕ. ಇತ್ತೀಚಿನ ದಶಕದಲ್ಲಿ ಔದ್ಯೋಗಿಕ ಕ್ಷೇತ್ರದಲ್ಲೂ ಮಹಿಳೆಯ ಪಾಲ್ಗೊಳ್ಳುವಿಕೆ ಪ್ರಮಾಣ ಕುಸಿದಿದ್ದಕ್ಕೂ ಇದೇ ಪಿತೃಸಂಸ್ಕೃತಿ ಕಾರಣ ಎಂಬುದನ್ನು ಈಗಾಗಲೇ ಹಲವು ವಿಶ್ಲೇಷಣೆಗಳು ಹೇಳಿವೆ.

ಜಾತಿಭೇದ ಮಾತ್ರವಲ್ಲ, ಮಹಿಳೆಯನ್ನು ಪ್ರತ್ಯೇಕಿಸುವ ಮನಃಸ್ಥಿತಿಯನ್ನು ಹೋಗಲಾಡಿಸುವುದೂ ಮುಖ್ಯ ಎಂಬುದನ್ನು ಸಮಾಜವಾದಿ ಚಿಂತಕ ರಾಮಮನೋಹರ ಲೋಹಿಯಾ ಹೇಳಿದ್ದರು. 'ನಮ್ಮ ಸಮಾಜದಲ್ಲಿ ಹಾಸುಹೊಕ್ಕಾಗಿರುವ - ಜಾತಿ ಹಾಗೂ ಮಹಿಳೆ – ಈ ಎರಡು ಪ್ರತ್ಯೇಕತೆ ಅಥವಾ ಭೇದಭಾವವು ಭಾರತೀಯರ ಚೈತನ್ಯದ ಉಡುಗುವಿಕೆಗೆ ಕಾರಣವಾಗಿದೆ. ಈ ಭೇದಭಾವವು ಸಾಹಸ ಹಾಗೂ ಸಂತೋಷದ ಎಲ್ಲಾ ಸಾಮರ್ಥ್ಯಗಳನ್ನು ಕೊಲ್ಲುವ ಶಕ್ತಿ ಪಡೆದಿದೆ' ಎಂದು ಲೋಹಿಯಾ ಹೇಳಿದ್ದರು. ಅವರು ಒಮ್ಮೆ ಹೀಗೆ ಬರೆದಿದ್ದಾರೆ: 'ಒಂದು ದಿನ ಕಾಫಿ ಹೌಸ್‌ನಲ್ಲಿ ಮಾತನಾಡುತ್ತಾ ಕುಳಿತಿದ್ದ ಜನರ ಗುಂಪಿನಲ್ಲಿ ನಾನೂ ಇದ್ದೆ. ಇಂತಹ 'ಕಾಫಿ ಟಾಕ್'ಗಳೇ ಫ್ರೆಂಚ್ ಕ್ರಾಂತಿ ಹುಟ್ಟುಹಾಕಿದ್ದು ಎಂದಾಗ ನನಗೆ ತೀರಾ ಕೋಪ ಬಂತು. ಏಕೆಂದರೆ, ಆ ಗುಂಪಿನಲ್ಲಿ ನಮ್ಮ ಜೊತೆ ಒಬ್ಬ ಶೂದ್ರ ಇರಲಿಲ್ಲ, ಒಬ್ಬ ಮಹಿಳೆ ಇರಲಿಲ್ಲ.'

ಇಷ್ಟು ವರ್ಷಗಳ ನಂತರ, 'ಆಜಾದಿ ಕಾ ಅಮೃತ-ಕಾಲ'ದಲ್ಲಿದ್ದರೂ ಈ ದಿಸೆಯಲ್ಲಿ ನಾವು ಮಾಡಿರುವ ಸಾಧನೆ ಹೆಚ್ಚಿಲ್ಲ. ರಾಜಕೀಯದಲ್ಲಿ ಮಹಿಳೆ ಈಗಲೂ ಪ್ರತ್ಯೇಕಿಸಲ್ಪಟ್ಟದ್ದು ಹೊರಗಿದ್ದಾಳೆ. ಹೀಗಾಗಿ ರಾಜಕೀಯವು ಪುರುಷಮಯವಾಗಿದೆ. ಅಪ್ಪ, ಗಂಡ ಹೀಗೆ ಪುರುಷ ಬಂಧುತ್ವದ ಬಲವಿಲ್ಲದ ಮಹಿಳೆಗೆ ಚುನಾವಣಾ ರಾಜಕೀಯ ಪ್ರವೇಶವೇ ದುಸ್ತರ ಎನಿಸುವ ಸ್ಥಿತಿಯನ್ನು ನೋಡುತ್ತಿದ್ದೇವೆ. ಈಗಿನ ಲೋಕಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯದ ಪ್ರಮಾಣ ಕೇವಲ ಶೇ 14ರಷ್ಟು. 'ಲೋಹಿಯಾ ಅವರ ಶ್ರೀಮಂತ ಚಿಂತನೆಗಳು, ನಮ್ಮ ಸಮಾಜೋ-ರಾಜಕೀಯ ಚಿಂತನೆಗಳನ್ನು ರೂಪಿಸುವುದನ್ನು ಮುಂದುವರಿಸಿವೆ' ಎಂದು 2018ರಲ್ಲಿ ರಾಮಮನೋಹರ ಲೋಹಿಯಾ ಜಯಂತಿ ಸಂದರ್ಭದಲ್ಲಿ ನರೇಂದ್ರ ಮೋದಿ ಹೇಳಿದ್ದರು. ನೆಹರೂ ಅವರ ಕಟು ಟೀಕಾಕಾರರಾದ ಮೋದಿಯವರು ಲೋಹಿಯಾ ಚಿಂತನೆಗಳನ್ನು ಉಲ್ಲೇಖಿಸುತ್ತಲೇ ಇರುತ್ತಾರೆ. ಆದರೆ, ಮಹಿಳಾ ಮೀಸಲು ಮಸೂದೆಯು, 'ನಾರಿ ಶಕ್ತಿ ವಂದನಾ ಅಧಿನಿಯಮ' ಎಂಬ ವಾಗಾಡಂಬರದಲ್ಲಿ ಸದ್ಯಕ್ಕೆ ನಗದೀಕರಿಸಿಕೊಳ್ಳಲು ಸಾಧ್ಯವಾಗದ ಚೆಕ್‌ನಂತೆ ನಮ್ಮ ಮುಂದೆ ಇದೆ ಅಷ್ಟೆ.

'ಮಹಿಳೆಯರು ಸಾಧಿಸಿದ ಪ್ರಗತಿಯ ಮಟ್ಟದ ಮೂಲಕ ಸಮುದಾಯದ ಪ್ರಗತಿಯನ್ನು ನಾನು ಅಳೆಯುತ್ತೇನೆ' ಎಂದಿದ್ದರು ನಮ್ಮ ಸಂವಿಧಾನದ ಶಿಲ್ಪಿ ಬಿ.ಆರ್. ಅಂಬೇಡ್ಕರ್. ಐರೋಪ್ಯ ರಾಷ್ಟ್ರಗಳಿಗೂ ಮೊದಲೇ ಮಹಿಳೆಗೆ ಸಮಾನ ಮತದಾನದ ಹಕ್ಕು ಸಿಗಲು ಕಾರಣರಾದವರು ಅಂಬೇಡ್ಕರ್. ಮಹಿಳೆಯರ ಪ್ರಗತಿಗೆ ಭದ್ರ ಬುನಾದಿ ಹಾಕಿದ ಇಂತಹ ಮಹನೀಯರ ಚಿಂತನೆಗಳು ನಮ್ಮ ಚುನಾವಣಾ ರಾಜಕಾರಣದ ಸಂಕಥನಗಳಲ್ಲಿ ಕಾಣೆಯಾಗಿ ವಾಗ್ವಾದಗಳು ಕ್ಷುಲ್ಲಕೀಕರಣಗೊಂಡಿವೆ.



ಸಬಲೀಕರಣ ಎಂಬುದು ನಿರಂತರ ಪ್ರಕ್ರಿಯೆ. ಮಹಿಳಾ ಸಬಲೀಕರಣ ಎಂದರೆ ಅವಕಾಶಗಳ ಸಮಾನತೆ. ಸಾಮರ್ಥ್ಯ ಹೆಚ್ಚಿಸುವ ಯೋಜನೆ, ಕಾರ್ಯಕ್ರಮಗಳು ಸರ್ಕಾರದ ಹೊಣೆಗಾರಿಕೆಯೂ ಹೌದು ಎಂಬುದನ್ನು ನಮ್ಮ ರಾಜಕೀಯ ನೇತಾರರು ಅರಿತುಕೊಳ್ಳಲಿ. ಮಹಿಳೆಯರ ಬದುಕಿನಲ್ಲಿ ಪರಿವರ್ತನೆ ಬರಬೇಕೆಂದರೆ ಸಾಮಾಜಿಕ ರಚನೆಯ ಸ್ವರೂಪಗಳೂ ಬದಲಾಗಬೇಕು. ಇದಕ್ಕಾಗಿ ಶಾಸನ, ನೀತಿಗಳನ್ನು ರೂಪಿಸುವ ನಮ್ಮ ನೇತಾರರ ಮನಸ್ಸು ಸೂಕ್ಷ್ಮವಾಗಬೇಕು, ಭಾಷೆ, ನುಡಿಗಟ್ಟು ಬದಲಾಗಬೇಕು. ಹೃದಯ ವೈಶಾಲ್ಯದ ಜೊತೆಗೆ ನೇತಾರರಲ್ಲಿ ತೀವ್ರತರದಲ್ಲಿ ಹೃದಯ ಪರಿವರ್ತನೆಯೂ ಆಗಬೇಕು.

ಚುರುಮುರಿ



ಮತಸಾಲ!

● ಚಂದ್ರಕಾಂತ ವಡ್ಡು

ನಿತ್ಯ ಊಟ ಆಯ್ತಾ, ತಿಂಡಿ ಆಯ್ತಾ, ಕಾಫಿ ಆಯ್ತಾ ಎಂದು ಮಾತು ಆರಂಭಿಸುತ್ತಿದ್ದ ಮಂಜು, 'ಮತದಾನ ಆಯ್ತಾ?' ಅಂತ ಹೊಸ ಕಾಳಜಿ ತೋರಿದ.

'ನನ್ನ ಮತ ನನ್ನ ಹಕ್ಕು, ಅದನ್ನು ದಾನ ಏಕೆ ಮಾಡಲಿ?' ತಿಂಗಳೇಶನ ಪ್ರತಿರೋಧ.

'ಅರೇ... ಅದಕ್ಯಾಕೆ ದುರ್ದಾನ ಪಡೆದಂತೆ ಆಡ್ತೀಯ? ನೀನು ದಾನ ಆದ್ರೂ ಮಾಡು, ಸಾಲ ಆದ್ರೂ ಕೊಡು. ನನಗೇನು ಅನುದಾನ ಸಿಗುತ್ತಾ?' ಥೇಟ್ ಶಾಸಕನ ಹತಾಶೆ ತೋರಿದ ಮಂಜು.

'ಹಾಗೇ ಅಂದುಕೊ. ನಾನು 'ಮತದಾನ' ಮಾಡಿಲ್ಲ, 'ಮತಸಾಲ' ಕೊಟ್ಟಿದ್ದೇನೆ. ಗೆದ್ದವರು ಐದು ವರ್ಷದಲ್ಲಿ ಬಡ್ಡಿ ಸಮೇತ ಹಿಂದಿರುಗಿಸಬೇಕು'.

'ನೀನು ಕೊಟ್ಟಿದ್ದು ಸಾಲ ಅಲ್ಲ, ನಾನು ಮಾಡಿದ ಸೇವೆಗೆ ಕೂಲಿ ಅಂತಾರೆ. ಕೊಟ್ಟವ ಕೋಡಂಗಿ, ಇಸಗೊಂಡವ ಈರಭದ್ರ ಗಾದೆ ಕೇಳಿಲ್ಲವೇನು? ನೀನು 'ನನ್ನ ಸಾಲ ನನ್ನ ಹಕ್ಕು' ಅಂತ ಬ್ಯಾನರ್ ಹಿಡಿಯಬೇಕು ಇಲ್ಲವೇ ಕ್ಷಮಾದಾನ ಮಾಡಬೇಕು. 'ದಾನ'ದಿಂದ ಬಿಡುಗಡೆ ಇಲ್ಲ!'

'ಕೊನೆಗೆ ಮತದಾರರೇ ಸಾಲಮನ್ನಾ ಮಾಡಬೇಕಂತೀಯಾ...?'

'ದಾನನೂ ಬೇಡ, ಸಾಲನೂ ಬೇಡ, ಹೇಗೂ ಸುದ್ದಿ ಮಾಧ್ಯಮಗಳು ರಣಕಹಳೆ ಊದಿವೆ. ಮತದಾರರು ಮತಾಸ್ತ್ರ ಉಪಯೋಗಿಸುವುದೇ ಸರಿಯಾದ ಮಾರ್ಗ'.

'ಅದಕ್ಕೇನಂತೆ... 'ಪಾಶುಮತಾಸ್ತ್ರ' ಪ್ರಯೋಗಿಸಿ ಸದೆಬಡಿಯೋಣ! ನಿಮ್ಮೂರಿನಲ್ಲಿ ಪ್ರಜಾತಂತ್ರದ ಮಾರಿಹಬ್ಬ ಹೇಗಾಯ್ತು?'

'ಯಾರೂ ಬಾಯಿ ಬಿಡುತ್ತಿಲ್ಲ. ಬಾಯಿ ಬಿಟ್ಟರೆ ವಾಸನೆ ಗೊತ್ತಾಗುತ್ತೆ ಅಂತ ಭಯ. ಎಲ್ಲರೂ ಸಣ್ಣ ಕಳ್ಳನನ್ನು ಹುಡುಕುತ್ತಿದ್ದರು. ಆದರೆ ಕೊಟ್ರೇಶಿ ಮಾತ್ರ ನನಗೆ ದೊಡ್ಡ ಕಳ್ಳನೇ ಬೇಕು ಅಂತ ಹಟ ತೊಟ್ಟಿದ್ದ. ಸಣ್ಣ ಕಳ್ಳನು ದೊಡ್ಡ ಕಳ್ಳ ಆಗುವ ಭರಾಟೆಯಲ್ಲಿ ಹೆಚ್ಚೆಚ್ಚು ದೋಚುತ್ತಾನೆ ಅಂಬೋದು ಅವನ ತರ್ಕ'.

'ಬಲಿ ಯಾವುದೇ ಇರಲಿ, ಊರಹಬ್ಬದಲ್ಲಿ ಉಂಡೋನೇ ಜಾಣ ಬಿಡು' ತಿಂಗಳೇಶ ಮಂಗಳ ಹಾಡಿದ.

ದಿನದ ಟ್ವೀಟ್

ಹೀಗಾದರೂ ಮಾಡಿ...

ಮತದಾರರ ಗುರುತಿನ ಚೀಟಿಯೊಂದಿಗೆ ಆಧಾರ್ ಅನ್ನು ಲಿಂಕ್ ಮಾಡಿ. ಆಗ ಮತದಾರರ ನಕಲಿ ಗುರುತಿನ ಚೀಟಿಗಳು ಕನಿಷ್ಠ ಶೇ 20– 25ರಷ್ಟಾದರೂ ಕಣ್ಮರೆಯಾಗಬಹುದು. ಮತದಾನದ ಪ್ರಮಾಣ ಉತ್ತಮವಾಗುವುದಕ್ಕೆ ಸ್ವಲ್ಪಮಟ್ಟಿಗಾದರೂ ಅದರಿಂದ ನೆರವಾಗಬಹುದು.

ನಾಗೇಂದ್ರ ಶಾಸ್ತ್ರಿ, ಸಾಫ್ಟ್‌ವೇರ್ ಎಂಜಿನಿಯರ್

ಕಿಡಿನುಡಿ

ಬೆಂಗಳೂರಿನ ಮತದಾರರಿಗೆ ನಾಚಿಕೆಯಾಗಬೇಕು. ಇಷ್ಟೊಂದು ಕಡಿಮೆ ಮತದಾನ?! ಇಂತಹ ಮತ ಪ್ರಮಾಣದೊಂದಿಗೆ, ಮೂಲ ಸೌಕರ್ಯ ಮತ್ತು ಸವಲತ್ತುಗಳನ್ನು ಯಾವ ಮುಖ ಇಟ್ಟುಕೊಂಡು ಕೇಳುತ್ತೀರಿ?!



ಡಾ. ಭಾಸ್ಕರ್ ರಾಜಕುಮಾರ್

25 ವರ್ಷಗಳ ಹಿಂದೆ

ಮಂಗಳವಾರ, 27-4-1999

● **ಲೋಕಸಭೆ ವಿಸರ್ಜನೆ ಮಧ್ಯಂತರ ಚುನಾವಣೆ**

ನವದೆಹಲಿ, ಏ. 26– ಬಿಜೆಪಿ ನೇತೃತ್ವದ ಸರ್ಕಾರ ವಿಶ್ವಾಸಮತ ಕಳೆದುಕೊಂಡ ಹಿನ್ನೆಲೆಯಲ್ಲಿ ಪರ್ಯಾಯ ಸರ್ಕಾರ ರಚನೆಯ ಸಾಧ್ಯತೆಗಳು ಪೂರ್ಣವಾಗಿ ವಿಫಲಗೊಂಡದ್ದರಿಂದ ಕೇಂದ್ರ ಸಂಪುಟದ ಶಿಫಾರಸಿನ ಮೇಲೆ ಹನ್ನೆರಡನೇ ಲೋಕಸಭೆಯನ್ನು ರಾಷ್ಟ್ರಪತಿ ಅವರು ಇಂದು ಸಂಜೆ ವಿಧ್ಯುಕ್ತವಾಗಿ ವಿಸರ್ಜಿಸಿದರು.

ಹನ್ನೊಂದನೇ ಲೋಕಸಭೆಯು ಹದಿನೆಂಟು ತಿಂಗಳಿಗೆ ವಿಸರ್ಜನೆಯಾದರೆ, ಅಲ್ಪಾಯುಷಿ ಹನ್ನೆರಡನೇ ಲೋಕಸಭೆಯು ಹದಿಮೂರು ತಿಂಗಳಿಗೆ ವಿಸರ್ಜನೆಗೊಂಡಿತು. ಈ ಸಂಬಂಧ ರಾಷ್ಟ್ರಪತಿ ಭವನದ ಪ್ರಕಟಣೆ ಸಂಜೆ ಹೊರಬಿದ್ದಿತು. ಇದರಿಂದ ಲೋಕಸಭೆಗೆ ಮತ್ತದೇ ಒಂದೂವರೆ ವರ್ಷದಲ್ಲಿಯೇ ಮಧ್ಯಂತರ ಚುನಾವಣೆ ಅನಿವಾರ್ಯವಾಗಿದೆ.

● **ವಿಸರ್ಜನೆಗೆ ಪ್ರತಿಪಕ್ಷಗಳ ಪರಸ್ಪರ ದೂಷಣೆ**

ನವದೆಹಲಿ, ಏ. 26 (ಯುಎನ್‌ಐ, ಪಿಟಿಐ): ವಾಜಪೇಯಿ ನೇತೃತ್ವದ ಸರ್ಕಾರವನ್ನು ಉರುಳಿಸುವಲ್ಲಿ ಅಪರೂಪದ 'ಏಕತೆ'ಯನ್ನು ತೋರಿದ ವಿರೋಧ ಪಕ್ಷಗಳು, ಈಗ ಲೋಕಸಭೆ ವಿಸರ್ಜನೆಯ ಹಿನ್ನೆಲೆಯಲ್ಲಿ ಪರಸ್ಪರ ದೂಷಿಸತೊಡಗಿವೆ.

ತಾನು ಪರ್ಯಾಯ ಸರ್ಕಾರ ರಚಿಸಲು ಸಾಧ್ಯವಾಗದ್ದಕ್ಕೆ ಕಾರಣ ಮುಲಾಯಂ ಸಿಂಗ್ ಎಂದು ಕಾಂಗ್ರೆಸ್ ದೂರಿದ್ದರೆ, ಪ್ರಸಕ್ತ ರಾಜಕೀಯ ಪರಿಸ್ಥಿತಿಗೆ ಸಮಾಜವಾದಿ ಪಕ್ಷ, ಆರ್‌ಎಸ್‌ಪಿ ಹಾಗೂ ಫಾರ್ವರ್ಡ್ ಬ್ಲಾಕ್ ಕಾರಣ ಎಂದು ಸಿಪಿಎಂ ಮುಖಂಡ ಹರ್‌ಕಿಷನ್ ಸಿಂಗ್ ಸುರ್ಜಿತ್ ಆರೋಪಿಸಿದ್ದಾರೆ. ಈ ಪಕ್ಷಗಳ 'ಜನಾಂಗೀಯ' ನಿಲುವಿನಿಂದಾಗಿ ಬಿಜೆಪಿಗೆ ಲಾಭವಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 27-4-1974

● **ಧರಣಿ ಮುಕ್ತಾಯ: ಸೊಂಡೂರು ಪ್ರಕರಣ– ನ್ಯಾಯಾಂಗ ತನಿಖೆಗೆ ಸರ್ಕಾರದ ಒಪ್ಪಿಗೆ**

ಬೆಂಗಳೂರು, ಏ. 26– ಸೊಂಡೂರಿನ ಶ್ರೀ ವೈ. ತಿಮ್ಮಪ್ಪ ಅವರ ಬಂಧನಕ್ಕೆ ಕಾರಣವಾದ 'ಸಂದರ್ಭ' ಮತ್ತಿತರ ವಿಷಯಗಳಿಗೆ ಸಂಬಂಧಿಸಿದಂತೆ ನ್ಯಾಯಾಂಗಾಧಿಕಾರಿಯಿಂದ ವಿಚಾರಣೆ ನಡೆಸಲು ಸರ್ಕಾರ ಒಪ್ಪಿದ ಕಾರಣ, ನಿನ್ನೆ ಆರಂಭವಾದ ವಿಧಾನಸಭೆಯ ವಿರೋಧಿ ಸದಸ್ಯರ ಧರಣಿ ಇಂದು ಮುಕ್ತಾಯವಾಯಿತು.

ಆನಂತರ ಸಭೆಯಲ್ಲಿ ಶಾಂತ ವಾತಾವರಣ ಉಂಟಾಗಿ ದಿನದ ಕಾರ್ಯಕ್ರಮ ನಡೆಯಿತು.

ರಾತ್ರಿಯೆಲ್ಲ ವಿಧಾನಸಭಾ ಭವನ ಹಾಗೂ ಲಾಬಿಗಳಲ್ಲಿ ಧರಣಿ ಮುಂದುವರಿದರೆ, ವಿರೋಧಿ ಸದಸ್ಯರೊಡನೆ ಸಂಸದೀಯ ಸಚಿವ ಶ್ರೀ ಎಸ್.ಎಂ. ಕೃಷ್ಣ ಅವರು ಸಮಾಲೋಚನೆ ನಡೆಸಿದರು.

● **ಇಂದಿನಿಂದ ಇನ್ನೂ 102 ರೈಲುಗಳ ಸಂಚಾರ ರದ್ದು**

ನವದೆಹಲಿ, ಏ. 26– ಮುಂದಿನ ತಿಂಗಳ 8ರಿಂದ ರೈಲ್ವೆ ಮುಷ್ಕರ ಆರಂಭಿಸುವ ಬೆದರಿಕೆ ಇರುವುದರಿಂದ, ಅತ್ಯಗತ್ಯ ರೈಲುಗಳ ಸಂಚಾರಕ್ಕೆ ಕಲ್ಲಿದ್ದಲನ್ನು ಉಳಿತಾಯ ಮಾಡುವ ಸಲುವಾಗಿ ನಾಳೆಯಿಂದ ಇನ್ನೂ 102 ಪ್ರಯಾಣಿಕ ರೈಲುಗಳ ಓಡಾಟವನ್ನು ರದ್ದುಪಡಿಸುವುದಾಗಿ ರೈಲ್ವೆ ಇಲಾಖೆಯು ಇಂದು ಪ್ರಕಟಿಸಿದೆ.

ಸಂಚಾರ ರದ್ದುಪಡಿಸುವುದಾಗಿ ನಿನ್ನೆ ಪ್ರಕಟಿಸಿದ 98 ರೈಲುಗಳೂ ಸೇರಿ ಒಟ್ಟು 200 ರೈಲುಗಳು ನಾಳೆಯಿಂದ ಓಡಾಡುವುದಿಲ್ಲ.

ಸಂಗತ

ಐ-ಸ್ಟೆಮ್: ಸಂಶೋಧನೆಗೆ ಪೂರಕ

ಸಂಶೋಧಕರು ಮತ್ತು ಸಂಶೋಧನಾ ಸಂಪನ್ಮೂಲಗಳನ್ನು ಬೆಸೆಯುವ ತನ್ನ ಮೂಲ ಉದ್ದೇಶದಲ್ಲಿ ಈ ಉಪಕ್ರಮ ಯಶಸ್ಸು ಕಾಣಬೇಕಿದೆ

● ಎಚ್.ಕೆ.ಶರತ್

ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಜ್ಞಾನಶಾಖೆಗಳಲ್ಲಿ ಸಂಶೋಧನೆ ಕೈಗೊಳ್ಳುವವರನ್ನು ತೀವ್ರವಾಗಿ ಕಾಡುವ ಪ್ರಮುಖ ಸಂಗತಿಯೆಂದರೆ, ಮೂಲಸೌಕರ್ಯಗಳ ಅಲಭ್ಯತೆ. ಪ್ರಯೋಗಗಳನ್ನು ಆಧರಿಸಿ ಸಂಶೋಧನೆ ನಡೆಸುವವರಿಗೆ ಬೇಕಿರುವ ಉಪಕರಣಗಳು, ತಂತ್ರಾಂಶ ಹಾಗೂ ಸಂಶೋಧನಾ ಪತ್ರಿಕೆಗಳು ಸುಲಭಕ್ಕೆ ಕೈಗೆಟುಕಲಾರವು.

ಉನ್ನತ ಶಿಕ್ಷಣ ವಲಯದಲ್ಲಿ ಹಿಂದಿನ ಒಂದೆರಡು ದಶಕಗಳಿಂದ ಸಂಶೋಧನೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಆದರೆ, ಸಂಶೋಧನೆ ಕೈಗೊಳ್ಳಲು ಅಗತ್ಯವಿರುವ ಮೂಲಸೌಕರ್ಯಗಳು ದೇಶದಾದ್ಯಂತ ಶೈಕ್ಷಣಿಕ ಸಂಸ್ಥೆಗಳು ಹಾಗೂ ಪ್ರಯೋಗಾಲಯಗಳಲ್ಲಿ ಚದುರಿದಂತಿವೆ. ಸಂಶೋಧನೆಗಾಗಿ ಸರ್ಕಾರ ಹಾಗೂ ಖಾಸಗಿ ವಲಯದಿಂದ ಹೆಚ್ಚು ಸಂಪನ್ಮೂಲ ದಕ್ಕಿಸಿಕೊಳ್ಳಲು ಶಕ್ತವಿರುವ ಐಐಟಿ, ಐಐಎಸ್‌ಸಿ, ಎನ್‌ಐಟಿ, ಕೆಲ ಖಾಸಗಿ ವಿಶ್ವವಿದ್ಯಾಲಯಗಳು ಹಾಗೂ ಸಂಶೋಧನಾ ಕೇಂದ್ರಗಳಲ್ಲಿ ಹೆಚ್ಚಿನ ಸೌಲಭ್ಯಗಳು ಲಭ್ಯವಿದ್ದರೆ, ಉಳಿದೆಡೆ ಲಭ್ಯವಿರುವ ಮೂಲಸೌಕರ್ಯಗಳು ಹೇಳಿಕೊಳ್ಳುವಂತೇನಿಲ್ಲ.

ತಮ್ಮ ಸಂಶೋಧನೆಗೆ ಅಗತ್ಯವಿರುವ ಉಪಕರಣಗಳು ಹಾಗೂ ತಂತ್ರಾಂಶ ಎಲ್ಲಿ ಲಭ್ಯವಿವೆ ಮತ್ತು ಅವುಗಳನ್ನು ಬಳಸಿಕೊಂಡು ಸಂಶೋಧನೆ ಕೈಗೊಳ್ಳಲು ಬೇಕಿರುವ ಅನುಮತಿ ಪಡೆದುಕೊಳ್ಳಲು ಯಾರನ್ನು ಸಂಪರ್ಕಿಸಬೇಕು ಮತ್ತು ಯಾವೆಲ್ಲ ಕ್ರಮಗಳನ್ನು ಪಾಲಿಸಬೇಕು ಎಂಬ ಕುರಿತು ಸೂಕ್ತ ಮಾಹಿತಿ ದೊರೆಯದೆ, ಸಂಶೋಧನೆಯಲ್ಲಿ ತೊಡಗಿರುವವರು ಪರದಾಡುವ ಪರಿಸ್ಥಿತಿ ಇಂದಿಗೂ ಇದೆ. ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಸಂಶೋಧನೆ ನಡೆಸುವವರು ಎದುರಿಸಿಕೊಂಡೇ ಬಂದಿರುವ ಈ ಸಮಸ್ಯೆಗೆ ಪರಿಹಾರ ಹುಡುಕುವ ಉಪಕ್ರಮಕ್ಕೆ ಹಿಂದಿನ ನಾಲ್ಕು ವರ್ಷಗಳ ಹಿಂದೆಯೇ ಚಾಲನೆ ದೊರೆತಿದೆ.

ಒಕ್ಕೂಟ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರರ ಕಚೇರಿಯ ಮೇಲುಸ್ತುವಾರಿ ಮತ್ತು ಬೆಂಬಲದೊಂದಿಗೆ ನಡೆಯುತ್ತಿರುವ ಐ-ಸ್ಟೆಮ್ (ಇಂಡಿಯನ್ ಸೈನ್ಸ್ ಟೆಕ್ನಾಲಜಿ ಆ್ಯಂಡ್ ಎಂಜಿನಿಯರಿಂಗ್ ಫೆಸಿಲಿಟೀಸ್ ಮ್ಯಾಪ್) ಉಪಕ್ರಮ ತನ್ನ ಮೂಲ ಉದ್ದೇಶವಾದ ಸಂಶೋಧಕರು ಮತ್ತು ಸಂಶೋಧನಾ ಸಂಪನ್ಮೂಲಗಳನ್ನು ಬೆಸೆಯುವ ದಿಸೆಯಲ್ಲಿ ಯಶಸ್ಸು ಕಂಡರೆ, ಸಂಶೋಧಕರಿಗೆ ಇದರಿಂದ ಬಹಳಷ್ಟು ಅನುಕೂಲವಾಗಲಿದೆ.

2020ರ ಜನವರಿ 3ರಂದು ಚಾಲನೆಗೊಂಡ ಐ-ಸ್ಟೆಮ್, ಸಂಶೋಧಕರು ಮತ್ತು ಸಂಶೋಧನಾ ಸಂಪನ್ಮೂಲಗಳನ್ನು ಬೆಸೆಯುವ ಸಲುವಾಗಿ ತನ್ನದೇ ಆದ ಜಾಲತಾಣವನ್ನು ಹೊಂದಿದೆ. ಸಂಶೋಧನೆಗೆ ಅಗತ್ಯವಿರುವ ಸಂಪನ್ಮೂಲಗಳನ್ನು ಹೊಂದಿರುವ ಸಂಸ್ಥೆಗಳು ಇದರಲ್ಲಿ ನೋಂದಣಿ ಮಾಡಿಕೊಂಡು, ತಮ್ಮಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ನಮೂದಿಸಬಹುದು. ಸಂಶೋಧಕರು ಕೂಡ ಪೋರ್ಟಲ್‌ನಲ್ಲಿ ನೋಂದಣಿಯಾಗಿ ತಮ್ಮ ಸಂಶೋಧನೆಗೆ ಅಗತ್ಯವಿರುವ ಸಂಪನ್ಮೂಲಗಳು ಎಲ್ಲಿ ಲಭ್ಯ ಇವೆ ಎಂಬುದನ್ನು ತಿಳಿದುಕೊಂಡು, ಈ ಪೋರ್ಟಲ್ ಮೂಲಕವೇ ಕಾಯ್ದಿರಿಸಬಹುದು. ಅದಾದ ನಂತರ, ಸಂಪನ್ಮೂಲ ಹೊಂದಿರುವ ಸಂಸ್ಥೆ ನಿಗದಿಪಡಿಸುವ ಶುಲ್ಕ ಪಾವತಿಸಿ, ತಮ್ಮ ಸಂಶೋಧನೆಗೆ ಅಗತ್ಯವಿರುವ ಪ್ರಯೋಗಗಳನ್ನು ಕೈಗೊಳ್ಳಬಹುದು. ಪರೀಕ್ಷೆಗಳನ್ನು ನಡೆಸಿ ವರದಿ ಪಡೆದುಕೊಳ್ಳಬಹುದು. 2024ರ ಫೆ. 23ರವರೆಗೆ ಪೋರ್ಟಲ್‌ನಲ್ಲಿ 2,361ಕ್ಕೂ ಹೆಚ್ಚು ಸಂಸ್ಥೆಗಳು, 30,081ಕ್ಕೂ ಹೆಚ್ಚು ಬಳಕೆದಾರರು ನೋಂದಣಿಯಾಗಿದ್ದಾರೆ. ಇಲ್ಲಿ 26,223ಕ್ಕೂ ಅಧಿಕ ಉಪಕರಣಗಳನ್ನು ಪಟ್ಟಿ ಮಾಡಲಾಗಿದೆ.

ಮೇಲ್ನೋಟಕ್ಕೆ ಸಂಶೋಧಕರ ಪಾಲಿಗೆ ವರದಾನವಾಗಿ ಪರಿಣಮಿಸುವ ಹಾಗೆ ತೋರುವ ಈ ಉಪಕ್ರಮವನ್ನು ಪರಿಣಾಮಕಾರಿಯಾಗಿ ರೂಪಿಸಿ, ಮುನ್ನಡೆಸಿಕೊಂಡು ಹೋಗುವುದು ಸರಳವೇನಲ್ಲ. ತೀರಾ ಪ್ರತಿಷ್ಠಿತ ಉನ್ನತ ಶಿಕ್ಷಣ ಸಂಸ್ಥೆಗಳನ್ನೂ ಒಳಗೊಂಡಂತೆ ದೇಶದ ವಿವಿಧೆಡೆ ಲಭ್ಯವಿರುವ ಸಂಶೋಧನಾ ಸಂಪನ್ಮೂಲಗಳ ಬಳಕೆ ಮತ್ತು ನಿರ್ವಹಣೆಯಲ್ಲಿ ಬಹಳಷ್ಟು ಸಮಸ್ಯೆಗಳಿವೆ. ದುಬಾರಿಯಾದ ಉಪಕರಣಗಳು ಪ್ರಯೋಗಾಲಯಗಳಲ್ಲಿ ಇದ್ದರೂ ಅವುಗಳನ್ನು ವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸದ ಕಾರಣದಿಂದ ಅವು ಬಹುತೇಕ ಸಂದರ್ಭಗಳಲ್ಲಿ ಬಳಕೆಗೆ ಯೋಗ್ಯವಾಗಿ ಇರುವುದಿಲ್ಲ. ಇನ್ನು ಕೆಲವೆಡೆ ಉತ್ತಮ ನಿರ್ವಹಣೆ ಇದ್ದರೂ, ಸಂಪನ್ಮೂಲಗಳ ಸದುಪಯೋಗಕ್ಕೆ ಎಲ್ಲರಿಗೂ ಮುಕ್ತ ಅವಕಾಶ ದೊರೆಯದು. ಆಯಾ ಸಂಪನ್ಮೂಲದ ನಿರ್ವಹಣೆಯ ಹೊಣೆ ಹೊತ್ತವರ ವೈಯಕ್ತಿಕ ಹಿತಾಸಕ್ತಿಗಳು ಮುನ್ನೆಲೆಗೆ ಬಂದು, ಸಂಶೋಧಕರ ಹಿತ ಕಾಯುವ ಆಶಯ ಈಡೇರದಿರುವುದೂ ಇದೆ.



ಐಐಎಸ್‌ಸಿ, ಐಐಟಿ, ಎನ್‌ಐಟಿ ಹಾಗೂ ಕೆಲ ಸಂಶೋಧನಾ ಕೇಂದ್ರಗಳ ಬಳಿಯೇ ಕೇಂದ್ರೀಕೃತವಾಗಿರುವ ಸಂಪನ್ಮೂಲಗಳನ್ನು ಯಾವುದೇ ಶಿಫಾರಸು ಅಥವಾ ವ್ಯಕ್ತಿಗತ ಪರಿಚಯವಿಲ್ಲದಿದ್ದರೂ ಬಳಸುವ ಮುಕ್ತ ಅವಕಾಶ ಸಂಶೋಧಕರಿಗೆ ಸಿಗಬೇಕು. ಇದನ್ನು ಸಾಧ್ಯವಾಗಿಸಲು ಐ-ಸ್ಟೆಮ್ ಉಪಕ್ರಮ ಪೂರಕವಾಗಿ ಕಾರ್ಯನಿರ್ವಹಿಸಬಲ್ಲದು.

ಸರ್ಕಾರಿ ಯೋಜನೆಗಳನ್ನು ಸರ್ವೇಸಾಮಾನ್ಯವಾಗಿ ಆವರಿಸುವ ಜಡತ್ವವು ಐ-ಸ್ಟೆಮ್ ಉಪಕ್ರಮಕ್ಕೂ ಆವರಿಸಿಕೊಳ್ಳದ ಹಾಗೆ ಎಚ್ಚರ ವಹಿಸಬೇಕಿದೆ. ಇದರ ಅನುಷ್ಠಾನದ ಹೊಣೆ ಹೊತ್ತವರಿಗೆ ದೇಶದಲ್ಲಿನ ವೈಜ್ಞಾನಿಕ ಸಂಶೋಧನಾ ಗುಣಮಟ್ಟ ವೃದ್ಧಿಸುವುದೇ ಆದ್ಯತೆಯಾದಾಗ ಮಾತ್ರ, ಇದು ಸಂಶೋಧನೆ ಕೈಗೊಳ್ಳುವವರ ಪಾಲಿಗೆ ವರದಾನವಾಗಲಿದೆ.

ವಾಚಕರ ವಾಣಿ

ನಾಡಗೀತೆ: ಕಡ್ಡಾಯಕ್ಕೆ ಆಗ್ರಹಿಸುವ ಮುನ್ನ...

'ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ಎಂಬ ಭೇದವಿಲ್ಲದೆ ಎಲ್ಲ ಶಾಲೆಗಳಲ್ಲಿ ಹಾಗೂ ಕನ್ನಡ ಕಾರ್ಯಕ್ರಮಗಳಲ್ಲಿ ನಾಡಗೀತೆ ಗಾಯನದ ಆದೇಶವನ್ನು ಸರ್ಕಾರ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಆಗ್ರಹಿಸಿರುವುದೇನೋ (ಪ್ರ.ವಾ., ಏ. 26) ಸರಿ. ಆದರೆ ಇಲ್ಲೊಂದು ತೊಡಕಿದೆ. ನಾಡಗೀತೆಯನ್ನು ಕಡ್ಡಾಯಗೊಳಿಸಲು ಸರ್ಕಾರವನ್ನು ಒತ್ತಾಯಿಸಿರುವ ಕಸಾಪ ಅಧ್ಯಕ್ಷರು, ನಾಡಿನ ಎಷ್ಟು ಶಾಲೆಗಳಲ್ಲಿ ಸಂಗೀತದ ಶಿಕ್ಷಕರಿದ್ದಾರೆ ಎಂಬುದನ್ನೂ ತಿಳಿದುಕೊಳ್ಳಬೇಕು. ಇಲ್ಲದ ಕಡೆಗಳಲ್ಲಿ ಶಿಕ್ಷಕರನ್ನು ನೇಮಿಸುವಂತೆಯೂ ಆಗ್ರಹಿಸಬೇಕು. ಕನ್ನಡ ಕಾರ್ಯಕ್ರಮವನ್ನು ರೂಪಿಸುವ ಎಲ್ಲಾ ಸಂಘಟಕರು ಮತ್ತು ಸಂಘ ಸಂಸ್ಥೆಗಳ ಸದಸ್ಯರಿಗೆ ನಾಡಗೀತೆ ಹಾಡಲು ಸರಿಯಾಗಿ ಗೊತ್ತಿರಬೇಕೆಂದೂ ಆಗ್ರಹಿಸಬೇಕು. ನಿಯಮ ಜಾರಿಯಾಗುತ್ತಿದೆಯೋ ಇಲ್ಲವೋ ಎಂಬುದನ್ನು ನೋಡಿಕೊಳ್ಳಲು ಕಾವಲು ಪಡೆ ನೇಮಿಸುವ ಅಗತ್ಯವೂ ಇದೆ.

ಇಷ್ಟಾಗದೆ ಏಕಾಏಕಿ ಜಾರಿಗೆ ಆಗ್ರಹಿಸಿದರೆ, ಭೂಮಿಯನ್ನೇ ಹಸನು ಮಾಡದ ರೈತ, ಬೀಜ ಬಿತ್ತಿದಂತೆ ಆಗುತ್ತದೆ. ಅಲ್ಲದೆ, ನಾಡಗೀತೆ ಗಾಯನ ತಂಡಕ್ಕೆ ಮೊದಲು ಆಹ್ವಾನ ಕೊಟ್ಟು ನಂತರ ಕನ್ನಡ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಶಾಲೆಗಳಿಗೂ ಕಡ್ಡಾಯವಾಗಿ ನಾಡಗೀತೆ ಗಾಯನ ತಂಡವನ್ನು ನೇಮಿಸಿಕೊಳ್ಳುವ ಅಗತ್ಯ ಬರುತ್ತದೆ. ಸರ್ಕಾರ ಈ ಎಲ್ಲವನ್ನೂ ಗಮನಿಸಿ, ಸಂಗೀತ ಶಿಕ್ಷಕರನ್ನು ನೇಮಿಸುವ, ಇಲ್ಲವೇ ವೃತ್ತಿಪರ ನಾಡಗೀತೆ ಗಾಯನ ತಂಡಗಳು ಬೆಳೆಯಲು ಅವಕಾಶ ಕೊಡುವ, ಇಲ್ಲವೇ ಆನು ಒಲಿದಂತೆ ಹಾಡಲು ಬಿಟ್ಟು ಈ ಹಿಂದಿನ ಸರ್ಕಾರ ನೀಡಿದ್ದ ಆದೇಶವನ್ನು ರದ್ದುಪಡಿಸುವ ಸೂಕ್ತ ತೀರ್ಮಾನಕ್ಕೆ ಬರಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ನೀರಸ ಮತದಾನ: ಬೆಂಗಳೂರಿಗರೇಕೆ ಹೀಗೆ?

ಹಿಂದಿನ ವರ್ಷ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬೆಂಗಳೂರು ನಗರದ ವಿವಿಧ ಕ್ಷೇತ್ರಗಳ ಮತದಾನದ ಶೇಕಡಾವಾರು ಪ್ರಮಾಣ ತೀರಾ ಕಡಿಮೆ ಇತ್ತು. ಈ ಬಾರಿ ಲೋಕಸಭಾ ಚುನಾವಣೆಯಲ್ಲೂ ಬೆಂಗಳೂರು ನಗರದ ಮತದಾರರು ಅದೇ ಹಳೆಯ ದಾರಿ ತುಳಿದದ್ದು ತುಂಬಾ ನಿರಾಶಾದಾಯಕ. ಪ್ರಜ್ಞಾವಂತ, ಸುಶಿಕ್ಷಿತ ಮತ್ತು ಪ್ರಬುದ್ಧ ಜನರಿರುವ ಬೆಂಗಳೂರಿನಂತಹ ಮಹಾನಗರದಲ್ಲಿ ಮತದಾನದ ಪ್ರಮಾಣ ಹೆಚ್ಚಾಗಿ ಆಗಬೇಕೆಂಬ ನಿರೀಕ್ಷೆ ಸಹಜವಾದುದು. ಆದರೆ ಹಾಗಾಗದಿರುವುದು ನಿರಾಸೆಯನ್ನು ಉಂಟುಮಾಡಿದೆ. ಚುನಾವಣಾ ಆಯೋಗ ಪ್ರತಿಬಾರಿ ಚುನಾವಣೆಯ ಸಂದರ್ಭದಲ್ಲಿ ಬಹಳಷ್ಟು ಹಣ ಖರ್ಚು ಮಾಡಿ ಮತದಾನದ ಹಕ್ಕಿನ ಬಗ್ಗೆ ಜಾಗೃತಿ ಮೂಡಿಸಲು ಪ್ರಯತ್ನಿಸುವುದು ವ್ಯರ್ಥ ಎನ್ನಿಸುತ್ತದೆ.

ನಗರದ ನಾಗರಿಕರು ಮತ್ತು ಯುವಕರಲ್ಲಿ ಪ್ರಸಕ್ತ ರಾಜಕೀಯ ವ್ಯವಸ್ಥೆಯ ಬಗ್ಗೆ ಬೇಸರವೋ ಮತದಾನದ ದಿನದಂದು ಸಿಗುವ ರಜೆಯನ್ನು ಪ್ರವಾಸ, ಮೋಜು-ಮಸ್ತಿಗೆ ವಿನಿಯೋಗಿಸಿಕೊಳ್ಳುವುದು ಇದಕ್ಕೆ ಕಾರಣವೋ ಎಂಬ ಪ್ರಶ್ನೆಗಳು ಮೂಡುತ್ತವೆ. ಒಟ್ಟಿನಲ್ಲಿ ಸುಸ್ಥಿರ ಪ್ರಜಾಪ್ರಭುತ್ವ ಕಟ್ಟುವಲ್ಲಿ ಮತ್ತು ಉಜ್ವಲ ಭವಿಷ್ಯಕ್ಕಾಗಿ ಈ ಪ್ರಜಾತಂತ್ರದ ಹಬ್ಬದಲ್ಲಿ ಎಲ್ಲರೂ ಕಡ್ಡಾಯವಾಗಿ ಭಾಗವಹಿಸಬೇಕು. ಸಮರ್ಥ ಪ್ರತಿನಿಧಿಯನ್ನು ಆಯ್ಕೆ ಮಾಡಲು ಮತದಾರರು ತಮ್ಮ ಪಾತ್ರವನ್ನು ಸಮರ್ಪಕವಾಗಿ ನಿರ್ವಹಿಸಬೇಕು ಎಂಬುದನ್ನು ಎಲ್ಲರೂ ತಿಳಿದುಕೊಳ್ಳಬೇಕಾಗಿದೆ.

ಮಲ್ಲಿಕಾರ್ಜುನ ತೇಲಿ ಗೋಠೆ, ಜಮಖಂಡಿ

ಅಂತ್ಯವಾಗದ ಬಹಿರಂಗ ಪ್ರಚಾರ!

ಲೋಕಸಭಾ ಚುನಾವಣೆಯಲ್ಲಿ ಶುಕ್ರವಾರ ಪ್ರಮುಖ ಪಕ್ಷದ ಅಭ್ಯರ್ಥಿಗಳೂ ಸೇರಿದಂತೆ ವಿವಿಧ ಕ್ಷೇತ್ರಗಳ ಸುಪ್ರಸಿದ್ಧರು ಮತದಾನ ಮಾಡಿದ್ದನ್ನು ದೃಶ್ಯ ಮಾಧ್ಯಮಗಳು ಪ್ರಸಾರ ಮಾಡಿ ಇತರರಿಗೆ ಸ್ಫೂರ್ತಿ ತಂದಿದ್ದು ಮೆಚ್ಚತಕ್ಕದ್ದು. ಆದರೆ ಅದೇ ಸಂದರ್ಭದಲ್ಲಿ ಅಭ್ಯರ್ಥಿಗಳು ಮತದಾನ ಮಾಡಿದ್ದನ್ನು ಪ್ರಸಾರ ಮಾಡುವಾಗ, ವರದಿಗಾರರು ಸದರಿ ಅಭ್ಯರ್ಥಿಗಳ ಎದುರು ಮೈಕ್ ಹಿಡಿದು ಮಾತನಾಡಿಸಿದರು. ಆ ಅಭ್ಯರ್ಥಿಗಳೂ ಅಷ್ಟೇ ಸಾಕೆಂಬಂತೆ ತಮ್ಮ ಮತ್ತು ತಮ್ಮ ಪಕ್ಷದ ಕುರಿತು ಭರಪೂರ ಮಾತನಾಡಿದರು. ಇದು ಪರೋಕ್ಷವಾಗಿ ಬಹಿರಂಗ ಪ್ರಚಾರ ಆಗುವುದಿಲ್ಲವೇ? ಈ ವಿಚಾರದ ಕುರಿತು ಚುನಾವಣಾ ಆಯೋಗ ಸ್ಪಷ್ಟ ನಿರ್ದೇಶನ ನೀಡಬೇಕು. ಇಲ್ಲವಾದಲ್ಲಿ, ಬಹಿರಂಗ ಪ್ರಚಾರ ಅಂತ್ಯ ಎಂಬ ಮಾತು ನಗೆಪಾಟಲಾದೀತು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಅರಿವಿನ ಪ್ರಚಾರಕ್ಕಿಂತ ಪ್ರಚಾರದ್ದೇ ಅಬ್ಬರ

ಮತದಾನ ಅತ್ಯಂತ ಕಡಿಮೆ ಪ್ರಮಾಣದಲ್ಲಿ ನಡೆಯುವ ಕುರಿತು ಡಾ. ಮುರಳೀಧರ ಕಿರಣಕೆರೆ ತಮ್ಮ ಲೇಖನದಲ್ಲಿ (ಸಂಗತ, ಏ. 26) ಕಳಕಳಿ ವ್ಯಕ್ತಪಡಿಸಿದ್ದಾರೆ. ಇಂತಹ ಸ್ಥಿತಿಗೆ ಕಾರಣ ಇಷ್ಟೆ. ಮತದಾನ ಪ್ರಕ್ರಿಯೆಯ ಕುರಿತು ಪ್ರಜೆಗಳಿಗೆ ಅರಿವು ಮೂಡಿಸುವುದಕ್ಕಿಂತ ಜನಪ್ರತಿನಿಧಿಗಳ ಪ್ರಚಾರದ ಅಬ್ಬರವೇ ಹೆಚ್ಚಾಗಿರುತ್ತದೆ. ಮತದಾನದ ಮೌಲ್ಯ, ಮತಗಟ್ಟೆಯಲ್ಲಿ ಮತವನ್ನು ಹೇಗೆ ಚಲಾಯಿಸಬೇಕು ಮತ್ತು ಅದರ ಅಣಕು ಪ್ರದರ್ಶನದಂತಹ ಅರಿವಿನ ಪ್ರಚಾರದ ಕಾರ್ಯ ಅಷ್ಟಕ್ಕಷ್ಟೆ.

ಇನ್ನು ಪದವಿಪೂರ್ವ, ಪದವಿ, ಸ್ನಾತಕೋತ್ತರ ಹಂತದ ಮಹಾವಿದ್ಯಾಲಯಗಳಲ್ಲಿ ಕಲಾ ವಿಭಾಗದ ವಿದ್ಯಾರ್ಥಿಗಳಿಗೆ ಸಂವಿಧಾನ, ರಾಜ್ಯಶಾಸ್ತ್ರದಂತಹ ವಿಷಯಗಳ ಬಗ್ಗೆ ಸ್ವಲ್ಪಮಟ್ಟಿಗೆ ತಿಳಿಸಿರಬಹುದೇನೊ. ಆದರೆ ವಿಜ್ಞಾನ ಮತ್ತು ವೃತ್ತಿಪರ ಕೋರ್ಸ್‌ಗಳ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಇದರ ಬಗ್ಗೆ ಅರಿವಿನ ಕೊರತೆ ಇರುತ್ತದೆ. ಇನ್ನು ಕೆಲವು ವಸತಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗಂತೂ ತಮ್ಮ ತಮ್ಮ ಊರಿಗೆ ತೆರಳಿ ಮತ ಹಾಕುವುದಕ್ಕೆ ಉದಾಸೀನ ಮತ್ತು ಅಷ್ಟೇ ಬೇಜವಾಬ್ದಾರಿತನ ಕೂಡ. ಇವೆಲ್ಲ ಕಾರಣಗಳಿಂದಲೂ ಮತದಾನದ ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಎಲ್ಲ ವಿದ್ಯಾರ್ಥಿಗಳಿಗೂ ಸಂವಿಧಾನ, ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಚುನಾವಣಾ ಪ್ರಕ್ರಿಯೆ, ಮತದಾನದ ಜಾಗೃತಿಯಂತಹ ವಿಷಯಗಳ ಬಗ್ಗೆ ವ್ಯಾಪಕವಾದ ಅರಿವು ಮೂಡಿಸಿದರೆ, ಮುಂಬರುವ ಚುನಾಣೆಗಳಲ್ಲಿ ಮತದಾನದ ಶೇಕಡಾವಾರು ಪ್ರಮಾಣ ಹೆಚ್ಚಾಗುವುದರಲ್ಲಿ ಸಂಶಯವಿಲ್ಲ.


ಸೋಮನಾಥ ಡಿ., ಹಾವೇರಿ


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಗುಜರಾತ್: ದಾಖಲೆಯ ತವಕದಲ್ಲಿ ಬಿಜೆಪಿ ಕಟ್ಟಿಹಾಕುವುದೇ 'ಇಂಡಿಯಾ'?...

ಪ್ರಜಾ ಮತ ಜನತಂತ್ರದ ಹಬ್ಬ

ಲೋಕಸಭಾ ಚುನಾವಣೆ - 2024





ಪ್ರಜಾವಾಣಿ ವಾರ್ತೆ

18ನೇ ಲೋಕಸಭಾ ಚುನಾವಣೆಯಲ್ಲಿ ಮತದಾನ ನಡೆಯದೆಯೇ ಸಂಸತ್ತಿಗೆ ಸಂಸದರೊಬ್ಬರು ಅವಿರೋಧವಾಗಿ ಆಯ್ಕೆ ಆಗಿದ್ದಾರೆ. ಜನರು ತಮ್ಮ ಹಕ್ಕು ಚಲಾಯಿಸಿ, ತಮ್ಮ ಪ್ರತಿನಿಧಿಯನ್ನು ಆಯ್ಕೆ ಮಾಡಬೇಕಿತ್ತು. ಆದರೆ, ಈಗ ಜನರು ತಮ್ಮ ಹಕ್ಕು ಚಲಾಯಿಸುವ ಮೊದಲೇ 'ಇವರೇ ನಿಮ್ಮ ಪ್ರತಿನಿಧಿ' ಎಂದು ಚುನಾವಣಾ ಆಯೋಗ ಘೋಷಣೆ ಮಾಡಿಬಿಟ್ಟಿದೆ. ಬಿಜೆಪಿಯ ಮುಕೇಶ್ ದಲಾಲ್ ಸಂಸತ್ತಿಗೆ ಪ್ರಥಮವಾಗಿ ಆಯ್ಕೆಯಾದವರು. ಲೋಕಸಭಾ ಚುನಾವಣೆಗೆ ಗುಜರಾತ್‌ನ ಮೂಲಕ ಬಿಜೆಪಿ ಖಾತೆ ತೆರೆದದ್ದು ಹೀಗೆ.

'ನಾವು ಈ ಬಾರಿ ಎಲ್ಲ 26 ಕ್ಷೇತ್ರಗಳನ್ನೂ ಗೆಲ್ಲುತ್ತೇವೆ' ಎಂದು ರಾಜ್ಯ ಬಿಜೆಪಿ ನಾಯಕರು, ಕೇಂದ್ರದ ನಾಯಕರು ಹೇಳುತ್ತಲೇ ಬಂದಿದ್ದಾರೆ. ಕಾರ್ಯಕರ್ತರಲ್ಲಿಯೂ ಇದೇ ವಿಶ್ವಾಸವಿದೆ. ಆದರೆ, ಸೂರತ್ ಲೋಕಸಭಾ ಕ್ಷೇತ್ರದ ದಲಾಲ್ ಅವರ ಅವಿರೋಧ ಆಯ್ಕೆ ಮಾತ್ರ ವಿರೋಧ ಪಕ್ಷಗಳ ತೀವ್ರ ಆಕ್ಷೇಪಕ್ಕೆ ಕಾರಣವಾಗಿದೆ. 'ಸರ್ವಾಧಿಕಾರಿಯ ಅಸಲಿ ಮುಖ (ಸೂರತ್, ಲೋಕಸಭಾ ಕ್ಷೇತ್ರದ ಹೆಸರೂ ಹೌದು, ಮುಖಕ್ಕೆ ಹಿಂದಿ ಭಾಷೆಯಲ್ಲಿ ಹೇಳುವ ಪದವೂ ಹೌದು) ಮತ್ತೊಂದು ಬಾರಿ ಮುಂದೆ ಬಂದಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಎಕ್ಸ್‌ನಲ್ಲಿ ಬರೆದುಕೊಂಡಿದ್ದರು. ನಾಮಪತ್ರ ತಿರಸ್ಕೃತಗೊಂಡ ಇದೇ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾದ ನೀಲೇಶ್ ಕುಂಬಾನಿ ಅವರನ್ನು ಆರು ವರ್ಷಗಳಿಗೆ ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ.

ಸೂರತ್ ಗೆಲುವಿನೊಂದಿಗೆ ಖಾತೆ ತೆರೆದ ಬಿಜೆಪಿಯು ಗುಜರಾತ್‌ನಾದ್ಯಂತ ಇತಿಹಾಸ ನಿರ್ಮಿಸುವ ತವಕದಲ್ಲಿದೆ. 2014 ಹಾಗೂ 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಎಲ್ಲಾ 26 ಕ್ಷೇತ್ರಗಳಲ್ಲಿ ಭರ್ಜರಿ ಗೆಲುವು ಸಾಧಿಸಿತ್ತು. ಇಲ್ಲಿನ ಬಿಜೆಪಿ ಅಭ್ಯರ್ಥಿಗಳು 1.5 ಲಕ್ಷದಿಂದ ಆರಂಭವಾಗಿ 6.8 ಲಕ್ಷವರೆಗಿನ ಮತಗಳ ಅಂತರದಿಂದ 2019ರಲ್ಲಿ ಗೆದ್ದುಬಂದಿದ್ದರು. ಇದು ದಾಖಲೆಯಾಗಿತ್ತು. ಈ ಬಾರಿ ಎಲ್ಲ ದಾಖಲೆಗಳನ್ನು ಮುರಿದು, ಚುನಾವಣಾ ಇತಿಹಾಸದಲ್ಲಿ ಹೊಸ ಇತಿಹಾಸ ಬರೆಯುವ ಉತ್ಸಾಹದಲ್ಲಿದೆ ಬಿಜೆಪಿ.

ಪ್ರತಿಯೊಬ್ಬ ಅಭ್ಯರ್ಥಿಯು ಕನಿಷ್ಠ 5 ಲಕ್ಷ ಮತಗಳ ಅಂತರದಿಂದ ಗೆದ್ದುಬರಬೇಕು ಎನ್ನುವುದು ಬಿಜೆಪಿಯ 2024ರ ಲೋಕಸಭಾ ಚುನಾವಣೆಯ ಗುರಿ. ಅದರಲ್ಲೂ ಗಾಂಧಿನಗರ ಕ್ಷೇತ್ರದ ಅಭ್ಯರ್ಥಿ, ಕೇಂದ್ರ ಗೃಹ ಸಚಿವ 'ಅಮಿತ್ ಶಾ ಅವರನ್ನು ದಾಖಲೆಯ 10 ಲಕ್ಷ ಮತಗಳ ಅಂತರದಿಂದ ಗೆಲ್ಲಿಸುತ್ತೇವೆ' ಎನ್ನುತ್ತಾರೆ ರಾಜ್ಯದ ಬಿಜೆಪಿ ಘಟಕದ ಅಧ್ಯಕ್ಷ ಸಿ.ಆರ್. ಪಾಟೀಲ್. ಇದೇ ಪಾಟೀಲ್ ಅವರು 2019ರ ಚುನಾವಣೆಯಲ್ಲಿ 6.8 ಲಕ್ಷ ಮತಗಳ ಅಂತರದಿಂದ ಗೆದ್ದುಬಂದಿದ್ದರು. ವಿಧಾನಸಭಾ ಚುನಾವಣೆ ಇರಲಿ, ಲೋಕಸಭಾ ಚುನಾವಣೆ ಇರಲಿ, ರಾಜ್ಯದಲ್ಲಿ ಬಿಜೆಪಿಯದ್ದೇ ಮೇಲುಗೈ. ಇಷ್ಟಾದರೆ ಸಾಲದು, ಗೆಲುವು ಎನ್ನುವುದು ದಾಖಲೆಯಾಗಬೇಕು ಎನ್ನುವ ಗುರಿಯನ್ನು ಹೊತ್ತು ಬಿಜೆಪಿ ಕಾರ್ಯಕರ್ತರು ಕಾರ್ಯಪ್ರವೃತ್ತರಾಗಿದ್ದಾರೆ.

'ಇಂಡಿಯಾ' ಮೈತ್ರಿಕೂಟ ಮತ್ತು ಜಾತಿ ಸಮೀಕರಣ

ಗುಜರಾತ್‌ನಲ್ಲಿ ಇತಿಹಾಸ ನಿರ್ಮಿಸಬೇಕೆಂದಿರುವ ಬಿಜೆಪಿಯನ್ನು ತಕ್ಕಮಟ್ಟಿಗೆ ಕಟ್ಟಿಹಾಕಬೇಕು ಎನ್ನುವ ತಂತ್ರವನ್ನು ಕಾಂಗ್ರೆಸ್ ಹಾಗೂ ಎಎಪಿ ಹೂಡಿವೆ. 24 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹಾಗೂ 2 ಕ್ಷೇತ್ರಗಳಲ್ಲಿ ಎಎಪಿ ಸ್ಪರ್ಧಿಸುತ್ತಿದೆ. ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಇರುವ ಆರ್ಥಿಕವಾಗಿ, ಸಾಮಾಜಿಕವಾಗಿ ಪ್ರಬಲವಾಗಿರುವ ಸಮುದಾಯಗಳೇ ಬಿಜೆಪಿ ಭದ್ರ ಮತಬ್ಯಾಂಕ್‌ಗಳು. ಈ ಬಾರಿ, 'ಇಂಡಿಯಾ' ಮೈತ್ರಿಕೂಟವು ಜಾತಿ ಲೆಕ್ಕಾಚಾರ ಹಾಕಿ ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಹಿಂದುಳಿದ ವರ್ಗಕ್ಕೆ ಸೇರಿದ ನಾಯಕರನ್ನೇ ಕಾಂಗ್ರೆಸ್ ಸ್ಪರ್ಧೆಗೆ ಆರಿಸಿದೆ.

'ಈ ಬಾರಿ 10 ಕ್ಷೇತ್ರಗಳನ್ನಾದರೂ ಗೆಲ್ಲುತ್ತೇವೆ. ಹಿಂದೆಲ್ಲಾ ನಾಮಪತ್ರ ಸಲ್ಲಿಸುವ ಪ್ರಕ್ರಿಯೆ ಆರಂಭಕ್ಕೂ ಕೆಲ ದಿನ ಮೊದಲ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡುತ್ತಿದ್ದೆವು. ಆದರೆ, ಈ ಬಾರಿ ಹಲವು ದಿನಗಳ ಮೊದಲೇ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದೇವೆ' ಎನ್ನುತ್ತಾರೆ ರಾಜ್ಯದ ಉಸ್ತುವಾರಿ, ಕಾಂಗ್ರೆಸ್‌ನ ಮುಕುಲ್ ವಾಸ್ನಿಕ್. ಕೆಲವು ಕ್ಷೇತ್ರಗಳಲ್ಲಿ ಹಿಂದುಳಿದ ವರ್ಗದವರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಅಲ್ಲೆಲ್ಲಾ ಕಾಂಗ್ರೆಸ್ ಅದೇ ವರ್ಗದ ಅಭ್ಯರ್ಥಿಗಳನ್ನು ನಿಲ್ಲಿಸಿದೆ. ಜೊತೆಗೆ, ಹಲವು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ 7 ಮಾಜಿ ಶಾಸಕರನ್ನೇ ಕಾಂಗ್ರೆಸ್ ಅಭ್ಯರ್ಥಿಯನ್ನಾಗಿಸಿದೆ. 5 ಹಾಲಿ ಶಾಸಕರಿಗೂ ಟಿಕೆಟ್ ನೀಡಲಾಗಿದೆ. ಅಂದರೆ, 26 ಕ್ಷೇತ್ರಗಳ ಪೈಕಿ 12 ಕಡೆ ಹಳೆಯ ಹುರಿಯಾಳುಗಳನ್ನೇ ಕಣಕ್ಕಿಳಿಸಿದಂತಾಗಿದೆ.

ಪ್ರತಿ ಚುನಾವಣೆಯಲ್ಲೂ ಬಿಜೆಪಿಗೆ ಶೇ 60ರಷ್ಟು ಮತಗಳು ಬೀಳುತ್ತವೆ. 2022ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಶೇ 60ಕ್ಕೂ ಅಧಿಕ ಮತಗಳು ದೊರೆತಿದ್ದವು. ಕಾಂಗ್ರೆಸ್ ಹಾಗೂ ಎಎಪಿಗೆ ಬಿದ್ದ ಮತಪ್ರಮಾಣವನ್ನು ಸೇರಿಸಿದರೂ ಶೇ 40 ಅನ್ನು ಮೀರುವುದಿಲ್ಲ. ಆದ್ದರಿಂದ ಬಿಜೆಪಿ ಗೆಲುವೇ ಖಚಿತ ಎನ್ನುತ್ತಾರೆ ಬಿಜೆಪಿ ನಾಯಕರು. ಆದರೆ, ಇಂಡಿಯಾ ಮೈತ್ರಿಕೂಟವು ಈ ಲೆಕ್ಕಾಚಾರವನ್ನು ಒಪ್ಪುತ್ತಿಲ್ಲ. ವಿಧಾನಸಭೆ ಚುನಾವಣೆಯಲ್ಲಿ ಮೂರು ಪಕ್ಷಗಳ ಮಧ್ಯೆ ಮತಗಳು ಹಂಚಿಹೋಗಿದ್ದವು. ಆದರೆ ಈ ಬಾರಿ, ಕಾಂಗ್ರೆಸ್ ಹಾಗೂ ಎಎಪಿ ಒಟ್ಟಿಗೆ ಇರುವುದರಿಂದ ಮತಗಳ ಹಂಚಿ ಹೋಗುವುದಿಲ್ಲ. ಇದರಿಂದ ಮೈತ್ರಿಕೂಟಕ್ಕೆ ಅನುಕೂಲವೇ ಹೆಚ್ಚು. ಎಲ್ಲಾ 26 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹಾಗೂ ಎಎಪಿ ಜೊತೆಗೂಡಿ ಕೆಲಸ ಮಾಡುತ್ತಿದೆ ಎನ್ನುತ್ತಾರೆ ಮೈತ್ರಿಕೂಟದ ನಾಯಕರು.

ಮತಗಟ್ಟೆಗೆ ಕರೆತರಲು ಲೆಕ್ಕಾಚಾರ

'ಗಾಂಧಿನಗರ ಲೋಕಸಭಾ ಕ್ಷೇತ್ರದಲ್ಲಿ ಶೇ 100ರಷ್ಟು ಮತದಾನ ನಡೆಯಬೇಕು. ಬೆಳಿಗ್ಗೆ 10ರ ಬಿಸಿಲೇರುವ ಮೊದಲೇ ಶೇ 100ರಷ್ಟೂ ಮತ ಚಲಾವಣೆಯಾಗಬೇಕು ಎನ್ನುವ ಗುರಿ ಹಾಕಿಕೊಳ್ಳಲಾಗಿದೆ' ಎನ್ನುತ್ತಾರೆ ಬಿಜೆಪಿ ಪಕ್ಷದ ಕಾರ್ಯಕರ್ತರು. ಇದು ಕೇವಲ ಗಾಂಧಿನಗರ ಕ್ಷೇತ್ರದ ಲೆಕ್ಕಾಚಾರವಲ್ಲ. ರಾಜ್ಯದಾದ್ಯಂತ ಇದೇ ಲೆಕ್ಕಾಚಾರ ನಡೆಸುವ ಉತ್ಸಾಹದಲ್ಲಿ ಬಿಜೆಪಿ ಇದೆ. ಇದಕ್ಕಾಗಿ ವ್ಯವಸ್ಥೆಯೊಂದನ್ನು ರಚಿಸಿಕೊಂಡಿದ್ದಾರೆ. ಬಿಜೆಪಿಯ ರಾಜ್ಯ ಅಧ್ಯಕ್ಷರ ಕಾರ್ಯತಂತ್ರಗಳಲ್ಲಿ ಇದು ಪ್ರಮುಖವಾದದು. ಹೀಗೆ ಕೆಲಸ ಮಾಡಿದರೆ ಮಾತ್ರವೇ ಇತಿಹಾಸ ನಿರ್ಮಾಣ ಸಾಧ್ಯ ಎನ್ನುತ್ತಾರೆ ಪಾಟೀಲ್.

'ಗುಜರಾತ್‌ನಾದ್ಯಂತ 78 ಲಕ್ಷ ನಮ್ಮ ವಾಟ್ಸ್‌ಆ್ಯಪ್ ಸದಸ್ಯರಿದ್ದಾರೆ. ಇವರೆಲ್ಲರೂ ತಮ್ಮ ಮನೆಯ ಕನಿಷ್ಠ ಮೂರು ಜನರನ್ನು ಮತಗಟ್ಟೆಗೆ ಕರೆತಂದರೂ ಬಿಜೆಪಿಗೆ ಹೆಚ್ಚಿನ ಅನುಕೂಲವಾಗಲಿದೆ' ಎನ್ನುತ್ತಾರೆ ಅಧ್ಯಕ್ಷ ಪಾಟೀಲ್. 2019ರ ಚುನಾವಣೆಯಲ್ಲಿಯೂ ಈ ಕಾರ್ಯತಂತ್ರವನ್ನೇ ನಡೆಸಲಾಗಿತ್ತು. 2022ರ ವಿಧಾನಸಭೆ ಚುನಾವಣೆಯಲ್ಲಿಯೂ ಇದನ್ನೇ ಅನುಸರಿಸಲಾಗಿತ್ತು.

ರಾಜ್ಯದಲ್ಲಿ ಸುಮಾರು 4.5 ಕೋಟಿಯಷ್ಟು ಅರ್ಹ ಮತದಾರರು ಇದ್ದಾರೆ. ಆದರೆ 2.5 ಕೋಟಿಯಿಂದ 2.8 ಕೋಟಿಯಷ್ಟು ಮಾತ್ರ ಮತ ಚಲಾಯಿಸುತ್ತಿದ್ದಾರೆ. ಇದರಲ್ಲಿ 1.6 ಕೋಟಿಯಷ್ಟು ಮತಗಳು ಬಿಜೆಪಿಗೇ ಹೋಗುತ್ತವೆ. ಸುಮಾರು 70 ಲಕ್ಷದಷ್ಟಿರುವ ಬಿಜೆಪಿಯ ಕಾಲಾಳುಗಳು ಎರಡರಿಂದ ಮೂರು ಮತಗಳನ್ನು ಹಾಕಿಸುತ್ತಾರೆ ಎಂದು ಬಿಜೆಪಿಯೇ ಹೇಳುತ್ತದೆ. ಅಂತಹ ಮತಗಳೇ 1.5 ಕೋಟಿ ಯನ್ನು ದಾಟುತ್ತದೆ. ಅದರಾಚೆಗೆ ಮತಗಳನ್ನು ಸೆಳೆಯಲು ಬಿಜೆಪಿ ಯತ್ನಿಸುತ್ತಿಲ್ಲ. ಆದರೆ ರಾಜ್ಯದ ಸುಮಾರು 2 ಕೋಟಿ ಮತದಾರರು ಮತದಾನದಿಂದ ದೂರವೇ ಉಳಿದಿದ್ದಾರೆ. ಅಂತಹ ಮತದಾರರನ್ನು ಸೆಳೆದರೆ, ತನ್ನ ಮತ ಪ್ರಮಾಣ ಹೆಚ್ಚಿಸಿಕೊಳ್ಳಬಹುದು ಎಂಬುದು ಕಾಂಗ್ರೆಸ್‌ನ ಲೆಕ್ಕಾಚಾರ.

ಗುಜರಾತ್‌ನ ಗ್ರಾಮೀಣ ಪ್ರದೇಶದಲ್ಲೇ ಹೀಗೆ ಮತದಾನದಿಂದ ದೂರ ಉಳಿದ ಮತದಾರರ ಪ್ರಮಾಣ ಹೆಚ್ಚು. ಅವರನ್ನು ಸೆಳೆಯಲು ಕಾಂಗ್ರೆಸ್ ಅಭ್ಯರ್ಥಿಗಳು ಮತ್ತು ಕಾರ್ಯಕರ್ತರು ಮನೆ-ಮನೆಗೆ ತೆರಳಿ ಮತಕೇಳುತ್ತಿದ್ದಾರೆ. 'ಇಂಡಿಯಾ' ಮೈತ್ರಿಕೂಟದ ಎಎಪಿ ಸಹ ಇದನ್ನೇ ಅನುಸರಿಸುತ್ತಿದೆ. ಹೀಗೆ ಒಟ್ಟು ಮತಪ್ರಮಾಣವನ್ನು ಹೆಚ್ಚಿಸುವ ಮೂಲಕ, ತಮ್ಮ ಮತಪ್ರಮಾಣವನ್ನೂ ಹೆಚ್ಚಿಸಿಕೊಳ್ಳಲು ಈ ಪಕ್ಷಗಳು ಕಾರ್ಯತಂತ್ರ ರೂಪಿಸಿವೆ. ಕೆಲವು ಕ್ಷೇತ್ರಗಳಲ್ಲಿ ಈ ಕಾರ್ಯತಂತ್ರವು ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೂ ಕಾರಣವಾಗಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

ಬನಸ್ಕಾಂತ: ಮಹಿಳಾ ಸೆಣಸಾಟ

ಈ ಬಾರಿಯ ಚುನಾವಣೆಯಲ್ಲಿ ಬನಸ್ಕಾಂತ ಲೋಕಸಭಾ ಕ್ಷೇತ್ರವು ಗಮನಸೆಳೆದಿದೆ. ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳು ಮಹಿಳೆಯರನ್ನೇ ಅಭ್ಯರ್ಥಿಗಳನ್ನಾಗಿಸಿವೆ. ಇಬ್ಬರೂ ಮಹಿಳೆಯರು ಆಯಾ ಪಕ್ಷದ ಪ್ರಮುಖ ಮಹಿಳಾ ಮುಖ. ಕಾಂಗ್ರೆಸ್‌ನ ಜೀನಿ ಠಾಕೂರ್ ಅವರು ಮಹಿಳಾಪರ ಧ್ವನಿಯಾಗಿ ರಾಜ್ಯದಲ್ಲಿ ತೀವ್ರವಾಗಿ ತೊಡಗಿಸಿಕೊಂಡಿದ್ದಾರೆ. ತಮ್ಮ ಪ್ರಖರ ಮಾತುಗಳ ಕಾರಣಕ್ಕಾಗಿಯೇ 2017 ಹಾಗೂ 2022ರಲ್ಲಿ ವಿಧಾನಸಭೆಗೆ ಆಯ್ಕೆ ಆಗಿದ್ದಾರೆ. ಜೀನಿ ಅವರಿಗೆ ಪಕ್ಷಾತೀತವಾಗಿ ಅಭಿಮಾನಿಗಳೂ ಇದ್ದಾರೆ. ತಮ್ಮ ಠೇವಣಿ ಮೊತ್ತವನ್ನೂ ಅವರು ಜನರಿಂದಲೇ ಸಂಗ್ರಹಿಸಿ ನೀಡಿದ್ದಾರೆ. ಪ್ರಚಾರಕ್ಕೆ ಜನರಿಂದಲೇ ಸಂಗ್ರಹಿಸಿದ ಹಣವನ್ನು ಬಳಸುತ್ತಿದ್ದಾರೆ. ಅವರ ಈ ಪಾರದರ್ಶಕ ನಡೆಯು ಮೆಚ್ಚುಗೆಗೆ ಪಾತ್ರವಾಗಿದೆ.

ಇನ್ನೊಂದೆಡೆ, ಬಿಜೆಪಿಯು ರೇಖಾ ಚೌಧರಿ ಅವರನ್ನು ಜೀನಿ ಎದುರು ಕಣಕ್ಕೆ ಇಳಿಸಿದೆ. ಇವರದ್ದು ರಾಜಕೀಯವಾಗಿ ಹಾಗೂ ಸಾಮಾಜಿಕವಾಗಿ ಪ್ರಬಲವಾಗಿರುವ ಕುಟುಂಬ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದವರು. ರೇಖಾ ಅವರ ಅಜ್ಜ ಗಾಲ್ಬಾಬಾಯ್. ಬಾನಸ್ ಹೆಸರಿನ ಡೈರಿಯನ್ನು ಸ್ಥಾಪಿಸಿದ್ದಾರೆ. 4.5 ಲಕ್ಷ ರೈತರು ಪ್ರತಿ ದಿನವೂ ಇಲ್ಲಿಗೆ ಹಾಲು ಹಾಕುತ್ತಾರೆ. ಇದು ರೇಖಾ ಅವರಿಗೆ ಇರುವ ದೊಡ್ಡ ಮತಬ್ಯಾಂಕ್ ಅಂತಲೇ ಹೇಳಲಾಗುತ್ತಿದೆ. 2013ರಿಂದಲೂ ಇಲ್ಲಿ ಬಿಜೆಪಿಯೇ ಗೆಲುತ್ತಾ ಬಂದಿದೆ. ಆದರೆ, ಗೆಲುವಿನ ಅಂತರ ಮಾತ್ರ ತುಸು ಕಡಿಮೆಯೇ. ಎರಡೂ ಪಕ್ಷಗಳೂ ಗೆಲುವಿನ ತವಕದಲ್ಲಿದ್ದಾವೆ.






1. ಬೆಂಗಳೂರಿನಲ್ಲಿ ನಡೆದ ಮತದಾನದಲ್ಲಿ ಹಕ್ಕು ಚಲಾಯಿಸ ಬಂದ ಬಳಿಕ, ವ್ಯಕ್ತಿಯೊಬ್ಬರು ಶಾಯಿ ತೋರಿಸಿದರು 2. ಉತ್ತರ ಪ್ರದೇಶದ ಮಥುರಾದಲ್ಲಿ ಸಾಧುಗಳು ಹಕ್ಕು ಚಲಾಯಿಸಲು ಸರತಿಯಲ್ಲಿ ನಿಂತಿದ್ದರು, ಮಂದಹಾಸ ಬೀರುತ್ತಾ 3. ಮತಚಲಾಯಿಸಲು ಸರತಿಯಲ್ಲಿ ನಿಂತಿದ್ದ ಮಹಿಳೆಯರು ತಮ್ಮ ಗುರುತಿನ ಚೀಟಿ ತೋರಿಸಿದ ಪರಿ 4. ಬಿಹಾರದ ಮತಗಟ್ಟೆಯೊಂದರಲ್ಲಿ ವೃದ್ಧೆಯೊಬ್ಬರು ಶಾಯಿ ತೋರಿಸಿದ್ದು ಹೀಗೆ...

ಡಾರ್ಲಿಂಗ್‌ಗೆ ಅಮೃತಾ ಜೋಡಿ



ಅಮೃತಾ ಅಯ್ಯಂಗಾರ್

ಆರ್.ಚಂದ್ರು ನಿರ್ಮಾಣದ, 'ಲವ್ ಮಾಕ್ಟೇಲ್' ಖ್ಯಾತಿಯ ಡಾರ್ಲಿಂಗ್ ಕೃಷ್ಣ ನಟನೆಯ 'ಫಾದರ್' ಸಿನಿಮಾದಲ್ಲಿ ನಾಯಕಿಯಾಗಿ ಅಮೃತಾ ಅಯ್ಯಂಗಾರ್ ನಟಿಸಲಿದ್ದಾರೆ.

'ಲವ್ ಮಾಕ್ಟೇಲ್' ಸಿನಿಮಾದಲ್ಲಿ 'ಜೋ' ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ಅಮೃತಾ ಮತ್ತೊಮ್ಮೆ ಡಾರ್ಲಿಂಗ್ ಕೃಷ್ಣ ಅವರಿಗೆ ಜೋಡಿಯಾಗಲಿದ್ದಾರೆ. ಇದೇ ಪಾತ್ರ ಅಮೃತಗೆ ಸಿನಿಪಯಣದಲ್ಲಿ ಬ್ರೇಕ್ ನೀಡಿತ್ತು.

'ಫಾದರ್' ಸಿನಿಮಾದ ಮುಹೂರ್ತ ಶನಿವಾರ(ಏ.27) ನಡೆಯಲಿದ್ದು, ಬೆನ್ನಲ್ಲೇ ಚಿತ್ರೀಕರಣವೂ ಆರಂಭವಾಗಲಿದೆ. ಮುಹೂರ್ತ ಕಾರ್ಯಕ್ರಮಕ್ಕೆ ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ದಂಪತಿ ಮುಖ್ಯ ಅತಿಥಿಗಳಾಗಿರಲಿದ್ದಾರೆ.

ರಾಜಮೋಹನ್ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾದಲ್ಲಿ ಬಹುಭಾಷಾ ನಟ ಪ್ರಕಾಶ್ ರಾಜ್ ಮುಖ್ಯಭೂಮಿಕೆಯಲ್ಲಿದ್ದು, ತೆಲುಗಿನ ಖ್ಯಾತ ನಟ ಸುನೀಲ್ ಕೂಡಾ ಬಣ್ಣಹಚ್ಚಲಿದ್ದಾರೆ. ಗೌರ ಹರಿ ಸಂಗೀತ ನಿರ್ದೇಶನ, ಸುಜ್ಞಾನ್ ಛಾಯಾಚಿತ್ರಗ್ರಹಣ, ರವಿ ವರ್ಮಾ ಹಾಗೂ ಚೇತನ್ ಡಿಸೋಜ ಸಾಹಸ ನಿರ್ದೇಶನ, ಮೋಹನ್ ಬಿ.ಕೆರೆ ಕಲಾನಿರ್ದೇಶನ ಚಿತ್ರಕ್ಕಿದೆ.

'ಸಂಜು ವೆಡ್ಸ್...' ಹಾಡಿನ ಚಿತ್ರೀಕರಣ

ನಾಗಶೇಖರ್ ನಿರ್ದೇಶನದ 'ಸಂಜು ವೆಡ್ಸ್ ಗೀತಾ-2' ನಾಲ್ಕನೇ ಹಂತದ ಚಿತ್ರೀಕರಣ ಪ್ರಾರಂಭಿಸಿದೆ. ಶ್ರೀನಗರ ಕಿಟ್ಟಿ, ರಚಿತಾ ರಾಮ್ ಜೋಡಿಯಾಗಿ ನಟಿಸುತ್ತಿರುವ ಚಿತ್ರದ ಹಾಡೊಂದರ ಅದ್ದೂರಿ ಚಿತ್ರೀಕರಣ ಇತ್ತೀಚೆಗಷ್ಟೇ ಕುಣಿಗಲ್‌ನಲ್ಲಿ ನಡೆದಿದೆ.

'ಮೂರು ಹಂತಗಳ ಚಿತ್ರೀಕರಣ ಹಾಗೂ ಎಡಿಟಿಂಗ್ ಮುಗಿಸಿ ಡಬ್ಬಿಂಗ್ ಪ್ರಾರಂಭಿಸಿದ್ದೇವೆ. ಸ್ವಿಟ್ಜರ್ಲೆಂಡ್‌ನಲ್ಲಿ 15 ದಿನ ಹನ್ನೊಂದು ಜಾಗಗಳಲ್ಲಿ ಚಿತ್ರೀಕರಣ ಮಾಡಿದೆವು. ಶಿಡ್ಲಘಟ್ಟದ ರೇಷ್ಮೆಗೆ ದೊಡ್ಡ ಮಾರುಕಟ್ಟೆ ಇದೆ. ನಮ್ಮ ರೇಷ್ಮೆ ನೂಲಿಗೆ ಒಳ್ಳೆ ಬೆಲೆ ಬೇಕು ಎಂದು ಹೋರಾಡುವ ಇಬ್ಬರು ಪ್ರೇಮಿಗಳ ಕಥೆ ಈ ಚಿತ್ರದಲ್ಲಿದೆ. ಐದು ದಿನಗಳ ಕಾಲ ಹಾಡಿನ ಚಿತ್ರೀಕರಣ ನಡೆದಿದೆ. ಅದ್ದೂರಿ ಸೆಟ್‌ನಲ್ಲಿ ಹಾಡಿನ ಚಿತ್ರೀಕರಣಕ್ಕಾಗಿ ₹50 ಲಕ್ಷ ಖರ್ಚು ಮಾಡಿದ್ದೇವೆ' ಎಂದರು ನಿರ್ದೇಶಕ ನಾಗಶೇಖರ್.

ಮಹಾನಂದಿ ಕ್ರಿಯೇಶನ್ಸ್ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ನಾಗಶೇಖರ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಸಂಗೀತ ನಿರ್ದೇಶಕ ಶ್ರೀಧರ ವಿ. ಸಂಭ್ರಮ ಐದು ಹಾಡುಗಳಿಗೆ ಸಂಗೀತ ನೀಡಿದ್ದು, ಸೋನು ನಿಗಂ, ಶ್ರೇಯಾ ಘೋಷಾಲ್, ಮಂಗ್ಲಿ ಹಾಡಿದ್ದಾರೆ. ರಾಗಿಣಿ, ಚೇತನ್ ಚಂದ್ರ, ರಂಗಾಯಣ ರಘು, ಸಾಧು ಕೋಕಿಲ ವಿಶೇಷ ಪಾತ್ರಗಳಲ್ಲಿದ್ದಾರೆ.



ಚಿತ್ರತಂಡ

ಪದಬಂಧ 5663


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ವಿಶ್ರಾಂತಿ ಕೊಡುವ ಆಸನ (4)
3. ಉತ್ತ ನೆಲ ಮಟ್ಟ ಮಾಡುವ ಸಾಧನ (3)
5. ಮಂಚವಿಲ್ಲಿ ತಿರುವುಮುರು ಆಗಿದೆ (3)
7. ಉರು ಹೊಡೆಯುತ್ತಿರುವವನ ಶ್ವಾಸ! (3)
8. ಪ್ರೇಮಿಗಳ ಅಗಲಿಕೆಯ ಬೇಗೆ (5)
11. ನೆಲವನ್ನು ಗೋಮಯದಿಂದ ಸಾರಿಸುವಿಕೆ (3)
12. ಕಡೆದ ಮೊಸರಿದು (3)
15. ಬೆಟ್ಟದ ಗವಿ (3)
16. ಮಧ್ಯವಯಸ್ಸಿದು (4)

ಮೇಲಿಂದ ಕೆಳಕ್ಕೆ

1. ಯೋಗವಿದ್ದಾಗಲೇ ಈ ಅದೃಷ್ಟ! (3)
2. ಮೂಗಿನಲ್ಲಿ ಧರಿಸುವ ಆಭರಣ (2)
3. ಕೇಶದ ಬುಡದಲ್ಲಿನ ಚರ್ಮದ ಹೊಟ್ಟು (3)
4. ಪುಸಲಾವಣೆಯ ನುಡಿ! (4)
6. ಹಾಡಿನ ಪುನರಾವರ್ತನೆಗೊಳ್ಳುವ ಭಾಗ (3)
7. ಕನ್ನಡಿಗನು ನೀಡಿರುವ ಎಕ್ಸಾಂಪಲ್! (5)
9. ಇದು ತುಂಬಾ ಶ್ರೇಷ್ಠ (3)
10. ಉಪ್ಪು ತಯಾರಿಸುವವನು (4)
11. ಹತ್ತು ನೂರಿದು (3)
13. ಸ್ನೇಹಿತ ಇಲ್ಲಿದ್ದಾನೆ (3)
14. ಅರಿವು ಹೀಗೆ ಬಂದಿದೆ (2)



5662ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1. ಬದ್ಧಕಂಕಣ 3. ಸಂಧಾನ 6. ಖಾತೆ 7. ಯಜಮಾನ 10. ಪದವೀದಾನ 13. ಮನೋಗತ 16. ಅರಿ 17. ಯದೃಚ್ಛೆ 18. ವಾಚನಾಲಯ

ಮೇಲಿಂದ ಕೆಳಕ್ಕೆ:

1. ಬರಖಾಸ್ತು 2. ಕಮಠ 4. ನಸುನಗು 5. ಗಾಯ 8. ಜವಾನ 9. ಪ್ರವೀಣ 10. ಪರಾಗ 11. ಕಮನೀಯ 12. ಪರಿಣಯ 14. ತಲೆ 15. ಎಡಚ

ಸುಡೊಕು 6048

9		3		6				2
	4						5	
	1			5		6		4
	8			1		4		
3		4	2		7		8	
	9		4		3			6
6		5					2	
				7		3		1
1		8	9		6		4	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6047 ಸುಡೊಕು

7	8	4	2	5	3	9	6	1
1	9	2	6	8	4	5	7	3
6	5	3	1	7	9	8	2	4
5	3	8	9	2	7	4	1	6
9	1	6	4	3	8	7	5	2
4	2	7	5	1	6	3	8	9
2	4	5	7	9	1	6	3	8
8	6	1	3	4	5	2	9	7
3	7	9	8	6	2	1	4	5

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಏಪ್ರಿಲ್ 27, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ತೃತೀಯ ಗಂ. 8-19 ನಕ್ಷತ್ರ ಜ್ಯೇಷ್ಠ ಗಂ. 28-28 ಯೋಗ: ಪರಿಘ ಗಂ. 27-23 ಕರಣ: ವಿಷ್ಟಿ ಗಂ. 8-19, ಮೇಷ ಮಾಸದ 15 ನೇ ದಿನ, ಮಳೆನಕ್ಷತ್ರ: ಭರಣಿ 1.

ರಾಹುಕಾಲ : ಬೆಳಿಗ್ಗೆ 09-00 - 10-3

ಸೂರ್ಯೋದಯ : 06-14 ಸೂರ್ಯಾಸ್ತ : 06-42

ದಿನ ವಿಶೇಷ : ಸಂಕಷ್ಟಹರ ಚತುರ್ಥಿ (ಚಂದ್ರೋದಯ : ರಾತ್ರಿ 9:40)

ಮುಸ್ಲಿಂ ದಿನಾಂಕ : 17 ಶವ್ವಾಲ್ ಅದೃಷ್ಟ ಸಂಖ್ಯೆ : 8, 2

ಮೇಷ: ತಲೆನೋವಿನಂಥ ಕಾಯಿಲೆಗಳು ಬರಬಹುದಾದ ಸಾಧ್ಯತೆ ಇದ್ದು, ಕಂಪ್ಯೂಟರ್, ಟಿವಿ ಮತ್ತು ಮೊಬೈಲ್ ನೋಡುವುದನ್ನು ಆದಷ್ಟು ಕಡಿಮೆ ಮಾಡಿ. ವೃತ್ತಿ ಜೀವನದಲ್ಲಿ ಕ್ಲಿಷ್ಟಕರವಾದ ಸವಾಲು ಎದುರಾಗಲಿದೆ.

ವೃಷಭ: ಮಗಳ ಮದುವೆಯ ವಿಚಾರವಾಗಿ ವಿವಿಧ ರೀತಿಯ ಪರಿಸ್ಥಿತಿ ಎದುರಿಸುವಿರಿ. ಕಂಪ್ಯೂಟರ್ ಎಂಜಿನಿಯರ್‌ಗಳು ಕಂಪನಿ ಬದಲಿಸುವ ಅಭಿಪ್ರಾಯ ಹೊಂದಲಿದ್ದೀರಿ. ನಿತ್ಯದ ಕೆಲಸಗಳಲ್ಲಿ ಬದಲಾವಣೆ ಇರುವುದಿಲ್ಲ.

ಮಿಥುನ: ಹಿಂದಿನ ಕಹಿ ಘಟನೆಗಳನ್ನು ಮರೆತು ಮುನ್ನಡೆದಲ್ಲಿ ಮುಂದಿನ ಸಿಹಿ ದಿನಗಳನ್ನು ಆನಂದದಿಂದ ಅನುಭವಿಸಬಹುದು. ವೈದ್ಯಕೀಯ ಲೋಕದಲ್ಲಿ ಅದರಲ್ಲೂ ಆಯುರ್ವೇದ ತಿಳಿದವರಿಗೆ ಬೇಡಿಕೆ ಹೆಚ್ಚಾದೀತು.

ಕರ್ಕಾಟಕ: ಇಷ್ಟು ದಿನ ನೀವು ಹೆಚ್ಚಾಗಿ ಪ್ರೀತಿಸುತ್ತಿದ್ದ ವ್ಯಕ್ತಿ ಅಥವಾ ವಸ್ತು ನಿಮ್ಮ ಎಚ್ಚರ ತಪ್ಪಿದಲ್ಲಿ ನಿಮ್ಮಿಂದ ದೂರಾಗುವ ಸಾಧ್ಯತೆ ಇದೆ. ಶ್ರಮ ವಹಿಸಿದ್ದಲ್ಲಿ ಯಶಸ್ಸಿನ ಹಾದಿಯು ಅತ್ಯಂತ ಸುಗಮವಾಗಲಿದೆ.

ಸಿಂಹ: ಅಂದುಕೊಂಡ ಕೆಲಸಗಳು ನಿರ್ವಿಘ್ನವಾಗಿ ನಡೆಯಲು ಗಣಪತಿ ದೇವಾಲಯಕ್ಕೆ ಹೋಗಿ ಪ್ರಾರ್ಥಿಸಿ. ಸ್ನೇಹಿತರ ಸಂತೋಷ ಕೂಟದಲ್ಲಿ ಪಾಲ್ಗೊಳ್ಳುವಿಕೆಯು ಮನಸ್ಸಿಗೆ ಖುಷಿ ತರಲಿದೆ. ಆದರೆ ನಾಳೆ ಬಗ್ಗೆ ಗಮನವಿರಲಿ.

ಕನ್ಯಾ: ಸಂಬಂಧಿಗಳ ಮನೆಯಲ್ಲಿ ಪರಿಚಯವಾದ ಕುಟುಂಬವು ನಿಮ್ಮ ಹತ್ತಿರದ ಸಂಬಂಧವಾಗಿ ಬದಲಾಗುವ ಎಲ್ಲ ಲಕ್ಷಣಗಳೂ ಇವೆ. ಗುರಿ ಸಾಧಿಸುವ ನಿಟ್ಟಿನಲ್ಲಿ ಕೆಲಸಗಳನ್ನು ಅತ್ಯಂತ ಶೀಘ್ರವಾಗಿ ಪೂರ್ಣಗೊಳಿಸುವಿರಿ.

ತುಲಾ: ದೇಹಕ್ಕೆ ಅಗತ್ಯವಿರುವಷ್ಟು ಆಹಾರ ಹಾಗೂ ವಿಶ್ರಾಂತಿ ತೆಗೆದುಕೊಳ್ಳಬೇಕು. ಇದರಿಂದ ಆರೋಗ್ಯವಾಗಿರುವುದರಿಂದ ವೈದ್ಯರಿಂದ ದೂರವಿರಬಹುದು. ನಿಮ್ಮಿಷ್ಟದ ಬದುಕು ಪ್ರಯತ್ನದಿಂದ ನಿಮ್ಮದಾಗಲಿದೆ.

ವೃಶ್ಚಿಕ: ದಿನಗೂಲಿ ಕೆಲಸದಲ್ಲಿರುವವರು ಈ ದಿನದ ಕೆಲಸದಲ್ಲಿ ಹೊಸತನ ಕಂಡುಕೊಳ್ಳಲಿದ್ದೀರಿ. ಸಿವಿಲ್ ಎಂಜಿನಿಯರ್‌ಗಳಿಗೆ ಉತ್ತಮ ಅವಕಾಶಗಳು ಹುಡುಕಿಕೊಂಡು ಬರಲಿವೆ. ನೀವು ಈ ದಿನ ಪ್ರಗತಿಯ ಹಾದಿ ಸ್ಪರ್ಶಿಸಲಿದ್ದೀರಿ.

ಧನು: ನಿಮ್ಮ ಮನಸ್ಸು ಇಂದು ಉತ್ತಮ ಗಾಳಿ, ಪ್ರಶಾಂತ ವಾತಾವರಣ ಮತ್ತು ಏಕಾಂತದ ನಿರೀಕ್ಷೆಯಲ್ಲಿರಲಿದೆ. ಹರಿತವಾದ ವಸ್ತುಗಳನ್ನು ಬಳಸುವಾಗ ವಿಶೇಷ ಗಮನ ಇರಲಿ. ನಿಮ್ಮ ಗೌರವ ಉಳಿಸಿಕೊಳ್ಳುವಂತವರಾಗಬೇಕು.

ಮಕರ: ಪರಂಪರೆಯಲ್ಲಿ ನಮಗೆ ಬಂದಿರುವ ಆಸ್ತಿ ಮತ್ತು ವಸ್ತುಗಳ ಮಾರಾಟದ ಯೋಚನೆಗಳಿದ್ದಲ್ಲಿ ಅದನ್ನು ಕೈ ಬಿಡುವುದು ಸೂಕ್ತ. ಈಗಷ್ಟೇ ಆರಂಭವಾಗಿದ್ದ ಹೊಸ ಕೆಲಸವು ನಿಲ್ಲುವ ಸೂಚನೆಗಳು ನಿಮಗೆ ಕಾಣಬಹುದು.

ಕುಂಭ: ವೃದ್ಧರು ಹಾಗೂ ಅಶಕ್ತರನ್ನು ಗೌರವದಿಂದ ಕಾಣುವ ನಿಮ್ಮ ಸ್ವಭಾವವು ನಿಮ್ಮಿಂದ ಆಕರ್ಷಿತರಾದವರಲ್ಲಿ ಬಹಳ ಗೌರವ ಮೂಡಿಸಲಿದೆ. ಮಾಡುವ ಕೆಲಸವು ಉತ್ತಮವಾಗಿ ಹಾಗೂ ಸರಾಗವಾಗಿ ಮುಗಿಯುತ್ತದೆ.

ಮೀನ: ಮಿತಿ ಮೀರಿದ ನಿಮ್ಮ ಪುತ್ರ ವ್ಯಾಮೋಹವು ಆತನ ಭವಿಷ್ಯಕ್ಕೆ ಕಂಟಕ ತಂದೊಡ್ಡುವ ಸಾಧ್ಯತೆಯೇ ಹೆಚ್ಚು. ಹಿಂದೆ ಕೊಟ್ಟ ಮಾತು ಉಳಿಸಿಕೊಳ್ಳುವ ಬಗ್ಗೆ ಯೋಚನೆ ಮಾಡಿ. ಬೇರೆಯವರನ್ನು ಕಾರಣವಿಲ್ಲದೆ ದೂಷಿಸಬೇಡಿ.



ಪ್ರಜಾ ಮತ 2024
ಜನತಂತ್ರದ ಹಬ್ಬ



ಮೊದಲ ಮತದ ಸಂಭ್ರಮ



ಸಮರ್ಥ ನಾಗರಾಜ ಬಟಗುರ್ಕಿ, ಲಕ್ಷ್ಮೇಶ್ವರ, ಗದಗ ಜಿಲ್ಲೆ
ದೇಶದ ಸಾರ್ವತ್ರಿಕ ಚುನಾವಣೆಯಲ್ಲಿ ನನಗೆ ಇದೇ ಮೊದಲ ಸಲ ಮತದಾನ ಮಾಡಲು ಅವಕಾಶ ಸಿಕ್ಕಿದ್ದು ಖುಷಿ ತಂದಿದೆ. ಸಂವಿಧಾನ ಎಲ್ಲರಿಗೂ ಮತದಾನದ ಹಕ್ಕು ನೀಡಿದೆ. ಅದನ್ನು ಚಲಾಯಿಸುವುದು ನಮ್ಮೆಲ್ಲರ ಕರ್ತವ್ಯ. ಮತದಾನ ದಿನದಂದು ಬೇಗನೆ ಮತದಾನ ಮಾಡುವ ಇಚ್ಛೆ ನನ್ನದು. ಸಂವಿಧಾನ ಕೊಟ್ಟ ಹಕ್ಕನ್ನು ಚಲಾಯಿಸಿ ಸೂಕ್ತ ಸರ್ಕಾರವನ್ನು ಆಯ್ಕೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿ



ಭಾರ್ಗವಿ ಸೂರಿ, ಗೋಕರ್ಣ, ಉತ್ತರ ಕನ್ನಡ ಜಿಲ್ಲೆ
ಲೋಕಸಭೆ ಚುನಾವಣೆಯಲ್ಲಿ ಮತದಾನ ಮಾಡಲು ತುಂಬಾ ಉತ್ಸುಕಳಾಗಿದ್ದೇನೆ. ಇದು ನನ್ನ ಜೀವನದ ಮೊದಲ ಮತದಾನ. ಸದ್ಯ ಬೆಂಗಳೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದು, ಮೇ 7ರಂದು ಮತದಾನ ಮಾಡಲು ಗೋಕರ್ಣಕ್ಕೆ ಹೋಗುವೆ. ಭವಿಷ್ಯದಲ್ಲಿ ಜಾಗತಿಕ ಮಟ್ಟದಲ್ಲಿ ಭಾರತ ಮುಂಚೂಣಿಯಲ್ಲಿರಬೇಕು. ಅಭಿವೃದ್ಧಿಯ ಪರಿಕಲ್ಪನೆ ಹೊಂದಿದವರಿಗೆ ನನ್ನ ಮತ ನೀಡುತ್ತೇನೆ. ಜವಾಬ್ದಾರಿಯುತ ಪ್ರಜೆಯಾಗಿ ಮತ ಚಲಾಯಿಸುವೆ. ಸಂವಿಧಾನ ನೀಡಿರುವ ಹಕ್ಕನ್ನು ಸೂಕ್ತ ರೀತಿಯಲ್ಲಿ ಸದ್ಬಳಕೆ ಮಾಡುವೆ

ಮತ ಆಮಿಷ: ಆಯೋಗದ ವಶ

₹93.88 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹81.19 ಕೋಟಿ
ಮದ್ಯ	₹178.22 ಕೋಟಿ (1.47 ಕೋಟಿ ಲೀ)
ಮಾದಕವಸ್ತು	₹11.36 ಕೋಟಿ (548.17 ಕೆ.ಜಿ.)
ಚಿನ್ನ	₹76.75 ಕೋಟಿ (137.25 ಕೆ.ಜಿ.)
ಬೆಳ್ಳಿ	₹1.18 ಕೋಟಿ (302.37 ಕೆ.ಜಿ.)

ಎಂಥಾ ಮಾತು!



ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಜನರ ಕೈಗೆ ಚೊಂಬು ಕೊಡುವುದನ್ನು ಕಾಂಗ್ರೆಸ್ ನಿಲ್ಲಿಸಲಿಲ್ಲ. ಇದರ ಪರಿಣಾಮ ಜನರೂ ಕಾಂಗ್ರೆಸ್‌ನವರ ಕೈಗೆ ಚೊಂಬು ಕೊಡುತ್ತಾ ಬಂದರು. ಹೀಗಾಗಿ ಕಾಂಗ್ರೆಸ್‌ನವರಿಗೆ ಚೊಂಬು ಹಿಡಿದು ಅಡ್ಡಾಡುವುದು ಅಭ್ಯಾಸವಾಗಿದೆ. ನರೇಂದ್ರ ಮೋದಿ ಅವರು ಪ್ರಧಾನಿಯಾದ ಬಳಿಕ ದೇಶದಲ್ಲಿ 14 ಕೋಟಿಗೂ ಹೆಚ್ಚು ಶೌಚಗೃಹ ನಿರ್ಮಿಸಿದ್ದಾರೆ. ಜನರು ಕೈಯಲ್ಲಿ ಚೊಂಬು ಹಿಡಿಯುವುದನ್ನು ತಪ್ಪಿಸಿದ್ದಾರೆ
ಪ್ರಲ್ಹಾದ ಜೋಶಿ, ಬಿಜೆಪಿ ಅಭ್ಯರ್ಥಿ, ಧಾರವಾಡ ಲೋಕಸಭಾ ಕ್ಷೇತ್ರ



ಎಚ್.ಡಿ. ಕುಮಾರಸ್ವಾಮಿ ಅವರಿಗೆ ಮಾನ ಮರ್ಯಾದೆ ಇದೆಯೆ? ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಬಿಜೆಪಿಯವರು ಏನನ್ನು ಹಂಚುತ್ತಿದ್ದಾರೆ ಎಂದು ತೋರಿಸಲೇ. ಮುನಿರತ್ನ, ಕುಮಾರಸ್ವಾಮಿ ಸೇರಿದಂತೆ ಎಲ್ಲರೂ ಹಂಚುತ್ತಿದ್ದಾರೆ. ನಾವು ಹಂಚುತ್ತಿರುವುದು ನಮ್ಮ ಪ್ರಣಾಳಿಕೆ ಕಾರ್ಡ್. ಇಷ್ಟಾದರೂ ಭಯ ಬಂದಿದೆಯಲ್ಲ. ಹೆದರಿಕೊಂಡು ರಣಹೇಡಿ ತರ ಬೇರೆ ಕಡೆ ಹೋಗಿದ್ದಾರೆ. ಅವರೇ ಚುನಾವಣೆಗೆ ನಿಂತುಕೊಳ್ಳಬೇಕಿತ್ತು. ಅಮಾಯಕರನ್ನು ನಿಲ್ಲಿಸಿ ಮಂಡ್ಯಕ್ಕೆ ಓಡಿ ಹೋಗಿದ್ದಾರೆ. ಕುಮಾರಸ್ವಾಮಿ ಏನೇನು ಮಾಡುತ್ತಿದ್ದಾರೆ, ಏನೇನು ಹಂಚುತ್ತಿದ್ದಾರೆ ಎನ್ನುವುದು ನಮಗೆ ಗೊತ್ತಿಲ್ಲವೇ? ಮುನಿರತ್ನನ ಮೂಲಕ ಗೋಲ್ಡ್ ಕಾರ್ಡ್ ಮಾಡಿ ಹಂಚುತ್ತಿದ್ದಾರೆ. ಸಿನಿಮಾ ಶೈಲಿಯಲ್ಲಿ ಅಲ್ಲಿ ಮಾಡಿದ್ದಾರೆ. ಅವರೇಕೆ ಇಷ್ಟೊಂದು ಹತಾಶರಾಗಿದ್ದಾರೆ. ಹರಿಶ್ಚಂದ್ರನ ಮೊಮ್ಮಗ ಏನು ಹಂಚಿದ್ದಾನೆ
ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

'ಮತ' ಜಾತ್ರೆಯ ಸಡಗರ

ರಾಜ್ಯದ 14 ಲೋಕಸಭಾ ಕ್ಷೇತ್ರಗಳಿಗೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಗಣ್ಯರೂ ಸೇರಿದಂತೆ ಮತದಾರರು ಸಂಭ್ರಮದಿಂದ ಮತಚಲಾಯಿಸಿದರು. ಬೇಸಿಗೆ ಬಿಸಿಲಿನ ತಾಪದ ಕಾರಣ ಬಹುತೇಕರು ಮತದಾನ ಆರಂಭವಾದ ಬೆಳಿಗ್ಗೆ 7ಕ್ಕೇ ಮತಗಟ್ಟೆಯ ಬಳಿ ಜಮಾಯಿಸಿದ್ದರು. ಬಿಸಿಲು ಏರಿದಂತೆ ಮತದಾನದ ಪ್ರಮಾಣದಲ್ಲಿ ಇಳಿಕೆ ಕಂಡಿತು. ಸಂಜೆ4ರ ನಂತರ ಮತ್ತೆ ಮತದಾನ ಬಿರುಸುಕಂಡಿತು. ಎಲ್ಲ ಮತಗಟ್ಟೆಗಳಲ್ಲೂ ಹಬ್ಬದ ರೀತಿಯ ವಾತಾವರಣ ಕಂಡುಬಂತು.



ಸುದೀಪ್




ಸಪ್ತಮಿ ಗೌಡ



ಗಣೇಶ್ ಮತ್ತು ಶಿಲ್ಪಾ



ಬಂಜಾರ ಗುರುಪೀಠದ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಮೇದಾರ ಗುರುಪೀಠದ ಕೇತೇಶ್ವರ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಯಾದವ ಗುರುಪೀಠದ ಶ್ರೀಕೃಷ್ಣ ಯಾದವಾನಂದ ಸ್ವಾಮೀಜಿ, ಕುಂಚಿಟಿಗ ಗುರುಪೀಠದ ಶಾಂತವೀರ ಸ್ವಾಮೀಜಿ (ಎಡದಿಂದ ಬಲಕ್ಕೆ)




ದೇವನೂರ ಮಹಾದೇವ




ಜಾವಗಲ್ ಶ್ರೀನಾಥ್



ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ



ನಿರ್ಮಲಾನಂದನಾಥ ಸ್ವಾಮೀಜಿ



ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ



ಸಹಾಯಕರ ಜತೆ ಎಚ್‌.ಡಿ.ದೇವೇಗೌಡ



ರೂಪದರ್ಶಿ ತನಿಷ್ಕಾ ಮೂರ್ತಿ



ರಾಹುಲ್ ದ್ರಾವಿಡ್

ಕಾಂಗ್ರೆಸ್ ಮಜಬೂರ್: ನಡ್ಡಾ

ಪ್ರಜಾವಾಣಿ ವಾರ್ತೆ

ಕಲಬುರಗಿ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಶುಕ್ರವಾರ ಇಲ್ಲಿ ಅದ್ದೂರಿ ರೋಡ್ ಶೋ ನಡೆಸಿದರು. ಬಿಜೆಪಿ ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿದರು. ರೋಡ್ ಶೋ ಕೊನೆಯಲ್ಲಿ ಸೇರಿದ್ದ ಜನರನ್ನು ಉದ್ದೇಶಿಸಿ ಮಾತನಾಡಿದ ನಡ್ಡಾ, ಕಾಂಗ್ರೆಸ್ ಪಕ್ಷ ವಿರುದ್ಧ ವಾಗ್ದಾಳಿ ನಡೆಸಿದರು.

'ನೀವು ಮೋದಿ ನೇತೃತ್ವದಲ್ಲಿ ಮಜಬೂತ್ (ಬಲಿಷ್ಠ) ಸರ್ಕಾರ ನೋಡಿದ್ದೀರಿ. ಅದೇ ಕಾಂಗ್ರೆಸ್ ಅವಧಿಯಲ್ಲಿ ಮಜಬೂರ್ (ಅಸಹಾಯಕ) ಸರ್ಕಾರ ನೋಡಿದ್ದೀರಿ. ಅಸಹಾಯಕ ಸರ್ಕಾರ ಪಾಕಿಸ್ತಾನದ ಎದುರು ಮಂಡಿಯೂರುತ್ತಿತ್ತು. ಕಾಶ್ಮೀರದಲ್ಲಿ ಪ್ರತ್ಯೇಕತಾವಾದಿಗಳನ್ನು ಪ್ರಧಾನಿ ಕಚೇರಿ ಔತಣಕ್ಕೆ ಆಹ್ವಾನಿಸಿ, ಮಾತುಕತೆ ನಡೆಸುತ್ತಿತ್ತು. ಈಗ ಪಾಕಿಸ್ತಾನ ಗಡಿಯಲ್ಲಿ ದಾಳಿ ನಡೆಸಿದರೆ, ಮೋದಿ ನಾಯಕತ್ವದಲ್ಲಿ ದೇಶದ ಸೈನಿಕರು ಪಾಕಿಸ್ತಾನಕ್ಕೇ ನುಗ್ಗಿ ಹೊಡೆಯುವಂಥ ಬಲಿಷ್ಠ ಸರ್ಕಾರವಿದೆ' ಎಂದು ಪ್ರತಿಪಾದಿಸಿದರು. 'ಇದು ಬರೀ ಕಲಬುರಗಿಯ ಜಾಧವ ಅವರನ್ನು ಲೋಕಸಭೆ ಕಳಿಸುವ ಚುನಾವಣೆಯಷ್ಟೇ ಅಲ್ಲ, ಪ್ರಧಾನಿ ನರೇಂದ್ರ ಮೋದಿ ಅವರ ವಿಕಸಿತ ಭಾರತದ ಸಂಕಲ್ಪವನ್ನು ಪೂರ್ಣಗೊಳಿಸುವ ಚುನಾವಣೆಯಾಗಿದೆ' ಎಂದರು.

'ದೇಶದಲ್ಲಿ ಒಂದೆಡೆ ಮೋದಿ ನೇತೃತ್ವದ ಸರ್ಕಾರವಿದೆ. ಮತ್ತೊಂದೆಡೆ ಖರ್ಗೆ ನೇತೃತ್ವದಲ್ಲಿ ನಡೆಯುತ್ತಿರುವ ಪಾರ್ಟಿ



ಕಲಬುರಗಿಯಲ್ಲಿ ಉಮೇಶ ಜಾಧವ ಪರ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ರೋಡ್ ಶೋ ನಡೆಸಿದರು

ಇದೆ. 'ಇಂಡಿಯಾ' ಮೈತ್ರಿಕೂಟವು 'ಘಮಂಡಿಯಾ' (ಸೊಕ್ಕಿನ) ಮೈತ್ರಿಕೂಟ, ಇದು ಕುಟುಂಬ ಉಳಿಸಿ ಮೈತ್ರಿಕೂಟವಾಗಿದೆ. ಹಗರಣಗಳನ್ನು ನಡೆಸಿದ ಕುಟುಂಬಗಳ ಪಕ್ಷಗಳ ಮೈತ್ರಿಕೂಟವಾಗಿದೆ. ಎಲ್ಲರೂ ತಮ್ಮ ಕುಟುಂಬಗಳ ರಕ್ಷಣೆಯಲ್ಲಿ ತೊಡಗಿದ್ದಾರೆ. ಮೋದಿ ಭ್ರಷ್ಟಾಚಾರಿಗಳನ್ನು ತೊಲಗಿಸಿ ಎಂದರೆ ಈ ಮೈತ್ರಿಕೂಟ ಭ್ರಷ್ಟಾಚಾರಿಗಳನ್ನು ರಕ್ಷಿಸಿ ಎನ್ನುತ್ತದೆ' ಎಂದು ಜರಿದರು.

ಬಿಜೆಪಿ ಅಭ್ಯರ್ಥಿ ಡಾ.ಉಮೇಶ ಜಾಧವ, ಪ್ರಮುಖರಾದ ಶಿವರಾಜ ಪಾಟೀಲ ರದ್ದೇವಾಡಗಿ, ಚಂದು ಪಾಟೀಲ, ಬಿ.ಜಿ. ಪಾಟೀಲ, ಶಶೀಲ್ ನಮೋಶಿ, ರಘುನಾಥರಾವ್ ಮಲ್ಕಾಪುರೆ ವಿಶಾಲ ದರ್ಗಿ ಹಾಗೂ ದತ್ತಾತ್ರೇಯ ಪಾಟೀಲ ರೇವೂರ್ ಪಾಲ್ಗೊಂಡಿದ್ದರು.

'ಖಾಲಿ ಚೊಂಬು ಕೊಟ್ಟ ಬಿಜೆಪಿ'

ಬಳ್ಳಾರಿ/ವಿಜಯಪುರ: 'ಪ್ರಧಾನಿ ನರೇಂದ್ರ ಮೋದಿಯವರ 'ಭಾರತೀಯ ಚೊಂಬು ಪಾರ್ಟಿ'ಯಿಂದ ಜನರಿಗೆ ಖಾಲಿ ಚೊಂಬು ಬಿಟ್ಟರೆ ಮತ್ತೇನೂ ಸಿಕ್ಕಿಲ್ಲ. ಕರ್ನಾಟಕ ಸರ್ಕಾರವು ಬರ ಪರಿಹಾರ ಕೇಳಿದಾಗಲೂ ಕೇಂದ್ರ ಸರ್ಕಾರ ಖಾಲಿ ಚೊಂಬನ್ನೇ ಕೊಟ್ಟಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವ್ಯಂಗ್ಯವಾಡಿದರು.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಳ್ಳಾರಿಯಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್‌ನ ಪ್ರಚಾರ ಸಮಾವೇಶದಲ್ಲಿ ಮಾತನಾಡಿದ ಅವರು, 'ಕರ್ನಾಟಕ ಸರ್ಕಾರವು ತೆರಿಗೆ ರೂಪದಲ್ಲಿ ಕೇಂದ್ರಕ್ಕೆ ₹100 ಕೊಟ್ಟರೆ ಅದರಲ್ಲಿ ₹13 ಮಾತ್ರ ರಾಜ್ಯಕ್ಕೆ ವಾಪಸ್ ಬರುತ್ತಿದೆ. ರಾಜ್ಯಕ್ಕೆ ನಿರಂತರ ಅನ್ಯಾಯವಾಗುತ್ತಿದೆ' ಎಂದರು.

'ಮೋದಿಯವರು ದೇಶದಲ್ಲಿ 22ಕ್ಕೂ ಹೆಚ್ಚು ಕೋಟ್ಯಧೀಶರನ್ನು ಹುಟ್ಟು ಹಾಕಿದ್ದು ಅಲ್ಲದೇ, ಅವರ 16 ಲಕ್ಷ ಕೋಟಿ ಸಾಲ ಮನ್ನಾ ಮಾಡಿದ್ದಾರೆ. ಆದರೆ, ರೈತರ ಸಾಲ ಮನ್ನಾ ಮಾಡಿಲ್ಲ' ಎಂದರು.

'ಬಡವರು, ದುರ್ಬಲರು, ದಲಿತರು, ಅಲ್ಪಸಂಖ್ಯಾತರು ಸೇರಿದಂತೆ ಎಲ್ಲಾ ಸಮುದಾಯದವರಿಗೆ ಅಧಿಕಾರ ಮತ್ತು ಹಕ್ಕು ಕಲ್ಪಿಸಿರುವ ದೇಶದ ಸಂವಿಧಾನವನ್ನು ನಾಶ ಮಾಡಲು ಬಿಜೆಪಿ ಹುನ್ನಾರ ನಡೆಸಿದೆ. ಆದರೆ, ಸಂವಿಧಾನವನ್ನು ನಾಶ ಮಾಡುವಂತಹ ಶಕ್ತಿ ವಿಶ್ವದಲ್ಲಿಯೇ ಇಲ್ಲ' ಎಂದರು.

'ಬಳ್ಳಾರಿಯನ್ನು ವಿಶ್ವದ ಜೀನ್ಸ್ ರಾಜಧಾನಿ ಮಾಡುವ



ಬಳ್ಳಾರಿಯಲ್ಲಿ ನಡೆದ ಸಮಾವೇಶದಲ್ಲಿ ಚೊಂಬು ಪ್ರದರ್ಶಿಸಿದ ರಾಹುಲ್ ಗಾಂಧಿ. ಅಭ್ಯರ್ಥಿ ಈ.ತುಕಾರಾಂ ಇದ್ದರು

ಉದ್ದೇಶವಿದೆ. ಈ ಸಂಬಂಧ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿದ್ದೇನೆ' ಎಂದು ಅವರು ಹೇಳಿದರು.

ವಿಜಯಪುರದ ಸಮಾವೇಶದಲ್ಲಿ ಮಾತನಾಡಿ ರಾಹುಲ್ ಗಾಂಧಿ, 'ಮುಂದಿನ ದಿನಗಳಲ್ಲಿ ನರೇಂದ್ರ ಮೋದಿ ಅವರು ಕಣ್ಣೀರು ಹಾಕಬಹುದು. ಪಾಕಿಸ್ತಾನ, ಚೀನಾದ ಬಗ್ಗೆ ಮಾತನಾಡಬಹುದು, ಮೊಬೈಲ್ ಫೋನ್ ಲೈಟ್ ಆನ್ ಮಾಡಿ, ಇಲ್ಲವೇ ಚಪ್ಪಾಳೆ ಹೊಡೆಯಿರಿ ಎಂದು ಹೇಳುವ ದಿನ ದೂರವಿಲ್ಲ. ಅವರು ಆತಂಕದಲ್ಲಿದ್ದಾರೆ. ನಿಮ್ಮ ಗಮನವನ್ನು ಬೇರೆಡೆ ಸೆಳೆಯುವ ಕೆಲಸವನ್ನು ಅವರು ಮಾಡಬಹುದು' ಎಂದು ರಾಹುಲ್ ಗಾಂಧಿ ಲೇವಡಿ ಮಾಡಿದರು.

ರಾಯಚೂರಿಗೆ ಯಾರಾಗಲಿದ್ದಾರೆ 'ನಾಯಕ'

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ **58.34%**





ರಾಜಾ ಅಮರೇಶ್ವರ ನಾಯಕ (ಬಿಜೆಪಿ)

- 👍 ರಾಜಕೀಯ ಅನುಭವ. ಕ್ಷೇತ್ರದ ಆಳ, ಅಗಲ, ಸಮಸ್ಯೆ ಅರಿವು
- 👍 ರಾಜ ಮನೆತನದವರಾಗಿರುವ ಕಾರಣ ಜಿಲ್ಲೆಯ 40 ಹಳ್ಳಿಗಳ ಮೇಲೆ ಇವರದ್ದೇ ಹಿಡಿತ. ಎಸ್‌ಟಿ ಸಮುದಾಯದ ಬೆಂಬಲ
- 👎 ಶಾಸಕ, ಸಚಿವ ಹಾಗೂ ಸಂಸದರಾದರೂ ಜನರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ನಿರಾಸಕ್ತಿ ವಹಿಸಿದ್ದಾರೆ ಎಂಬ ಅಸಮಾಧಾನ
- 👎 ಆಡಳಿತ ವಿರೋಧಿ ಅಲೆ ಎದುರಾಗುವ ಆತಂಕ. ಟಿಕೆಟ್ ವಂಚಿತರ ಮುನಿಸು, ಒಳಏಟಿನ ಭೀತಿ




ಜಿ.ಕುಮಾರ ನಾಯಕ (ಕಾಂಗ್ರೆಸ್)

- 👍 ಐವರು ಕಾಂಗ್ರೆಸ್ ಶಾಸಕರು, ಸಚಿವರ ಬೆಂಬಲ
- 👍 ಜಿಲ್ಲಾಧಿಕಾರಿ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿದ್ದ ಕಾರಣ ಕ್ಷೇತ್ರದ ಅರಿವು ಇದೆ. ಕಾಂಗ್ರೆಸ್ ಗ್ಯಾರಂಟಿಗಳು ಬೆನ್ನಿಗಿವೆ
- 👎 ಬೆಂಗಳೂರಿನವರಾಗಿರುವ ಕಾರಣ ಹೊರಗಿನವರು ಎನ್ನುವ ಭಾವನೆ. ಹೆಚ್ಚಿನ ಮತದಾರರನ್ನು ತಲುಪಲು ಕಷ್ಟವಾಗುತ್ತಿದೆ
- 👎 ನೇರವಾಗಿ ಚುನಾವಣೆಗೆ ಸ್ಪರ್ಧಿಸಿದ್ದು, ರಾಜಕಾರಣದಲ್ಲಿ ಅನುಭವದ ಕೊರತೆ ಇದೆ

ಕ್ಷೇತ್ರವನ್ನು ಕಾಡುವ ವಿಷಯಗಳು

- ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ
- ಜಿಲ್ಲೆಯಲ್ಲಿ ಬೃಹತ್ ಕೈಗಾರಿಕೆಗಳ ಕೊರತೆ
- ಹತ್ತಿ ಉತ್ಪಾದನೆ ಅಧಿಕ ಇದ್ದರೂ ಜವಳಿ ಪಾರ್ಕ್ ಬೇಡಿಕೆ ಈಡೇರಿಲ್ಲ
- ಮುಗಿಯದ ಮುನಿರಾಬಾದ್–ಮೆಹಬೂಬನಗರ ರೈಲ್ವೆ ಕಾಮಗಾರಿ
- ತುಂಗಭದ್ರಾ ಕಾಲುವೆಯ ಕೊನೆ ಭಾಗದ ರೈತರ ಜಮೀನುಗಳಿಗೆ ತಲುಪದ ನೀರು



ಶಾಸಕರ ಬಲಾಬಲ
ಕಾಂಗ್ರೆಸ್ 5
ಬಿಜೆಪಿ 2
ಜೆಡಿಎಸ್ 1

1. ಯಾದಗಿರಿ
2. ರಾಯಚೂರು ಗ್ರಾಮೀಣ
3. ರಾಯಚೂರು ನಗರ
4. ಮಾನ್ವಿ
5. ಲಿಂಗಸುಗೂರು
6. ಸುರಪುರ (ಉಪಚುನಾವಣೆ ನಡೆಯುತ್ತಿದೆ)
7. ಶಹಾಪುರ 8. ದೇವದುರ್ಗ



• ಚಂದ್ರಕಾಂತ ಮಸಾನಿ

ರಾಯಚೂರು

ರಾಯಚೂರು: ಯಾದಗಿರಿ ಜಿಲ್ಲೆಯ ಮೂರು ವಿಧಾನಸಭಾ ಕ್ಷೇತ್ರಗಳನ್ನು ತನ್ನ ಒಡಲಿಗೆ ಸೇರಿಸಿಕೊಂಡಿರುವ ರಾಯಚೂರು ಲೋಕಸಭಾ (ಪರಿಶಿಷ್ಟ ಪಂಗಡದ ಮೀಸಲು) ಕ್ಷೇತ್ರದಲ್ಲಿ ಎರಡನೇ ಅವಧಿಗೂ ಜಯ ಸಾಧಿಸುವ ತವಕದಲ್ಲಿ ಬಿಜೆಪಿ ಇದ್ದರೆ, ಕ್ಷೇತ್ರವನ್ನು 'ಕೈ'ವಶ ಮಾಡಿಕೊಳ್ಳಲು ಕಾಂಗ್ರೆಸ್ ಸೆಣಸುತ್ತಿದೆ.

ಬಿಜೆಪಿಯ ಹಾಲಿ ಸಂಸದ, ರಾಜ ಮನೆತನದ ರಾಜಾ ಅಮರೇಶ್ವರ ನಾಯಕ ಮತ್ತೊಮ್ಮೆ ವಿಜಯ ಪತಾಕೆ ಹಾರಿಸುವ ತವಕದಲ್ಲಿ ಇದ್ದಾರೆ. ಕಾಂಗ್ರೆಸ್ ಅಭ್ಯರ್ಥಿಯನ್ನು 'ವಲಸಿಗ' ಎಂದು ಬಿಂಬಿಸಲು ಯತ್ನಿಸುತ್ತಿದ್ದಾರೆ. ಕಾಂಗ್ರೆಸ್‌ನಿಂದ ಕಣಕ್ಕೆ ಇಳಿದಿರುವ ನಿವೃತ್ತ ಐಎಎಸ್ ಅಧಿಕಾರಿ ಜಿ.ಕುಮಾರ ನಾಯಕ ಕಾರ್ಯಕರ್ತರ ಬೆಂಬಲದಿಂದಾಗಿ ಗೆಲುವು ಸಾಧಿಸುವ ಹುಮ್ಮಸ್ಸಿನಲ್ಲಿದ್ದಾರೆ.

ಅಧಿಕಾರಾವಧಿಯಲ್ಲಿ ರಾಜಾ ಅಮರೇಶ್ವರ ನಾಯಕ ಕಾರ್ಯಕರ್ತರೊಂದಿಗೆ ಸರಿಯಾಗಿ ನಡೆದುಕೊಂಡಿಲ್ಲ ಎನ್ನುವ ಆರೋಪ ಇದೆ; ಟಿಕೆಟ್ ಸಿಗದೆ ಬೇಸರಗೊಂಡ ಮುಖಂಡರ ಮುನಿಸು ಚುನಾವಣೆಯಲ್ಲಿ 'ಒಳಏಟು' ಕೊಟ್ಟರೆ ಕಷ್ಟ ಎನ್ನುವ ಆತಂಕ ಬಿಜೆಪಿ 'ನಾಯಕ'ರನ್ನು ಕಾಡುತ್ತಿದೆ. ಬಿಜೆಪಿ ರಾಜ್ಯ ಉಸ್ತುವಾರಿ ರಾಧಾ ಮೋಹನದಾಸ ಅಗರವಾಲ್ ಜಿಲ್ಲೆಗೆ ಬಂದು ಮುಖಂಡರ ಸಭೆ ಕರೆದು ತೇಪೆ ಹಚ್ಚಿ ಹೋಗಿದ್ದಾರೆ.

2008ರ ಕ್ಷೇತ್ರ ಪುನರ್ವಿಂಗಡಣೆ ಬಳಿಕ ಕ್ಷೇತ್ರದ ಭೌಗೋಳಿಕ, ರಾಜಕೀಯ ಮತ್ತು ಸಾಮಾಜಿಕ ನಕ್ಷೆ ಬದಲಾಗಿದೆ. ರಾಯಚೂರು ಲೋಕಸಭೆ ಕ್ಷೇತ್ರ ವ್ಯಾಪ್ತಿಯ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ನಾಲ್ಕು ಕ್ಷೇತ್ರ ಪರಿಶಿಷ್ಟ ಪಂಗಡ, ಒಂದು ಪರಿಶಿಷ್ಟ ಜಾತಿ, ಉಳಿದ ಮೂರು ಸಾಮಾನ್ಯ ಕ್ಷೇತ್ರಗಳಾಗಿವೆ.

ಈ ಕ್ಷೇತ್ರದಲ್ಲಿ ಈವರೆಗೆ 13 ಬಾರಿ ಕಾಂಗ್ರೆಸ್ ಗೆದ್ದಿದೆ. ಎರಡು ಬಾರಿ ಬಿಜೆಪಿ, ಒಂದು ಬಾರಿ ಜನತಾ ದಳ ಗೆಲುವು ಸಾಧಿಸಿವೆ. 1967ರಲ್ಲಿ ರಾಜಾ ವೆಂಕಟಪ್ಪ ನಾಯಕ ಪಕ್ಷೇತರ ಅಭ್ಯರ್ಥಿಯಾಗಿ ಹಾಗೂ 1996ರಲ್ಲಿ ಜನತಾ ದಳದಿಂದ ರಾಜಾ ರಂಗಪ್ಪ ನಾಯಕ ಒಂದೊಂದು ಬಾರಿ ಗೆಲುವು ಸಾಧಿಸಿದ್ದಾರೆ. ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸುವ ಹೊಣೆಯನ್ನು ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ವಹಿಸಿಕೊಂಡು ಕ್ಷೇತ್ರದಲ್ಲಿ ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾರೆ.

ಬಿಎಸ್‌ಪಿಯ ಎಸ್.ನರಸಣ್ಣ ಗೌಡ ನಾಯಕ, ಕರ್ನಾಟಕ ರಾಷ್ಟ್ರ ಸಮಿತಿಯ ಬಸವಪ್ರಭು ಮೇದಾ, ಸೋಷಿಯಲ್ ಯುನಿಟಿ ಸೆಂಟರ್ ಆಫ್ ಇಂಡಿಯಾ ಪಕ್ಷದ ರಾಮಲಿಂಗಪ್ಪ, ಭಾರತೀಯ ಜನ ಸಾಮ್ರಾಟ ಪಕ್ಷದ ಮೇದಾರ ಶಾಮರಾವ್, ಪಕ್ಷೇತರ ಅಭ್ಯರ್ಥಿಗಳಾಗಿ ಅಮರೇಶ ಹಾಗೂ ರೈತ ಮಹಿಳೆ ಯಲ್ಲಮ್ಮ ದಳಪತಿ ಸೇರಿ ಒಟ್ಟು ಎಂಟು ಅಭ್ಯರ್ಥಿಗಳು ಚುನಾವಣಾ ಕಣದಲ್ಲಿ ಉಳಿದಿದ್ದಾರೆ.

ಮೋದಿ ಅಲೆ, ಜೆಡಿಎಸ್–ಬಿಜೆಪಿ ಮೈತ್ರಿ ಬಲ ಹಾಗೂ ರಾಜವಂಶಸ್ಥರ ಬಗ್ಗೆ ಕ್ಷೇತ್ರದ ಜನತೆ ಇಟ್ಟುಕೊಂಡಿರುವ ಗೌರವವನ್ನು ಬಿಜೆಪಿ ಅತಿಯಾಗಿ ನಂಬಿದೆ. ಕಾಂಗ್ರೆಸ್ ಮಾತ್ರ 'ಗ್ಯಾರಂಟಿ' ಯೋಜನೆಗಳನ್ನೇ ನೆಚ್ಚಿಕೊಂಡಿದೆ. ಜಿಲ್ಲೆಯ ಜನರಿಗೆ ಪರಿಚಿತರೇ ಇರುವ ನಿವೃತ್ತ ಐಎಎಸ್ ಅಧಿಕಾರಿಯನ್ನೇ ಕಣಕ್ಕಿಳಿಸಿರುವ ಕಾರಣ ಗೆಲುವು ಕಷ್ಟವಾಗಲಾರದು ಎನ್ನುವ ವಿಶ್ವಾಸದಲ್ಲಿ ಕಾಂಗ್ರೆಸ್ ಇದೆ. ❖

ಕ್ಷೇತ್ರ ಸಮೀಕ್ಷೆ

ಜಾರಕಿಹೊಳಿ – ಜೊಲ್ಲೆ ಯಾರಿಗೆ ಸಕ್ಕರೆ?

• ಸಂತೋಷ ಈ. ಚಿನಗುಡಿ

ಚಿಕ್ಕೋಡಿ

ಚಿಕ್ಕೋಡಿ: ಚಿಕ್ಕೋಡಿ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್–ಬಿಜೆಪಿ ಅಭ್ಯರ್ಥಿಗಳಿಬ್ಬರಿಗೂ ಒಳಪೆಟ್ಟಿನ ಆತಂಕ ಹೆಚ್ಚಿದೆ.

ಬಿಜೆಪಿಯಿಂದ ಎರಡನೇ ಬಾರಿ ಕಣಕ್ಕಿಳಿದಿರುವ ಹಾಲಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಅವರು ಪ್ರಧಾನಿ ನರೇಂದ್ರ ಮೋದಿ ಪ್ರಭಾವ, ಕೇಂದ್ರ ಸರ್ಕಾರದ ಯೋಜನೆಗಳು ಮತ್ತು ರಾಮ ಮಂದಿರ ವಿಷಯವನ್ನು ನೆಚ್ಚಿಕೊಂಡಿದ್ದಾರೆ. 6 ತಿಂಗಳು ಮುಂಚೆಯೇ ಪ್ರಚಾರ ಶುರು ಮಾಡಿದ ಅವರು, ಮತ ಬ್ಯಾಂಕ್ ಗಟ್ಟಿಗೊಳಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ.

ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ, ಇದೇ ಕ್ಷೇತ್ರದಿಂದ ಒಂದು ಬಾರಿ ಸಂಸದರೂ ಆಗಿದ್ದ ರಮೇಶ ಕತ್ತಿ ಪ್ರಭಾವಿ ರಾಜಕಾರಣಿ. ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಅವರದ್ದೂ ಈ ಕ್ಷೇತ್ರದಲ್ಲಿ ಪ್ರಭಾವವಿದೆ. ಆದರೆ, ಇವರಿಬ್ಬರೂ ಜೊಲ್ಲೆ ಪರ ಪ್ರಚಾರಕ್ಕೆ ಬಂದಿಲ್ಲ. ಬಿಜೆಪಿಯವರಾದ ಗೋಕಾಕ ಶಾಸಕ ರಮೇಶ ಜಾರಕಿಹೊಳಿ, ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಕೂಡ ಪ್ರಚಾರದಲ್ಲಿ ಕಾಣಿಸಿಕೊಂಡಿಲ್ಲ.

ಪ್ರಖರ ಮಾತುಗಳ ಮೂಲಕ ಜಾರಕಿಹೊಳಿ ಕುಟುಂಬ ರಾಜಕಾರಣ ಟೀಕಿಸುತ್ತಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಜೊಲ್ಲೆ ಅವರ ಬೆನ್ನಿಗೆ ನಿಂತಿದ್ದಾರೆ.


ಪ್ರಿಯಾಂಕಾ ಜಾರಕಿಹೊಳಿಗೂ ಒಳಪೆಟ್ಟಿನ ಆತಂಕ ಇಲ್ಲದಿಲ್ಲ. ಎಲ್ಲವೂ ಬೂದಿಮುಚ್ಚಿದ ಕೆಂಡದಂತಿವೆ. ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ಪ್ರಕಾಶ ಹುಕ್ಕೇರಿ, ಲಕ್ಷ್ಮಣ ಸವದಿ ಸೇರಿದಂತೆ ಎಲ್ಲ ಹಾಲಿ ಹಾಗೂ ಮಾಜಿ ಶಾಸಕರೂ ಒಗ್ಗಟ್ಟು ಪ್ರದರ್ಶಿಸಿದರು. 'ಶಕ್ತಿ ಪ್ರದರ್ಶನಕ್ಕಿಂತ ಒಗ್ಗಟ್ಟು ಪ್ರದರ್ಶನ ಮುಖ್ಯ' ಎಂಬ ಸತೀಶ ಜಾರಕಿಹೊಳಿ ಮಾತು ಒಳಪೆಟ್ಟಿನ ಸಂಶಯವಿದೆ ಎಂಬುದಕ್ಕೆ ಸಾಕ್ಷ್ಯದಂತಿದೆ.


ಎಲ್ಲ ನಾಯಕರೂ ಪ್ರಿಯಾಂಕಾ ಪರ ಅಲ್ಲಲ್ಲಿ ಪ್ರಚಾರ ನಡೆಸಿದ್ದಾರೆ. ಶಾಸಕ ಲಕ್ಷ್ಮಣ ಸವದಿ ಪ್ರಚಾರ ಸಭೆಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನೇ ಕಟುವಾಗಿ ಟೀಕಿಸುತ್ತ ಸಾಗಿದ್ದಾರೆ. 'ಈ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಿಸಿದರೆ ಸಚಿವ ಸ್ಥಾನ ನಿಕ್ಕಿ' ಎಂದು ಡಿ.ಕೆ.ಶಿವಕುಮಾರ್ ಅವರ ಮಾತೂ ಇಲ್ಲಿ ಮುಖ್ಯವಾಗಿದೆ.

ಪಕ್ಷೇತರರಾಗಿ ಕಣಕ್ಕಿಳಿದ ಶಂಭು ಕಲ್ಲೋಳಿಕರ ಕಾಂಗ್ರೆಸ್‌ನ 'ಅಹಿಂದ' ಮತಗಳನ್ನು ಕಿತ್ತುಕೊಳ್ಳಬಹುದು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸತೀಶ ಜಾರಕಿಹೊಳಿ ಅವರೇ ತಮಗೆ ಟಿಕೆಟ್ ತಪ್ಪಿಸಿದರು ಎಂಬ ಕೋಪ ಕಲ್ಲೋಳಿಕರ ಅವರಿಗಿದೆ. 'ದಲಿತರು ಗೆಲ್ಲಿಸಿ ತೋರಿಸಿದ್ದೇವೆ. ಈಗ ಸೋಲಿಸಿ ತೋರಿಸುತ್ತೇವೆ' ಎಂಬ ಕಲ್ಲೋಳಿಕರ ಮಾತನ್ನು ಹಗುರವಾಗಿ ತೆಗೆದುಕೊಳ್ಳಲಾಗದು. ದೊಡ್ಡ ಬೆಂಬಲಿಗರ ಪಡೆ ಹೊಂದಿರುವ ಕಲ್ಲೋಳಿಕರ ಈಗಲೂ ಇಷ್ಟೇ ಮತಗಳನ್ನು ಪಡೆದರೆ ಕಾಂಗ್ರೆಸ್‌ಗೆ 'ಹೊರೆ' ಆಗುವುದರಲ್ಲಿ ಸಂದೇಹವಿಲ್ಲ.

ಸಹಕಾರ ಕ್ಷೇತ್ರ ಹಾಗೂ ಬ್ಯಾಂಕ್ ಉದ್ಯಮದಲ್ಲಿ ಹೆಸರು ಮಾಡಿರುವ ಅನುಭವಿ ಅಣ್ಣಾಸಾಹೇಬ ಜೊಲ್ಲೆ. ಚುನಾವಣಾ ನೀತಿಯಲ್ಲಿ 'ಮಾಸ್ಟರ್ ಮೈಂಡ್' ಎಂದೇ ಹೆಸರಾದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ (ಅಭ್ಯರ್ಥಿ ತಂದೆ) ಅವರ ಮಧ್ಯೆಯೇ ಈ ಚುನಾವಣೆ ನಡೆದಿದೆ ಎನ್ನುವ ರೀತಿ ಪ್ರಚಾರ ಕಾರ್ಯಕ್ರಮಗಳು ಸ್ವರೂಪ ಬದಲಾಯಿಸಿಕೊಂಡಿವೆ. ❖

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ **75.62%**





ಅಣ್ಣಾಸಾಹೇಬ ಜೊಲ್ಲೆ (ಬಿಜೆಪಿ)

ಕ್ಷೇತ್ರದ ಅಭಿವೃದ್ಧಿಗಾಗಿ ಅತಿ ಹೆಚ್ಚು ಅನುದಾನ ಬಳಸಿದ ಕೀರ್ತಿ ನನಗಿದೆ. ಮೋದಿ ಅಲೆಯಲ್ಲಿ ಗೆಲುವುದು ಖಾತ್ರಿಯಾಗಿದೆ. ಮತದಾರರು ಕೈಬಿಡುವುದಿಲ್ಲ ಎಂಬ ನಂಬಿಕೆ ಇದೆ

- 👍 ಪ್ರಬಲ ಲಿಂಗಾಯತ ಸಮುದಾಯದ ಅನುಭವಿ ರಾಜಕಾರಣಿ
- 👍 ಗ್ರಾಮಗಳಲ್ಲಿ ಸಹಕಾರ ಸಂಸ್ಥೆಗಳನ್ನು ತೆರೆದಿದ್ದಾರೆ
- 👎 ಕ್ಷೇತ್ರಕ್ಕೆ ₹8,810 ಕೋಟಿ ಅನುದಾನ ತಂದರೂ ಕಣ್ಣಿಗೆ ಕಾಣದ ಅಭಿವೃದ್ಧಿ
- 👎 ಬಿಜೆಪಿ ನಾಯಕರನ್ನು ಒಗ್ಗೂಡಿಸಿಕೊಂಡು ಹೋಗಲ್ಲ ಎಂಬ ಆರೋಪ




ಪ್ರಿಯಾಂಕಾ ಜಾರಕಿಹೊಳಿ (ಕಾಂಗ್ರೆಸ್)

ಕಾಂಗ್ರೆಸ್‌ನ ಹಿರಿಯ ನಾಯಕರ ಬೆಂಬಲ ನನಗಿದೆ. ತಂದೆಯು ಮಾಡಿರುವ ಅಭಿವೃದ್ಧಿ ಕೆಲಸ ಕೈ ಹಿಡಿಯಲಿದೆ. ರಾಜ್ಯದ ಗ್ಯಾರಂಟಿ ಯೋಜನೆಗಳ ಮಹತ್ವ ಜನರಿಗೆ ಗೊತ್ತಾಗಿದೆ

- 👍 ಪಂಚ ಗ್ಯಾರಂಟಿ ಯೋಜನೆಗಳನ್ನು ಮನೆಮನೆಗೆ ತಲುಪಿಸಿದ್ದು ಅನುಕೂಲಕಾರಿ
- 👍 ಸತೀಶ ಜಾರಕಿಹೊಳಿ ಅವರ ಚಾಣಾಕ್ಷ ರಾಜಕಾರಣದ ಜತೆ ಜಾರಕಿಹೊಳಿ ಸಹೋದರರಿಗೆ ಪ್ರಿಯಾಂಕ ಬಗೆಗಿನ ಮಮಕಾರ
- 👎 ಅಹಿಂದ ಮತಗಳು ವಿಭಜನೆ ಆಗುವ ಸಾಧ್ಯತೆ
- 👎 ಕುಟುಂಬ ರಾಜಕಾರಣದ ನಿಲುವು


ಕ್ಷೇತ್ರವನ್ನು ಕಾಡುವ ವಿಷಯಗಳು

- ಚಿಕ್ಕೋಡಿ ಕೇಂದ್ರವಾಗಿ ಹೊಸ ಜಿಲ್ಲೆ ರಚನೆಯ ಬೇಡಿಕೆ ಈಡೇರಿಲ್ಲ
- ಪ್ರವಾಹದಿಂದ ಜರ್ಜರಿತಗೊಳ್ಳುವ 30ಕ್ಕೂ ಹೆಚ್ಚು ಗ್ರಾಮಗಳ ಸ್ಥಳಾಂತರ ಆಗಿಲ್ಲ
- ಪ್ರತಿ ಮಳೆಗಾಲದಲ್ಲಿ ಕೃಷ್ಣಾ ನದಿಗೆ ಪ್ರವಾಹ ಬಂದು ಅಪಾರ ಹಾನಿ
- ಹಲವು ಸಕ್ಕರೆ ಕಾರ್ಖಾನೆಗಳಿದ್ದರೂ ಕಬ್ಬಿಗೆ ಸೂಕ್ತ ದರ ಕೊಡಿಸಿಲ್ಲ
- ಮೂರು ದೊಡ್ಡ ಏತನೀರಾವರಿ ಯೋಜನೆಗಳು ನನೆಗುದಿಗೆ, ಈಡೇರದ ನೀರಾವರಿ ಕನಸು



ಶಾಸಕರ ಬಲಾಬಲ
ಕಾಂಗ್ರೆಸ್ 5
ಬಿಜೆಪಿ 3

1. ಕಾಗವಾಡ
2. ಅಥಣಿ
3. ಕುಡಚಿ
4. ರಾಯಭಾಗ
5. ಯಮಕನಮರಡಿ
6. ಹುಕ್ಕೇರಿ
7. ನಿಪ್ಪಾಣಿ
8. ಚಿಕ್ಕೋಡಿ–ಸದಲಗಾ



ದಶಕದ ಹಿಂದೆ ಕೇಂದ್ರ ಸರ್ಕಾರವನ್ನೇ ನಿಯಂತ್ರಿಸುವ ಸ್ಥಿತಿಯಲ್ಲಿದ್ದ ಎಡ ಪಕ್ಷಗಳು 2019ರ ಲೋಕಸಭಾ ಚುನಾವಣೆಯಲ್ಲಿ ಪಾತಾಳಕ್ಕೆ ಕುಸಿದವು. ಈ ಪಕ್ಷಗಳು ಒಂದೊಂದೇ ರಾಜ್ಯದಲ್ಲಿ ನೆಲೆ ಕಳೆದುಕೊಳ್ಳುತ್ತಿವೆ. ಈ ಸಲ 'ಇಂಡಿಯಾ' ಮೈತ್ರಿಕೂಟದ ಪಾಲುದಾರರಾಗಿರುವ ಎಡ ಪಕ್ಷಗಳು ಉಳಿವಿಗಾಗಿ ಹೋರಾಟ ನಡೆಸುತ್ತಿವೆ. ಇಂಡಿಯಾ ಮೈತ್ರಿಕೂಟದ ಚುನಾವಣಾ ಕಾರ್ಯತಂತ್ರ, ಅವರ ಪಕ್ಷದ ಭವಿಷ್ಯದ ಬಗ್ಗೆ ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಅವರು 'ಪ್ರಜಾವಾಣಿ'ಗೆ ನೀಡಿರುವ ಸಂದರ್ಶನದ ಭಾಗ ಇಲ್ಲಿದೆ.

ಪ್ರಜಾವಾಣಿ ಸಂದರ್ಶನ

ಸೋಲಿನ ಭೀತಿಯಿಂದ ಮೋದಿ ದ್ವೇಷ ಭಾಷಣ: ಯೆಚೂರಿ

• ಮಂಜುನಾಥ ಹೆಬ್ಬಾರ್

• ಲೋಕಸಭಾ ಚುನಾವಣೆಯ ಎರಡನೇ ಹಂತದ ಮತದಾನ ಪ್ರಕ್ರಿಯೆ ಮುಗಿದಿದೆ. ನಿಮ್ಮ ಪಕ್ಷದ ನಿರೀಕ್ಷೆಗಳೇನು?

ಲೋಕಸಭಾ ಚುನಾವಣೆ ಮುಕ್ತ ಹಾಗೂ ನ್ಯಾಯಸಮ್ಮತವಾಗಿ ನಡೆದರೆ 'ಇಂಡಿಯಾ' ಮೈತ್ರಿಕೂಟ ಅಧಿಕಾರದ ಚುಕ್ಕಾಣಿ ಹಿಡಿಯಲು ಉತ್ತಮ ಅವಕಾಶ ಇದೆ. ಬಿಜೆಪಿಯ ಸೀಟುಗಳ ಸಂಖ್ಯೆ ಗಣನೀಯ ಕುಸಿತ ಕಾಣಲಿದೆ. ಬಿಜೆಪಿಗೆ ಈ ಬಗ್ಗೆ ಅರಿವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಈಚಿನ ಚುನಾವಣಾ ಪ್ರಚಾರ ಭಾಷಣಗಳೇ ಇದಕ್ಕೆ ಸಾಕ್ಷಿ. ಪಕ್ಷದ ತಳಪಾಯ ಕುಸಿಯುತ್ತಿರುವ ಅನುಭವ ಅವರಿಗೆ ಆದಂತಿದೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ನಮ್ಮ ಪಕ್ಷ ಕನಿಷ್ಠ ಸ್ಥಾನಗಳನ್ನು ಗಳಿಸಿತ್ತು. ಈ ಚುನಾವಣೆಯಲ್ಲಿ ಆ ವೈಫಲ್ಯವನ್ನು ಮೀರಿ ನಿಲ್ಲಬೇಕು ಎಂಬುದು ನಮ್ಮ ಆಶಯ. ಪಕ್ಷ ಹೆಚ್ಚಿನ ಸ್ಥಾನಗಳನ್ನು ಗಳಿಸಲಿದ್ದು, ಪುನರುತ್ಥಾನ ಆಗಲಿದೆ ಎಂಬ ವಿಶ್ವಾಸವಿದೆ.



• ಭಾರತೀಯ ಚುನಾವಣಾ ಆಯೋಗದ ಕಾರ್ಯವೈಖರಿ ಬಗ್ಗೆ ನಿಮಗೆ ಅಸಮಾಧಾನ ಇದೆಯೇ?

ಹೌದು. ಮಾದರಿ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳಲ್ಲಿ ಆಯೋಗದ ಕ್ರಮ ಪಕ್ಷಪಾತದಿಂದ ಕೂಡಿದೆ. ಪ್ರಧಾನಿ ಹಾಗೂ ಬಿಜೆಪಿಯ ಅತ್ಯಂತ ನಿರ್ಲಜ್ಜ ಉಲ್ಲಂಘನೆಗಳ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಆಯೋಗದ ಕ್ರಮ ಮುಕ್ತ ಹಾಗೂ ನ್ಯಾಯಸಮ್ಮತವಾಗಿಲ್ಲ.

• ಮೊದಲ ಹಂತದ ಮತದಾನ ಮುಗಿದ ಬಳಿಕ ಪ್ರಧಾನಿ ಅವರ ಪ್ರಚಾರ ವೈಖರಿಯಲ್ಲಿ ಬದಲಾವಣೆ ಆಗಿದೆ. ಮುಸ್ಲಿಂ ಮೀಸಲಾತಿ, ಪಿತ್ರಾರ್ಜಿತ ಆಸ್ತಿ ಹಂಚಿಕೆ, ಮಾಂಗಲ್ಯ ಸರದ ಬಗ್ಗೆ ಪ್ರಸ್ತಾಪಿಸುತ್ತಿದ್ದಾರೆ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?

ಪ್ರಧಾನಿ ಅವರಿಗೆ ಸೋಲಿನ ಸುಳಿವು ಸಿಕ್ಕಿದೆ. ಹೀಗಾಗಿ, ಅವರು ಹತಾಶರಾಗಿದ್ದಾರೆ. ಮತದಾನದ ಶೇಕಡಾವಾರು ಕುಸಿತವು ಆಡಳಿತ ಪಕ್ಷಕ್ಕೆ ಎಂದಿಗೂ ಒಳ್ಳೆಯದಲ್ಲ. ಈ ಸಲ ಯಾವುದೇ ಅಲೆ ಇಲ್ಲ ಎಂಬುದು ಸ್ಪಷ್ಟ. ಅಲೆ ಇಲ್ಲದೆ ಮೋದಿ ಅವರು ಗೆಲ್ಲುವುದು ಕಷ್ಟ. ಈ ಕಾರಣಕ್ಕೆ ಅವರು ಕೋಮು ಧ್ರುವೀಕರಣಕ್ಕೆ ಹೊರಟಿದ್ದಾರೆ. ಹಿಂದೂಗಳು–ಮುಸ್ಲಿಮರ ನಡುವೆ ಮತ್ತಷ್ಟು ವೈಷಮ್ಯ ಬೆಳೆಸಲು ಮುಂದಾಗಿದ್ದಾರೆ. ಪ್ರತಿನಿತ್ಯ ದ್ವೇಷ ಭಾಷಣ ಮಾಡುತ್ತಿದ್ದಾರೆ.

• ಈ 'ಕೋಮು ಕಾರ್ಡ್' ಕೆಲಸ ಮಾಡುತ್ತದೆ ಎಂದು ನೀವು ಭಾವಿಸುತ್ತೀರಾ?

ಪ್ರಧಾನಿಯವರು ದೈನಂದಿನ ಜೀವನದ ಬವಣೆಗಳ ಕುರಿತು ಮಾತನಾಡುತ್ತಿಲ್ಲ. ಈ ಕುರಿತು ದಿವ್ಯ ಮೌನ ತಾಳಿದ್ದಾರೆ. ಉದ್ಯೋಗ ಸೃಷ್ಟಿ, ಬೆಲೆ ಏರಿಕೆ, ಹಸಿವು ಹಾಗೂ ಬಡತನಗಳ ಬಗ್ಗೆ ಭಾಷಣಗಳಲ್ಲಿ ಪ್ರಸ್ತಾಪವೇ ಇಲ್ಲ. ಅವರ ಈಚಿನ ಚುನಾವಣಾ ಭಾಷಣಗಳು ಹಾಸ್ಯಾಸ್ಪದವಾದುದು. ಅವರ ಅತ್ಯಂತ ಕ್ರೂರ ಹಾಗೂ ಅತಿರೇಕದ ಭಾಷಣಗಳನ್ನು ಮಾಡುತ್ತಿದ್ದಾರೆ. ಇದು ಹತಾಶೆಯ ಪರಮಾವಧಿ.

• ನಿಮ್ಮ ಪಕ್ಷವು ಕೆಲವು ರಾಜ್ಯಗಳಲ್ಲಿ ಹೆಚ್ಚಿನ ಸೀಟುಗಳನ್ನು ಅಪೇಕ್ಷಿಸಿತ್ತು. ಕಾಂಗ್ರೆಸ್ ಹೆಚ್ಚಿನ ಸೀಟುಗಳನ್ನು ಬಿಟ್ಟುಕೊಟ್ಟಿಲ್ಲವಲ್ಲ?

ಸೀಟು ಹಂಚಿಕೆಯಲ್ಲಿ ಹೆಚ್ಚಿನ ನಮ್ಯತೆ ಇರಬೇಕಿತ್ತು. ಡಿಎಂಕೆ ಹಾಗೂ ಆರ್‌ಜೆಡಿ ವೈಜ್ಞಾನಿಕವಾಗಿ ಸೀಟು ಹಂಚಿಕೆ ಮಾಡಿವೆ. ಮಹಾರಾಷ್ಟ್ರದಲ್ಲಿ ಹೆಚ್ಚು ಪಕ್ಷಗಳಿದ್ದ ಕಾರಣ ಪ್ರಕ್ರಿಯೆ ಜಟಿಲವಾಯಿತು. ಆದರೆ, ಕಾಂಗ್ರೆಸ್ ಪ್ರಮುಖ ಪಕ್ಷವಾಗಿರುವ ಇತರ ರಾಜ್ಯಗಳಲ್ಲಿ ಇನ್ನಷ್ಟು ಹೊಂದಾಣಿಕೆ ಆಗಬೇಕಿತ್ತು. ಆಗ ಇನ್ನಷ್ಟು ಚೆನ್ನಾಗಿರುತ್ತಿತ್ತು.

'ತೃಪ್ತಿಕರ ಸೀಟು ಹೊಂದಾಣಿಕೆ'

• 'ಇಂಡಿಯಾ' ಮೈತ್ರಿಕೂಟದಲ್ಲಿ ಒಗ್ಗಟ್ಟೇ ಇಲ್ಲವಲ್ಲ?

ರಾಜ್ಯ ಮಟ್ಟದಲ್ಲಿ ಮಾತ್ರ ಸೀಟು ಹೊಂದಾಣಿಕೆ ಸಾಧ್ಯ ಎಂಬುದನ್ನು ನಾವು ಆರಂಭದಲ್ಲೇ ಹೇಳಿದ್ದೆವು. ರಾಷ್ಟ್ರ ಮಟ್ಟದಲ್ಲಿ ಸೀಟು ಹಂಚಿಕೆ ಕಷ್ಟ ಸಾಧ್ಯ. ಮಿತ್ರ ಪಕ್ಷಗಳ ಮನವೊಲಿಸಲು ಸ್ವಲ್ಪ ಸಮಯ ಹಿಡಿಯಿತು. ರಾಜ್ಯವಾರು ಹೊಂದಾಣಿಕೆ ಮಾಡಿಕೊಳ್ಳಲಾಗಿದೆ ಹಾಗೂ ಅದು ತೃಪ್ತಿಕರವಾಗಿದೆ. ಕೆಲವು ರಾಜ್ಯಗಳಲ್ಲಿ ಮೈತ್ರಿಕೂಟದ ಸದಸ್ಯರೇ ಎದುರಾಳಿಗಳಾಗಿದ್ದೇವೆ. ಪಂಜಾಬ್, ಕೇರಳ ಹಾಗೂ ಪಶ್ಚಿಮ ಬಂಗಾಳದಲ್ಲಿ ಮೈತ್ರಿ ಕಷ್ಟ ಸಾಧ್ಯವಾಗಿತ್ತು. ಒಂದು ವೇಳೆ ಮೈತ್ರಿ ಮಾಡಿಕೊಂಡರೆ ಬಿಜೆಪಿಗೆ ಅನುಕೂಲವಾಗುತ್ತಿತ್ತು. ಬಿಜೆಪಿಯನ್ನು ಸೋಲಿಸುವುದು ನಮ್ಮ ಉದ್ದೇಶ. ಪಶ್ಚಿಮ ಬಂಗಾಳದಲ್ಲಿ ತ್ರಿಕೋನ ಹೋರಾಟ ನಡೆದರೆ ಮಾತ್ರ ಬಿಜೆಪಿಯನ್ನು ಸೋಲಿಸಲು ಸಾಧ್ಯ. ಪಂಜಾಬ್‌ನಲ್ಲಿ ಎಎಪಿ ಹಾಗೂ ಕಾಂಗ್ರೆಸ್ ಸೀಟು ಹಂಚಿಕೆ ಮಾಡಿಕೊಂಡರೆ ಬಿಜೆಪಿ ಹಾಗೂ ಅಕಾಲಿ ದಳಕ್ಕೆ ಲಾಭವಾಗುತ್ತದೆ. ಆಡಳಿತ ವಿರೋಧಿ ಅಲೆಯ ಬಿಸಿ ಎರಡೂ ಪಕ್ಷಗಳಿಗೆ ತಟ್ಟುತ್ತದೆ. ಉತ್ತರ ಪ್ರದೇಶ, ಬಿಹಾರ, ರಾಜಸ್ಥಾನ, ಮಹಾರಾಷ್ಟ್ರ ಹಾಗೂ ತಮಿಳುನಾಡಿನಲ್ಲಿ ಸೀಟು ಹಂಚಿಕೆ ವ್ಯವಸ್ಥಿತವಾಗಿ ನಡೆದಿದೆ. ಇದು ಸಕಾರಾತ್ಮಕ ಬೆಳವಣಿಗೆ.

'ರಾಹುಲ್ ಹೇಳಿಕೆ ದುರದೃಷ್ಟಕರ'

• ತನಿಖಾ ಸಂಸ್ಥೆಗಳನ್ನು ಕೇಂದ್ರದ ಬಿಜೆಪಿ ಸರ್ಕಾರ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂಬುದು ವಿಪಕ್ಷಗಳ ಪ್ರಮುಖ ಆರೋಪ. ಆದರೆ, ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದ್ದಾರೆ. ಪಿಣರಾಯಿ ಅವರನ್ನು ಇನ್ನೂ ಬಂಧಿಸಿಲ್ಲವೇಕೆ ಎಂದು ಪ್ರಶ್ನಿಸಿದ್ದಾರೆ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?

ಕಾಂಗ್ರೆಸ್‌ನ ಮಾಜಿ ಅಧ್ಯಕ್ಷರು ಇಂತಹ ಹೇಳಿಕೆ ನೀಡಿರುವುದು ಆರೋಗ್ಯಕರ ಬೆಳವಣಿಗೆ ಅಲ್ಲ. ವಾಸ್ತವದಲ್ಲಿ ಕೇರಳದ ಮುಖ್ಯಮಂತ್ರಿ ಅವರನ್ನು ಬಂಧಿಸಲು ಮೋದಿ ಅವರನ್ನು ಆಹ್ವಾನಿಸುವುದು ದುರದೃಷ್ಟಕರ. ಕೇರಳ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲೂ ರಾಹುಲ್ ಇಂತಹುದೇ ಹೇಳಿಕೆ ನೀಡಿದ್ದರು. ಅದು ಪ್ರತಿಕೂಲ ಪರಿಣಾಮ ಬೀರಿತ್ತು. ಚುನಾವಣೆಯಲ್ಲಿ ಕಾಂಗ್ರೆಸ್ ಸೋತಿತ್ತು.

ಚುನಾವಣಾ ಕಣದಲ್ಲಿ...

ಬಿಜೆಪಿ ಸೇರ ಬಯಸಿದ್ದ ಜಯರಾಜನ್ ಸಿಪಿಎಂಗೆ ಮುಜುಗರ ತಂದ ಆರೋಪ

ಕಣ್ಣೂರು/ಆಲಪ್ಪುಳ (ಪಿಟಿಐ): ಸಿಪಿಎಂನ ಹಿರಿಯ ಮುಖಂಡ ಇ.ಪಿ. ಜಯರಾಜನ್ ಅವರು ಬಿಜೆಪಿಗೆ ಸೇರಲು ಬಯಸಿದ್ದರು ಎಂಬ ಆರೋಪ ಕೇಳಿ ಬಂದ ಕಾರಣ, ಲೋಕಸಭಾ ಚುನಾವಣೆಯ ಮತದಾನ ದಿನದಂದು ಕೇರಳದ ಆಡಳಿತಾರೂಢ ಪಕ್ಷವು ತೀವ್ರ ಮುಜುಗರಕ್ಕೆ ಒಳಗಾಗಿತ್ತು ಎಂದು ಮೂಲಗಳು ತಿಳಿಸಿವೆ.

ಜಯರಾಜನ್ ಅವರನ್ನು ಬಿಜೆಪಿಗೆ ಸೇರಿಸಿಕೊಳ್ಳಲು ಪ್ರಯತ್ನ ನಡೆದಿತ್ತು ಎಂಬುದನ್ನು ಬಿಜೆಪಿ ನಾಯಕಿ ಶೋಭಾ ಸುರೇಂದ್ರನ್ ಅವರು ಎರಡು ದಿನಗಳ ಹಿಂದೆ ಬಹಿರಂಗಪಡಿಸಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಪಿಣರಾಯಿ ವಿಜಯನ್, 'ಶಿವ ದೇವರು ಪಾಪಿಯ ಜೊತೆಗೆ ಸೇರಿದರೆ, ಶಿವನೂ ಪಾಪಿಯಾಗುತ್ತಾನೆ' ಎಂದು ಹೇಳಿದ್ದಾರೆ. ಜಯರಾಜನ್ ಅವರು ಸದ್ಯ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಮೈತ್ರಿಕೂಟದ ಸಂಚಾಲಕರಾಗಿದ್ದಾರೆ.

ಬಿಜೆಪಿ ಮತ್ತು ಜಯರಾಜನ್ ಅವರ ನಡುವೆ ಟಿ.ಜಿ. ನಂದಕುಮಾರ್ ಅವರು ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಿದ್ದರು ಎಂದೂ ಆರೋಪಿಸಲಾಗಿತ್ತು.

'ನಮ್ಮ ದೇಶದ ಕೆಲವು ಜನರು ಪ್ರತಿದಿನ ಏಳುವಾಗಲೇ, ಯಾರಿಗೆ ಮೋಸ ಮಾಡಲಿ ಎಂದು ಆಲೋಚಿಸುತ್ತಿರುತ್ತಾರೆ' ಎಂದು ಪಿಣರಾಯಿ ಅವರು, ನಂದಕುಮಾರ್ ಹೆಸರು ಉಲ್ಲೇಖಿಸದೆ ಟೀಕಿಸಿದ್ದಾರೆ.

ತೆಲಂಗಾಣ: 8 ಶತಕೋಟ್ಯಧಿಪತಿಗಳು



ಹೈದರಾಬಾದ್ (ಪಿಟಿಐ): ಲೋಕಸಭಾ ಚುನಾವಣೆಗೆ ತೆಲಂಗಾಣದಿಂದ ಕಣದಲ್ಲಿರುವ ಅಭ್ಯರ್ಥಿಗಳಲ್ಲಿ ಎಂಟು ಮಂದಿ ₹100 ಕೋಟಿಗೂ ಅಧಿಕ ಆಸ್ತಿ ಹೊಂದಿದ್ದಾರೆ.

₹4,568 ಕೋಟಿ ಆಸ್ತಿ ಘೋಷಿಸಿಕೊಂಡಿರುವ ಚೆವೆಳ್ಳ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ವಿಶ್ವೇಶ್ವರ ರೆಡ್ಡಿ ಅವರು ಶ್ರೀಮಂತ ಅಭ್ಯರ್ಥಿ ಎನಿಸಿಕೊಂಡಿದ್ದಾರೆ. ಶ್ರೀಮಂತ ಅಭ್ಯರ್ಥಿಗಳ ಪಟ್ಟಿಯಲ್ಲಿ ಮೊದಲ ಮೂರೂ ಸ್ಥಾನಗಳಲ್ಲಿರುವ ಚೆವೆಳ್ಳ ಕ್ಷೇತ್ರದಿಂದಲೇ ಸ್ಪರ್ಧಿಸುತ್ತಿರುವುದು ವಿಶೇಷ.

ಚೆವೆಳ್ಳದಿಂದ ಕಣಕ್ಕಿಳಿದಿರುವ ಕಾಂಗ್ರೆಸ್ ಅಭ್ಯರ್ಥಿ ರಂಜಿತ್ ರೆಡ್ಡಿ ₹435.33 ಕೋಟಿ ಆಸ್ತಿ ಹೊಂದಿದ್ದರೆ, ಬಿಆರ್‌ಎಸ್ ಅಭ್ಯರ್ಥಿ ಕೆ.ಜ್ಞಾನೇಶ್ವರ್ ₹228.46 ಕೋಟಿ ಆಸ್ತಿ ಘೋಷಿಸಿಕೊಂಡಿದ್ದಾರೆ.

ಹೈದರಾಬಾದ್‌ನ ಬಿಜೆಪಿ ಅಭ್ಯರ್ಥಿ ಕೆ.ಮಾಧವಿ ಲತಾ (₹218.38 ಕೋಟಿ), ಖಮ್ಮಂ ಕ್ಷೇತ್ರದ ಬಿಆರ್‌ಎಸ್ ಅಭ್ಯರ್ಥಿ ನಮ ನಾಗೇಶ್ವರ ರಾವ್ (₹155.89 ಕೋಟಿ), ಜಹೀರಾಬಾದ್‌ನ ಬಿಜೆಪಿ ಅಭ್ಯರ್ಥಿ ಬಿ.ಬಿ.ಪಾಟೀಲ್ (₹151.68 ಕೋಟಿ), ಇದೇ ಕ್ಷೇತ್ರದಲ್ಲಿ ಬಿಆರ್‌ಎಸ್‌ನಿಂದ ಕಣಕ್ಕಿಳಿದಿರುವ ಕೆ.ಮಲ್ಲೇಶ್ (₹145.33 ಕೋಟಿ) ಮತ್ತು ನಿಜಾಮಾಬಾದ್‌ನ ಬಿಜೆಪಿ ಅಭ್ಯರ್ಥಿ ಹಾಗೂ ಹಾಲಿ ಸಂಸದ ಡಿ.ಅರವಿಂದ್ (₹109.89 ಕೋಟಿ) ಅವರು ಕಣದಲ್ಲಿರುವ ಇತರ ಶತಕೋಟ್ಯಧಿಪತಿಗಳು.

ಪ್ರಧಾನಿ ಮೋದಿ, ನಡ್ಡಾ ವಿರುದ್ಧ ಕಾಂಗ್ರೆಸ್ ಆರೋಪ

'ಬಿಜೆಪಿಯಿಂದ ಧ್ರುವೀಕರಣ'



ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಲೋಕಸಭಾ ಚುನಾವಣೆಯಲ್ಲಿ ಸೋಲು ಎದುರಾಗುವ ಭೀತಿಯಿಂದ ಕೋಮು ಆಧಾರದ ಧ್ರುವೀಕರಣ ರಾಜಕಾರಣ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ಶುಕ್ರವಾರ ಆರೋಪಿಸಿದೆ.

ಕಾಂಗ್ರೆಸ್ ಪಕ್ಷವು ಮುಸ್ಲಿಮರಿಗೆ ಅನುಕೂಲ ಮಾಡಿಕೊಡಲು ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಗಳ ಹಕ್ಕನ್ನು ಕಸಿದುಕೊಳ್ಳಲು ಮುಂದಾಗಿದೆ ಎಂದು ನಡ್ಡಾ ಅವರು ನೀಡಿರುವ ಹೇಳಿಕೆಯ ಬೆನ್ನಲ್ಲೇ ಪಕ್ಷವು ಪ್ರತಿಕ್ರಿಯಿಸಿದೆ.

'ನಿಜ ಸಂಗತಿಯೆಂದರೆ ಬಿಜೆಪಿಯು ಆತಂಕದಲ್ಲಿದೆ. ಪಕ್ಷವು ದಕ್ಷಿಣ ಭಾರತದಲ್ಲಿ ನಿರ್ನಾಮವಾಗಿದ್ದು, ಉತ್ತರ ಭಾರತದಲ್ಲೂ ಹಿನ್ನಡೆ ಅನುಭವಿಸುತ್ತಿರುವುದು ಪ್ರಧಾನಿ ಮತ್ತು ಬಿಜೆಪಿ ಅಧ್ಯಕ್ಷರಿಗೆ ಅರಿವಾಗಿದೆ. ಈ ಚುನಾವಣೆಯಲ್ಲಿ ಸೋಲಿನ ಭೀತಿ ಕಾಡುತ್ತಿದೆ. ಆದ್ದರಿಂದ ಧ್ರುವೀಕರಣವೇ ಅವರ ಮುಂದಿರುವ ಏಕೈಕ ಕಾರ್ಯತಂತ್ರ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಬರೆದಿದ್ದಾರೆ.

ಜೆ.ಪಿ.ನಡ್ಡಾ ಅವರ ಆರೋಪಗಳು ಸುಳ್ಳನ್ನು ಆಧರಿಸಿವೆ. ಸುಳ್ಳಿನ ವಿಚಾರದಲ್ಲಿ ನಡ್ಡಾ, ಪ್ರಧಾನಿ ಮೋದಿ ಅವರನ್ನು ಹಿಂಬಾಲಿಸುತ್ತಿರುವಂತೆ ತೋರುತ್ತದೆ

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಕಾಂಗ್ರೆಸ್ ಪ್ರಣಾಳಿಕೆ ಬಗ್ಗೆ ಪ್ರಧಾನಿ ಅವರು ಈಚೆಗೆ ನೀಡಿದ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ, 'ಪ್ರಧಾನಿ ಅವರು ಕಪೋಲಕಲ್ಪಿತ ಕಥೆಗಳು ಮತ್ತು ಸುಳ್ಳನ್ನು ಹೇಳುತ್ತಿದ್ದಾರೆ. ಅವರು ನಮ್ಮ ಪ್ರಣಾಳಿಕೆಯನ್ನು ಓದಬೇಕಿತ್ತು' ಎಂದರು.

'ಕಾಂಗ್ರೆಸ್ ಪ್ರಣಾಳಿಕೆಯನ್ನು ಪ್ರಚಾರ ಮಾಡಿದ್ದಕ್ಕೆ ನರೇಂದ್ರ ಮೋದಿ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು. ಪ್ರಣಾಳಿಕೆಯ ಪ್ರಚಾರಕ್ಕೆ ಬೇಕಾದಷ್ಟು ಹಣ ನಮ್ಮ ಬಳಿ ಇರಲಿಲ್ಲ. ಮೋದಿ ಅವರು ಪ್ರಚಾರಕ್ಕೆ ಹೋದಲ್ಲೆಲ್ಲಾ ಕಾಂಗ್ರೆಸ್‌ನ ಸ್ಥಾನಗಳನ್ನು ಹೆಚ್ಚಿಸುತ್ತಿದ್ದಾರೆ. ಮುಂದಿನ ಐದು ಹಂತಗಳಲ್ಲಿಯೂ ನೀವು ಅದನ್ನೇ ಮಾಡುವಿರಿ ಎಂದು ಭಾವಿಸುತ್ತೇವೆ' ಎಂದು ತಿಳಿಸಿದರು.

ಸೂರತ್ ಅಭ್ಯರ್ಥಿ ಉಚ್ಚಾಟಿಸಿದ ಕಾಂಗ್ರೆಸ್

ಅಹಮದಾಬಾದ್ (ಪಿಟಿಐ): ಸೂರತ್ ಲೋಕಸಭಾ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಯಾಗಿದ್ದ ನೀಲೇಶ್ ಕುಂಭಾನಿ ಅವರನ್ನು ಗುಜರಾತ್ ಕಾಂಗ್ರೆಸ್ ಘಟಕವು ಆರು ವರ್ಷಗಳ ಅವಧಿಗೆ ಅಮಾನತು ಮಾಡಿದೆ.

ಕುಂಭಾನಿ ಅವರ ನಾಮಪತ್ರ ಕಳೆದ ಭಾನುವಾರ ತಿರಸ್ಕೃತಗೊಂಡಿತ್ತು. ಇದರ ಬೆನ್ನಲ್ಲೇ ಕಣದಲ್ಲಿದ್ದ ಇತರ ಎಂಟು ಅಭ್ಯರ್ಥಿಗಳು ಹಿಂದೆ ಸರಿದಿದ್ದರು. ಇದರ ಪರಿಣಾಮವಾಗಿ ಬಿಜೆಪಿ ಅಭ್ಯರ್ಥಿ ಮುಕೇಶ್ ದಲಾಲ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದರು.

ನಾಮಪತ್ರ ತಿರಸ್ಕೃತಗೊಳ್ಳಲು ಕುಂಭಾನಿ ಅವರ ನಿರ್ಲಕ್ಷ್ಯ ಅಥವಾ ಬಿಜೆಪಿ ಜತೆಗಿನ ಹೊಂದಾಣಿಕೆಯೇ ಕಾರಣ ಎಂಬುದನ್ನು ಮನಗಂಡ ಕಾಂಗ್ರೆಸ್ ಶಿಸ್ತು ಸಮಿತಿಯು ಅವರ ವಿರುದ್ಧ ಕ್ರಮ ಕೈಗೊಂಡಿದೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಎಂವಿಎಯಲ್ಲಿ ಬಿಕ್ಕಟ್ಟು

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿ ಕಾರ್ಯಾಧ್ಯಕ್ಷ ಮತ್ತು ಮಾಜಿ ಸಚಿವ ಮೊಹಮ್ಮದ್ ಆರಿಫ್ ನಸೀಮ್ ಖಾನ್ ಅವರು ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳದಿರಲು ನಿರ್ಧರಿಸಿದ್ದು, ಮಹಾ ವಿಕಾಸ್ ಆಘಾಡಿ (ಎಂವಿಎ) ಮೈತ್ರಿಕೂಟದಲ್ಲಿ ಬಿಕ್ಕಟ್ಟಿಗೆ ಕಾರಣವಾಗಿದೆ.

ಎಂವಿಎಯು ಲೋಕಸಭಾ ಚುನಾವಣೆಯಲ್ಲಿ ಮುಸ್ಲಿಮ್ ಅಭ್ಯರ್ಥಿಯನ್ನು ಕಣಕ್ಕಿಳಿಸದೇ ಇರುವುದಕ್ಕೆ ಅಸಮಾಧಾನ ಹೊರಹಾಕಿರುವ ಆರಿಫ್ ಖಾನ್, ಈ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದಿದ್ದಾರೆ.

'ಮಹಾರಾಷ್ಟ್ರದ 48 ಲೋಕಸಭಾ ಕ್ಷೇತ್ರಗಳಲ್ಲಿ ಎಂವಿಎಯು ಒಬ್ಬನೇ ಒಬ್ಬ ಮುಸ್ಲಿಮ್ ಅಭ್ಯರ್ಥಿಗೆ ಟಿಕೆಟ್ ನೀಡಿಲ್ಲ. ಕಾಂಗ್ರೆಸ್ ಪಕ್ಷವು ಕನಿಷ್ಠ ಒಬ್ಬ ಮುಸ್ಲಿಮ್ ಅಭ್ಯರ್ಥಿಯನ್ನು ಕಣಕ್ಕಿಳಿಸಬಹುದು ಎಂಬುದು ಮಹಾರಾಷ್ಟ್ರದ ವಿವಿಧ ಮುಸ್ಲಿಮ್ ಸಂಘಟನೆಗಳ ಮತ್ತು ಮುಖಂಡರ ನಿರೀಕ್ಷೆಯಾಗಿತ್ತು. ಆದರೆ ದುರದೃಷ್ಟವಶಾತ್ ಪಕ್ಷವು ಮುಸ್ಲಿಮ್ ಅಭ್ಯರ್ಥಿಗೆ ಅವಕಾಶ ನೀಡಿಲ್ಲ' ಎಂದು ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.

'ಸ್ಟಾರ್ ಪ್ರಚಾರಕರ ಪಟ್ಟಿಯಲ್ಲಿ ನನ್ನ ಹೆಸರು ಸೇರಿಸಿರುವುದಕ್ಕೆ ಧನ್ಯವಾದ ಸಲ್ಲಿಸುತ್ತೇನೆ. ಆದರೆ ನಾನು ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ನಡೆಸುವುದಿಲ್ಲ' ಎಂದು ಹೇಳಿದ್ದಾರೆ.



ಬಿಸಿಲ ಧಗೆ ಪಶ್ಚಿಮ ಬಂಗಾಳದ ಜಾದವಪುರ ಲೋಕಸಭಾ ಕ್ಷೇತ್ರದ ತೃಣಮೂಲ ಕಾಂಗ್ರೆಸ್ ಅಭ್ಯರ್ಥಿ ಹಾಗೂ ಚಿತ್ರನಟಿ ಸಯೋನಿ ಘೋಷ್ ಅವರು ಕೋಲ್ಕತ್ತದಲ್ಲಿ ನಡೆದ ರೋಡ್ ಶೋ ವೇಳೆ ಎಳನೀರು ಕುಡಿದರು –ಪಿಟಿಐ ಚಿತ್ರ

ಈ ದೇಶದ ಆಡಳಿತ ಷರಿಯಾ ಕಾನೂನಿನಂತೆ ನಡೆಯಬೇಕೇ: ಕೇಂದ್ರ ಗೃಹ ಸಚಿವರ ಪ್ರಶ್ನೆ

ಯುಸಿಸಿ ಜಾರಿ 'ಮೋದಿ ಗ್ಯಾರಂಟಿ': ಅಮಿತ್ ಶಾ

ಗುನಾ (ಮಧ್ಯಪ್ರದೇಶ) (ಪಿಟಿಐ): ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯು ದೇಶದಲ್ಲಿ ಧರ್ಮಾಧಾರಿತ ವೈಯಕ್ತಿಕ ಕಾನೂನನ್ನು ಉಳಿಸಿಕೊಳ್ಳುವ ಭರವಸೆ ನೀಡಿದರೆ, ದೇಶದಾದ್ಯಂತ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೊಳಿಸುವುದು ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ 'ಗ್ಯಾರಂಟಿ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಮಧ್ಯಪ್ರದೇಶದ ಗುನಾ ಲೋಕಸಭಾ ಕ್ಷೇತ್ರದಲ್ಲಿ ಶುಕ್ರವಾರ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡ ಅವರು, 'ದೇಶದ ಸಂಪನ್ಮೂಲಗಳಿಗೆ ಮುಸ್ಲಿಮರು ಮೊದಲ ಹಕ್ಕುದಾರರು ಎಂದು ಕಾಂಗ್ರೆಸ್ ಹೇಳುತ್ತದೆ. ಆದರೆ ಬಿಜೆಪಿ ಹೇಳುವಂತೆ ಸಂಪನ್ಮೂಲದ ಹಕ್ಕು ಇರುವುದು ಬಡವರು, ದಲಿತರು, ಇತರೆ ಹಿಂದುಳಿದ ವರ್ಗದವರು ಮತ್ತು ಬುಡಕಟ್ಟು ಜನರಿಗೆ' ಎಂದು ಪ್ರತಿಪಾದಿಸಿದರು.

'ಕಾಂಗ್ರೆಸ್ ಪ್ರಣಾಳಿಕೆಯನ್ನು ಸೂಕ್ಷ್ಮವಾಗಿ ಗಮನಿಸಿರಿ. ವೈಯಕ್ತಿಕ ಕಾನೂನು, ಮುಸ್ಲಿಂ ವೈಯಕ್ತಿಕ ಕಾನೂನು ಮತ್ತು ತ್ರಿವಳಿ ತಲಾಖ್ ಮತ್ತೆ ಜಾರಿಮಾಡುವುದಾಗಿ ಹೇಳುತ್ತಿದೆ. ಈ ದೇಶವು ಷರಿಯಾ ಕಾನೂನಿನಂತೆ (ಇಸ್ಲಾಮಿಕ್ ಕಾನೂನು) ನಡೆಯಬೇಕೇ' ಎಂದು ಪ್ರಶ್ನಿಸಿದರು.



ಮಧ್ಯಪ್ರದೇಶದ ಅಶೋಕನಗರ ಜಿಲ್ಲೆಯಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡ ಗೃಹ ಸಚಿವ ಅಮಿತ್ ಶಾ ಅವರು ಜನರತ್ತ ಕೈಬೀಸಿದರು. ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಮತ್ತು ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ರಾಹುಲ್ ಗಾಂಧಿ ವಿರುದ್ಧ ವಾಗ್ದಾಳಿ ನಡೆಸಿದ ಶಾ, 'ರಾಹುಲ್ ಅವರೇ, ತುಷ್ಟೀಕರಣಕ್ಕಾಗಿ ನಿಮಗೆ ಅನಿಸಿದ್ದೆಲ್ಲವನ್ನೂ ಮಾಡಿ. ಬಿಜೆಪಿ ಇರುವವರೆಗೂ ನಿಮಗೆ ಯಾವುದೇ ವೈಯಕ್ತಿಕ ಕಾನೂನು ಜಾರಿಗೆ ತರಲು ಸಾಧ್ಯವಿಲ್ಲ. ಈ ದೇಶವು ಯುಸಿಸಿ ಮತ್ತು ಸಂವಿಧಾನದ ಪ್ರಕಾರ ನಡೆಯುತ್ತದೆ. ಇದು ನಮ್ಮ ಸಂವಿಧಾನದ ಸ್ಫೂರ್ತಿಯೂ ಹೌದು. ಉತ್ತರಾಖಂಡದಲ್ಲಿ ಯುಸಿಸಿಯನ್ನು ಈಗಾಗಲೇ ಜಾರಿಗೆ ತಂದಿದ್ದೇವೆ. ಅದನ್ನು ಇಡೀ ದೇಶದಲ್ಲಿ ಜಾರಿಗೊಳಿಸುವುದು ಬಿಜೆಪಿ ಮತ್ತು ಮೋದಿ ಅವರ ಭರವಸೆ' ಎಂದರು.

ಮೀಸಲಾತಿ ಕಿತ್ತುಕೊಳ್ಳಲು ಬಿಡಲ್ಲ: ಮೋದಿ

ಮುಂಗೇರ್ (ಬಿಹಾರ) (ಪಿಟಿಐ): 'ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಗಳ ಮೀಸಲಾತಿಯನ್ನು ಕಸಿಯಲು ಬಿಜೆಪಿ ಅವಕಾಶ ನೀಡುವುದಿಲ್ಲ. ಇದು ಮೋದಿ ಅವರ ಗ್ಯಾರಂಟಿ' ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಇಲ್ಲಿ ಹೇಳಿದರು.

'ಕರ್ನಾಟಕದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷವು ಒಬಿಸಿ ಮೀಸಲಾತಿ ಕಡಿತಗೊಳಿಸಿ, ಅದರ ಲಾಭವನ್ನು ಮುಸ್ಲಿಮರಿಗೆ ವರ್ಗಾಯಿಸಿದೆ. ಅದೇ 'ಪಿತೂರಿ'ಯನ್ನು ದೇಶದಾದ್ಯಂತ ನಡೆಸಲು ಬಯಸಿದೆ' ಎಂಬ ಆರೋಪವನ್ನು ಪುನರುಚ್ಚರಿಸಿದರು.

'ಹಿಂದುಳಿದ ವರ್ಗದವರು ಎದುರಿಸುತ್ತಿರುವ ಕಷ್ಟ ಏನೆಂಬುದು ಒಬ್ಬ ಒಬಿಸಿಯಾಗಿರುವ ನನಗೆ ಗೊತ್ತು. ಭವಿಷ್ಯದಲ್ಲಿ ಅವರು ಎಸ್‌ಸಿ ಮತ್ತು ಎಸ್‌ಟಿಗಳ ಮೀಸಲಾತಿಯನ್ನೂ ಕಸಿಯಲು ಮುಂದಾಗುವರು' ಎಂದು ಎಚ್ಚರಿಸಿದರು.

'ವೋಟ್ ಬ್ಯಾಂಕ್‌ಗಾಗಿ ರಾಮಮಂದಿರ ಕಡೆಗಣನೆ'

'ರಾಹುಲ್ ಗಾಂಧಿ ಮತ್ತು ದಿಗ್ವಿಜಯ ಸಿಂಗ್ ಅವರು ಅಯೋಧ್ಯೆ ರಾಮಮಂದಿರ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳದೇ ಇರುವುದಕ್ಕೆ ವೋಟ್‌ಬ್ಯಾಂಕ್ ರಾಜಕಾರಣ ಕಾರಣ. ಆದ್ದರಿಂದ ಅವರನ್ನು ಎಂದಿಗೂ ಕ್ಷಮಿಸಬಾರದು' ಎಂದು ರಾಜಗಢದಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಶಾ ಹೇಳಿದರು. ಕಾಂಗ್ರೆಸ್ ಪಕ್ಷವು ರಾಮಮಂದಿರ ನಿರ್ಮಾಣವನ್ನು 70 ವರ್ಷಗಳ ಕಾಲ ಕಡೆಗಣಿಸಿತು. ಪ್ರಧಾನಿ ನರೇಂದ್ರ ಮೋದಿ ಅವರು ರಾಮಮಂದಿರ ನಿರ್ಮಾಣ ಸಾಕಾರಗೊಳಿಸಿದರು ಎಂದರು.

ಚುಟುಕು

5ನೇ ಹಂತ: ನಾಮಪತ್ರ ಸಲ್ಲಿಕೆ ಆರಂಭ



ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯ ಐದನೇ ಹಂತದ ಮತದಾನಕ್ಕೆ (ಮೇ 20) ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಶುಕ್ರವಾರ ಆರಂಭಗೊಂಡಿತು.

ಎಂಟು ರಾಜ್ಯಗಳ ಹಾಗೂ ಕೇಂದ್ರಾಡಳಿತ ಪ್ರದೇಶಗಳಾದ ಜಮ್ಮು ಮತ್ತು ಕಾಶ್ಮೀರ, ಲಡಾಖ್‌ನ 49 ಕ್ಷೇತ್ರಗಳಿಗೆ ಅಂದು ಮತದಾನ ನಡೆಯಲಿದೆ ಎಂದು ಚುನಾವಣಾ ಆಯೋಗವು ಹೇಳಿಕೆಯಲ್ಲಿ ತಿಳಿಸಿದೆ. ಈ ಕುರಿತು ಅಧಿಸೂಚನೆಯನ್ನೂ ಹೊರಡಿಸಿದೆ.

ಐದನೇ ಹಂತದಲ್ಲಿ ಬಿಹಾರ, ಜಾರ್ಖಂಡ್, ಮಹಾರಾಷ್ಟ್ರ, ಒಡಿಶಾ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ಮತದಾನ ನಡೆಯಲಿದೆ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ತಿಳಿಸಿದರು.

ನಾಮಪತ್ರ ಸಲ್ಲಿಸಲು ಮೇ 3 ಕೊನೆಯ ದಿನವಾಗಿದೆ. ಮೇ 4ರಂದು ಪರಿಶೀಲನೆ ನಡೆಯಲಿದೆ ಮತ್ತು ನಾಮಪತ್ರ ಹಿಂಪಡೆಯಲು ಮೇ 6 ಕೊನೆಯ ದಿನಾಂಕವಾಗಿದೆ ಎಂದು ವಿವರಿಸಿದರು.

'ಗೋಮಾಂಸ ತಿನ್ನುವ ಹಕ್ಕು ನೀಡಲು ಕಾಂಗ್ರೆಸ್ ಬಯಕೆ'

ಮೊರಾದಾಬಾದ್/ಲಖನೌ (ಪಿಟಿಐ): ಕಾಂಗ್ರೆಸ್ ಪಕ್ಷವು ಅಲ್ಪಸಂಖ್ಯಾತರಿಗೆ ಗೋಮಾಂಸ ತಿನ್ನುವ ಹಕ್ಕನ್ನು ನೀಡಲು ಬಯಸುತ್ತದೆ. ಇದು ಗೋಹತ್ಯೆಗೆ ಅವಕಾಶ ಮಾಡಿಕೊಟ್ಟಿದೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಶುಕ್ರವಾರ ಟೀಕಿಸಿದ್ದಾರೆ.



'ಈ ನಿರ್ಲಜ್ಜೆಯ ಜನರು ಗೋಮಾಂಸ ತಿನ್ನುವ ಹಕ್ಕು ನೀಡುವ ಭರವಸೆ ಕೊಡುತ್ತಾರೆ. ನಮ್ಮ ಧರ್ಮಗ್ರಂಥಗಳು ಗೋವನ್ನು ತಾಯಿ ಎಂದು ಕರೆದಿವೆ. ಆದರೆ ಅವರು ಗೋವನ್ನು ಕಟುಕರ ಕೈಗೆ ನೀಡಲು ಬಯಸುತ್ತಾರೆ. ನಮ್ಮ ದೇಶ ಇದನ್ನು ಒಪ್ಪಿಕೊಳ್ಳುವುದೇ?' ಎಂದು ಆದಿತ್ಯನಾಥ್ ಅವರು ಮೊರಾದಾಬಾದ್ ಜಿಲ್ಲೆಯ ಬಿಲಾರಿಯಲ್ಲಿ ನಡೆದ ರ‍್ಯಾಲಿಯಲ್ಲಿ ಹೇಳಿರುವುದಾಗಿ ಬಿಜೆಪಿ ಪ್ರಕಟಣೆ ತಿಳಿಸಿದೆ.

'ಅಲ್ಪಸಂಖ್ಯಾತರಿಗೆ ತಮ್ಮ ಇಚ್ಛೆಯ ಆಹಾರವನ್ನು ತಿನ್ನುವ ಸ್ವಾತಂತ್ರ್ಯ ನೀಡಲು ಕಾಂಗ್ರೆಸ್‌ನವರು ಬಯಸುವರು. ಅವರು ಗೋಹತ್ಯೆಗೆ ಅವಕಾಶ ನೀಡುವ ಬಗ್ಗೆ ಮಾತನಾಡುತ್ತಿದ್ದಾರೆ ಎಂಬುದೇ ಅದರ ಅರ್ಥ' ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಈಚೆಗೆ ನೀಡಿದ ಹೇಳಿಕೆ ಪುನರುಚ್ಚರಿಸಿದ ಅವರು, 'ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಜನರ ಸಂಪತ್ತನ್ನು ಕಸಿದು ರೋಹಿಂಗ್ಯನ್ನರು ಮತ್ತು ನುಸುಳುಕೋರರಿಗೆ ಹಂಚಲಿದೆ' ಎಂದು ಆರೋಪಿಸಿದರು.

ಎಂಥಾ ಮಾತು!



ರಾಜಸ್ಥಾನದಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡುವ ವೇಳೆ, ಪ್ರಧಾನಿ ನರೇಂದ್ರ ಮೋದಿ ಅವರು ಕೋಮು ದ್ವೇಷ ಹರಡುವ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ನೀಡಿದ್ದ ದೂರಿನ ಆಧಾರದಲ್ಲಿ ಚುನಾವಣಾ ಆಯೋಗವು ಮೋದಿ ಅವರ ಬದಲಿಗೆ ಬಿಜೆಪಿಗೆ ನೋಟಿಸ್ ನೀಡಿದೆ. ಈ ಮೂಲಕ ಅದು ತಾನು 'ಅಸಹಾಯಕ ಕೈಗೊಂಬೆ' ಎಂಬುದನ್ನು ಸಾಬೀತುಪಡಿಸಿದೆ. ಮೋದಿ ಅವರಿಗೆ ನೋಟಿಸ್ ನೀಡುವ ಧೈರ್ಯ ಅದಕ್ಕಿಲ್ಲ

ಕಪಿಲ್ ಸಿಬಲ್, ರಾಜ್ಯಸಭಾ ಸದಸ್ಯ



ಮುಸ್ಲಿಮರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಕಾಂಗ್ರೆಸ್ ಪಕ್ಷವು ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಯವರ ಹಕ್ಕುಗಳನ್ನು ಕಸಿದುಕೊಳ್ಳಲು ಯತ್ನಿಸುತ್ತಿದೆ. ಇದು ವಿರೋಧ ಪಕ್ಷದ ಗುಪ್ತ ಕಾರ್ಯಸೂಚಿಯಾಗಿದ್ದು, ಕರ್ನಾಟಕ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಮುಸ್ಲಿಮರಿಗೆ ಮೀಸಲಾತಿ ನೀಡಲು ಕಾಂಗ್ರೆಸ್ ಪ್ರಯತ್ನಿಸುತ್ತಿದೆ. ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಯಾವಾಗಲೂ ಮುಸ್ಲಿಮರಿಗೆ ಬೆಂಬಲ ನೀಡುತ್ತಿದ್ದರು

ಜೆ.ಪಿ. ನಡ್ಡಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

ಕ್ಷೇತ್ರ ಮಹಾತ್ಮೆ



ಮಹಾರಾಷ್ಟ್ರದ ಪ್ರತಿಷ್ಠಿತ ಕ್ಷೇತ್ರಗಳಲ್ಲೊಂದಾದ ಉಸ್ಮಾನಾಬಾದ್ ಲೋಕಸಭಾ ಕ್ಷೇತ್ರದಲ್ಲಿ ಚುನಾವಣೆಯ ಕಾವು ಏರಿಕೆಯಾಗಿದೆ. ಶಿವಸೇನಾ ಉದ್ಧವ್ ಠಾಕ್ರೆ ಬಣವು ಓಂಪ್ರಕಾಶ್ ರಾಜೆ ನಿಂಬಾಳ್ಕರ್ ಅವರನ್ನು ಅಭ್ಯರ್ಥಿಯಾಗಿಸಿದರೆ, ಎನ್‌ಸಿಪಿ ಅಜಿತ್ ಪವಾರ್ ಬಣವು ಅರ್ಚನಾ ಪಾಟೀಲ್ ಅವರನ್ನು ಅಖಾಡಕ್ಕಿಳಿಸಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ಮೊಮ್ಮಗ ಪ್ರಕಾಶ್ ಅಂಬೇಡ್ಕರ್ ಅವರ ವಂಚಿತ್ ಬಹುಜನ ಆಘಾಡಿ ಪಕ್ಷವು ಭಾವು ಸಾಹೇಬ್ ಅಂಧಾಲ್ಕರ್ ಅವರನ್ನು ಕಣಕ್ಕಿಳಿಸಿದೆ. ಎಐಎಂಐಎಂ ಕೂಡ ಸಿದ್ದೀಕ್ ಇಬ್ರಾಹಿಂ ಅವರನ್ನು ಅಭ್ಯರ್ಥಿಯಾಗಿಸಿದೆ. 2019ರ ಚುನಾವಣೆಯಲ್ಲಿ ಶಿವಸೇನಾದಿಂದ ಸ್ಪರ್ಧಿಸಿದ್ದ ಓಂಪ್ರಕಾಶ್ ರಾಜೆ ಅವರು, 1,27,566 ಮತಗಳ ಅಂತರದಿಂದ ಎನ್‌ಸಿಪಿ ಅಭ್ಯರ್ಥಿಯನ್ನು ಸೋಲಿಸಿದ್ದರು. ಅರ್ಚನಾ ಪಾಟೀಲ್ ಅವರು ತುಳಜಾಪುರ ಕ್ಷೇತ್ರದ ಬಿಜೆಪಿ ಶಾಸಕ ರಾಣಾ ಜಗಜೀತ್ ಸಿನ್ಹಾ ಪಾಟೀಲ್ ಅವರ ಪತ್ನಿಯಾಗಿದ್ದಾರೆ. ವಂಚಿತ್ ಬಹುಜನ ಆಘಾಡಿ ಪಕ್ಷವು ಅಭ್ಯರ್ಥಿಯನ್ನು ಕಣಕ್ಕಿಳಿಸಿರುವುದರಿಂದ 'ಇಂಡಿಯಾ' ಒಕ್ಕೂಟದ ಅಭ್ಯರ್ಥಿಯಾಗಿರುವ ಓಂಪ್ರಕಾಶ್ ಅವರ ಮತಗಳು ವಿಭಜನೆಯಾಗುವ ಸಾಧ್ಯತೆ ಇದೆ ಎಂದು ಚುನಾವಣಾ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಈ ಸಲ ಎನ್‌ಸಿಪಿ ಮತ್ತು ಶಿವಸೇನಾ ಇಬ್ಭಾಗವಾಗಿರುವುದರಿಂದ ಮತದಾರರು ಯಾರ ಪರ ನಿಲ್ಲಲಿದ್ದಾರೆ ಎಂಬುದು ಕುತೂಹಲಕ್ಕೆ ಎಡೆಮಾಡಿಕೊಟ್ಟಿದೆ.

ಮುಖಾಮುಖಿ

ಉತ್ತರ ಗೋವಾ



ಶ್ರೀಪಾದ್ ನಾಯ್ಕ್
(ಬಿಜೆಪಿ)

ಉತ್ತರ ಗೋವಾ ಲೋಕಸಭಾ ಕ್ಷೇತ್ರವನ್ನು 25 ವರ್ಷಗಳಿಂದ ಪ್ರತಿನಿಧಿಸುತ್ತಿರುವ ಶ್ರೀಪಾದ್ ನಾಯ್ಕ್ ಅವರೇ ಈ ಬಾರಿಯೂ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಕೇಂದ್ರ ಪ್ರವಾಸೋದ್ಯಮ ಸಚಿವರಾಗಿರುವ ಇವರು ಸ್ಥಳೀಯವಾಗಿಯೂ ಪ್ರಭಾವಿ ಮುಖಂಡರಾಗಿದ್ದಾರೆ. 2019ರ ಚುನಾವಣೆಯಲ್ಲಿ ಶ್ರೀಪಾದ್ ಅವರು, 80,247 ಮತಗಳ ಅಂತರದಿಂದ ಕಾಂಗ್ರೆಸ್‌ನ ಗಿರೀಶ್ ಚೋಡಂಕರ್ ಅವರನ್ನು ಸೋಲಿಸಿದ್ದರು. ಆರ್‌ಎಸ್‌ಎಸ್ ಹಿನ್ನೆಲೆಯಿಂದ ಬಂದಿರುವ ಶ್ರೀಪಾದ್ ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಜನರ ಮುಂದಿರಿಸಿ ಮತ ಯಾಚಿಸುತ್ತಿದ್ದಾರೆ. ಪಕ್ಷ ಸಂಘಟನೆಯ ಮೂಲಕವೂ ಚಿರಪರಿಚಿತರಾಗಿರುವ ಶ್ರೀಪಾದ್ ಅವರು ಈ ಬಾರಿಯೂ ಗೆದ್ದೇ ಗೆಲ್ಲುತ್ತಾರೆಂಬ ವಿಶ್ವಾಸ ಇಲ್ಲಿನ ಬಿಜೆಪಿ ಮುಖಂಡರಲ್ಲಿದೆ.


V/S



ರಮಾಕಾಂತ್ ಖಲಪ್
(ಕಾಂಗ್ರೆಸ್)

ಉತ್ತರ ಗೋವಾ ಕ್ಷೇತ್ರದಲ್ಲಿ ಭದ್ರವಾಗಿ ಬೇರೂರಿರುವ ಶ್ರೀಪಾದ್ ನಾಯ್ಕ್ ಅವರನ್ನು ಮಣಿಸಲು ಕಾಂಗ್ರೆಸ್ ಪಕ್ಷವು ಈ ಸಲ ಕೇಂದ್ರದ ಮಾಜಿ ಸಚಿವ ರಮಾಕಾಂತ್ ಖಲಪ್ ಅವರನ್ನು ಅಖಾಡಕ್ಕಿಳಿಸಿದೆ. ಗೋವಾದ ಮಾಜಿ ಉಪ ಮುಖ್ಯಮಂತ್ರಿಯಾಗಿರುವ ರಮಾಕಾಂತ್ ಅವರು, 'ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷ'ದ ಮೂಲಕ ರಾಜಕೀಯ ಕ್ಷೇತ್ರಕ್ಕೆ ಕಾಲಿರಿಸಿದವರು. ಬಳಿಕ ಕಾಂಗ್ರೆಸ್‌ಗೆ ಸೇರ್ಪಡೆಗೊಂಡಿದ್ದರು. ಅಲ್ಪ ಕಾಲ ಬಿಜೆಪಿಯಲ್ಲೂ ಇದ್ದರು. ಗೋವಾ ವಿಧಾನಸಭೆಯ ವಿರೋಧಪಕ್ಷದ ನಾಯಕರಾಗಿಯೂ ಅವರು ಕಾರ್ಯನಿರ್ವಹಿಸಿದ್ದರು. 1996ರಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿರುವ ಕೀರ್ತಿ ಇವರಿಗೆ ಸಲ್ಲುತ್ತದೆ. ಈ ಬಾರಿ ಪಕ್ಷವು 'ಇಂಡಿಯಾ' ಒಕ್ಕೂಟದ ಜೊತೆಗಿರುವುದು, ರಮಾಕಾಂತ್ ಅವರ ಗೆಲುವಿನ ವಿಶ್ವಾಸವನ್ನು ಹೆಚ್ಚಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,570
ಇಂದಿನ ಅಂತ್ಯ	22,419
▼	150
ದಿನದ ಕನಿಷ್ಠ	22,385

ವಿನಿಮಯ ದರ

$ ಡಾಲರ್	83.38
£ ಪೌಂಡ್	104.30
€ ಯುರೊ	89.47
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹435
12 ಕ್ಕೆ	₹60
ಮೈಸೂರು	
100ಕ್ಕೆ	₹438

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1490 (1490)
ಸೋಯಾ (ರಿಫೈನ್ಡ್)	₹927 (925)
ಸೂರ್ಯಕಾಂತಿ (ರಿಫೈನ್ಡ್)	₹920 (917)
ಪಾಮೋಲಿನ್	₹910 (913)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹176
ಆರ್‌ಎಸ್‌ಎಸ್-5	₹170
ಗುಡ್ ಲಾಟ್	₹160

(ಪ್ರತಿ ಕೆ.ಜಿಗೆ)

ಮಾರುಕಟ್ಟೆ ಧಾರಣೆ

ಅಡಿಕೆ

ಕುಮಟ	
ಚಿಪ್ಪು	26109-28989
ಕೋಕ	13069-22699
ಫ್ಯಾಕ್ಟರಿ	11269-21761
ಹಳೆಚಾಲಿ	36299-38399
ಹೊಸಚಾಲಿ	30669-34709
ಶಿವಮೊಗ್ಗ	
ಬೆಟ್ಟೆ	44366-56910
ಗೊರಬಲು	18009-36099
ರಾಶಿ	31000-53639
ಸರಕು	55009-84696
ಸಿದ್ದಾಪುರ	
ಬಿಳಿಗೋಟು	26769-30299
ಚಾಲಿ	33699-35599
ಕೋಕ	25219-28899
ಹಳೆಚಾಲಿ	35199-36399
ಕೆಂಪುಗೋಟು	28809-34989
ರಾಶಿ	44099-49889
ತಟ್ಟಿಬೆಟ್ಟೆ	36600-43599
ಶಿರಸಿ	
ಬೆಟ್ಟೆ	37250-46181
ಬಿಳಿಗೋಟು	25111-30509
ಚಾಲಿ	32099-36399
ಕೆಂಪುಗೋಟು	23605-34099
ರಾಶಿ	44099-49668
ಯಲ್ಲಾಪುರ	
ಅಪಿ	55309-59169
ಬಿಳಿಗೋಟು	21899-31099
ಕೋಕ	11612-28399
ಹಳೆಚಾಲಿ	37101-37850
ಹೊಸಚಾಲಿ	32040-36270
ಕೆಂಪುಗೋಟು	24009-33099
ರಾಶಿ	43239-54699
ತಟ್ಟಿಬೆಟ್ಟೆ	35880-43199

ಮುಂಬೈ ಧಾರಣೆ

ಶೇಂಗಾ

26-4-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1500)
ಒಂದು ವಾರದ ಡೆಲಿವರಿ	1495 (1495)
ಸೋಯಾ ಕಚ್ಚಾ	875 (875)
ಪಾಮ್ ವಾರದ ಡೆಲಿವರಿ	908 (911)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹72,000 (71,650)
ಬೆಳ್ಳಿ ಕೆ.ಜಿ ₹81,300 (80,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸುಧಾ, ಮಯೂರ ಓದಿರಿ

ಚಿನ್ನದ ದರ ₹350, ಬೆಳ್ಳಿ ₹600 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಶುಕ್ರವಾರ ಏರಿಕೆಯಾಗಿದೆ.

ಚಿನ್ನದ ದರ 10 ಗ್ರಾಂಗೆ ₹350 ಏರಿಕೆಯಾಗಿ, ₹72,850ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹600 ಹೆಚ್ಚಳವಾಗಿ, ₹84,700 ಆಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,310 ಡಾಲರ್ (ಅಂದಾಜು ₹1.95 ಲಕ್ಷ) ಮತ್ತು 28.29 (ಅಂದಾಜು ₹2,296) ಡಾಲರ್‌ನಂತೆ ಮಾರಾಟವಾಗಿದೆ.

ಅಮೆರಿಕವು ಗುರುವಾರ ಜಿಡಿಪಿ ಅಂಕಿ ಅಂಶ ಬಿಡುಗಡೆ ಮಾಡಿತು. ಇದು ಆರ್ಥಿಕ ನಿಧಾನಗತಿ ಮತ್ತು ಹಣದುಬ್ಬರದ ಒತ್ತಡವನ್ನು ಸೂಚಿಸಿದ್ದರಿಂದ ಚಿನ್ನದ ಬೆಲೆ ಏರಿಕೆಗೆ ಕಾರಣವಾಯಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸೌಮಿಲ್ ಗಾಂಧಿ ಹೇಳಿದ್ದಾರೆ.

ಷೇರುಪೇಟೆ: ಸೆನ್ಸೆಕ್ಸ್ 609, ನಿಫ್ಟಿ 150 ಅಂಶ ಇಳಿಕೆ

ಗೂಳಿ ನಾಗಾಲೋಟಕ್ಕೆ ಕರಡಿ ತಡೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯ ಸತತ ಐದು ದಿನದ ಗೂಳಿ ಓಟಕ್ಕೆ ಶುಕ್ರವಾರ ಕರಡಿ ತಡೆಯೊಡ್ಡಿದೆ.

ಬ್ಯಾಂಕಿಂಗ್, ಹಣಕಾಸು ಮತ್ತು ಗ್ರಾಹಕ ವಸ್ತುಗಳ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿರುವುದು, ಕಚ್ಚಾ ತೈಲ ಬೆಲೆಯೇರಿಕೆ, ರೂಪಾಯಿ ಮೌಲ್ಯ ಇಳಿಯುತ್ತಿರುವುದು, ವಿದೇಶಿ ಬಂಡವಾಳ ಹೊರಹರಿವಿನಿಂದ ಷೇರು ಸೂಚ್ಯಂಕಗಳು ಕುಸಿತ ಕಂಡವು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 609 ಅಂಶ ಇಳಿದು 73,730ಕ್ಕೆ ಸ್ಥಿರಗೊಂಡಿತು. ದಿನದ ವಹಿವಾಟಿನಲ್ಲಿ 722 ಅಂಶ ಕುಸಿತವಾಗಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 150 ಅಂಶ ಕಡಿಮೆಯಾಗಿ, 22,419ಕ್ಕೆ ಅಂತ್ಯಗೊಂಡಿತು. ಆರಂಭಿಕ ವಹಿವಾಟಿನಲ್ಲಿ ಬಿಎಸ್‌ಇ 176 ಅಂಶ ಮತ್ತು ನಿಫ್ಟಿ 50 ಅಂಶ ಏರಿಕೆಯಾಗಿದ್ದವು.

ಬಜಾಜ್ ಫೈನಾನ್ಸ್, ಇಂಡಸ್‌ಇಂಡ್ ಬ್ಯಾಂಕ್, ನೆಸ್ಲೆ, ಕೋಟಕ್ ಮಹೀಂದ್ರ ಬ್ಯಾಂಕ್ ಮತ್ತು ಮಹೀಂದ್ರ ಆ್ಯಂಡ್ ಮಹೀಂದ್ರ ಷೇರಿನ ಮೌಲ್ಯವು ಇಳಿಕೆಯಾದವು. ಟೆಕ್ ಮಹೀಂದ್ರ,



ಗಳಿಕೆ ಕಂಡ ಕಂಪನಿಗಳು

7.34%	ಟೆಕ್ ಮಹೀಂದ್ರ
0.79%	ವಿಪ್ರೊ
0.56%	ಐಟಿಸಿ
0.53%	ಅಲ್ಟ್ರಾಟೆಕ್ ಸಿಮೆಂಟ್
0.33%	ಟೈಟನ್

ಇಳಿಕೆ ಕಂಡ ಕಂಪನಿಗಳು

7.73%	ಬಜಾಜ್ ಫೈನಾನ್ಸ್
3.55%	ಬಜಾಜ್ ಫಿನ್‌ಸರ್ವ್
3.36%	ಇಂಡಸ್‌ಇಂಡ್ ಬ್ಯಾಂಕ್
3.08%	ನೆಸ್ಲೆ ಇಂಡಿಯಾ
2.11%	ಕೋಟಕ್ ಬ್ಯಾಂಕ್

ವಿಪ್ರೊ, ಅಲ್ಟ್ರಾ ಟೆಕ್ ಸಿಮೆಂಟ್, ಟೈಟನ್ ಮತ್ತು ಎಕ್ಸಿಸ್ ಬ್ಯಾಂಕ್ ಷೇರು ಮೌಲ್ಯ ಗಳಿಕೆ ಕಂಡಿವೆ. ಬಿಎಸ್‌ಇ ಮಿಡ್‌ಕ್ಯಾಪ್ ಸೂಚ್ಯಂಕ ಶೇ 0.83 ಮತ್ತು ಸ್ಮಾಲ್‌ಕ್ಯಾಪ್ ಶೇ 0.27ರಷ್ಟು ಇಳಿಕೆ ಕಂಡವು.

ಏಷ್ಯನ್ ಮಾರುಕಟ್ಟೆಯಲ್ಲಿ ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಸಕಾರಾತ್ಮಕವಾಗಿ ಮುಕ್ತಾಯಗೊಂಡವು. ಜಾಗತಿಕ ಬ್ರೆಂಟ್ ಕಚ್ಚಾ ತೈಲವು ಶೇ 0.31ರಷ್ಟು ಏರಿಕೆಯಾಗಿ ಪ್ರತಿ ಬ್ಯಾರೆಲ್‌ಗೆ 89.21 ಡಾಲರ್‌ಗೆ (₹7,445) ಮುಟ್ಟಿದೆ.

ಟೆಕ್ ಮಹೀಂದ್ರ ಷೇರು ಶೇ 7ರಷ್ಟು ಏರಿಕೆ

ಐ.ಟಿ ವಲಯದ ಟೆಕ್ ಮಹೀಂದ್ರ ಕಂಪನಿಯ ಷೇರಿನ ಮೌಲ್ಯ ಶೇ 7ರಷ್ಟು ಏರಿಕೆಯಾಗಿದೆ. ಇದರಿಂದ ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ (ಎಂ–ಕ್ಯಾಪ್) ಒಂದೇ ದಿನ ₹8,537 ಕೋಟಿ ಸೇರ್ಪಡೆಯಾಗಿದ್ದು, ಒಟ್ಟು ಎಂ–ಕ್ಯಾಪ್ ₹1.24 ಲಕ್ಷ ಕೋಟಿಗೆ ಮುಟ್ಟಿದೆ.

ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಷೇರಿನ ಬೆಲೆ ಕ್ರಮವಾಗಿ ₹1,277 ಮತ್ತು ₹1,280ಕ್ಕೆ ಮುಟ್ಟಿದೆ.

2023–24ರ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯ ಲಾಭ ಮತ್ತು ವರಮಾನದಲ್ಲಿ ಇಳಿಕೆಯಾಗಿತ್ತು. ಕಂಪನಿಯ ಸಿಇಒ ಮೋಹಿತ್ ಜೋಶಿ, ಕಂಪನಿಯ ವರಮಾನ ಬೆಳವಣಿಗೆಯನ್ನು ವೇಗಗೊಳಿಸಲು ಮತ್ತು ಲಾಭವನ್ನು ಹೆಚ್ಚಿಸಲು ಮಹತ್ವಾಕಾಂಕ್ಷೆಯ ಮೂರು ವರ್ಷಗಳ ಮಾರ್ಗಸೂಚಿಯನ್ನು ವಿವರಿಸಿದರು. ಇದರ ಬೆನ್ನಲೇ ಷೇರಿನ ಮೌಲ್ಯ ಏರಿಕೆಯಾಗಿದೆ.

ಬಜಾಜ್ ಫೈನಾನ್ಸ್: ₹34,914 ಕೋಟಿ ನಷ್ಟ

ಬಜಾಜ್ ಫೈನಾನ್ಸ್ ಮಾರ್ಚ್ ತ್ರೈಮಾಸಿಕದ ಗಳಿಕೆಯು ಹೂಡಿಕೆದಾರರನ್ನು ಮನಸ್ಸನ್ನು ಗೆಲ್ಲಲು ವಿಫಲವಾದ್ದರಿಂದ ಕಂಪನಿಯ ಷೇರಿನ ಮೌಲ್ಯ ಶೇ 8ರಷ್ಟು ಇಳಿಕೆಯಾಗಿದೆ.

ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಪ್ರತಿ ಷೇರಿನ ಬೆಲೆ ಕ್ರಮವಾಗಿ ₹6,729 ಮತ್ತು ₹6,730ಕ್ಕೆ ಮುಟ್ಟಿತು. ಒಂದೇ ದಿನ ಕಂಪನಿಯ ಎಂ–ಕ್ಯಾಪ್ ₹34,914 ಕೋಟಿ ಕರಗಿ, ಕಂಪನಿಯ ಒಟ್ಟು ಮಾರುಕಟ್ಟೆ ಮೌಲ್ಯ ₹4.16 ಲಕ್ಷ ಕೋಟಿಯಾಗಿದೆ.

ಸುದ್ದಿ 2 ನಿಮಿಷ

ಬಜಾಜ್ ಫಿನ್‌ಸರ್ವ್ ನಿವ್ವಳ ಲಾಭ ಶೇ 20ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಬಜಾಜ್ ಫಿನ್‌ಸರ್ವ್ ಲಿಮಿಟೆಡ್‌ನ (ಬಿಎಫ್‌ಎಲ್) ಲಾಭವು 2023–24ರ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಶೇ 20ರಷ್ಟು ಹೆಚ್ಚಳವಾಗಿದ್ದು, ₹2,119 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹1,769 ಕೋಟಿ ಲಾಭ ಗಳಿಸಿತ್ತು.



ವರಮಾನವು ₹23,625 ಕೋಟಿಯಿಂದ ₹32,042 ಕೋಟಿಗೆ ಹೆಚ್ಚಳವಾಗಿದೆ ಎಂದು ಕಂಪನಿ ಷೇರುಪೇಟೆಗೆ ಶುಕ್ರವಾರ ತಿಳಿಸಿದೆ.

2023–24ರ ಪೂರ್ಣ ಹಣಕಾಸು ವರ್ಷದಲ್ಲಿ ಕಂಪನಿಯು ₹8,148 ಕೋಟಿ ಲಾಭ ಗಳಿಸಿದೆ. ಇದು ಹಿಂದಿನ ಇದೇ ಅವಧಿಗಿಂತ ಶೇ 27ರಷ್ಟು ಹೆಚ್ಚಳವಾಗಿದೆ. ವರಮಾನವು ₹82,072 ಕೋಟಿಯಿಂದ ₹1.10 ಲಕ್ಷ ಕೋಟಿಗೆ ಏರಿಕೆಯಾಗಿದೆ.

₹1 ಮುಖಬೆಲೆಯ ಪ್ರತಿ ಷೇರಿಗೆ ₹1 ಲಾಭಾಂಶ ನೀಡಲು ನಿರ್ದೇಶಕ ಮಂಡಳಿ ಶಿಫಾರಸು ಮಾಡಿದೆ.

ಮಾರುತಿ ಸುಜುಕಿಗೆ ₹3,877 ಕೋಟಿ ಲಾಭ

ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ಕಾರು ತಯಾರಕ ಕಂಪನಿ ಮಾರುತಿ ಸುಜುಕಿ 2023–24ರ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹3,877 ಕೋಟಿ ನಿವ್ವಳ ಲಾಭ ಗಳಿಸಿದೆ.

2022–23ರ ಇದೇ ಅವಧಿಯಲ್ಲಿ ₹2,623 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಈಗ ಶೇ 47.8ರಷ್ಟು ಏರಿಕೆಯಾಗಿದೆ. ವಾಹನಗಳ ಮಾರಾಟ ಹೆಚ್ಚಳದಿಂದ ಲಾಭದಲ್ಲಿ ಏರಿಕೆಯಾಗಿದೆ ಎಂದು ಕಂಪನಿ ಷೇರುಪೇಟೆಗೆ ಶುಕ್ರವಾರ ತಿಳಿಸಿದೆ.

ಮೊದಲ ಬಾರಿಗೆ 2023–24ರ ಆರ್ಥಿಕ ವರ್ಷದಲ್ಲಿ ಕಂಪನಿಯ ವಾಹನಗಳ ಒಟ್ಟು ಮಾರಾಟವು 20 ಲಕ್ಷ ದಾಟಿದೆ. ಸತತ ಮೂರನೇ ವರ್ಷವೂ ಕಂಪನಿ ಅಗ್ರ ರಫ್ತುಗಾರನಾಗಿ ಮುಂದುವರಿದಿದೆ. ದೇಶದ ಒಟ್ಟು ಪ್ರಯಾಣಿಕ ವಾಹನದ ರಫ್ತಿನಲ್ಲಿ ಕಂಪನಿ ಶೇ 41.8ರಷ್ಟು ಪಾಲು ಹೊಂದಿದೆ ಎಂದು ತಿಳಿಸಿದೆ.

ಬಿಎಸ್‌ಇಯಲ್ಲಿ ಮಾರುತಿ ಸುಜುಕಿಯ ಪ್ರತಿ ಷೇರಿನ ಬೆಲೆ ₹12,687ಕ್ಕೆ ಮುಟ್ಟಿದೆ.

2024–25ರ ಹಣಕಾಸು ವರ್ಷದ ವರದಿ ಪ್ರಕಟಿಸಿದ ಡೆಲಾಯ್ಟ್

ಜಿಡಿಪಿ: ಶೇ 6.6ರಷ್ಟು ಪ್ರಗತಿ ನಿರೀಕ್ಷೆ

ನವದೆಹಲಿ (ಪಿಟಿಐ): ಬಳಕೆಯ ವೆಚ್ಚ, ರಫ್ತು ಚೇತರಿಕೆ ಮತ್ತು ಬಂಡವಾಳದ ಹರಿವಿನಿಂದ ದೇಶದ ಜಿಡಿಪಿ ಬೆಳವಣಿಗೆ 2024–25ರ ಹಣಕಾಸು ವರ್ಷದಲ್ಲಿ ಶೇ 6.6ರಷ್ಟು ಇರಲಿದೆ ಎಂದು ಡೆಲಾಯ್ಟ್ ಇಂಡಿಯಾ ಅಂದಾಜಿಸಿದೆ.

ಭಾರತದ ಆರ್ಥಿಕ ದೃಷ್ಟಿಕೋನದ ವರದಿಯಲ್ಲಿ ಡೆಲಾಯ್ಟ್, ಮಧ್ಯಮ ಆದಾಯದ ವರ್ಗದ ತ್ವರಿತ ಬೆಳವಣಿಗೆಯು, ಖರೀದಿ ಸಾಮರ್ಥ್ಯವನ್ನು ಹೆಚ್ಚಿಸಿದೆ. ಐಷಾರಾಮಿ ಉತ್ಪನ್ನಗಳು ಮತ್ತು ಸೇವೆಗಳಿಗೆ ಬೇಡಿಕೆಯನ್ನು ಸೃಷ್ಟಿಸಿದೆ ಎಂದು ಶುಕ್ರವಾರ ಹೇಳಿದೆ.

ದೇಶದ ಜಿಡಿಪಿ ಬೆಳವಣಿಗೆಯು 2024-25 ರಲ್ಲಿ ಶೇ 6.6 ಮತ್ತು ಮುಂದಿನ ಹಣಕಾಸು ವರ್ಷದಲ್ಲಿ ಶೇ 6.75ಕ್ಕೆ ತಲುಪುತ್ತದೆ ಎಂದು ಅಂದಾಜಿಸಿದೆ. ಕೊರೊನಾ ನಂತರದ ಗ್ರಾಹಕರ ವೆಚ್ಚದಲ್ಲಿ ಏರಿಳಿತವಾಗುತ್ತಿದೆ. ಐಷಾರಾಮಿ ಉತ್ಪನ್ನ ಮತ್ತು ಸೇವೆಗಳಿಗೆ ಬೇಡಿಕೆಯು, ಮೂಲಭೂತ ಸರಕುಗಳ ಬೇಡಿಕೆಗಿಂತ ವೇಗವಾಗಿ ಬೆಳೆಯುತ್ತಿದೆ ಎಂದು ಡೆಲಾಯ್ಟ್ ಹೇಳಿದೆ.


ಗ್ರಾಮೀಣ ಮತ್ತು ಅರೆ-ನಗರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಉದ್ಯೋಗಾವಕಾಶಗಳು ಉಳಿತಾಯವನ್ನು ಹೆಚ್ಚಿಸಬಹುದು ಎಂದು ಹೇಳಿದೆ.

ಚುನಾವಣಾ ಅನಿಶ್ಚಿತತೆಗಳು ಬಗೆಹರಿಯುವುದರಿಂದ ಜಾಗತಿಕ ಆರ್ಥಿಕತೆಯು 2025ರ ವೇಳೆಗೆ ಚೇತರಿಸುವ ನಿರೀಕ್ಷೆಯಿದೆ. ಪಶ್ಚಿಮ ದೇಶದ ಬ್ಯಾಂಕ್‌ಗಳು ದರ ಕಡಿತಗಳನ್ನು ಘೋಷಿಸಬಹುದು. ಭಾರತವು ಸುಧಾರಿತ ಬಂಡವಾಳ ಹರಿವು ಮತ್ತು ರಫ್ತಲ್ಲಿ ಚೇತರಿಕೆ ಕಾಣಬಹುದು ಎಂದು ಡೆಲಾಯ್ಟ್ ಇಂಡಿಯಾದ ಅರ್ಥಶಾಸ್ತ್ರಜ್ಞ ರುಮ್ಕಿ ಮಜುಂದಾರ್ ಹೇಳಿದ್ದಾರೆ.

ಮೂಲಸೌಕರ್ಯಗಳ ಮೇಲಿನ ಹೆಚ್ಚಿದ ಸರ್ಕಾರದ ವೆಚ್ಚದಿಂದ ಭಾರತವು ಸ್ಥಿರವಾದ ಚೇತರಿಕೆಯ ವೇಗವನ್ನು ಕಾಪಾಡಿಕೊಳ್ಳಲು ಸಹಾಯ ಮಾಡಿದೆ. ಹಣದುಬ್ಬರ ಮತ್ತು ಭೌಗೋಳಿಕ ರಾಜಕೀಯ ಅನಿಶ್ಚಿತತೆಗಳು ಆಹಾರ ಮತ್ತು ಇಂಧನ ಬೆಲೆಗಳನ್ನು ಹೆಚ್ಚಿಸುತ್ತಿವೆ. ಮುಂಗಾರು ಮುನ್ಸೂಚನೆಯು ಕೃಷಿ ಉತ್ಪಾದನೆಯನ್ನು ಹೆಚ್ಚಿಸಲಿದ್ದು, ಆಹಾರದ ಬೆಲೆಗಳು ಇಳಿಕೆಯಾಗಲಿದೆ ಎಂದು ಮಜುಂದಾರ್ ತಿಳಿಸಿದ್ದಾರೆ.

ಐಷಾರಾಮಿ ಮತ್ತು ಪ್ರೀಮಿಯಂ ಸರಕು ಮತ್ತು ಸೇವೆಗಳ ವಿಭಾಗದಲ್ಲಿ ಭಾರತದ ಖರ್ಚು ಅಮೆರಿಕ, ಚೀನಾ, ಜಪಾನ್ ಮತ್ತು ಜರ್ಮನಿಯಂತಹ ರಾಷ್ಟ್ರಗಳಿಗಿಂತ ಕಡಿಮೆ ಇದೆ. ಗ್ರಾಹಕರ ಆದಾಯವು ಹೆಚ್ಚಾದಂತೆ ಈ ಅನುಪಾತವು ಮತ್ತಷ್ಟು ಹೆಚ್ಚಾಗುವ ಸಾಧ್ಯತೆಯಿದೆ ಎಂದು ಮಜುಂದಾರ್ ಹೇಳಿದರು.

ಡೆಲಾಯ್ಟ್‌ನ ಜಿಡಿಪಿ ಬೆಳವಣಿಗೆಯ ಅಂದಾಜು ವಿಶ್ವ ಬ್ಯಾಂಕ್ ಅಂದಾಜಿಗೆ ಹೋಲುತ್ತಿದೆ. ಆದರೂ, ಇದು ಆರ್‌ಬಿಐ ಮತ್ತು ಇತರೆ ಏಜೆನ್ಸಿಗಳ ಅಂದಾಜಿಗಿಂತ ಕಡಿಮೆಯಾಗಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತದ ಆರ್ಥಿಕತೆ ಶೇ 7ರಷ್ಟಿರಲಿದೆ ಎಂದು ಆರ್‌ಬಿಐ ಅಂದಾಜಿಸಿದೆ.



ಎಎಸ್‌ಪಿಎಲ್‌ನ ಷೇರು ಖರೀದಿಗೆ ಸ್ಮಯೋರ್ ಅನುಮೋದನೆ

ನವದೆಹಲಿ (ಪಿಟಿಐ): ಅರ್ಜಾಸ್ ಸ್ಟೀಲ್ ಪ್ರೈವೆಟ್ ಲಿಮಿಟೆಡ್‌ನಲ್ಲಿ ಶೇ 80ರಷ್ಟು ಷೇರನ್ನು ಖರೀದಿಸಲು ಸಂಡೂರ್ ಮ್ಯಾಂಗನೀಸ್ ಮತ್ತು ಕಬ್ಬಿಣದ ಅದಿರು ಲಿಮಿಟೆಡ್‌ನ (ಸ್ಮಯೋರ್) ಮಂಡಳಿ ಅನುಮೋದನೆ ನೀಡಿದೆ.

ಈ ಒಪ್ಪಂದದ ಹಣಕಾಸಿನ ವಿವರವನ್ನು ಕಂಪನಿ ಬಹಿರಂಗಪಡಿಸಿಲ್ಲ. ಆದರೆ, ಅರ್ಜಾಸ್ ಸ್ಟೀಲ್ ಪ್ರೈವೇಟ್ ಲಿಮಿಟೆಡ್‌ನ (ಎಎಸ್‌ಪಿಎಲ್) ಮೌಲ್ಯ ₹3 ಸಾವಿರ ಕೋಟಿಯಷ್ಟಾಗಿದೆ. ಎಎಸ್‌ಪಿಎಲ್‌ನ ಷೇರನ್ನು ಖರೀದಿಸುವ ಮೂಲಕ ವ್ಯವಹಾರ ಸ್ವಾಧೀನಕ್ಕೆ ನಿರ್ದೇಶಕರ ಮಂಡಳಿಯು ಅನುಮೋದನೆ ನೀಡಿದೆ. ಈ ಮೂಲಕ ಷೇರು ಖರೀದಿ ಒಪ್ಪಂದಕ್ಕೆ ಪ್ರವೇಶಿಸಿದೆ ಎಂದು ಕಂಪನಿ ಷೇರುಪೇಟೆಗೆ ತಿಳಿಸಿದೆ.

ಹೆಚ್ಚುವರಿಯಾಗಿ, ಎಎಸ್‌ಪಿಎಲ್‌ನಲ್ಲಿ ಶೇ19.12ರಷ್ಟು ಪಾಲನ್ನು ಸ್ಮಯೋರ್‌ನ ಪ್ರವರ್ತಕರಾದ ಬಹಿರ್ಜಿ ಎ ಘೋರ್ಪಡೆ ಒಡೆತನದ ಬಿಎಜಿ ಹೋಲ್ಡಿಂಗ್ಸ್ ಪ್ರೈವೆಟ್ ಲಿಮಿಟೆಡ್ ಸ್ವಾಧೀನಪಡಿಸಿಕೊಳ್ಳಲಿದೆ. ಷೇರು ಖರೀದಿ ಒಪ್ಪಂದವು ಏಳು ತಿಂಗಳೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.



ಮುಂಬೈ ಕರಾವಳಿ ರಸ್ತೆಯನ್ನು ಬಾಂದ್ರಾ ವರ್ಲಿ ಸಮುದ್ರ ಸಂಪರ್ಕದೊಂದಿಗೆ ಜೋಡಿಸುವ 2,000 ಟನ್ ತೂಕದ ಕಮಾನು ಸೇತುವೆ ಕಂಡು ಬಂದಿದ್ದು ಹೀಗೆ – ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

‘ಗಾಜಾ: ಅವಶೇಷಗಳ ವಿಲೇವಾರಿಗೆ 14 ವರ್ಷ ಬೇಕಾಗಬಹುದು’

ಜಿನೀವಾ (ರಾಯಿಟರ್ಸ್): ಇಸ್ರೇಲ್ ಜೊತೆಗಿನ ಯುದ್ಧದಿಂದಾಗಿ ಗಾಜಾಪಟ್ಟಿಯಲ್ಲಿ ಬೃಹತ್ ಪ್ರಮಾಣದಲ್ಲಿ ಸಂಗ್ರಹವಾಗಿರುವ ಅವಶೇಷಗಳನ್ನು ವಿಲೇವಾರಿ ಮಾಡಲು 14 ವರ್ಷಗಳಷ್ಟು ಬೇಕಾಗಬಹುದು ಎಂದು ವಿಶ್ವಸಂಸ್ಥೆ ಶುಕ್ರವಾರ ತಿಳಿಸಿದೆ.



‘ಯುದ್ಧದಿಂದಾಗಿ ಅಂದಾಜು 3.70 ಕೋಟಿ ಟನ್ ತ್ಯಾಜ್ಯ ಸಂಗ್ರಹವಾಗಿದೆ. ಸ್ಫೋಟವಾಗದೆ ಉಳಿದಿರುವ ಬಾಂಬ್ ಮತ್ತು ಇತರ ಸ್ಫೋಟಕಗಳ ನಿಖರ ಸಂಖ್ಯೆ ತಿಳಿಯಲು ಸಾಧ್ಯವಿಲ್ಲ. ಭೂಸೇನೆಯ ಶೇಕಡ 10ರಷ್ಟು ಶಸ್ತ್ರಾಸ್ತ್ರಗಳು ನಿಷ್ಕ್ರಿಯಗೊಂಡಿವೆ’ ಎಂದು ವಿಶ್ವಸಂಸ್ಥೆಯ ಹಿರಿಯ ಅಧಿಕಾರಿ ಪೆಹ್ರ್ ಲೊಧಮ್ಮರ್ ತಿಳಿಸಿದ್ದಾರೆ.

‘100 ಟ್ರಕ್‌ಗಳನ್ನು ಬಳಸಿದರೂ ಗಾಜಾ ಪಟ್ಟಿಯಲ್ಲಿರುವ ಅವಶೇಷಗಳನ್ನು ವಿಲೇವಾರಿ ಮಾಡಲು 14 ವರ್ಷ ಬೇಕಾಗಬಹುದು’ ಎಂದು ತಿಳಿಸಿದ್ದಾರೆ.

ಗಾಜಾದ ಆರೋಗ್ಯ ಇಲಾಖೆಯ ಪ್ರಕಾರ, ಇಸ್ರೇಲ್ ದಾಳಿಯಿಂದಾಗಿ ಈವರೆಗೆ 34,305 ಪ್ಯಾಲೇಸ್ಟಿಯನ್ನರು ಮೃತಪಟ್ಟಿದ್ದು, 77,293 ಮಂದಿ ಗಾಯಗೊಂಡಿದ್ದಾರೆ. 23 ಲಕ್ಷ ಜನ ನಿರಾಶ್ರಿತರಾಗಿದ್ದಾರೆ.

ಭಾರತ, ರಷ್ಯಾ ಸಂಸ್ಥೆಗಳಿಗೆ ಶ್ರೀಲಂಕಾದ ವಿಮಾನ ನಿಲ್ದಾಣ ನಿರ್ವಹಣೆ ಹೊಣೆ

ಕೊಲಂಬೊ (ಪಿಟಿಐ): ಶ್ರೀಲಂಕಾದ ಹಂಬನ್‌ತೋಟಾದಲ್ಲಿರುವ ಮಟ್ಟಲಾ ರಾಜಪಕ್ಸ ಅಂತರರಾಷ್ಟ್ರೀಯ ನಿಲ್ದಾಣದ ನಿರ್ವಹಣೆಯನ್ನು ಭಾರತ ಮತ್ತು ರಷ್ಯಾದ ಮೂಲದ ಕಂಪನಿಗಳಿಗೆ ವಹಿಸಲಾಗಿದೆ.



ಈ ವಿಮಾನ ನಿಲ್ದಾಣದ 30 ವರ್ಷಗಳ ನಿರ್ವಹಣೆಗೆ ಒಟ್ಟಾರೆ ಐದು ಪ್ರಸ್ತಾವಗಳು ಬಂದಿದ್ದವು. ಆದರೆ, ಸಂಪುಟ ನೇಮಿಸಿದ ಸಲಹಾ ಸಮಿತಿಯು ವಿಮಾನ ನಿಲ್ದಾಣದ ನಿರ್ವಹಣೆಯನ್ನು ಭಾರತ ಮೂಲದ ಶೌರ್ಯ ಏರೋನಾಟಿಕ್ಸ್ (ಪ್ರಿವಿಟಿ) ಲಿ ಆಫ್ ಇಂಡಿಯಾ ಮತ್ತು ರಷ್ಯಾದ ಏರ್‌ಪೋರ್ಟ್ಸ್ ಆಫ್ ರಿಜಿಯನ್ಸ್ ಮ್ಯಾನೇಜ್‌ಮೆಂಟ್ ಕಂಪನಿ ಆಫ್ ರಷ್ಯಾ ಎಂಬ ಕಂಪನಿಗಳಿಗೆ ವಹಿಸಲು ನಿರ್ಧರಿಸಿತು ಎಂದು ಸರ್ಕಾರದ ವಕ್ತಾರರೊಬ್ಬರು ಶುಕ್ರವಾರ ಹೇಳಿದ್ದಾರೆ.

₹1,742 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡ ಈ ವಿಮಾನ ನಿಲ್ದಾಣ ನಿರ್ಮಿಸಲಾಗಿದ್ದು, ಈ ಪೈಕಿ ₹1,583 ಚೀನಾ ಮೂಲದ ಎಕ್ಸಿಂ ಬ್ಯಾಂಕ್ ಆಫ್ ಚೀನಾದಿಂದ ಭಾರಿ ಮೊತ್ತದ ಬಡ್ಡಿಯ ಸಾಲದ ರೂಪದಲ್ಲಿ ಹರಿದುಬಂದಿತ್ತು.

ಅಮೆರಿಕದಲ್ಲಿ ಪ್ರತಿಭಟನೆ: ಭಾರತದ ವಿದ್ಯಾರ್ಥಿನಿ ಸೆರೆ

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಪ್ರತಿಷ್ಠಿತ ‘ಪ್ರಿನ್ಸ್‌ಟನ್ ವಿಶ್ವವಿದ್ಯಾಲಯ’ದ ಆವರಣದಲ್ಲಿ ಪ್ಯಾಲೆಸ್ಟೀನ್ ಪರ ಪ್ರತಿಭಟನೆಯಲ್ಲಿ ಭಾಗಿಯಾದ ಕಾರಣಕ್ಕೆ ಭಾರತ ಮೂಲದ ವಿದ್ಯಾರ್ಥಿನಿ ಸೇರಿದಂತೆ ಇಬ್ಬರು ವಿದ್ಯಾರ್ಥಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಈ ವಿದ್ಯಾರ್ಥಿಗಳು ಕಾಲೇಜಿನ ಆವರಣ ಪ್ರವೇಶಿಸದಂತೆ ನಿರ್ಬಂಧ ಹೇರಲಾಗಿದೆ ಎಂದು ತಿಳಿದುಬಂದಿದೆ. ಗಾಜಾದಲ್ಲಿ ಯುದ್ಧದಲ್ಲಿ ತೊಡಗಿರುವ ಇಸ್ರೇಲ್ ಮತ್ತು ಆ ದೇಶದ ಕಂಪನಿಗಳ ಜೊತೆಗಿನ ಹಣಕಾಸು ಒಪ್ಪಂದಗಳನ್ನು ಕಾಲೇಜುಗಳು ಮಾಡಿಕೊಳ್ಳಬಾರದು ಎಂದು ಒತ್ತಾಯಿಸಿ ಗುರುವಾರ ಬೆಳಿಗ್ಗೆ ಸುಮಾರು 100 ವಿದ್ಯಾರ್ಥಿಗಳು ಪ್ರತಿಭಟನೆ ಕೈಗೊಂಡಿದ್ದರು. ಈ ಪ್ರತಿಭಟನೆಗಳು ಯಹೂದಿ ವಿರೋಧಿಯಾಗಿದ್ದು, ವಿವಿ ಕ್ಯಾಂಪಸ್ ಪ್ರವೇಶಿಸಲು ಭಯಪಡುವಂತಾಗಿದೆ ಎಂದು ಕೆಲವು ಯಹೂದಿ ವಿದ್ಯಾರ್ಥಿಗಳು ಆರೋಪಿಸಿದ್ದರು. ಹೀಗಾಗಿ, ಈ ಕ್ರಮ ಕೈಗೊಳ್ಳಲಾಗಿದೆ ಎಂದು ವಿವಿ ತಿಳಿಸಿದೆ.

ಭಾರತದ ಹೈಕಮಿಷನ್ ಮೇಲೆ ದಾಳಿ: ಆರೋಪಿ ಬಂಧನ

ಲಂಡನ್ (ಪಿಟಿಐ): ಬ್ರಿಟನ್‌ನಲ್ಲಿ ಭಾರತದ ಹೈಕಮಿಷನ್ ಕಚೇರಿ ಮೇಲೆ ಕಳೆದ ವರ್ಷ ನಡೆದ ದಾಳಿಯ ಪ್ರಮುಖ ಆರೋಪಿಯನ್ನು ಬಂಧಿಸಿರುವುದಾಗಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ತಿಳಿಸಿದೆ.

ಪಶ್ಚಿಮ ಲಂಡನ್‌ನ ಹೌನ್‌ಸ್ಲೋ ಪ್ರದೇಶದ ನಿವಾಸಿ ಇಂದರ್‌ಪಾಲ್ ಸಿಂಗ್ ಗಾಬಾ ಬಂಧಿತ ಆರೋಪಿ. 2023ರ ಮಾರ್ಚ್ 22ರಂದು ನಡೆದ ಪ್ರತಿಭಟನೆಯಲ್ಲಿ ಈತ ಪಾಲ್ಗೊಂಡಿದ್ದ ಎಂದು ಎನ್‌ಐಎ ಮೂಲಗಳು ಹೇಳಿವೆ. 2023ರ ಮಾರ್ಚ್ 19 ಮತ್ತು 22ರಂದು ಲಂಡನ್‌ನ ಇಂಡಿಯಾ ಹೌಸ್ ಮುಂದೆ ಎರಡು ಪ್ರಮುಖ ಹಿಂಸಾತ್ಮಕ ಪ್ರತಿಭಟನೆಗಳು ನಡೆದಿದ್ದವು. ಮಾರ್ಚ್ 19ರಂದು ಪ್ರತಿಭಟನಕಾರರ ದೊಡ್ಡ ಗುಂಪು ಭಾರತೀಯ ಅಧಿಕಾರಿಗಳ ಮೇಲೆ ದಾಳಿ ಮಾಡಿ, ಹೈಕಮಿಷನ್ ಕಟ್ಟಡವನ್ನು ಹಾನಿಗೊಳಿಸಿತ್ತು.



ಮಾರ್ಚ್ 22ರ ಪ್ರತಿಭಟನೆಯ ವೇಳೆ ಭಾರತ ವಿರೋಧಿ ಘೋಷಣೆಗಳನ್ನು ಕೂಗಿ, ಪುನಃ ಭಾರತದ ರಾಷ್ಟ್ರಧ್ವಜವನ್ನು ಅವಮಾನಿಸಲಾಗಿತ್ತು. ತನಿಖೆಯ ಭಾಗವಾಗಿ ಪಂಜಾಬ್, ರಾಜಸ್ಥಾನದ 31 ಸ್ಥಳಗಳಲ್ಲಿ ಶೋಧ ನಡೆಸಿತ್ತು. ಎನ್‌ಐಎ ತಂಡ ಲಂಡನ್‌ಗೂ ಭೇಟಿ ನೀಡಿತ್ತು ಎಂದು ಮೂಲಗಳು ಹೇಳಿವೆ.

ಅಮೆರಿಕ–ಚೀನಾ: ದ್ವಿಪಕ್ಷೀಯ ಮಾತುಕತೆ

ಬೀಜಿಂಗ್ (ಎಪಿ): ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆಂಟೊನಿ ಬ್ಲಿಂಕೆನ್ ಅವರು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ, ಸಾರ್ವಜನಿಕ ಭದ್ರತಾ ಸಚಿವ ವಾಂಗ್ ಷಿಯಾಂಗ್ ಸೇರಿದಂತೆ ಹಿರಿಯ ಅಧಿಕಾರಿಗಳ ಜತೆ ಶುಕ್ರವಾರ ಮಾತುಕತೆ ನಡೆಸಿದರು.

ಉಭಯ ದೇಶಗಳ ನಡುವಿನ ವಿವಾದಾತ್ಮಕ ದ್ವಿಪಕ್ಷೀಯ, ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಕುರಿತು ಈ ವೇಳೆ ಚರ್ಚೆಗಳು ನಡೆದಿವೆ. ಈ ವಿಷಯಗಳಲ್ಲಿ ಪರಸ್ಪರ ತಪ್ಪು ತಿಳಿವಳಿಕೆ ಮತ್ತು ತಪ್ಪು ಲೆಕ್ಕಾಚಾರಗಳಿಂದ ಆಗುವ ಅಪಾಯಗಳ ಕುರಿತು ಎಚ್ಚರವಹಿಸಬೇಕು ಎಂದು ನಾಯಕರು ಚರ್ಚಿಸಿದ್ದಾರೆ.

ಚೀನಾ ಭೇಟಿಯಲ್ಲಿರುವ ಬ್ಲಿಂಕೆನ್ ಅವರು ಶುಕ್ರವಾರ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರನ್ನೂ ಭೇಟಿಯಾಗಿ ಮಾತುಕತೆ ನಡೆಸಲಿದ್ದಾರೆ. ಆದರೆ, ಇದು ಮೊದಲೇ ನಿಗದಿಯಾಗಿದ್ದ ಸಭೆಯಲ್ಲ ಎಂದು ಅಮೆರಿಕ ಹೇಳಿದೆ.

ಎರಡೂ ದೇಶಗಳ ನಡುವೆ ಭಿನ್ನಾಭಿಪ್ರಾಯಗಳು ಹೆಚ್ಚಾಗಿರುವ ಬೆನ್ನಲ್ಲೇ,



ಉಭಯ ದೇಶಗಳ ನಾಯಕರೊಂದಿಗೆ ಮಾತುಕತೆಗಳೂ ಹೆಚ್ಚಾಗಿವೆ. ಭವಿಷ್ಯದಲ್ಲಿಯೂ ಎರಡೂ ದೇಶಗಳು ಮಾತುಕತೆ ನಡೆಸುವ ಕುರಿತು ನಾಯಕರು ಬದ್ಧತೆ ವ್ಯಕ್ತಪಡಿಸಿದ್ದಾರೆ. ಜಾಗತಿಕ ಭದ್ರತೆಗೆ ಬೆದರಿಕೆ ಹಾಕುವಂತಹ ಬೆಳವಣಿಗೆಗಳ ಬಗ್ಗೆ ನಾಯಕರು ವಿಷಾದ ವ್ಯಕ್ತಪಡಿಸಿದ್ದಾರೆ.

ತೈವಾನ್, ದಕ್ಷಿಣ ಚೀನಾ ಸಮುದ್ರ, ವ್ಯಾಪಾರ ಹಾಗೂ ಮಾನವ ಹಕ್ಕು, ರಷ್ಯಾಕ್ಕೆ ಚೀನಾದ ಬೆಂಬಲ ಸೇರಿದಂತೆ ಹಲವು ವಿಷಯಗಳು ಚರ್ಚೆಯಾಗಿವೆ ಎಂದು ತಿಳಿದು ಬಂದಿದೆ. ಚರ್ಚೆಯ ಆರಂಭದಲ್ಲಿ ವಾಂಗ್ ಅವರು, ಚೀನಾ– ಅಮೆರಿಕ ಸಂಬಂಧ ಸ್ಥಿರಗೊಳ್ಳಲು ಪ್ರಾರಂಭವಾಗಿದೆ. ಆದರೆ, ಅದೇ ಸಮಯದಲ್ಲಿ ಸಂಬಂಧದಲ್ಲಿನ ನಕಾರಾತ್ಮಕ ಅಂಶಗಳೂ ಹೆಚ್ಚುತ್ತಿದ್ದು, ಈ ಅಡೆತಡೆಗಳನ್ನು ನಿವಾರಿಸಬೇಕಿದೆ ಎಂದಿದ್ದಾರೆ.

‘ತನಗೆ ಸೂಕ್ತವೆಂದು ಭಾವಿಸುವ ದೇಶಗಳೊಂದಿಗೆ ಸಂಬಂಧ ಬೆಳೆಸುವ ಹಕ್ಕು ಚೀನಾಗೆ ಇದೆ. ನಾವು ಯಾವಾಗಲೂ ಪರಸ್ಪರರ ಹಿತಾಸಕ್ತಿಗಳನ್ನು ಗೌರವಿಸಬೇಕು. ಚೀನಾದ ಆಂತರಿಕ ವ್ಯವಹಾರಗಳಲ್ಲಿ ಅಮೆರಿಕ ಮಧ್ಯಪ್ರವೇಶಿಸಬಾರದು ಎಂದು ಒತ್ತಾಯಿಸುತ್ತೇವೆ. ಚೀನಾದ ಅಭಿವೃದ್ಧಿಯನ್ನು ತಡೆಹಿಡಿಯಲು ಪ್ರಯತ್ನಿಸಬೇಡಿ ಮತ್ತು ಚೀನಾದ ಸಾರ್ವಭೌಮತ್ವ, ಭದ್ರತೆ, ಅಭಿವೃದ್ಧಿಯ ಹಿತಾಸಕ್ತಿಗಳ ಹಸ್ತಕ್ಷೇಪ ಮಾಡಬೇಡಿ’ ಎಂದು ವಾಂಗ್ ಯಿ ಅವರು ಬ್ಲಿಂಕೆನ್‌ಗೆ ತಿಳಿಸಿದ್ದಾರೆ.

‘ಭಿನ್ನಾಭಿಪ್ರಾಯ ಇರುವ ಪ್ರದೇಶಗಳು ಮತ್ತು ನಮ್ಮ ನಿಲುವಿನ ಬಗ್ಗೇ ಸ್ಪಷ್ಟ ಮತ್ತು ನಿಖರವಾಗಿದ್ದೇವೆ. ಚೀನಾ ಸಹ ಇದೇ ರೀತಿ ಇರುತ್ತದೆ ಎಂದು ಭಾವಿಸುತ್ತೇನೆ. ಈ ವಿಚಾರದಲ್ಲಿ ತಪ್ಪುಗ್ರಹಿಕೆ ಮತ್ತು ತಪ್ಪು ಲೆಕ್ಕಾಚಾರಗಳನ್ನು ಬಿಡಬೇಕಿದೆ’ ಎಂದು ಬ್ಲಿಂಕೆನ್ ಹೇಳಿದ್ದಾರೆ.



ಪ್ರಭಸಿಮ್ರನ್ ಸಿಂಗ್, ಶಶಾಂಕ್ ಸಿಂಗ್ ಅಬ್ಬರದ ಬ್ಯಾಟಿಂಗ್ • ಸಿಕ್ಸರ್‌ಗಳ ಸುರಿಮಳೆ

ಜಾನಿ ಶತಕ; ಪಂಜಾಬ್ 'ದಾಖಲೆ'ಯ ಕಿಂಗ್

ಕೋಲ್ಕತ್ತ (ಪಿಟಿಐ): ದೀರ್ಘ ಕಾಲದಿಂದ ವೈಫಲ್ಯ ಅನುಭವಿಸುತ್ತಲೇ ಇದ್ದ ಜಾನಿ ಬೆಸ್ಟೊ ಶುಕ್ರವಾರ ಲಯಕ್ಕೆ ಮರಳಿದರು. ಅವರ ಅಬ್ಬರದ ಶತಕದ ಮೂಲಕ ಪಂಜಾಬ್ ಕಿಂಗ್ಸ್ ತಂಡವು 'ವಿಶ್ವ ದಾಖಲೆ' ಬರೆಯಿತು.

ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ 262 ರನ್‌ಗಳ ಮೊತ್ತವನ್ನು ಬೆನ್ನತ್ತಿದ ಪಂಜಾಬ್ ತಂಡವು ಪಂದ್ಯದಲ್ಲಿ ಇನ್ನೂ ಎಂಟು ಎಸೆತಗಳು ಬಾಕಿಯಿರುವಾಗಲೇ ಮುಟ್ಟಿತು. 8 ವಿಕೆಟ್‌ಗಳಿಂದ ಜಯಿಸಿತು. ಅಲ್ಲದೇ ಟಿ20 ಕ್ರಿಕೆಟ್‌ನಲ್ಲಿ ಗುರಿ ಬೆನ್ನಟ್ಟಿ ಗೆದ್ದ ದೊಡ್ಡ ಮೊತ್ತ (18.4 ಓವರ್‌ಗಳಲ್ಲಿ 2ಕ್ಕೆ262) ಇದಾಗಿದೆ. ಹೋದ ವರ್ಷದ ಮಾರ್ಚ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವು ವೆಸ್ಟ್ ಇಂಡೀಸ್ ವಿರುದ್ಧ 259 ರನ್‌ಗಳ ಗುರಿ ಬೆನ್ನಟ್ಟಿ ಜಯಿಸಿದ್ದು ಇದುವರೆಗಿನ ದಾಖಲೆಯಾಗಿತ್ತು.

ಐಪಿಎಲ್ ಟೂರ್ನಿಯ ಇತಿಹಾಸದಲ್ಲಿಯೂ ಇದು ದಾಖಲೆಯಾಗಿದೆ. ಇದೇ ಟೂರ್ನಿಯಲ್ಲಿ ರಾಜಸ್ಥಾನ ರಾಯಲ್ಸ್ ತಂಡವು ಇದೇ ಕ್ರೀಡಾಂಗಣದಲ್ಲಿ 224 ರನ್‌ಗಳ ಗುರಿಯನ್ನು ಯಶಸ್ವಿಯಾಗಿ ಮುಟ್ಟಿದ್ದು ದಾಖಲೆಯನ್ನೂ ಪಂಜಾಬ್ ಮೀರಿ ನಿಂತಿತು. ಒಂಬತ್ತನೇ ಪಂದ್ಯವಾಡಿದ ಪಂಜಾಬ್ ಮೂರನೇ ಜಯ ಗಳಿಸಿತು.

ಇಂಗ್ಲೆಂಡ್ ತಂಡದ ಆಟಗಾರ ಜಾನಿ ಬೆಸ್ಟೊ (ಅಜೇಯ 108; 48ಎ) ಹಾಗೂ ಪ್ರಭಸಿಮ್ರನ್ ಸಿಂಗ್ (54; 20ಎ) ಅವರಿಬ್ಬರೂ ಸೇರಿ ಪವರ್ ಪ್ಲೇನಲ್ಲಿಯೇ 93 ರನ್ ಸೂರೆ ಮಾಡಿ ಉತ್ತಮ ಆರಂಭ ನೀಡಿದರು. ಸುನಿಲ್ ನಾರಾಯಣ್ ಚುರುಕಿನ ಫೀಲ್ಡಿಂಗ್‌ನಿಂದಾಗಿ ಪ್ರಭಸಿಮ್ರನ್ ಸಿಂಗ್ ರನ್‌ಔಟ್ ಆದರು. ಆದರೆ ಜಾನಿ ಮಾತ್ರ ಗಟ್ಟಿಯಾಗಿ ಹೆಜ್ಜೆಯೂರಿದ್ದರು.

ಜಾನಿ ಅವರು ರಿಲೀ ರೂಸೊ (26; 16ಎ) ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 85 ರನ್ ಸೇರಿಸಿದರು. ಸುನಿಲ್ ಬೌಲಿಂಗ್‌ನಲ್ಲಿ ರಿಲೀ ಔಟಾದ ನಂತರ ಶಶಾಂಕ್ ಸಿಂಗ್ (ಅಜೇಯ 68) ಮಿಂಚಿದರು. ಜಾನಿ ಮತ್ತು ಶಶಾಂಕ್ ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲಿ 84 ರನ್ ಸೇರಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. 16ನೇ ಓವರ್‌ನಲ್ಲಿ ಜಾನಿಗೆ ಒಂದು ಜೀವದಾನವೂ ಲಭಿಸಿತ್ತು.

ಪಂಜಾಬ್ ಇನಿಂಗ್ಸ್ 24 ಸಿಕ್ಸರ್‌ಗಳು ದಾಖಲಾದವು. ಈಚೆಗೆ ಬೆಂಗಳೂರಿನಲ್ಲಿ ಆರ್‌ಸಿಬಿ ವಿರುದ್ಧ ಸನ್‌ರೈಸರ್ಸ್ ತಂಡವು 22 ಸಿಕ್ಸರ್ ಹೊಡೆದಿದ್ದ ದಾಖಲೆಯನ್ನು ಪಂಜಾಬ್ ಮುರಿಯಿತು. ಆದೇ ಪಂದ್ಯದಲ್ಲಿ ದಾಖಲಾಗಿದ್ದ ಒಟ್ಟು 38 ಸಿಕ್ಸರ್‌ಗಳ ದಾಖಲೆಯೂ ಪತನವಾಯಿತು. ಪಂಜಾಬ್ ಮತ್ತು ಕೋಲ್ಕತ್ತ ಇನಿಂಗ್ಸ್‌ಗಳಲ್ಲಿ ಸೇರಿ 42 ಸಿಕ್ಸರ್‌ಗಳು ದಾಖಲಾದವು.

ಸಾಲ್ಟ್–ಸುನಿಲ್ ಶತಕದ ಜೊತೆಯಾಟ: ಟಾಸ್ ಗೆದ್ದ ಪಂಜಾಬ್ ಕಿಂಗ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸಾಲ್ಟ್ (75; 37ಎ, 4X6, 6X6) ಹಾಗೂ ಸುನಿಲ್ (71; 32ಎ, 4X9, 6X4) ಮೊದಲ ವಿಕೆಟ್ ಜೊತೆಯಾಟದಲ್ಲಿ 138 ರನ್ ಸೇರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 261 ರನ್ ಗಳಿಸಿತು.

ವೇಗಿ ಹರ್ಷಲ್ ಪಟೇಲ್ ಹಾಕಿದ ಮೂರನೇ ಓವರ್‌ನಲ್ಲಿ ಹರಪ್ರೀತ್ ಬ್ರಾರ್ ಅವರು ಸುನಿಲ್ ಕ್ಯಾಚ್ ಕೈಚೆಲ್ಲಿದರು. ಆರನೇ ಓವರ್‌ನಲ್ಲಿ ಅರ್ಷದೀಪ್ ಸಿಂಗ್ ಎಸೆತವನ್ನು ಡ್ರೈವ್ ಮಾಡುವ ಯತ್ನಿಸಿದ ಸಾಲ್ಟ್ ಕ್ಯಾಚ್ ಅನ್ನು ವಶಕ್ಕೆ ಪಡೆಯುವಲ್ಲಿ ಸ್ಯಾಮ್ ಕರನ್ ವಿಫಲರಾದರು. ಇಬ್ಬರೂ ಬ್ಯಾಟರ್‌ಗಳೂ ಈ ಜೀವದಾನಗಳನ್ನು ಸಮರ್ಥವಾಗಿ ಬಳಸಿಕೊಂಡರು.

ಮೊದಲ ಹತ್ತು ಓವರ್‌ಗಳಲ್ಲಿ ಉತ್ತಮ ಮೊತ್ತ ಗಳಿಸಿದರು. 11ನೇ ಓವರ್‌ನಲ್ಲಿ ಸುನಿಲ್ ವಿಕೆಟ್ ಗಳಿಸಿದ ರಾಹುಲ್ ಚಾಹರ್ ಜೊತೆಯಾಟ ಮುರಿದರು.

ಆದರೆ 13ನೇ ಓವರ್‌ನಲ್ಲಿ ಸಾಲ್ಟ್ ಮತ್ತು 16ನೇ ಓವರ್‌ನಲ್ಲಿ ಆ್ಯಂಡ್ರೆ ರಸೆಲ್ (12 ಎಸೆಗಳಲ್ಲಿ 24) ಅವರು ಔಟಾದರು.ಆದರೆ ಕೊನೆಯ ಹಂತದ ಓವರ್‌ಗಳಲ್ಲಿ ವೆಂಕಟೇಶ್ (39; 23ಎ) ಮತ್ತು ನಾಯಕ ಶ್ರೇಯಸ್ ಅಯ್ಯರ್ (28; 10ಎ) ಸೇರಿ ವೇಗ ಹೆಚ್ಚಿಸಿದರು.



ಪಂಜಾಬ್ ಕಿಂಗ್ಸ್ ತಂಡದ ಜಾನಿ ಬೆಸ್ಟೊ ಶತಕ ಸಂಭ್ರಮ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಕೋಲ್ಕತ್ತ ನೈಟ್ ರೈಡರ್ಸ್ 6ಕ್ಕೆ 261 (20 ಓವರ್‌ಗಳಲ್ಲಿ)
ಸಾಲ್ಟ್ ಬಿ ಕರಣ್ 75 (37ಎ, 4X6, 6X6)
ಸುನಿಲ್ ಸಿ ಬೈಸ್ಟೊವ್ ಬಿ ಚಾಹರ್ 71 (32ಎ, 4X9, 6X4)
ವೆಂಕಟೇಶ್ ರನೌಟ್ (ಜಿತೇಶ್.ಶರ್ಮಾ) 39 (23ಎ, 4X3, 6X2)
ರಸೆಲ್ ಸಿ ಪಟೇಲ್ ಬಿ ಅರ್ಷದೀಪ್ 24 (12ಎ, 4X2, 6X2)
ಶ್ರೇಯಸ್ ಸಿ ರಬಾಡ ಬಿ ಅರ್ಷದೀಪ್ 28 (10ಎ, 4X1, 6X3)
ರಿಂಕು ಸಿ ಶರ್ಮಾ ಬಿ ಪಟೇಲ್ 5 (4ಎ, 4X1)
ರಮಣ್‌ದೀಪ್ ಸಿಂಗ್ ಔಟಾಗದೆ 6 (3ಎ)
ಇತರೆ: 13 (ಬೈ 1, ಲೆಗ್‌ಬೈ 1, ನೋಬಾಲ್ 1, ವೈಡ್ 10)
ವಿಕೆಟ್ ಪತನ: 1-138 (ಸುನಿಲ್ ನಾರಾಯಣ್, 10.2), 2-163 (ಫಿಲ್ ಸಾಲ್ಟ್, 12.3), 3-203 (ಆ್ಯಂಡ್ರೆ ರಸೆಲ್, 15.3), 4-246 (ಶ್ರೇಯಸ್ ಅಯ್ಯರ್, 18.3), 5-253 (ರಿಂಕು ಸಿಂಗ್, 19.2), 6-261 (ವೆಂಕಟೇಶ್ ಅಯ್ಯರ್, 19.6)
ಬೌಲಿಂಗ್: ಸ್ಯಾಮ್ ಕರಣ್ 4-0-60-1, ಅರ್ಷದೀಪ್ ಸಿಂಗ್ 4-0-45-2, ಹರ್ಷಲ್ ಪಟೇಲ್ 3-0-48-1, ಕಗಿಸೊ ರಬಾಡ 3-0-52-0, ರಾಹುಲ್ ಚಾಹರ್ 4-0-33-1, ಹರಪ್ರೀತ್ ಬ್ರಾರ್ 2-0-21-0
ಪಂಜಾಬ್ ಕಿಂಗ್ಸ್ 2ಕ್ಕೆ 262 (18.4 ಓವರ್‌ಗಳಲ್ಲಿ)
ಪ್ರಭಸಿಮ್ರನ್ ರನ್‌ಔಟ್ (ನಾರಾಯಣ್) 54 (20ಎ, 4X4, 6X5)
ಬೆಸ್ಟೊ ಔಟಾಗದೇ 108 (48ಎ, 4X8, 6X9)
ರಿಲೀ ಸಿ ಶ್ರೇಯಸ್ ಬಿ ನಾರಾಯಣ್ 26 (16ಎ, 4X1, 6X1)
ಶಶಾಂಕ್ ಔಟಾಗದೇ 68 (28ಎ, 4X2, 6X8)
ಇತರೆ: 6 (ವೈಡ್ 4, ಲೆಗ್ ಬೈ2)
ವಿಕೆಟ್ ಪತನ: 1- 93 (ಪ್ರಭಸಿಮ್ರನ್ ಸಿಂಗ್, 6), 2-178 (ರಿಲೀ ರೂಸೊ, 12.3)
ಬೌಲಿಂಗ್: ದುಷ್ಮಂತ ಚಮೀರಾ 3-0-48-0, ಹರ್ಷಿತ್ ರಾಣಾ 4-0-61-0, ಅನುಕುಲ್ ರಾಯ್ 2-0-36-0, ಸುನಿಲ್ ನಾರಾಯಣ್ 4-0-24-1, ವರುಣ್ ಚಕ್ರವರ್ತಿ 3-0-46-0, ಆ್ಯಂಡ್ರೆ ರಸೆಲ್ 2-0-36-0, ರಮಣದೀಪ್ ಸಿಂಗ್ 0.4-0-9-0
ಪಂದ್ಯದ ಆಟಗಾರ: ಜಾನಿ ಬೆಸ್ಟೊ

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	8	7	1	14	0.698
ಕೋಲ್ಕತ್ತ ನೈಟ್ ರೈಡರ್ಸ್	8	5	3	10	0.972
ಸನ್‌ರೈಸರ್ಸ್ ಹೈದರಾಬಾದ್	8	5	3	10	0.577
ಲಖನೌ ಸೂಪರ್ ಜೈಂಟ್ಸ್	8	5	3	10	0.148
ಚೆನ್ನೈ ಸೂಪರ್ ಕಿಂಗ್ಸ್	8	4	4	8	0.415
ಡೆಲ್ಲಿ ಕ್ಯಾಪಿಟಲ್ಸ್	9	4	5	8	-0.386
ಗುಜರಾತ್ ಟೈಟನ್ಸ್	9	4	5	8	-0.974
ಪಂಜಾಬ್ ಕಿಂಗ್ಸ್	9	3	6	6	-0.187
ಮುಂಬೈ ಇಂಡಿಯನ್ಸ್	8	3	5	6	-0.227
ಆರ್‌ಸಿಬಿ (ಬೆಂಗಳೂರು)	9	2	7	4	-0.721

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (430 ರನ್)

ಪರ್ಪಲ್ ಕ್ಯಾಪ್: ಹರ್ಷಲ್ ಪಟೇಲ್ (ಪಂಜಾಬ್ ಕಿಂಗ್ಸ್) (14 ವಿಕೆಟ್)

ರಾಜಸ್ಥಾನಕ್ಕೆ ಲಖನೌ ಸವಾಲು

ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿ ರಾಹುಲ್ ಬಳಗ

ಲಖನೌ (ಪಿಟಿಐ): ಲಖನೌ ಸೂಪರ್‌ಜೈಂಟ್ಸ್ ತಂಡವು ತನ್ನ ತವರಿನಲ್ಲಿ ಶನಿವಾರ ನಡೆಯಲಿರುವ ರಾಜಸ್ಥಾನ ರಾಯಲ್ಸ್ ವಿರುದ್ಧದ ಪಂದ್ಯದಲ್ಲಿ ಹಿಂದಿನ ಸೋಲಿಗೆ ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿದೆ. ಆದರೆ ಗೆಲುವಿನ ನಾಗಲೋಟದಲ್ಲಿರುವ ಸಂಜು ಸ್ಯಾಮ್ಸನ್ ಬಳಗವು ಅದೇ ಲಯವನ್ನು ಮುಂದುವರಿಸುವ ಹುಮ್ಮಸ್ಸಿನಲ್ಲಿದೆ.

2008ರ ಚಾಂಪಿಯನ್ ರಾಜಸ್ಥಾನ ತಂಡವು ಈ ಋತುವಿನಲ್ಲಿ ಆಡಿರುವ ಎಂಟು ಪಂದ್ಯಗಳಲ್ಲಿ ಏಳರಲ್ಲಿ ಗೆಲುವು ಸಾಧಿಸಿ 14 ಅಂಕಗಳೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದೆ. ಕೆ.ಎಲ್. ರಾಹುಲ್ ಪಡೆಯು ಎಂಟು ಪಂದ್ಯಗಳ ಪೈಕಿ ಐದರಲ್ಲಿ ಜಯ ಸಾಧಿಸಿದೆ. ಕಳೆದ ಎರಡು ಪಂದ್ಯಗಳನ್ನು ಗೆದ್ದಿರುವ ತಂಡವು ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿದೆ.

ರಾಯಲ್ಸ್ ತಂಡವು ಟೂರ್ನಿಯ ಆರಂಭದಲ್ಲಿ ನಾಲ್ಕು ಪಂದ್ಯಗಳಲ್ಲಿ ಸತತವಾಗಿ ಗೆದ್ದಿತ್ತು. ಆದರೆ ಐದನೇ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ವಿರೋಚಿತ ಹೋರಾಟ ಮಾಡಿದರೂ ಸೋತಿತ್ತು. ಅದರ ನಂತರದ ಮೂರು ಪಂದ್ಯಗಳಲ್ಲಿ ಸತತ ಜಯ ಸಾಧಿಸುವ ಮೂಲಕ ಅಗ್ರಸ್ಥಾನಕ್ಕೇರಿದೆ. ಮಾರ್ಚ್ 24ರಂದು ಜೈಪುರದಲ್ಲಿ ನಡೆದಿದ್ದ ಪಂದ್ಯದಲ್ಲಿ ಲಖನೌ ತಂಡವನ್ನು 20 ರನ್‌ಗಳಿಂದ ಮಣಿಸಿದ್ದ ಸಂಜು ಪಡೆ ಮತ್ತೆ ಪಾರಮ್ಯ ಮೆರೆಯುವ ತವಕದಲ್ಲಿದೆ.

ಎದುರಾಳಿ ತಂಡಕ್ಕೆ ಹೋಲಿಸಿದರೆ ರಾಜಸ್ಥಾನ ತಂಡದ ಬ್ಯಾಟಿಂಗ್ ವಿಭಾಗ ಬಲಿಷ್ಠವಾಗಿದೆ. ಅಸ್ಸಾಂ ಬ್ಯಾಟರ್ ರಿಯಾನ್ ಪರಾಗ್ ತಂಡಕ್ಕೆ ಪ್ರಮುಖ ಅಸ್ತ್ರವಾಗಿದ್ದಾರೆ. 22 ವರ್ಷದ ಅವರು ಏಳು ಇನ್ನಿಂಗ್ಸ್‌ಗಳಲ್ಲಿ 63ರ ಸರಾಸರಿಯಲ್ಲಿ 318 ರನ್ ಸೇರಿಸಿ ತಂಡದ ಗರಿಷ್ಠ ಸ್ಕೋರರ್ ಆಗಿದ್ದಾರೆ.

ಆರಂಭದ ಪಂದ್ಯಗಳಲ್ಲಿ ರನ್ ಗಳಿಸಲು ಪರದಾಡಿದ್ದ ಯಶಸ್ವಿ ಜೈಸ್ವಾಲ್ ಫಾರ್ಮ್‌ಗೆ ಮರಳಿರುವುದು ತಂಡದ ಬ್ಯಾಟಿಂಗ್ ಶಕ್ತಿಯನ್ನು ಹೆಚ್ಚಿಸಿದೆ. ಮುಂಬೈ ಇಂಡಿಯನ್ಸ್ ವಿರುದ್ಧದ ಕೊನೆಯ ಪಂದ್ಯದಲ್ಲಿ 180 ರನ್‌ಗಳ ಗುರಿ ಬೆನ್ನಟ್ಟಿದ್ದ ತಂಡಕ್ಕೆ ಜೈಸ್ವಾಲ್ ಆಸರೆಯಾಗಿದ್ದರು. ಅವರು 60 ಎಸೆತಗಳಲ್ಲಿ ಔಟಾಗದೆ 104 ರನ್ ಸಿಡಿಸಿ, 9 ವಿಕೆಟ್‌ಗಳ ಸುಲಭ ಜಯವನ್ನು ತಂದುಕೊಟ್ಟಿದ್ದರು.

ಜೋಸ್ ಬಟ್ಲರ್ ಎರಡು ಶತಕ ಹೊಡೆದಿದ್ದು ಅಮೋಘ ಲಯದಲ್ಲಿದ್ದಾರೆ. ಸಂಜು ನಾಯಕನಿಗೆ ತಕ್ಕ ಆಟವಾಡುತ್ತಿದ್ದಾರೆ. ಅವರು ಎಂಟು ಪಂದ್ಯಗಳಲ್ಲಿ 314 ರನ್ ಕಲೆ ಹಾಕಿದ್ದಾರೆ. ರೋವ್ಮನ್ ಪೊವೆಲ್ ಮತ್ತು ಧ್ರುವ್ ಜುರೇಲ್ ಅವರಿಂದ ಇನ್ನಷ್ಟು ಕೊಡುಗೆ ಬರಬೇಕಿದೆ. ತಂಡದ ಬೌಲಿಂಗ್ ವಿಭಾಗವೂ ಸಮತೋಲನದಲ್ಲಿದೆ. ಅನುಭವಿ ಟ್ರೆಂಟ್ ಬೌಲ್ಟ್, ಅವೇಶ್ ಖಾನ್ ಮತ್ತು ಸಂದೀಪ್ ಶರ್ಮಾ ಎದುರಾಳಿ ತಂಡದ ರನ್ ಕಡಿವಾಣಕ್ಕೆ ಅಸ್ತ್ರವಾಗಿದ್ದಾರೆ. ಮುಂಬೈ ವಿರುದ್ಧದ ಪಂದ್ಯದಲ್ಲಿ ಸಂದೀಪ್ ಐದು ವಿಕೆಟ್ ಗೊಂಚಲು ಸಾಧನೆ ಮೆರೆದಿದ್ದರು. ಮತ್ತೊಂದೆಡೆ ಅನುಭವಿ ಸ್ಪಿನ್ನರ್‌ಗಳಾದ ಯಜುವೇಂದ್ರ ಚಾಹಲ್, ರವಿಚಂದ್ರನ್ ಅಶ್ವಿನ್ ಎದುರಾಳಿ ಬ್ಯಾಟರ್‌ಗಳನ್ನು ಕಟ್ಟಿಹಾಕುವ ಸಾಮರ್ಥ್ಯ ಹೊಂದಿದ್ದಾರೆ. ಚಾಹಲ್ ಈ ಆವೃತ್ತಿಯಲ್ಲಿ 13 ವಿಕೆಟ್ ಗಳಿಸಿದ್ದಾರೆ. ಲಖನೌ ತಂಡದ ಬ್ಯಾಟರ್‌ಗಳಿಂದ ಸ್ಥಿರ ಪ್ರದರ್ಶನ ಬರುತ್ತಿಲ್ಲ. ಅನುಭವಿ ಕ್ವಿಂಟನ್ ಡಿ ಕಾಕ್ ಮತ್ತು ರಾಹುಲ್ ತಂಡಕ್ಕೆ ಉತ್ತಮ ಆರಂಭ ಒದಗಿಸುವ ಸಾಮರ್ಥ್ಯವಿರುವ ಆಟಗಾರರು. ನಿಕೊಲಸ್ ಪೂರನ್ ಅವರ ಸ್ಫೋಟಕ ಶೈಲಿಯ ಬ್ಯಾಟಿಂಗ್‌ನಿಂದಾಗಿ ಮಧ್ಯಮ ಕ್ರಮಾಂಕವು ಉತ್ತಮವಾಗಿದೆ. ಕಳೆದ ಪಂದ್ಯದಲ್ಲಿ ಮಾರ್ಕಸ್ ಸ್ಟೋಯಿನಿಸ್ ಶತಕ ಗಳಿಸಿ ತಂಡದ ಬ್ಯಾಟಿಂಗ್ ಬಲ ಹೆಚ್ಚಿಸಿದ್ದಾರೆ. ಆದರೆ, ದೇವದತ್ತ ಪಡಿಕ್ಕಲ್ ಮತ್ತು ದೀಪಕ್ ಹೂಡಾ ಅವರಿಂದ ಸುಧಾರಿತ ಆಟ ಬರಬೇಕಿದೆ.

ಪಂದ್ಯ ಆರಂಭ: ರಾತ್ರಿ 7.30



ರಾಜಸ್ಥಾನ ರಾಯಲ್ಸ್ ತಂಡದ ರಿಯಾನ್ ಪರಾಗ್ –ಎಎಫ್‌ಪಿ ಚಿತ್ರ

ಮುಖಾಮುಖಿ

4	ಒಟ್ಟು ಪಂದ್ಯ
3	ರಾಜಸ್ಥಾನ ಜಯ
1	ಲಖನೌ ಗೆಲುವು

ಪಂತ್ ಬಳಗಕ್ಕೆ 'ಪ್ಲೇಆಫ್' ಮೇಲೆ ಕಣ್ಣು

ಡೆಲ್ಲಿ ಕ್ಯಾಪಿಟಲ್ಸ್–ಮುಂಬೈ ಇಂಡಿಯನ್ಸ್ ಪಂದ್ಯ ಇಂದು

ನವದೆಹಲಿ (ಪಿಟಿಐ): ಅಮೋಘ ಫಾರ್ಮ್‌ನಲ್ಲಿರುವ ರಿಷಭ್ ಪಂತ್ ಅವರ ಆಟದ ಬಲದಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಅಂಕಪಟ್ಟಿಯಲ್ಲಿ ಒಂದೊಂದೇ ಮೆಟ್ಟಿಲು ಏರುತ್ತಿದೆ.

ಆಡಿರುವ ಒಂಬತ್ತು ಪಂದ್ಯಗಳಲ್ಲಿ ನಾಲ್ಕು ಗೆದ್ದು, ಐದರಲ್ಲಿ ಸೋತಿರುವ ಡೆಲ್ಲಿ ತಂಡವು ಶನಿವಾರ ಹಾರ್ದಿಕ್ ಪಾಂಡ್ಯ ನಾಯಕತ್ವದ ಮುಂಬೈ ಇಂಡಿಯನ್ಸ್ ಎದುರು ಕಣಕ್ಕಿಳಿಯಲಿದೆ.

ಮೊದಲ ಸುತ್ತಿನಲ್ಲಿ ಉಭಯ ತಂಡಗಳು ಮುಖಾಮುಖಿಯಾಗಿದ್ದಾಗ ಮುಂಬೈ ತಂಡವು ಜಯಿಸಿತ್ತು. ಆ ಸೋಲಿನ ಸೇಡು ತೀರಿಸಿಕೊಳ್ಳಲು ಪಂತ್ ಬಳಗ ಸಿದ್ಧವಾಗಿದೆ. ಆದರೆ ಎಂಟನೇ ಸ್ಥಾನದಲ್ಲಿರುವ ಹಾರ್ದಿಕ್ ಬಳಗವೂ ಪ್ಲೇ ಆಫ್‌ಗೆ ಪ್ರವೇಶ ಗಿಟ್ಟಿಸಬೇಕಾದರೆ ಇನ್ನುಳಿದಿರುವ ತನ್ನ ಪಾಲಿನ ಆರು ಪಂದ್ಯಗಳನ್ನು ಜಯಿಸುವ ಒತ್ತಡದಲ್ಲಿದೆ. ಇದರಿಂದಾಗಿ ಈ ಪಂದ್ಯವು ರೋಚಕ ಹಣಾಹಣಿಯಾಗುವ ನಿರೀಕ್ಷೆ ಇದೆ.

ಡೆಲ್ಲಿ ತಂಡವು ಕಳೆದ ನಾಲ್ಕು ಪಂದ್ಯಗಳಲ್ಲಿ ಮೂರು ಜಯ ಸಾಧಿಸಿದ್ದು ಪಾಯಿಂಟ್ ಪಟ್ಟಿಯಲ್ಲಿ ಬಡ್ತಿ ಪಡೆಯಲು ನೆರವಾಗಿದೆ. ಈ ಪಂದ್ಯದಲ್ಲಿಯೂ ಜಯಿಸಿದರೆ, ಪ್ಲೇ ಆಫ್ ನತ್ತ ಸಾಗಲು ತಂಡಕ್ಕೆ ಹೆಚ್ಚಿನ ಬಲ ಬರಲಿದೆ.

ಇನ್ನೊಂದು ಕಡೆ ಮುಂಬೈ ತಂಡವು ತನ್ನ ಆರಂಭಿಕ ಪಂದ್ಯಗಳ ಸೋತ ನಂತರ ಪುಟಿದೆದ್ದು ಆಡುತ್ತಿದೆ. ಸೂರ್ಯಕುಮಾರ್ ಯಾದವ್, ರೋಹಿತ್ ಶರ್ಮಾ, ಇಶಾನ್ ಕಿಶನ್, ತಿಲಕ್ ವರ್ಮಾ ಬ್ಯಾಟಿಂಗ್‌ನಲ್ಲಿ ಮಿಂಚುತ್ತಿದ್ದಾರೆ. ಜಸ್‌ಪ್ರೀತ್ ಬೂಮ್ರಾ, ಗೆರಾಲ್ಡ್ ಕೋಜಿ ಅವರಿರುವ ಬೌಲಿಂಗ್ ಪಡೆಯೂ ಉತ್ತಮವಾಗಿದೆ.

ಡೆಲ್ಲಿ ತಂಡದ ಬ್ಯಾಟಿಂಗ್ ಪಡೆಯ ಬಲ ಹೆಚ್ಚಲು ರಿಷಭ್ ಫಾರ್ಮ್‌ಗೆ ಮರಳಿರುವುದು ಕಾರಣ. ಕಳೆದ ಪಂದ್ಯದಲ್ಲಿ ಅವರ ಅಮೋಘ ಬ್ಯಾಟಿಂಗ್ ಮತ್ತು ನಾಯಕತ್ವದಿಂದ ತಂಡವು ಜಯಿಸಿತ್ತು. ವಿಕೆಟ್‌ಕೀಪಿಂಗ್‌ನಲ್ಲಿಯೂ ಚುರುಕಾಗಿದ್ದಾರೆ. ರಿಷಭ್ ಅವರು ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ಭಾರತ ತಂಡಕ್ಕೆ ಮೊದಲ ವಿಕೆಟ್‌ಕೀಪರ್ ಆಗಿ ತೆರಳುವುದು ಬಹುತೇಕ ಖಚಿತವಾಗಿದೆ. ಜೇಕ್ ಫ್ರೆಸರ್ ಮೆಕ್‌ಗುರ್ಕ್, ಅಕ್ಷರ್ ಪಟೇಲ್ ಕೂಡ ಉತ್ತಮ ಲಯದಲ್ಲಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಟ್ರಿಸ್ಟನ್ ಸ್ಟಬ್ಸ್ ಸ್ಫೋಟಕ ಶೈಲಿಯ ಬ್ಯಾಟಿಂಗ್ ಮೂಲಕ ರನ್ ಸೂರೆ ಮಾಡುವ ಸಮರ್ಥರಾಗಿದ್ದಾರೆ. ಪೃಥ್ವಿ ಶಾ ತಮ್ಮ ಆಟದಲ್ಲಿ ಸ್ಥಿರತೆ ಕಾಪಾಡಿಕೊಂಡರೆ ಉತ್ತಮ ಆರಂಭ ಸಿಗಬಹುದು.

ಸ್ಪಿನ್ನರ್ ಕುಲದೀಪ್ ಯಾದವ್, ವೇಗಿ ಮುಕೇಶ್ ಕುಮಾರ್ ಹಾಗೂ ಖಲೀಲ್ ಅಹಮದ್ ಅವರಿಗೆ ಮುಂಬೈ ಬ್ಯಾಟರ್‌ಗಳನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕುವ ಸವಾಲು ಇದೆ.

ಅನುಭವಿ ಇಶಾಂತ್ ಶರ್ಮಾ ಮತ್ತು ಬ್ಯಾಟರ್ ಡೇವಿಡ್ ವಾರ್ನರ್ ಅವರು ಗಾಯಗೊಂಡಿರುವುದರಿಂದ ಈ ಪಂದ್ಯದಲ್ಲಿ ಆಡುವುದಿಲ್ಲ ಎಂದು ತಂಡದ ನಿರ್ದೇಶಕ ತಿಳಿಸಿದ್ದಾರೆ.

ಪಂದ್ಯ ಆರಂಭ: ರಾತ್ರಿ 3.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್



ರಿಷಭ್ ಪಂತ್ ಮತ್ತು ಕುಲದೀಪ್ ಯಾದವ್



ರೋಹಿತ್ ಶರ್ಮಾ



ಶ್ರೀಯಾ ರಾಜೇಶ್

ಲಕ್ಷಿತಾಗೆ ಬೆಳ್ಳಿ, ಶ್ರೀಯಾಗೆ ಕಂಚು

ದುಬೈ (ಪಿಟಿಐ): ಲಕ್ಷಿತಾ ವಿನೋದ್ ಶಾಂಡಿಲ್ಯಾ ಮತ್ತು ಶ್ರೀಯಾ ರಾಜೇಶ್ ಅವರು ಇಲ್ಲಿ ನಡೆಯುತ್ತಿರುವ 20 ವರ್ಷದೊಳಗಿನವರ ಏಷ್ಯನ್ ಅಥ್ಲೆಟಿಕ್ಸ್‌ನಲ್ಲಿ ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕ ಜಯಿಸಿದರು.

ಇದರೊಂದಿಗೆ ಭಾರತದ ಪದಕ ಗಳಿಕೆಯು 15ಕ್ಕೇರಿತು. ಅದರಲ್ಲಿ ಐದು ಚಿನ್ನ, ಆರು ಬೆಳ್ಳಿ ಹಾಗೂ ಐದು ಕಂಚಿನ ಪದಕಗಳು ಸೇರಿವೆ.

ಶುಕ್ರವಾರ ನಡೆದ ಮಹಿಳೆಯರ 800 ಮೀ ಓಟದಲ್ಲಿ ಲಕ್ಷಿತಾ ಅವರು 2ನಿ, 7.10ಸೆಕೆಂಡುಗಳಲ್ಲಿ ಗುರಿ ತಲುಪಿ ಬೆಳ್ಳಿ ಜಯಿಸಿದರು. ಭಾರತದವರೇ ಆದ ತನ್ವಿ ಮಲಿಕ್ (2ನಿ, 13.42ಸೆ) ಆರನೇ ಸ್ಥಾನ ಪಡದರು.

ಮಹಿಳೆಯರ 400 ಮೀ ಹರ್ಡಲ್ಸ್‌ನಲ್ಲಿ ಶ್ರೀಯಾ 59.20 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಕಂಚು ಪಡೆದರು. ಇದೇ ವಿಭಾಗದಲ್ಲಿ ಭಾರತದ ಜಯವಿದಿಯಾ ಜಗದೀಶ್ ಆರನೇ ಸ್ಥಾನ (1ನಿ,02.06ಸೆ) ಪಡೆದರು.

ಬೆಳಿಗ್ಗೆ ನಡೆದ ಪುರುಷರ 10 ಸಾವಿರ ಮೀಟರ್ಸ್ ರೇಸ್ ವಾಕ್‌ನಲ್ಲಿ ಸಚಿನ್ (45ನಿ, 50.56ಸೆ) ನಾಲ್ಕನೇ ಸ್ಥಾನ ಪಡೆದರು. ಆದರೆ

ದಾಖಲೆ ಬರೆಯುವ ವಿಶ್ವಾಸದಲ್ಲಿ ಅಥ್ಲೀಟ್‌ಗಳು

ನಾಳೆ ಟಿಸಿಎಸ್ ಟೆನ್‌ಕೆ ಓಟ: ಉದ್ಯಾನನಗರಿಗೆ ಬಂದಿಳಿದ ಖ್ಯಾತನಾಮ ಸ್ಪರ್ಧಿಗಳು

ಬೆಂಗಳೂರು: ಟಿಸಿಎಸ್ ವಿಶ್ವ ಟೆನ್‌ಕೆ ಓಟಕ್ಕೆ ಉದ್ಯಾನಗರಿ ಸಜ್ಜಾಗಿದೆ. ಭಾನುವಾರ ಮುಂಜಾನೆ ನಡೆಯುವ ಸ್ಪರ್ಧೆಯಲ್ಲಿ ಮಿಂಚಲು ಅಂತರ ರಾಷ್ಟ್ರೀಯ ಅಥ್ಲೀಟ್‌ಗಳು ಬೆಂಗಳೂರಿಗೆ ಬಂದಿಳಿದಿದ್ದಾರೆ.

ದೀರ್ಘ ಅಂತರದ ಓಟದ ಸ್ಪರ್ಧೆಗಳಲ್ಲಿ ಮುಂಚೂಣಿಯಲ್ಲಿರುವ ಕೆನ್ಯಾ, ಇಥಿಯೊಪಿಯಾ, ಉಗಾಂಡಾ ಓಟಗಾರರು ಪ್ರಮುಖ ಆಕರ್ಷಣೆಯಾಗಿದ್ದಾರೆ. ಈ ಮಧ್ಯೆ ಬೆಂಗಳೂರಿನಲ್ಲಿ ಉಷ್ಣಾಂಶ ಗಣನೀಯವಾಗಿ ಏರಿಕೆಯಾಗಿದೆ.

ಈ ಕುರಿತು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಕೆನ್ಯಾದ 24 ವರ್ಷದ ಓಟಗಾರ್ತಿ ಎಮ್ಮಾಕ್ಯುಲೇಟ್ ಅಚೋಲ್, ವಾತಾವರಣದ ಬಿಸಿ ಅಥವಾ ಶೀತಕ್ಕೆ ನಾವು ಹೇಗೆ ಹೊಂದಿಕೊಳ್ಳುತ್ತೇವೆ ಎಂಬುದು ಮುಖ್ಯವಾಗುತ್ತದೆ. ನಾವು ಹವಾಮಾನವನ್ನು ದೂರಲು ಸಾಧ್ಯವಿಲ್ಲ' ಎನ್ನುವ ಮೂಲಕ ಸ್ಪರ್ಧೆಗೆ ಉಷ್ಣಾಂಶ ಏರಿಕೆ ಅಡ್ಡಿಯಾಗುವುದಿಲ್ಲ ಎಂಬುದನ್ನು ಒತ್ತಿ ಹೇಳಿದರು. ಅವರು ಜನವರಿಯಲ್ಲಿ ವೆಲೆನ್ಸಿಯಾದಲ್ಲಿ ನಡೆದ 10ಕೆ ಓಟವನ್ನು 28.57 ನಿಮಿಷದಲ್ಲಿ ಗುರಿ ತಲುಪಿದ್ದಾರೆ. 29 ನಿಮಿಷಗಳಿಗಿಂತ ಕಡಿಮೆ ಅವಧಿಯಲ್ಲಿ 10ಕೆ ಗುರಿ ಸಾಧನೆ ಮಾಡಿದ ವಿಶ್ವದ ಎರಡನೇ ಓಟಗಾರ್ತಿ ಅವರಾಗಿದ್ದಾರೆ.

ಕೆನ್ಯಾದ 24 ವರ್ಷದ ಲಿಲಿಯನ್ ಕಸಾಯಿತ್ (ವೈಯಕ್ತಿಕ ಶ್ರೇಷ್ಠ 29.32 ನಿ) ಮತ್ತು ಇಥಿಯೋಪಿಯಾದ ಲೆಮ್ಲೆಮ್ ಹೈಲು (ವೈಯಕ್ತಿಕ ಶ್ರೇಷ್ಠ 29.59 ನಿ) ಮಹಿಳೆಯರ ವಿಭಾಗದಲ್ಲಿ ಅಚೋಲ್ ಅವರಿಗೆ ಪೈಪೋಟಿ ನೀಡುವ ಪ್ರಮುಖ ಓಟಗಾರ್ತಿಯರು.

ಪುರುಷರ ವಿಭಾಗದಲ್ಲೂ ಖ್ಯಾತನಾಮ ಓಟಗಾರರು ಕಣಕ್ಕೆ ಇಳಿಯಲಿದ್ದಾರೆ. ವೆಲೆನ್ಸಿಯಾದಲ್ಲಿ ನಡೆದ ಸ್ಪರ್ಧೆಯಲ್ಲಿ 26.59 ನಿಮಿಷದಲ್ಲಿ ಗುರಿಮುಟ್ಟಿ ಮೂರನೇ ಸ್ಥಾನ ಗಳಿಸಿದ ಕೆನ್ಯಾದ ಪೀಟರ್ ಮ್ವಾನಿಕಿ ಸ್ಪರ್ಧೆಗೆ ಸನ್ನದ್ಧರಾಗಿದ್ದಾರೆ. ಅವರಿಗೆ ಸ್ವದೇಶದ ಸ್ನೇಹಿತರೂ ಆಗಿರುವ ಬ್ರಾವಿನ್ ಕಿಪ್ಟೂ (ವೈಯಕ್ತಿಕ ಶ್ರೇಷ್ಠ 27.02 ನಿ) ಮತ್ತು ಬ್ರೇವಿನ್ ಕಿಪ್ರಾಪ್ (ವೈಯಕ್ತಿಕ ಶ್ರೇಷ್ಠ 27.16 ನಿ) ಕಠಿಣ ಸವಾಲೊಡ್ಡುವ ನಿರೀಕ್ಷೆಯಿದೆ.

'ನಾವು ಯಾರೂ ಓಟದ ಹಾದಿಯನ್ನು ಇನ್ನೂ ನೋಡಿಲ್ಲ. ಶನಿವಾರ ಬೆಳಿಗ್ಗೆ 6 ಕಿ.ಮೀ. ಜಾಗಿಂಗ್ ಮಾಡುವ ಯೋಚನೆ ಇದೆ. ಭಾನುವಾರ ಬೆಳಿಗ್ಗೆ ಓಟಕ್ಕೆ ಸಿದ್ಧರಾಗುತ್ತೇವೆ' ಎಂದು ಮ್ವಾನಿಕಿ ಹೇಳಿದರು.

ಹೊಸ ದಾಖಲೆ ನಿರ್ಮಾಣದ ಕುರಿತು ಪ್ರಶ್ನೆಯೊಂದಿಗೆ ಉತ್ತರಿಸಿದ ಬ್ರಾವಿನ್ ಕಿಪ್ಟೂ, 'ದಾಖಲೆ ಕುರಿತು ಈಗಲೇ ಹೇಳುವುದು ಕಷ್ಟ. ಆದರೆ, ದಾಖಲೆ ನಿರ್ಮಾಣವಾದರೂ ಅಚ್ಚರಿಯಿಲ್ಲ' ಎಂದು ಹೇಳಿದರು.

ಆಸ್ಟ್ರೇಲಿಯಾ, ಬೆಹರೇನ್, ಜಪಾನ್, ಮೊರಾಕ್ಕೊ, ನೆದರ್ಲೆಂಡ್ಸ್, ಅಮೆರಿಕದ ಓಟಗಾರರು ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ.



ಅಂತರರಾಷ್ಟ್ರೀಯ ಅಥ್ಲೀಟ್‌ಗಳಾದ (ಎಡದಿಂದ) ಪೀಟರ್ ಮ್ವಾನಿಕಿ, ಬ್ರಾವಿನ್ ಕಿಪ್ಟೂ, ಬ್ರೇವಿನ್ ಕಿಪ್ರಾಪ್, ಲೆಮ್ಲೆಮ್ ಹೈಲು, ಲಿಲಿಯನ್ ಕಸಾಯಿತ್ ಮತ್ತು ಎಮ್ಮಾಕ್ಯುಲೇಟ್ ಅಚೋಲ್ – ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಕ್ರಿಕೆಟ್‌ಗೆ ವಿದಾಯ ಹೇಳಿದ ಬಿಸ್ಮಾ

ಕರಾಚಿ (ಪಿಟಿಐ): ಅಚ್ಚರಿಯ ಬೆಳವಣಿಗೆಯೊಂದರಲ್ಲಿ ಪಾಕಿಸ್ತಾನದ ಪ್ರಮುಖ ಕ್ರಿಕೆಟ್ ಆಟಗಾರ್ತಿ, ಮಾಜಿ ನಾಯಕಿ ಬಿಸ್ಮಾ ಮರೂಫ್ ಅವರು ತಕ್ಷಣದಿಂದ ಜಾರಿಗೆ ಬರುವಂತೆ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಗುರುವಾರ ನಿವೃತ್ತಿ ಘೋಷಿಸಿದ್ದಾರೆ.

32 ವರ್ಷದ ಬಿಸ್ಮಾ ಫಿಟ್ನೆಸ್ ಕಾರಣದಿಂದ, ನಂತರ 2021ರ ಆಗಸ್ಟ್‌ನಲ್ಲಿ ಹೆಣ್ಣುಮಗುವಿಗೆ ಜನ್ಮವಿತ್ತ ನಂತರ ಕ್ರಿಕೆಟ್‌ನಿಂದ ದೀರ್ಘಕಾಲ ದೂರವಿದ್ದರು.

ನ್ಯೂಜಿಲೆಂಡ್‌ನಲ್ಲಿ ನಡೆದ 2022ರ ವಿಶ್ವಕಪ್ ಸಮಯದಲ್ಲಿ ಅವರು ತಮ್ಮ ಮಗುವನ್ನು ಜೊತೆಗೆ ಕರೆದೊಯ್ದಿದ್ದು ಸುದ್ದಿಯಾಗಿತ್ತು.ಎಡಗೈ ಬ್ಯಾಟರ್ ಮತ್ತು ಲೆಗ್ ಸ್ಪಿನ್ನರ್ ಆಗಿರುವ ಬಿಸ್ಮಾ 2006ರಲ್ಲಿ ಭಾರತ ವಿರುದ್ಧ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಇದುವರೆಗೆ 276 ಅಂತರರಾಷ್ಟ್ರೀಯ ಪಂದ್ಯ ಆಡಿದ್ದು, 33 ಅರ್ಧಶತಕಗಳು ಸೇರಿದಂತೆ 6,262 ರನ್‌ಗಳನ್ನು ಗಳಿಸಿದ್ದಾರೆ. 80 ವಿಕೆಟ್‌ಗಳನ್ನೂ ಪಡೆದಿದ್ದಾರೆ.

ಸ್ಕ್ವಾಷ್: ಸೆಂಥಿಲ್ ಕ್ವಾರ್ಟರ್ ಫೈನಲ್‌ಗೆ

ನವದೆಹಲಿ (ಪಿಟಿಐ): ಭಾರತದ ಸ್ಕ್ವಾಷ್ ಆಟಗಾರ ವೆಲವನ್ ಸೆಂಥಿಲ್‌ಕುಮಾರ್ ಅವರು ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಪಿಎಸ್‌ಎ ಚಾಲೆಂಜರ್ ಟೂರ್‌ನ ಪುರುಷರ ಸಿಂಗಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಆರಂಭಿಕ ಸುತ್ತಿನಲ್ಲಿ ಬೈ ಪಡೆದಿದ್ದ ರಾಷ್ಟ್ರೀಯ ಚಾಂಪಿಯನ್ ಸೆಂಥಿಲ್‌ಕುಮಾರ್, ಎರಡನೇ ಸುತ್ತಿನಲ್ಲಿ 11-4, 11-6, 11-7 ರಿಂದ ಫ್ರೆಂಚ್ ಆಟಗಾರ ಮ್ಯಾಟಿಯೊ ಕ್ಯಾರೊಗೆಟ್ ಅವರನ್ನು ಸೋಲಿಸಿದರು.

29 ನಿಮಿಷ ನಡೆದ ಹೋರಾಟದಲ್ಲಿ ಅಗ್ರಶ್ರೇಯಾಂಕದ ಸೆಂಥಿಲ್ ಪಾರಮ್ಯ ಮೆರೆದರು. ಅವರು ಮುಂದಿನ ಸುತ್ತಿನಲ್ಲಿ ಐದನೇ ಶ್ರೇಯಾಂಕದ ಜೇಕಬ್ ಸೊಲ್ನಿಕಿ (ಜೆಕ್ ಗಣರಾಜ್ಯ) ಅವರನ್ನು ಎದುರಿಸಲಿದ್ದಾರೆ.

ಅಮೆರಿಕದಲ್ಲಿ ನಡೆಯುತ್ತಿರುವ ಪಿಎಸ್‌ಎ ಚಾಲೆಂಜರ್ ಟೂರ್‌ನ ಮಹಿಳೆಯರ ಸಿಂಗಲ್ಸ್‌ನಲ್ಲಿ ಭಾರತದ ಆಕಾಂಕ್ಷಾ ಸಾಲುಂಕೆ ಎಂಟರ ಘಟ್ಟ ಪ್ರವೇಶಿಸಿದರು. ನಾಲ್ಕನೇ ಶ್ರೇಯಾಂಕದ ಆಕಾಂಕ್ಷಾ ಮೊದಲ ಸುತ್ತಿನಲ್ಲಿ ಬೈ ಪಡೆದಿದ್ದರು.

ಎರಡನೇ ಸುತ್ತಿನಲ್ಲಿ ಅವರು 11-8, 11-2, 11-9 ರಿಂದ ಗ್ವಾಟೆಮಾಲಾದ ವಿನಿಫರ್ ಬೊನಿಲ್ಲಾ ಅವರನ್ನು ಹಿಮ್ಮೆಟ್ಟಿಸಿದರು. ಅವರು ಮುಂದಿನ ಸುತ್ತಿನಲ್ಲಿ ಉಕ್ರೇನ್‌ನ ಅಲಿನಾ ಬುಷ್ಮಾ ವಿರುದ್ಧ ಸೆಣಸಾಡುವರು.



ವೆಲವನ್

'ಟಿ20: ವಿರಾಟ್–ರೋಹಿತ್ ಇನಿಂಗ್ಸ್ ಆರಂಭಿಸಲಿ'

ನವದೆಹಲಿ (ಪಿಟಿಐ): ಮುಂಬರಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತ ತಂಡಕ್ಕೆ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರು ಇನಿಂಗ್ಸ್ ಆರಂಭಿಸಿದರೆ, ರಿಂಕು ಶರ್ಮಾ ಮತ್ತು ಶಿವಂ ದುಬೆ ಅವರಂತಹ ಫಿನಿಷರ್‌ಗಳಿಗೆ ಸ್ಥಾನ ಸಿಗಬಹುದು ಎಂದು ಕ್ರಿಕೆಟ್ ವೀಕ್ಷಕ ವಿವರಣೆಗಾರ ಇರ್ಫಾನ್ ಪಠಾಣ್ ಹೇಳಿದರು.

2007ರಲ್ಲಿ ಟಿ20 ವಿಶ್ವಕಪ್ ಜಯಿಸಿದ್ದ ಭಾರತ ತಂಡದಲ್ಲಿ ಆಡಿದ್ದ ಇರ್ಫಾನ್ ಶುಕ್ರವಾರ ಸ್ಟಾರ್ ಸ್ಪೋರ್ಟ್ಸ್ ವಾಹಿನಿ ಆಯೋಜಿಸಿದ್ದ 'ಟಿಕೆಟ್ ಟು ವರ್ಲ್ಡ್ ಕಪ್' ಪ್ರೆಸ್ ರೂಮ್ ಶೋನಲ್ಲಿ ಅವರು ಮಾತನಾಡಿದರು.

'ಒಂದೊಮ್ಮೆ ವಿರಾಟ್ ಇನಿಂಗ್ಸ್ ಆರಂಭಿಸಿದರೆ, 11 ಆಟಗಾರರ ಆಯ್ಕೆಯ ಮೇಲೆ ಪರಿಣಾಮ ಬೀರಲಿದೆ. ಆಗ ಶಿವಂ ದುಬೆ ಆಡುವ ಅವಕಾಶ ಹೆಚ್ಚಾಗಲಿದೆ. ಅಲ್ಲದೇ ರಿಂಕು ಸಿಂಗ್ ಅವರನ್ನೂ ಆಯ್ಕೆ ಮಾಡಿಕೊಳ್ಳಬಹುದು. ಅಲ್ಲದೇ ಐವರು ಪರಿಣತ ಬೌಲರ್‌ಗಳಿಗೂ ಅವಕಾಶ ಸಿಗಬಹುದು' ಎಂದು ಅಭಿಪ್ರಾಯಪಟ್ಟರು.



ಇರ್ಫಾನ್ ಪಠಾಣ್

ಉದಕಮಂಡಲ ರೇಸ್

ಟ್ರೂತ್ ಇನ್ ವೈನ್ ಗೆಲ್ಲುವ ನಿರೀಕ್ಷೆ

ಹಿಲ್ ಸ್ಟೆಮಿನ ಕಪ್ ಶನಿವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಟ್ರೂತ್ ಇನ್ ವೈನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಬೆಳಿಗ್ಗೆ 11:00ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮೊಮೆಂಟಸ್ 2, ಜಾಜರ 5, ಸಾರೊ ಸೂಪರ್‌ಫಾಸ್ಟ್ 6
2ನೇ ರೇಸ್: ಕಿಂಗ್ಸ್ ಬೆಟಾಲಿಯನ್ 2, ಚಾರುಕಲಾ 6, ಕ್ರಿಸ್ಪಿ 7
3ನೇ ರೇಸ್: ಅಬ್ನೆಗೇಟರ್ 4, ಮೆಮೋರಿ ಲೇನ್ 6, ಜಿಂಜರ್‌ಸ್ನಾಪ್ 5
4ನೇ ರೇಸ್: ಟ್ರೂತ್ ಇನ್ ವೈನ್ 6, ಆಲ್ಪಾ ಡೊಮಿನೊ 5, ರಾಯಲ್ ಬೆರೋನ್ 2
5ನೇ ರೇಸ್: ನಾಟಿ ಇನ್ ಬ್ಲೂ 5, ಡೆಸ್ಪಾಸಿಟೊ 9, ಸೇಂಟ್ ಎಮಿಲಿಯೊನ್ 6
6ನೇ ರೇಸ್: ಲೆಬುವಾ 3, ಸ್ಟೋಲನ್ ಗ್ಲ್ಯಾನ್ಸ್ 8, ದಿ ರೆಬೆಲ್ 9
7ನೇ ರೇಸ್: ಸಲೊಮಿ 1, ಲೇಡಿ ಲಕ್ 2, ಬ್ಲೂ ಐಯ್ಡ್ ಬಾಯ್ 5

ಉತ್ತಮ ಬೆಟ್: ನಾಟಿ ಇನ್ ಬ್ಲೂ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ

ಪ್ರಶಸ್ತಿ ಉಳಿಸಿಕೊಳ್ಳುವ ವಿಶ್ವಾಸದಲ್ಲಿ ಭಾರತ

ಚೆಂಗ್ಡು, ಚೀನಾ (ಪಿಟಿಐ): ಅನುಭವಿ ಆಟಗಾರರನ್ನು ಒಳಗೊಂಡ ಭಾರತ ಪುರುಷರ ತಂಡವು ಶನಿವಾರ ಇಲ್ಲಿ ಆರಂಭವಾಗುವ ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಅಭಿಯಾನ ಆರಂಭಿಸಲಿದೆ.

2022ರಲ್ಲಿ ಭಾರತ ಪುರುಷರ ತಂಡವು 'ವಿಶ್ವ ಚಾಂಪಿಯನ್‌ಷಿಪ್' ಎಂದು ಪರಿಗಣಿಸಲ್ಪಟ್ಟ ಥಾಮಸ್ ಕಪ್ ಕಿರೀಟವನ್ನು ಮೊದಲ ಬಾರಿಗೆ ಗೆದ್ದಿತ್ತು. ಇದೀಗ ಚೀನಾದ ಚೆಂಗ್ಡುನಲ್ಲಿ 33ನೇ ಆವೃತ್ತಿ ನಡೆಯುತ್ತಿದ್ದು, ಅಲ್ಲೂ ಭಾರತ ತಂಡವು ಪರಾಕ್ರಮ ಮುಂದುವರಿಸುವ ಛಲದಲ್ಲಿದೆ.

ಎರಡು ವರ್ಷದ ಹಿಂದೆ ಬ್ಯಾಂಕಕ್‌ನಲ್ಲಿ ಪ್ರಶಸ್ತಿ ಗೆದ್ದು ಇತಿಹಾಸ ನಿರ್ಮಿಸಿದ್ದ ಭಾರತ ತಂಡದಲ್ಲಿದ್ದ ಆಟಗಾರರೇ ಈ ಬಾರಿಯೂ ತಂಡದಲ್ಲಿದ್ದಾರೆ. ಭಾರತವು ಕಳೆದ ಬಾರಿಯ ರನ್ನರ್ಸ್ ಅಪ್ ಇಂಡೊನೇಷ್ಯಾ, ಥಾಯ್ಲೆಂಡ್ ಮತ್ತು ಇಂಗ್ಲೆಂಡ್ ತಂಡಗಳೊಂದಿಗೆ 'ಸಿ' ಗುಂಪಿನಲ್ಲಿ ಸ್ಥಾನ ಪಡೆದಿದೆ. ಹಾಲಿ ವಿಶ್ವ ಚಾಂಪಿಯನ್ ಕುನ್ಲಾವುಟ್ ವಿಟಿಡ್‌ಸರ್ನ್ ಮತ್ತು ಪನಿಚ್ಛಾಫೋನ್ ತೀರರತ್ಸಕುಲ್ ಅವರನ್ನು ಒಳಗೊಂಡ ಥಾಯ್ಲೆಂಡ್ ವಿರುದ್ಧ ಭಾರತವು ಅಭಿಯಾನ ಆರಂಭಿಸಲಿದೆ.

ಹಿಂದಿನ ಆವೃತ್ತಿಯ ಫೈನಲ್‌ನಲ್ಲಿ ಭಾರತವು 3–0 ಯಿಂದ 14 ಬಾರಿಯ ಚಾಂಪಿಯನ್ ಇಂಡೊನೇಷ್ಯಾ ತಂಡವನ್ನು ಮಣಿಸಿತ್ತು. ಇಂಡೊನೇಷ್ಯಾ ತಂಡದಲ್ಲಿ ಈ ಬಾರಿಯೂ ಅನುಭವಿ ಆಟಗಾರರಿದ್ದಾರೆ.

ವಿಶ್ವ ರ್ಯಾಂಕಿಂಗ್‌ನಲ್ಲಿ 9ನೇ ಸ್ಥಾನದಲ್ಲಿರುವ ಎಚ್.ಎಸ್. ಪ್ರಣಯ್ ಅವರು ಭಾರತ ತಂಡಕ್ಕೆ ಉತ್ತಮ ಆರಂಭ ನೀಡುವ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಫ್ರೆಂಚ್ ಓಪನ್ ಮತ್ತು ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ಗಳಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದ ವಿಶ್ವದ 13ನೇ ರ್ಯಾಂಕ್‌ನ ಲಕ್ಷ್ಯ ಸೇನ್ ಅವರ ಮೇಲೂ ನಿರೀಕ್ಷೆಯ ಭಾರ ಹೆಚ್ಚಿದೆ. 2022ರ ಆವೃತ್ತಿಯಲ್ಲಿ ಎಲ್ಲಾ ಆರು ಪಂದ್ಯಗಳನ್ನು ಗೆದ್ದಿದ್ದ ಕಿದಂಬಿ ಶ್ರೀಕಾಂತ್ ಈ ಬಾರಿ ಲಯ ಕಂಡುಕೊಳ್ಳಲು ಪರದಾಡುತ್ತಿದ್ದಾರೆ. ಪ್ರಿಯಾಂಶು ರಾಜಾವತ್ ಮತ್ತು ಕಿರಣ್ ಜಾರ್ಜ್ ಅವರೂ ತಂಡದಲ್ಲಿದ್ದಾರೆ.

ಅಮೋಘ ಲಯದಲ್ಲಿರುವ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಡಬಲ್ಸ್‌ನಲ್ಲಿ ಭಾರತದ ಅಭಿಯಾನದ ಮುಂಚೂಣಿಯಲ್ಲಿರುತ್ತಾರೆ. ಎರಡನೇ ಡಬಲ್ಸ್ ಜೋಡಿ ಧ್ರುವ್ ಕಪಿಲ ಮತ್ತು ಎಂ.ಆರ್. ಅರ್ಜುನ್ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದೆ.



ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ

ಉಬರ್ ಕಪ್: ಪಿ.ವಿ. ಸಿಂಧು ಗೈರು

ಭಾರತದ ಮಹಿಳೆಯರ ತಂಡವು ಪಿ.ವಿ. ಸಿಂಧು ಸೇರಿದಂತೆ ಅನುಭವಿ ಆಟಗಾರ್ತಿಯರ ಅನುಪಸ್ಥಿತಿಯಲ್ಲಿ ಉಬರ್ ಕಪ್ ಟೂರ್ನಿಯಲ್ಲಿ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದೆ. ಭಾರತದ ಮಹಿಳಾ ತಂಡವನ್ನು ಅಶ್ಮಿತಾ ಚಾಲಿಹಾ ಮುನ್ನಡೆಸಲಿದ್ದಾರೆ. 'ಎ' ಗುಂಪಿನಲ್ಲಿ ಸ್ಥಾನ ಪಡೆದಿರುವ ಭಾರತ ತಂಡವು ಅನುಭವಿ ಆಟಗಾರರನ್ನು ಹಿಂದಿರುವ ಕೆನಡಾ ತಂಡದ ವಿರುದ್ಧ ತಮ್ಮ ಅಭಿಯಾನ ಆರಂಭಿಸಲಿದೆ.

ಅಶ್ಮಿತಾ ಅವರೊಂದಿಗೆ ಚೊಚ್ಚಲ ಏಷ್ಯಾ ಟೀಮ್ ಚಾಂಪಿಯನ್‌ಷಿಪ್ ಪ್ರಶಸ್ತಿ ಗೆದ್ದ ಭಾರತ ತಂಡದಲ್ಲಿದ್ದ ರಾಷ್ಟ್ರೀಯ ಚಾಂಪಿಯನ್ ಅನ್ಮೋಲ್ ಖಾರ್ಬ್, ಇಶಾರಾಣಿ ಬರೂವಾ ಮತ್ತು 15 ವರ್ಷದ ತನ್ವಿ ಶರ್ಮಾ ಸಿಂಗಲ್ಸ್‌ನಲ್ಲಿ ಪ್ರತಿಭೆಯನ್ನು ಪ್ರದರ್ಶಿಸಲಿದ್ದಾರೆ. ಡಬಲ್ಸ್‌ನಲ್ಲಿ ಟ್ರೀಸಾ ಜೋಲಿ–ಗಾಯತ್ರಿ ಗೋಪಿಚಂದ್ ಮತ್ತು ಅಶ್ವಿನಿ ಪೊನ್ನಪ್ಪ–ತನಿಶಾ ಕ್ರಾಸ್ಟೊ ಅವರ ಅನುಪಸ್ಥಿತಿಯಲ್ಲಿ ಶ್ರುತಿ ಮಿಶ್ರಾ, ಪ್ರಿಯಾ ಕೊಂಜೆಂಗ್‌ಬಾಮ್, ಸಿಮ್ರಾನ್ ಸಿಂಘಿ, ರಿತಿಕಾ ಥಾಕರ್ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.



ಅಶ್ಮಿತಾ

ಆರ್ಚರಿ: ಸೆಮಿಗೆ ದೀಪಿಕಾ ಕುಮಾರಿ


ದೀಪಿಕಾಕುಮಾರಿ

ಶಾಂಘೈ (ಪಿಟಿಐ): ಒಲಿಂಪಿಯನ್ ಆರ್ಚರಿ ಪಟು ದೀಪಿಕಾ ಕುಮಾರಿ ಅವರು ಕೊರಿಯಾದ ಜಿಯೊನ್ ಹುನ್ಯಂಗ್ ಅವರನ್ನು ಸೋಲಿಸಿ ವಿಶ್ವಕಪ್ ಆರ್ಚರಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದರು. ಕಂಪೌಂಡ್ ವಿಭಾಗದಲ್ಲಿ ಸ್ಪರ್ಧಿಗಳು ಭಾರತಕ್ಕೆ ನಾಲ್ಕನೇ ಪದಕ ಖಚಿತಪಡಿಸಿದರು.

ಮೂರು ಬಾರಿಯ ಒಲಿಂಪಿಯನ್, ವಿಶ್ವ ಕ್ರಮಾಂಕದಲ್ಲಿ 142ನೇ ಸ್ಥಾನದಲ್ಲಿರುವ ದೀಪಿಕಾ, ಮಹಿಳೆಯರ ರಿಕರ್ವ್ ವೈಯಕ್ತಿಕ ಕ್ವಾರ್ಟರ್ ಫೈನಲ್‌ನಲ್ಲಿ ಜಿಯೊನ್ ಅವರನ್ನು 6-4 (27-28, 27-27, 29-28, 29-27, 28-28) ಅಂತರದಿಂದ ಸೋಲಿಸಿದರು. ಮಗುವಿನ ತಾಯಿಯಾದ ನಂತರ ವಿಶ್ವ ಸ್ಪರ್ಧಾ ಕಣಕ್ಕೆ ಮರಳಿರುವ ಅವರು ಭರವಸೆಯ ಹೆಜ್ಜೆಗಳನ್ನಿಟ್ಟರು.

ಮೊದಲ ಸೆಟ್ ಅನ್ನು 27-28 ರಿಂದ ಸೋತಿದ್ದ ದೀಪಿಕಾ, ಎರಡನೇ ಸೆಟ್ ಅನ್ನು 27-27ರಿಂದ ಸಮಬಲ ಗೊಳಿಸಿದರು. ಒಂದು ಅಂಕದ ಮೂಲಕ ಮೂರನೇ (29-28) ಸೆಟ್ ಗೆದ್ದರು.

ದೀಪಿಕಾ ಅವರು 2021ರ ನಂತರ ಈಗ ಮತ್ತೊಮ್ಮೆ ಚಿನ್ನ ಗೆಲ್ಲುವ ಅವಕಾಶವಿದೆ. ಅದಕ್ಕಾಗಿ ಅವರು ಮುಂದಿನ ಹಂತದಲ್ಲಿ ಕೊರಿಯಾದ ಪ್ರತಿಸ್ಪರ್ಧಿಯನ್ನು ಸೋಲಿಸಬೇಕು.

ಏಳನೇ ಶ್ರೇಯಾಂಕದ ಕೊರಿಯಾದ ನಾಮ್ ಸುಹ್ಯೋನ್ ಸೆಮಿಫೈನಲ್‌ನಲ್ಲಿ ದೀಪಿಕಾ ಅವರನ್ನು ಎದುರಿಸಲಿದ್ದಾರೆ. ಎರಡನೇಯ ಸೆಮಿಯಲ್ಲಿ ಅಗ್ರ ಶ್ರೇಯಾಂಕಿತ ವಿಶ್ವದ ಎರಡನೇ ರ್‍ಯಾಂಕ್ ಆಟಗಾರ್ತಿ, ಕೊರಿಯಾದ ಲಿಮ್ ಸಿಹ್ಯಾನ್ ಅವರು ಚೀನಾದ ಲಿ ಜಿಯಾಮನ್ ಅವರನ್ನು ಎದುರಿಸಲಿದ್ದಾರೆ.


ಪ್ರಶಸ್ತಿಯೊಂದಿಗೆ ಅನುರಾಗ್ ಎಸ್. ಮತ್ತು ಅನ್ವಿ ಪಿ.

ಟೆನಿಸ್: ಅನುರಾಗ್, ಅನ್ವಿಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ಅನುರಾಗ್ ಎಸ್. ಮತ್ತು ಅನ್ವಿ ಪಿ. ಅವರು ಇಲ್ಲಿನ ಟಾಪ್‌ಸ್ಪಿನ್ ಟೆನಿಸ್ ಅಕಾಡೆಮಿ ಅಂಗಣದಲ್ಲಿ ನಡೆದ ಏಷ್ಯನ್ ರ್‍ಯಾಂಕಿಂಗ್ 16 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್ ಕಿರೀಟವನ್ನು ಮುಡಿಗೇರಿಸಿಕೊಂಡರು.

ಶುಕ್ರವಾರ ನಡೆದ ಬಾಲಕರ ಫೈನಲ್‌ನಲ್ಲಿ ಶ್ರೇಯಾಂಕರಹಿತ ಅನುರಾಗ್ 6-1, 6-4 ರಿಂದ ಏಳನೇ ಶ್ರೇಯಾಂಕದ ಶ್ರೀಕರ್ ದೋಣಿ ಅವರನ್ನು ಮಣಿಸಿದರು. ಬಾಲಕಿಯರ ಫೈನಲ್‌ನಲ್ಲಿ ಅನ್ವಿ 6–4, 6–1ರಿಂದ ದೀಪಶಿಖಾ ವಿ. ಅವರನ್ನು ಸೋಲಿಸಿದರು.

ಅನುರಾಗ್ ಮತ್ತು ಅನ್ವಿ ಕ್ರಮವಾಗಿ 300 ಎಟಿಎಫ್ ಪಾಯಿಂಟ್ಸ್ ಕಲೆಗಳಿಸಿದರು. ರನ್ನರ್ಸ್ ಅಪ್ ಶ್ರೀಕರ್ ಮತ್ತು ದೀಪಶಿಖಾ 258 ಎಟಿಎಫ್ ಅಂಕ ಪಡೆದರು.

ಬಾಲಕರ ಡಬಲ್ಸ್‌ನಲ್ಲಿ ಆದಿತ್ಯ ಬಿಕ್ರಮ್ ಆಚಾರ್ಯ– ತೇಜಸ್ ರವಿ ಜೋಡಿಯು 7-6(5), 6-7(4), 10-6ರಿಂದ ಕ್ರಿಶಾಂಕ್ ಜೋಶಿ– ಶಾರ್ದೂಲ್ ಖವಾಲೆ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದರು. ಬಾಲಕಿಯರ ಡಬಲ್ಸ್‌ನಲ್ಲಿ ಮೇಘನಾ ಜಿ.ಡಿ. ಮತ್ತು ಶೈವಿ ಗೌರವ್ 6-2, 6-3ರಿಂದ ಮೇಹಾ ಪಾಟೀಲ ಮತ್ತು ರಿದ್ಧಿ ಶಿಂಧೆ ಅವರನ್ನು ಸೋಲಿಸಿ ಚಾಂಪಿಯನ್ ಆದರು.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331



REAL ESTATE SELLING

Sites

Intl Airport Road

30x40 Converted Plots @ 2,00,000/-
166/- per sq.ft, 90 minutes Journey from Yelahanka
Clear Documents | Ready for Registration
9343510635 | 9010559539

Banashankari

BSK 6TH Stage, 11th Block, BDA 20X30 North face allottee Site, excellent Vastu for Sale. Price 75 lakhs. 9986075122, 8618922501

SALE: BANASHANKARI 6th Stage, 9th Block, 30x40, West facing Rs.98 lacs, 40x60, North facing, Rs.1.98 Crores. Contact: 9845259332

J P Nagar

SALE 30X60, North Facing. In Best Location- JP Nagar 1st Phase, Nearer to Metro Banashankari temple, Genuine buyer. Contact- 9481281188/ 9916257053

Kempegowda Layout

***NADAPRABHU* KEMPEGOWDA** LAYOUT 1st Block 30x40 N/F,3rd Block 50x80 N/F,7th Block 30x40 W/F.Contact:9686469799

Mysore Road

KETHOHALLI BIGBANYAN Tree 30x50 4 Sites, East, 2200/-Sqft. 5 KM- Challaghatta Metro. 9945724472, 7829830333.

Nelamangala

"NELAMANGALA RASHI DEVELOPERS 30x50 SOUTH FACING SITE FOR SALE CLOSE TO 'D'MART TUMKUR HIGHWAY. 9845268611"

Vishweshwariah Layout

DIRECT OWNER 40x60 North, BDA Aloted Site Sale Vishveswaraiah Layout Block-2, Prime Location, ₹.9000/-. Contact: 7411994069

Chennapatna

BMICAPA APPROVED Residential DC Converted, 3 Acre Land for Sale, Channapatna Town, Nagarasabhe Limits. 250 Mtrs from NH-275. Price 7.5Cr per Acre. Genuine buyers only (Brokers Excuse) Call- 9845188137

House

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms with attached bathroom, built with teak wood, Italian Marble Tiles, at BEML Layout, Basaveshwaranagar, Bangalore. Clear Titles & 'A' Katha. Rs.5.50 Crores. Party going out of station, Immediate Registration, Contact: 9845765559/ 9845043282

Kanakapura Road

40X60 SITE, 2 BHK HOUSE West, Kendriyanagara, 1.5 KM. From Talaghattapura Metro. 2.40Cr. 9945724472, 7829830333.







ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Flat

Dollars Colony

FLAT SALE Gowri Apartments, Beside RK.Gardens, New BEL Road, Bangalore-54, 1150 Sqft (2BHK Carparking). 72 Lakhs. 9901578545, 9738344639.

Hanumanthnagar

3BHK FLAT (furnished) sale Rs. 1.2 Cr. #726, 6th Cross, Webster School Road, Ashokanagar B'lore-50 call 9945455503

Mysore Road

MYSORE ROAD AVAILABLE LEASE THREE BHK FLAT RUPEES THIRTY LAKHS MAINTENANCE CHARGES BY OWNER: 9738223432

Uttarahalli

POORNAPRAGNA LAYOUT Sale 3BHK Deluxe Flats 2250sft 2Carpark & 1850sft 1,Carpark. Lift.& Generator Back-up, All Amenities. Call: 9620249988.

Agricultural Land

Mysore Road

"CHANAPATNA 17`GUNTA FULLY CHAIN LINK FENCED. MANGO, COCONUT TREES TAR-ROAD ATTACH VILLAGE 55 Lakhs. 9449008336"

Commercial Building

Bannerghatta Road

COMMERCIAL BUILDING Sale 40X60 West, 8000 Sft Near Vijaya Bank Layout RTO Lift Basement Parking Ground 1st, 2nd 6.50cr: 8095055449

REAL ESTATE BUYING

Sites

Kanakapura Road

WANTED/ BUYING SITE 30x40, 40x60 Anjanapura BDA Banashankari 6th Stage BDA, Doddakallasandra, Vajarahalli, Gubblala Konanakunte Cross Agents Excuse 9008259222

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

COMMERCIAL FOR Rent G+3, New Building 2000 sq.ft each floor. New Police Station Road. Ramamurthynagar:- 9483009154.

ADMISSION CORNER

V.E.T. SCHOOL
V.V. Puram, Bengaluru-560004
Web: vvpuram.vetschool.edu.in
ACADEMIC ACHIEVERS



ADMISSION OPEN FOR THE ACADEMIC YEAR 2024-2025
Pre-Nursery to IX std
CONTACT: 93535 98316, 83109 45699

JOB OPPORTUNITIES

Marketing & Sales

SALES REPRESENTATIVES

Area-wise **SALES REPRESENTATIVES** required **throughout Karnataka** for a leading Marketing Company to sell **Health Care Products and Sanitary Napkins.**

Qualification: SSLC/PUC/Diploma and Degree passed or failed candidates. **(Only female candidates)**

Walk-in-interview: From 29th April 2024 (10 Days). Time: 9.00 a.m. to 9.00 p.m.

***Venue at:* Mythri Associates,**
No.23, Flat No.003, Suraj Sadan Apts. 2nd Cross, Next to Federal Bank, Gandinagar, Bangalore-560 009.

Salary 25,000/- & above.

Contact: Harish : 96114 96698, Dr. Srinivasamurthy : 90367 79464, Thrunam: 80732 37833, Prof: Rangappa : 94496 87606.

Security & Detectives

REPUTED SECURITY Agency Requires Security Guards/ Supervisors, Field Officers, Area Managers, Operations/ Marketing Team for Bangalore. Contact: 8073668816.

Accounts & Finance

REQUIRED B.COM/ CA inter Graduates with IT and GST Knowledge for Auditors office at Jayanagar. Preferable 1- 2 years' experience. Contact: 8050131627

Part-Time Jobs

TOP CENTRAL Govt Licensed Required Retd/ Vrs, Home Makers Age 35 To 70 Yrs Part Time Job Earn 35k To 50k: 9886641282/ 7019215243

General

EMPLOYEE NEEDED! Business Development Office for property developer company No investment, age above 30 years experienced required. Earning Rs. 50,000/- per month Retired persons are eligible. Contact:- 9845334751.

Engg/ Production Technical

REQUIRED ITI/ DEE Electrical Fresh/ Experienced candidates for Electro Mechanical maintenance for Bangalore. 7353763801, 7353779800

OTHERS

Medical

RUNNING NEW Modern NABH Ready 50 Bed Hospital South Bangalore, Longterm Rental Partnership WhatsApp: 00447868727506

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331



ADMISSIONS OPEN FOR 2024 - 2025

KARNATAKA REDDYJANA SANGHA®

KRJS GROUP OF INSTITUTIONS

#1, Mahayogi Vemana Road, 3rd Block, Koramangala, Bengaluru - 560034

For Admission Contact : **63617 50686**

KARNATAKA REDDYJANA SANGHA®

VEMANA INSTITUTE OF TECHNOLOGY

Approved by AICTE-New Delhi, Affiliated to VTU-Belgavi, Recognized by Govt.Karnataka
#1, Mahayogi Vemana Road, 3rd Block, Koramangala, Bengaluru - 560 034.
www. vemanait.edu.in

NBA NATIONAL BOARD of ACCREDITATION
CSE | ISE
ECE | ME

CET Code - E092,
COMED - K Code - E145


U.G. PROGRAMMES

- Computer Science & Engineering
- Electronics & Communication Engg.
- Information Science & Engineering
- Mechanical Engineering
- Civil Engineering
- Artificial Intelligence & Machine Learning
- Computer Science & Engineering (Data Science)


KEY FEATURES

- Highly Motivated & Experienced Faculty
- Consistent Academic Excellence
- State-of-the Art Laboratories
- Centers of Excellence in Emerging Technologies
- Student Satellite - Design & Development
- Indigenously Designed and Developed R & D test Facilities
- MSME - Business Incubation Centre
- Start-up Cell : Inhouse Internships & Placements
- Drone Development Lab
- IPR Cell - Fueling Innovation & Entrepreneur Development
- Sports & Cultural Eco System
- Student Welfare Scholarships
- Well stocked library with Digital facilities

PESTICIDE SPRAYING DRONE



E -BIKE KIT



VEAGAS ELECTRIC VEHICLE LAB



For Admissions Contact : 63617 50682 / 83 / 86
Email : asha@vemanait.edu.in

VEMANA INSTITUTE OF TECHNOLOGY MAJOR RECRUITERS

DELL, WIPRO, TECH mahindra, SUBEX, IBM, Infosys, SG, MICROLAND, SONATA, JUSPAY, Mindtree, Radel, tcs TATA CONSULTANCY SERVICES, TATA ELXSI, amazon, HUAWEI, accenture, vtiger, BOSCH, cognizant, VOLVO, HARMAN, ValueLabs, Mylan, hp, L&T Infotech

RJS INSTITUTE OF MANAGEMENT STUDIES, Koramangala

Affiliated to Bengaluru City University, Recognized by Govt. of Karnataka, Approved by AICTE, New Delhi.

NAAC Accredited Institution

COURSES OFFERED

BBA : General
BBA : Aviation Management
B.Com : Logistics and Supply Chain Management
MBA : Human Resource / Marketing / finance / Entrepreneurship and Startups / Business Analytics / Production and Operations Management

For Admissions Contact : 87541 90173 / 080 - 25539648
Email: rjsimsbschool@gmail.com / Website: www.rjsims.edu.in

RJS FIRST GRADE COLLEGE, Koramangala

Permanently Affiliated to Bengaluru City University, Re-accredited by NAAC, 2f & 12B Recognized by UGC

PROGRAMMES OFFERED:

B.Com - Bachelor of Commerce (General)
B.Com-CA - Bachelor of Commerce integrated CA
BCA - Bachelor of Computer Applications
B.Sc (BCGBT) - Bachelor of Science (Biochemistry, Genetics, Biotechnology)
B.Sc (PMCs) - Bachelor of Science (Physics, Mathematics, Computer Science)
M.Com - Master of Commerce

Highlights of Facilities:
Fee Concession, Add-on Courses, 100% Placements, Transport Facility, Hostel Facility etc.

UNIVERSITY RANK HOLDERS - 2024



Dhanyatha S S, B.Com, 1st Rank | Kavya H S, BCA, 2nd Rank | Priyanka D, B.Com, 3rd Rank

For Admissions Contact :
080-25525534 / 94481 74454 / 9886684983
E-mail : rjsfgc@yahoo.com Website: www.rjsfgc.edu.in

RJS PRE - UNIVERSITY COLLEGE, Koramangala

(Affiliated to Pre - University Board, Govt of Karnataka)

A GRADE PU BOARD

COURSES OFFERED

SCIENCE : PCMB , PCMCs , PCME
COMMERCE : HEBA , CEBA, MEBA
Integrated Programme for Science Stream with IIT - JEE / CET / NEET with BASE Academy

For Admissions Contact : 63617 50690 / 63617 50683
080-25632493 / 080-25505157
Email : info@rjspucollege.edu.in Website : www.rjspucollege.edu.in

RJS PU & CJR RJS FIRST GRADE COLLEGE, Marathahalli

(Affiliated to Bangalore North University & Approved by Govt. of Karnataka PU Board)

COURSES OFFERED

PUC - PCMB / MEBA / CEBA / HEBA
DEGREE - B.Com and BCA

100% Placement Assistance

Value added Courses: Soft skills training
Microsoft excel, tally integrated add on Courses and digital marketing.
Language Offered : Kannada, English and Hindi.

For Admissions Contact : 94489 11443
E-mail: cjr_krjs@yahoo.co.in Website: www.cjrrjs.edu.in

VEMANA INSTITUTE OF PHYSIOTHERAPY, Koramangala

Affiliated to Rajiv Gandhi University of Health Sciences and Recognized by Govt. of Karnataka

Bachelor of Physiotherapy (BPT)

Eligibility : Passed 10+2 with not less than 45% in Physics, Chemistry and Biology (Course Duration : 4.5 Years)

For Admissions Contact : 74830 00727 / 91088 92210
Email: principal@vipt.edu.in I principalvipt@gmail.com | Website: www.vipt.edu.in

RJS PU & DEGREE EVENING COLLEGE, Koramangala

Affiliated to Pre-University Board Govt of Karnataka and Bengaluru City University

PUC : COMMERCE : HEBA – History, Economics, Business Studies, Accountancy
DEGREE : B.Com – As per Bengaluru City University norms and Syllabus

For Admissions Contact : 98446 82351 / 98450 30714
Email: rjsevening@yahoo.com / Website: www.reddyjanasangha.org

KARNATAKA REDDYJANA SANGHA SCHOOLS

D.B.M & R.J.S School	R.J.S School	R.J.S School
Pre - Primary, Primary & High School, Koramangala	Pre - Primary, Primary School Doddanekundi	Pre - Primary, Primary & High School, Roopena Agrahara
Call: 63617 50670	Call: 080 - 25405599	Call: 94818 86514
Email: info@dbmandrjsschool.edu.in	Email: rjs560037@gmail.com	Email: roopenaagraharar js@gmail.com

For Admission Contact : 63617 50686
Email - asha@vemanait.edu.in

Canteen, Transport, Separate Hostel for Boys & Girls

RAC/KRJS/0019